ಮಾನವಿಕ ಕರ್ಣಾಟಕ

ಸಂಪುಟ ೬ ಸಂಚಿಕೆ ೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೬

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೬ ಸಂಚಿಕೆ ೪

೨೪

ಆಗಸ್ಟ್ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೬

MANAVIKA KARNATAKA, Kannada quarterly of the University of Mysore. Volume 6, Number 4, August 1976. Edited by Dr. B. R. Gopal and Dr. B. S. Srikantaradhya.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಬಿ. ಎಸ್. ಶ್ರೀಕಂಠಾರಾಧ್ಯ

ಪ್ರಕಾಶಕರು

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ


ವಿಷಯಸೂಚಿ

		ಶ್ರೀಯುತರಾದ	ಪುಟ
೧	ಫ್ರೆಡರಿಕ್ ಮ್ಯಾಕ್ಸ್ ಮುಲ್ಲರ್	ಬಾ. ವೇ. ಶ್ರೀಧರ್ ಮತ್ತು ಎಚ್. ವಿ. ನರಸಿಂಹಮೂರ್ತಿ	೧
೨	ಉನ್ನತ ಶಿಕ್ಷಣಕ್ಕಾಗಿ ಹಣ	ಮೂಲ: ಡಿ. ಎಂ. ನಂಜುಂಡಪ್ಪ ಅನು: ಜಿ. ಟಿ. ಮರುಳಸಿದ್ಧಪ್ಪ	೭
೩	ಬದಲಾಗುತ್ತಿರುವ ರೈತ ಸಮುದಾಯ	ಮೂಲ: ಕೆ.ಎನ್. ವೆಂಕಟರಾಯಪ್ಪ ಅನು: ಕೃಷ್ಣವೇಣಿ	೨೧
೪	ಭಾಷಾಂತರ ಉದ್ಯಮ	ಪ್ರಧಾನ್ ಗುರುದತ್ತ	೩೧
೫	ಸ್ಥಳನಾಮಗಳಲ್ಲಿ ಸಂಸ್ಕೃತೀಕರಣ	ಕೆ. ರಘುಪತಿ ಭಟ್ಟ	೨೯
೬	ವಿಜಯನಗರ ಕಾಲದ ತುಳುನಾಡಿನ ಆರ್ಥಿಕ ಪರಿಸ್ಥಿತಿ	ಬಾಲಕೃಷ್ಣ ಸಾಮಗ ಮಲ್ಪೆ	೪೫
೭	ಮಲೆನಾಡಿನ ಜನಪದ ಸಂಪ್ರದಾಯ–ವಿವಾಹ	ಅಂಬಳಿಕೆ ಹಿರಿಯಣ್ಣ	೫೫
೮	ಬಡಗಗೌಡರ ಉಗಮ ಮತ್ತು ವಿಕಾಸ	ಮೂಲ: ಕೆ. ಪಿ. ರಾಜು ಅನು: ಎಚ್. ಎಂ. ನಾಗರಾಜರಾವ್	೬೭
೯	ಪುಸ್ತಕ ಲೋಕ		೮೦

ಮಾನಸಿಕ ರೋಗಗಳು (ಡಾ. ಎಂ. ಬಿ. ರೇಣುಕಾರ್ಯ)— ಡಾ. ಎಂ. ಎಸ್. ತಿಮ್ಮಪ್ಪ; ಭಾರತ ಸಂವಿಧಾನ ಮತ್ತು ಸರಕಾರ (ಎಂ. ಎಸ್. ಪಾಟೀಲ್; ಆರ್. ವ್ಹಿ. ಹೊರಡಿ)—ಡಾ. ಸಿ. ಕೆ. ಎನ್. ರಾಜ

ಈ ಸಂಚಿಕೆಯ ಲೇಖಕರು

೧ ಬಾ. ವೇ. ಶ್ರೀಧರ್	ಸಹಾಯಕ ಸಂಪಾದಕರು, ಇಂಗ್ಲಿಷ್–ಕನ್ನಡ ನಿಘಂಟು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
೨ ಎಚ್. ವಿ. ನರಸಿಂಹಮೂರ್ತಿ	ಅಧ್ಯಾಪಕರು, ಭಂಡಾರ್ಕರ್ ಕಾಲೇಜು, ಕುಂದಾಪುರ.
೩ ಡಾ. ಡಿ. ಎಂ. ನಂಜುಂಡಪ್ಪ	ವಿಶೇಷ ಕಾರ್ಯದರ್ಶಿ ಮತ್ತು ಯೋಜನಾ ಸಲಹೆಗಾರರು, ಯೋಜನಾ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು.
೪ ಜಿ. ಟಿ. ಮರುಳಸಿದ್ದಪ್ಪ	ಅಧ್ಯಾಪಕರು ಮತ್ತು ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಬಿ. ಆರ್. ಪ್ರಾಜೆಕ್ಟ್, ಶಿವಮೊಗ್ಗ ಜಿಲ್ಲೆ
೫ ಡಾ. ಕೆ. ಎನ್. ವೆಂಕಟರಾಯಪ್ಪ	ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಮಾನವಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು–೬
೬ ಕೃಷ್ಣವೇಣಿ	ಶಾಸನ ಸಹಾಯಕಿ, ಎಪಿಗ್ರಾಫಿಯ ಕರ್ನಾಟಿಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ.
೭ ಪ್ರಧಾನ್ ಗುರುದತ್ತ	ರೀಡರ್, ಪಠ್ಯಪುಸ್ತಕ ಮತ್ತು ಭಾಷಾಂತರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ.
೮ ಕೆ. ರಘುಪತಿ ಭಟ್ಟ	ಕನ್ನಡ ಅಧ್ಯಾಪಕರು, ಜೂನಿಯರ್ ಕಾಲೇಜ್, ಮಣಿಪಾಲ.
೯ ಬಾಲಕೃಷ್ಣ ಸಾಮಗ, ಮಲ್ಪೆ	ಸಂಶೋಧಕ, ಕ್ರೋಡಾಶ್ರಮ–೫೭೬೧೧೬, ದಕ್ಷಿಣ ಕನ್ನಡ ಜಿಲ್ಲೆ.
೧೦ ಅಂಬಳಿಕೆ ಹಿರಿಯಣ್ಣ	ಸಂಶೋಧನ ಸಹಾಯಕ, ಜಾನಪದ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೬
೧೧ ಕೆ. ಪಿ. ರಾಜು	ಸಾರ್ವಜನಿಕ ಸಂಪರ್ಕ ಕಛೇರಿ, ಫೋಟೋ ಫಿಲ್ಮ್ ಕಾರ್ಖಾನೆ, ಉದಕಮಂಡಲ, ನೀಲಗಿರಿ ಜಿಲ್ಲೆ, ತಮಿಳುನಾಡು
೧೨ ಎಚ್. ಎಂ. ನಾಗರಾಜರಾವ್	ಶಾಸನಸಹಾಯಕ, ಎಪಿಗ್ರಾಫಿಯ ಕರ್ನಾಟಿಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು–೬
೧೩ ಡಾ. ಎಂ. ಎಸ್. ತಿಮ್ಮಪ್ಪ	ಅಧ್ಯಾಪಕರು, ಮನಶ್ಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು–೬
೧೪ ಡಾ. ಸಿ. ಕೆ. ಎನ್. ರಾಜ	ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ನ್ಯಾಯಶಾಸ್ತ್ರ ವಿಭಾಗ, ಮಾನಸಗಂಗೋತ್ರಿ



ಫ್ರೆಡರಿಕ್ ಮ್ಯಾಕ್ಸ್ ಮುಲ್ಲರ್

ಬಾ. ವೇ. ಶ್ರೀಧರ್ ಮತ್ತು ಎಚ್. ವಿ. ನರಸಿಂಹಮೂರ್ತಿ

ಫ್ರೆಡರಿಕ್ ಮ್ಯಾಕ್ಸ್‌ಮ್ಯೂಲರ್

ನಮ್ಮ ದೇಶದ ಪ್ರಾಚೀನ ಸಾಹಿತ್ಯ ಸಂಸ್ಕೃತಿಗಳಿಂದ ಆಕರ್ಷಿತರಾದ ಪಾಶ್ಚಾತ್ಯರು ನೂರಾರು ಮಂದಿ. ಇಂತಹ ಪಾಶ್ಚಾತ್ಯ ಸಾರಸ್ವತ ಸಾಧಕರ ಶ್ರೇಣಿಯಲ್ಲಿ ಪ್ರೊ. ಫ್ರೆಡರಿಕ್ ಮ್ಯಾಕ್ಸ್ ಮ್ಯೂಲರ್ ಅವರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಅವರಿಗೆ ಸಂಸ್ಕೃತ ಭಾಷೆ ಹಾಗೂ ಹಿಂದೂ ಸಂಸ್ಕೃತಿಗಳ ಮೇಲಿದ್ದ ಕಟ್ಟಾಸಕ್ತಿ ಅವರ ಲೇಖನಗಳಿಂದಲೂ ಗ್ರಂಥಗಳಿಂದಲೂ ವ್ಯಕ್ತವಾಗುತ್ತದೆ.

ವಿದ್ಯಾಭ್ಯಾಸ, ಜೀವನ :

೧೮೨೩ರ ಡಿಸೆಂಬರ್ ೬ ರಂದು ಜರ್ಮನಿ ದೇಶದಲ್ಲಿ ಜನನ. ಬಾಲ್ಯದಿಂದಲೂ ಸಂಗೀತದಲ್ಲಿ ಅಪಾರ ಆಸಕ್ತಿ; ಅಭ್ಯಾಸವೂ ಆರಂಭ. ೧೮೩೬ರಲ್ಲಿ ಲೀಪ್ಸೀಗ್‌ನಲ್ಲಿರುವ ಪ್ರಸಿದ್ಧ ನಿಕೊಲೈ ಸ್ಕೂಲಿಗೆ ಪ್ರವೇಶ. ಐದು ವರ್ಷಕಾಲ ಶಾಲೆಯಲ್ಲಿ ಓದು. ಸಂಗೀತದ ಗೀಳು, ಸಂಸಾರ ತಾಪತ್ರಯಗಳಿಂದಾಗಿ ಓದಿಗೆ ತೊಂದರೆ. ಸಾಲದ್ದಕ್ಕೆ ಎಳೆತನದಲ್ಲೇ ಪಿತೃ ವಿಯೋಗ. ಸ್ಕೂಲ್ ವಿದ್ಯಾಭ್ಯಾಸದ ನಂತರ ಎರಡೂವರೆ ವರ್ಷ ಕಾಲ ಅಧ್ಯಯನ ನಡೆಸಿ ೧೮೪೧ರಲ್ಲಿ ಲೀಪ್ಸೀಗ್ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪದವಿ ಪಡೆದ. ಶಾಲೆಯಲ್ಲಿ ಈತ ಅನೇಕ ಬಹುಮಾನಗಳನ್ನು ಪಡೆದಿದ್ದ; ಎಳೆಯ ವಯಸ್ಸಿನಲ್ಲೇ ಕವನಗಳನ್ನೂ ಬರೆಯುತ್ತಿದ್ದ. ಲೀಪ್ಸೀಗ್‌ನಲ್ಲಿರುವವರೆಗೂ ೧೮೩೫ರಿಂದ ೧೮೪೩ರ ವರೆಗೆ ಮ್ಯಾಕ್ಸ್ ವಿಖ್ಯಾತ ಸಂಗೀತಗಾರರ ಗಾಯನ ವಾದನಗಳನ್ನು ಕೇಳಿದ್ದ, ಹಲವೊಮ್ಮೆ ಸಂಗೀತ ಸಮ್ಮೇಳನಗಳಲ್ಲಿ ಭಾಗ ವಹಿಸಿದ್ದೂ ಉಂಟು.

ಚಿಕ್ಕ ವಯಸ್ಸಿನಲ್ಲೇ ವೈಧವ್ಯ ಪ್ರಾಪ್ತವಾದ ತಾಯಿಗೆ ಮಗನ ಬಳಿ ಸುಖವಾಗಿರಲು ಸಾಧ್ಯವಾಗಲಿಲ್ಲ. ಮ್ಯಾಕ್ಸ್ ಮ್ಯೂಲರನಿಗೂ ೧೭ನೆಯ ವರ್ಷದಿಂದ ೪೬ ವರ್ಷಗಳ ಕಾಲ ಮಾತೃಸಾನ್ನಿಧ್ಯದ ಭಾಗ್ಯವಿರಲಿಲ್ಲ. ಓದುವ ಕಾಲದಲ್ಲಿ ತಾಯಿಯೇ ಒಂದು ಕಡೆ, ಮಗನೇ ಒಂದು ಕಡೆ. ಒಟ್ಟಿಗೆ ಇರಲು ಬಡತನವೇ ಅಡ್ಡಿ. ತಾಯಿಯು ಕೇವಲ ೩೬ ಮೈಲಿ ದೂರದಲ್ಲಿದ್ದರೂ ನೋಡಿಕೊಂಡು ಬರಲು ಕಾಸಿಲ್ಲ ಮ್ಯಾಕ್ಸನಿಗೆ. ಹಲವೊಮ್ಮೆ ಆಕೆಯನ್ನು ನೋಡುವ ಹಂಬಲದಿಂದ ಅಷ್ಟು ದೂರವನ್ನೂ ನಡೆದದ್ದುಂಟು. ಈ ಅಗಲಿಕೆಯ ಕಾಲದಲ್ಲಿ ಮ್ಯಾಕ್ಸ್ ಮ್ಯೂಲರ್ ತಾಯಿಗೆ ಕಾಗದಗಳನ್ನು ತಪ್ಪದೆ ಬರೆಯುತ್ತಿದ್ದ. ಇವುಗಳನ್ನೆಲ್ಲ ಆಕೆ ಸುರಕ್ಷಿತವಾಗಿ ಇಟ್ಟಿದ್ದಳು. ಈಗ ಅವನ್ನೆಲ್ಲ ಬೈಂಡು ಮಾಡಿ ಬಾಡ್ಲೇನಿನಲ್ಲಿ ಸುರಕ್ಷಿತವಾಗಿಟ್ಟಿದ್ದಾರೆ.

ಶಾಲಾದಿನಗಳಲ್ಲಿ ಸಂಗೀತದಲ್ಲಿದ್ದ ಆಸಕ್ತಿ ವಿಶ್ವವಿದ್ಯಾನಿಲಯಕ್ಕೆ ಬಂದ ಮೇಲೆ ಸಾಹಿತ್ಯದ ಕಡೆ ತಿರುಗಿತು. ವಿಶ್ವವಿದ್ಯಾನಿಲಯದಿಂದ ಹೊರ ಬರುವ ವೇಳೆಗೆ ಮ್ಯಾಕ್ಸ್ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಪ್ರಭುತ್ವ ಸಂಪಾದಿಸಿದ್ದ.

ಮ್ಯಾಕ್ಸ್ ಮ್ಯೂಲರನು ೧೮೪೧ರಲ್ಲಿ ಲೀಪ್ಸಿಗ್ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದಾಗಲೇ ಹರ್ಮನ್ ಬ್ರಾಕ್ ಹೌಸ್ ಅವರು ಸಂಸ್ಕೃತವನ್ನು ತೆಗೆದುಕೊಳ್ಳುವಂತೆ ಆತನನ್ನು ಪ್ರಚೋದಿಸಿದರು

ವಿಶ್ವವಿಖ್ಯಾತ 'ಶಾಕುಂತಲ' ನಾಟಕದ ಜರ್ಮನ್ ಭಾಷಾಂತರದಿಂದಲೇ ವಿಸ್ಮಯಗೊಂಡ ಮ್ಯಾಕ್ಸ್ ಮ್ಯೂಲರ್‌ನ ಆಸಕ್ತಿಯನ್ನು ಷ್ಲೇಗಲ್ ಅವರ 'ವಿಸ್ಡಮ್ ಅಂಡ್ ದಿ ಲಾಂಗ್ವೇಜ್ ಆಫ್ ದಿ ಇಂಡಿಯನ್ಸ್' ಎಂಬ ಕೃತಿಯು ಮತ್ತಷ್ಟು ಕೆರಳಿಸಿತು. ಅಂದಿನಿಂದ ಆತನ ಸಂಸ್ಕೃತಾಭ್ಯಾಸ ಸತತವಾಗಿ ಸಾಗಿತು. ಎಲ್ಲಕ್ಕಿಂತ ಮಿಗಿಲಾಗಿ ಆತ ಸಂಸ್ಕೃತವನ್ನು ಅಭ್ಯಾಸ ಮಾಡಿದುದು ಒಬ್ಬ ಪರಕೀಯ ವ್ಯಕ್ತಿಯಂತಲ್ಲ. ಆತನ ಪ್ರತಿಭೆಯನ್ನು ಗುರುತಿಸಿದ ಫ್ರಾಂಚ್ ಬಾಪ್ ಮತ್ತು ಫ್ರೆಡರಿಕ್ ದಕ್ಕರ್ಟ್ ಎಂಬ ಜರ್ಮನ್ ವಿದ್ವಾಂಸರು ನೀಡಿದ ಪ್ರೋತ್ಸಾಹ ಹಾಗೂ ಪ್ಯಾರಿಸ್ಸಿನ ವಿಖ್ಯಾತ ಪ್ರಾಚಾರ್ಯ ಯೂಜೀನ್ ಬರ್ನೂಫ್ ಅವರ 'ಹಿಮ್ಸ್ ಆಫ್ ದಿ ಋಗ್ವೇದ' ಎಂಬ ಭಾಷಣಗಳು ಆತನ ಅಧ್ಯಯನದ ಒಲವನ್ನು ವೈದಿಕ ಸಾಹಿತ್ಯದತ್ತ ಹರಿಸಿದುವು.

ಕರ್ಮಯೋಗಿ :

ವಿದ್ಯಾಭ್ಯಾಸದ ನಂತರ ಉದ್ಯೋಗವಿಲ್ಲದೆ ತೊಂದರೆಗೆ ಸಿಕ್ಕಿದ್ದ ಮ್ಯಾಕ್ಸ್‌ನಿಗೆ ಬ್ಯಾರನ್ ಹೀಗ್‌ಡಾರ್ನ್ ಎಂಬ ಸ್ನೇಹಿತ ತನ್ನೊಡನೆ ಪ್ಯಾರಿಸ್ಸಿನಲ್ಲಿದ್ದುಕೊಂಡು ಸಂಸ್ಕೃತಾಧ್ಯಯನವನ್ನು ಮುಂದುವರಿಸುವಂತೆ ಹೇಳಿದ. ಈ ಸಲಹೆ ಮ್ಯಾಕ್ಸ್‌ನಿಗೆ ರುಚಿಸಿತು. ಆತ ಪ್ಯಾರಿಸ್ಸಿಗೆ ಹೊರಟ. ಆದರೆ ಆತನ ದುರದೃಷ್ಟಕ್ಕೆ ಆ ಮಿತ್ರ ಅಲ್ಲಿ ಇರಲೇ ಇಲ್ಲ. ಹೀಗಾಗಿ ಮ್ಯಾಕ್ಸ್ ಹೊಟ್ಟೆಗಿಲ್ಲದೆ ಅಲ್ಲಿ ಪಡಬಾರದ ಕಷ್ಟ ಪಟ್ಟ. ಮನಸ್ಸಿಲ್ಲದಿದ್ದರೂ ಮಕ್ಕಳಿಗೆ ಮನೆಪಾಠ ಹೇಳಿ ಹೇಗೋ ಹೊಟ್ಟೆಹೊರೆಯಬೇಕಾಯಿತು. ಆದರೆ ಎಷ್ಟೇ ಕಷ್ಟ ಬಂದರೂ ಸಂಸ್ಕೃತ ಅಭ್ಯಾಸ ಮಾತ್ರ ಬಿಡಲಿಲ್ಲ. 'ಸಂಸ್ಕೃತದಿಂದ ನನಗೆ ಆಶಾದಾಯಕ ಭವಿಷ್ಯವೇನೂ ಕಾಣುವುದಿಲ್ಲ. ಆದರೂ ನಾನದನ್ನು ತೊರೆಯಲಾರೆ' ಎಂದು ಆತ ತನ್ನ ಡೈರಿಯಲ್ಲಿ ಬರೆದಿದಾನೆ. ಅಂತು ಆತ ಹಿಡಿದ ಪಟ್ಟು ಬಿಡಲಿಲ್ಲ.

ಒಮ್ಮೆ ಬವೇರಿಯದ ಮಂತ್ರಿಯಾದ ಬ್ಯಾರನ್ ವಾನ್ ಸೆಟ್ಟ್ಸ್ ಅವರ ಮಕ್ಕಳಿಗೆ ಪಾಠ ಹೇಳಿ. ಕೊಡಬೇಕೆಂಬ ಕರೆ ಬಂತು. ಈತನ ಖರ್ಚುವೆಚ್ಚಗಳನ್ನೆಲ್ಲ ವಹಿಸುವುದಲ್ಲದೆ ೩೦೦೦ ಫ್ರಾಂಕ್‌ಗಳಷ್ಟು ಭಾರಿ ಸಂಭಾವನೆಯನ್ನು ಕೊಡುವುದಾಗಿಯೂ ಹೇಳಿದರು. ಆದರೆ ಆ ಮಕ್ಕಳನ್ನು ಒಂದು ಗಂಟೆ ಸಹ ಬಿಟ್ಟಿರಬಾರದೆಂಬ ಷರತ್ತನ್ನು ಕೇಳಿ ತನ್ನ ಓದಿಗೆ ಧಕ್ಕೆ ಉಂಟಾಗುವುದೆಂದು ಹೆದರಿ ಈತ ಒಪ್ಪಲಿಲ್ಲ

ಪಾಠ ಹೇಳುವ ಕೆಲಸ ಬಿಟ್ಟು ಪೌರಸ್ತ್ಯ ಪಂಡಿತರಿಗೆ ಬೇಕಾದ ಸಂಸ್ಕೃತ ಹಸ್ತಪ್ರತಿಗಳನ್ನು ನಕಲು ಮಾಡಿಕೊಡುವ ಕೆಲಸಕ್ಕೆ ಸೇರಿದ. ಇದೂ ಒಂದು ಬಗೆಯ ಕತ್ತೆ ದುಡಿಮೆಯೇ. ಏಕೆಂದರೆ ವಿಶ್ರಾಂತಿ ಮೂರು ಗಂಟೆಗಳ ಕಾಲ ಮಾತ್ರ. ಉಳಿದ ವೇಳೆಯಲ್ಲಿ ದುಡಿಮೆ, ದುಡಿಮೆ, ದುಡಿಮೆ. ದೈಹಿಕ, ಮಾನಸಿಕ ಶ್ರಮಗಳಾವುವನ್ನೂ ಆತ ಲೆಕ್ಕಿಸಲಿಲ್ಲ.

ಕೊನೆಗೆ ಮ್ಯಾಕ್ಸ್ ೧೮೪೮ರಲ್ಲಿ ಆಕ್ಸ್‌ಫರ್ಡ್‌ನಲ್ಲಿ ಬಂದು ನೆಲೆಸಿದ. ೧೮೫೯ ಆಗಸ್ಟ್ ೩ ರಂದು ಜೀಯೋರ್ಜಿನಳನ್ನು ವಿವಾಹವಾದ. ಈತನಿಗೆ ಮೂವರು ಹೆಣ್ಣು ಮಕ್ಕಳು, ಒಬ್ಬ ಮಗ. ಆದರೆ ಇಬ್ಬರು ಹೆಣ್ಣು ಮಕ್ಕಳೂ ಚಿಕ್ಕ ವಯಸ್ಸಿನಲ್ಲೇ ಮೃತರಾದರು.

೧೮೬೦ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕನ ಸ್ಥಾನ ಖಾಲಿ ಬಿತ್ತು. ಅದು ತನಗೆ ದೊರಕುವುದೆಂದು ಮ್ಯಾಕ್ಸ್ ತುಂಬ ಆಸೆ ಇಟ್ಟುಕೊಂಡಿದ್ದ. ಆದರೆ ಅದು ದೊರಕದೆ ಅವನಿಗೆ ಭಾರಿ ನಿರಾಸೆಯಾಯಿತು. ಮುಂದೆ ೧೮೬೮ರಲ್ಲಿ ತೌಲನಿಕ ಭಾಷಾಶಾಸ್ತ್ರ ಇಲಾಖೆಗೆ ಈತನನ್ನು ಪ್ರಾಧ್ಯಾಪಕನನ್ನಾಗಿ ನೇಮಿಸಲಾಯಿತು.

ಹಿಂದುಗಳಿಗೆ ಋಗ್ವೇದ ಸಂಹಿತೆಯು ಪರಮ ಪವಿತ್ರವೂ ಅತಿ ಪುರಾತನವೂ ಆದ ಗ್ರಂಥ. ಇದು ಮೊದಲ ಮುದ್ರಣ ಕಂಡದ್ದು ಭಾರತದಲ್ಲೂ ಅಲ್ಲ, ಒಬ್ಬ ಹಿಂದುವಿನ ಸಂಪಾದಕತ್ವದಲ್ಲೂ ಅಲ್ಲ. ಮ್ಯಾಕ್ಸ್ ಮ್ಯೂಲರನ ವೈದಿಕ ಸಾಹಿತ್ಯದ ಆಳವಾದ ಅಧ್ಯಯನದ ಫಲಶ್ರುತಿರೂಪವಾಗಿ ಋಗ್ವೇದ ಸಂಹಿತೆ (ಮೊದಲ ಸಂಪುಟ) ೧೮೪೯ರಲ್ಲಿ ಸಾಯಣ ಭಾಷ್ಯ ಸಹಿತವಾಗಿ ಮೊಟ್ಟಮೊದಲಿಗೆ ಇಂಗ್ಲೆಂಡಿನಲ್ಲಿ ಅಚ್ಚುಕಟ್ಟಾಗಿ ಸಂಪಾದಿತವಾಗಿ ಹೊರಬಂದಿತು. ಇದು ಹೀಗೆ ಹೊರಬರಲು ಈ ಕರ್ಮಯೋಗಿ ಪಟ್ಟ ಸಾಹಸ ಸ್ಮರಣೀಯ. ಬೃಹದ್ಗಾತ್ರದ ಈ ಗ್ರಂಥವನ್ನು ಸಂಪೂರ್ಣವಾಗಿ

ಪ್ರಕಟಿಸಬೇಕೆಂಬ ಆಸೆ. ಆದರೆ ಕೈಯಲ್ಲಿ ಕಾಸಿಲ್ಲ. ಕೊಡುಗೈಗಳು ಮೊದಲೇ ಇಲ್ಲ. ಈಸ್ಟ್ ಇಂಡಿಯಾ ಕಂಪೆನಿಯೂ ಅಂದು ಡೋಲಾಯಮಾನ ಸ್ಥಿತಿಯಲ್ಲಿದ್ದಿತು. ಆದರೆ ಮ್ಯಾಕ್ಸ್ ಮ್ಯೂಲರ್ ಹಿದೆಗುಂದುವ ಚೇತನವಲ್ಲ. ಜರ್ಮನ್ ರಾಯಭಾರಿ ಸಿ.ಕೆ.ಜೆ. ಬನ್ಸ್‌ರವರ ಸಹಾನುಭೂತಿ ಗಳಿಸಿ ಈಸ್ಟ್ ಇಂಡಿಯಾ ಕಂಪೆನಿಯ ನಿರ್ದೇಶಕರಿಂದ ತಮ್ಮ ಯೋಜನೆಗೆ ಆರ್ಥಿಕ ಸಹಾಯ ದೊರಕುವಂತೆ ಮಾಡಿಕೊಂಡ. ಪ್ರಥಮ ಸಂಪುಟ ಹೊರ ಬಂದುದೇ ತಡ. ವಿಶ್ವದ ಮೂಲೆ ಮೂಲೆಗಳಿಂದ ವಿದ್ವಾಂಸರನೇಕರು ಈ ಸಂಪಾದಕತ್ವವನ್ನು ಸ್ತುತ್ಯರ್ಹವಾಗಿ ನಿರ್ವಹಿಸಿದ ಮ್ಯಾಕ್ಸ್ ಮ್ಯೂಲರ್‌ನನ್ನೂ ಹಾಗೂ ಯೋಜನೆಗೆ ರೂಪುಗೊಟ್ಟ ಈಸ್ಟ್ ಇಂಡಿಯಾ ಕಂಪೆನಿಯನ್ನೂ ಹಾರ್ದಿಕವಾಗಿ ಅಭಿನಂದಿಸಿದರು. ಮೊದಲ ಸಂಪುಟ ಬಂದ ನಂತರ ಮ್ಯಾಕ್ಸ್ ಮ್ಯೂಲರ್ ಎರಡನೆಯ ಸಂಪುಟವನ್ನು ಸಂಪಾದಿಸಲು ಹೊರಟ. ಆದರೆ ಅಷ್ಟು ಹೊತ್ತಿಗೆ ಡೆಪ್ಯುಟಿ ಟೈಲೋರಿಯನ್ ಪ್ರೊಫೆಸರ್ ಆಫ್ ಮಾಡರ್ನ್ ಲ್ಯಾಂಗ್ವೇಜಸ್ ಆಗಿ ನೇಮಕಗೊಂಡದ್ದರಿಂದ ಈ ಕೆಲಸದಲ್ಲಿ ಪರಿಶ್ರಮ ವಹಿಸಲು ಸಾಧ್ಯವಾಗಲಿಲ್ಲ. ಆ ನಂತರ ಆರೋಗ್ಯ ಹದಗೆಟ್ಟು ಕೆಲಸ ಮುಂದುವರಿಸಲಾಗಲಿಲ್ಲ. ಬನ್ಸನ್ ಅವರ ಸಲಹೆಯ ಮೇರೆಗೆ ಮ್ಯಾಕ್ಸ್ ಡಾ. ಆಫ್ರೆಕ್ಟ್‌ರವರ ಸಹಾಯ ಪಡೆದು ಋಗ್ವೇದದ ಎರಡನೆಯ ಹಾಗೂ ಮೂರನೆಯ ಸಂಪುಟಗಳನ್ನು ಕ್ರಮವಾಗಿ ೧೮೫೪ ಹಾಗೂ ೧೮೫೬ರಲ್ಲಿ ಹೊರತಂದನು. ಆಮೇಲೆ ಆಫ್ರೆಕ್ಟ್ ಅವರ ಸಹಕಾರ ಮ್ಯಾಕ್ಸ್‌ನಿಗೆ ದೊರಕಲಿಲ್ಲವಾದ್ದರಿಂದ ಬೇರೆ ಕೆಲವು ತರುಣ ಸಂಸ್ಕೃತ ವಿದ್ವಾಂಸರ ಸಹಾಯ ಪಡೆದು ಐದು ಮತ್ತು ಆರನೆಯ ಸಂಪುಟಗಳನ್ನು ಕ್ರಮವಾಗಿ ೧೮೭೨ ಮತ್ತು ೧೮೭೪ರಲ್ಲಿ ಹೊರತಂದನು. ರಾಜಕೀಯ ವಿಪ್ಲವದ ಸಂಧಿಕಾಲ ಅದು. ಆಗ ವಿದೇಶೀ ಮುದ್ರಣಾಲಯವನ್ನು ಸೇರಿದ ಈ ಬೃಹತ್ಕೃತಿಯ ಪ್ರಕಟಣೆಗೆ ಸ್ವಲ್ಪ ವಿಳಂಬವೇನೋ ಆಯಿತು. ಕೊನೆಯ ಸಂಪುಟ ಹೊರಬಂದ ನಂತರ ಋಗ್ವೇದ ಹಾಗೂ ಸಾಯಣ ಭಾಷ್ಯದ ಕೊನೆಯ ಸಾಲನ್ನು ಬರೆದು ಮುಗಿಸಿ ಲೇಖನಿಯನ್ನು ಕೆಳಗಿಟ್ಟಾಗ ಮ್ಯಾಕ್ಸ್ 'ನನ್ನ ಹಳೆಯ, ತುಂಬ ಹಳೆಯ ಮಿತ್ರನೊಬ್ಬನನ್ನು ಬೀಳ್ಕೊಟ್ಟಂತೆ ತೋರುತ್ತಿದೆ' ಎಂದು ಒಂದೆಡೆ ಹೇಳಿದ್ದಾನೆ. ಅವನಿಗೆ ಋಗ್ವೇದದಲ್ಲಿದ್ದ ಅಪಾರ ಒಲವಿಗೆ ಇದು ಸಾಕ್ಷಿ. ೭೩೦೦ ಪುಟಗಳ ನ್ನೊಳಗೊಂಡ ಈ ಮಹಾಕೃತಿಯ ಬೃಹತ್ಸಂಪುಟಗಳ ಶ್ರೇಣಿಯನ್ನು 'ಗಜಯೂಥ' ಎಂದು ಪ್ರಶಂಸಿಸ ಲಾಗಿದೆ.

ಅದ್ಭುತ ಕೊಡುಗೆ :

ಕೇವಲ ವೇದಾಧ್ಯಾಯಿಗಳಿಗೆ ಮಾತ್ರವಲ್ಲ. ಸಂಸ್ಕೃತ ಸಂಸ್ಕೃತಿಗಳ ಅಭ್ಯಾಸಿಗಳಿಗೂ ಮ್ಯಾಕ್ಸ್ ಮ್ಯೂಲರ್‌ನ ಕೊಡುಗೆ ಮಹತ್ತರವಾದದ್ದು. 'ಸೇಕ್ರೆಡ್ ಬುಕ್ಸ್ ಆಫ್ ದಿ ಈಸ್ಟ್' ಎಂಬ ಹೆಸರಿನಲ್ಲಿ ಪೌರಸ್ತ್ಯ ಧಾರ್ಮಿಕ ಸಾಹಿತ್ಯವನ್ನೆಲ್ಲ ಐವತ್ತೊಂದು ಬೃಹತ್ಸಂಪುಟಗಳಲ್ಲಿ ಅವನು ಸಂಪಾದಿಸಿದನು. ಕೊನೆಯ ಸಂಪುಟ (೫೦) ಡಾ. ವಿಂಟರ್‌ನೀಟ್ಸ್ ಅವರಿಂದ ಸಂಪಾದಿತ. ಇದಕ್ಕೆ ಅವನ ಜೀವನದ ಕೊನೆಯ ೨೫ ವರ್ಷಗಳು ಹಿಡಿಯಿತು. ಈ ಮಹಾಕಾರ್ಯದಲ್ಲಿ ಹಲವಾರು ದೇಶಗಳಲ್ಲಿನ ಎಗೆಲಿಂಗ್, ಬ್ಯೂಲರ್ ಮೊದಲಾದ ಪಂಡಿತರು ಪಾಲುಗೊಂಡಿದ್ದರು. ವಿವಿಧ ಮತ ಧರ್ಮಗಳ ತೌಲನಿಕ ಅಧ್ಯಯನ ಈ ಕೃತಿಯಿಂದ ಜನ್ಮ ತಾಳಿತು. ಪೌರಸ್ತ್ಯ-ಪಾಶ್ಚಾತ್ಯ ಸಂಸ್ಕೃತಿಗಳ ಸುಮಧುರ ಸಮ್ಮಿಲನವೇ ಈತನ ಹೆಬ್ಬಯಕೆ ಎಂಬುದು ಈ ಕೃತಿಯಿಂದ ಸ್ಪಷ್ಟವಾಯಿತು. ನಮ್ಮ ದೇಶದ ಎಲ್ಲ ಪವಿತ್ರ ಗ್ರಂಥಗಳ ಇಂಗ್ಲಿಷ್ ಅನುವಾದವೂ ಈ ಸಂಪುಟಗಳಲ್ಲಿ ದೊರಕುತ್ತವೆ. ಇಂಥ ಒಂದು ನಿಸ್ಕೃಷ್ಟವಾದ ಅನುವಾದವು ಬೇರಾವ ಭಾಷೆಯಲ್ಲೂ ಸಿಕ್ಕುವುದಿಲ್ಲ. ಇವುಗಳನ್ನು ಈಗ ಪ್ರಮಾಣಬದ್ಧವಾದ ಇಂಗ್ಲಿಷ್ ಅನುವಾದ ಗಳೆಂದು ಭಾವಿಸಲಾಗಿದೆ. ಈ ಕೃತಿಯಿಂದ ಮ್ಯಾಕ್ಸ್ ಮ್ಯೂಲರ್ ಜಗತ್ತಿನ ಗಮನವನ್ನು ಸೆಳೆದಿದ್ದಾನೆ.

೧೮೮೨ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ 'ಇಂಡಿಯ ವಾಟ್ ಕ್ಯಾನ್ ಇಟ್ ಟೀಚ್ ಅಸ್' ಮತ್ತು ೧೮೯೯ರಲ್ಲಿ ರಚಿಸಿದ 'ಸಿಕ್ಸ್ ಸಿಸ್ಟಮ್ಸ್ ಆಫ್ ಇಂಡಿಯನ್ ಫಿಲಾಸಫಿ' ಹಿಂದೂಧರ್ಮ ಹಾಗೂ ವೇದಾಂತದ ಅಭ್ಯಾಸಿಗಳಿಗೊಂದು ಮಾರ್ಗದರ್ಶಿ.

ಮ್ಯಾಕ್ಸ್ ಕೈ ಆಡಿಸದ ಕ್ಷೇತ್ರವಿಲ್ಲ. ಅವನದು ಬಹುಮುಖಿ ವ್ಯಕ್ತಿತ್ವ. ಭಾಷಾಶಾಸ್ತ್ರ. ಇತಿಹಾಸ, ವೇದಾಂತ, ವ್ಯಾಕರಣ, ವೇದಾರ್ಥ ನಿರೂಪಣೆ ಮೊದಲಾದುವುಗಳಲ್ಲೆಲ್ಲ ಅವನು ಪರಿಣತನಾಗಿದ್ದನು.

ಭಾಷಾಶಾಸ್ತ್ರದ ಬಗ್ಗೆ ಈತ ಬರೆದ 'ಲೆಕ್ಚರ್ಸ್ ಆನ್ ದಿ ಸೈನ್ಸ್ ಆಫ್ ಲಾಂಗ್ವೇಜ್' (೧೮೬೧) ಮತ್ತು 'ಸ್ಟ್ರಾಟಿಫಿಕೇಶನ್ ಆಫ್ ಲಾಂಗ್ವೇಜ್' (೧೮೬೮) ಎಂಬ ಕೃತಿಗಳು ವೈಜ್ಞಾನಿಕ ಪ್ರಜ್ಞೆಯ ಪರಿಣತ ಫಲಗಳು. 'ಎಸ್ಸೇ ಆನ್ ಕಂಪೇರಟಿವ್ ಮೈಥಾಲಜಿ' (೧೮೫೬) ಇವನ ತೌಲನಿಕ ಅಧ್ಯಯನ ದಿಂದ ಮೂಡಿ ಬಂದ ಕೃತಿರತ್ನ. ಇನ್ನೊಂದು ಚಿರಸ್ಥಾಯಿ ಗ್ರಂಥ 'ಏನ್ಷಂಟ್ ಸ್ಯಾಂಸ್ಕ್ರಿಟ್ ಲಿಟರೇಚರ್' (೧೮೫೯) ಇಂದಿಗೂ ಪ್ರಮಾಣ ಗ್ರಂಥವಾಗಿದೆ.

ಅವನು ೧೮೪೪ರಲ್ಲಿ ಹಿತೋಪದೇಶವನ್ನೂ ೧೮೪೭ರಲ್ಲಿ ಮೇಘದೂತವನ್ನೂ (ಶ್ಲೋಕ ರೂಪದಲ್ಲಿ) ಜರ್ಮನ್ ಭಾಷೆಗೆ ಅನುವಾದಿಸಿದನು. ೧೮೬೬ರಲ್ಲಿ 'ಸಾಂಸ್ಕ್ರಿಟ್ ಗ್ರಾಮರ್' ಎಂಬ ಗ್ರಂಥವನ್ನು ರಚಿಸಿದನು. ಈ ಗ್ರಂಥದಲ್ಲಿ ಮ್ಯಾಕ್ಸ್ ಮ್ಯೂಲರ್‌ನ ನಿರೂಪಣೆ ಸಂಪ್ರದಾಯಾನುಸಾರ ವಾಗಿಯೂ ನಿರ್ಲಿಪ್ತವಾಗಿಯೂ ಇದೆ. ಆದರೆ ಇವನ ವಿಮರ್ಶೆ ಮಾತ್ರ ಸಂಪ್ರದಾಯಶರಣರ ವಿಮರ್ಶೆಯಂತಿಲ್ಲ. ಹಿಂದೂಶಾಸ್ತ್ರಗಳ ವಿಷಯದಲ್ಲಿ ಇವನಷ್ಟು ನಿಷ್ಪಕ್ಷಪಾತವಾಗಿ ಬರೆದಿರುವ ಬೇರೊಬ್ಬ ಐರೋಪ್ಯ ಪಂಡಿತನಿಲ್ಲ. ಹೀಗೆ ಇವನ ಹಲವಾರು ಗ್ರಂಥಗಳು ಸಂಸ್ಕೃತಾಭಿಮಾನಿಗಳ ಕೃತಜ್ಞತೆಗೆ ಪಾತ್ರವಾಗಿವೆ.

ಅನೇಕ ಪಾಶ್ಚಾತ್ಯ ವಿದ್ವಾಂಸರು ವೇದಗಳಿಗೆ ಹೆಚ್ಚಿನ ಪ್ರಾಚೀನತೆಯನ್ನು ಕೊಡಬಯಸುವುದಿಲ್ಲ. ಅವರು ಅವುಗಳ ಕಾಲವನ್ನು ಆದಷ್ಟು ಮುಂದೆ ತಳ್ಳಲು ಪ್ರಯತ್ನಿಸುತ್ತಾರೆ. ಆದರೆ ಮ್ಯಾಕ್ಸ್ ಮ್ಯೂಲರ್ ನಿಷ್ಪಕ್ಷಪಾತಿ. ಆತ ವೇದದ ಕಾಲದ ಬಗ್ಗೆ ಮಾತನಾಡುತ್ತಾ ಒಂದೆಡೆ "ವೇದದ ಕಾಲವನ್ನು ಯಾವ ಕಾಲಕ್ಕೂ ಯಾರೂ ನಿರ್ಣಯಿಸಲು ಸಾಧ್ಯವಿಲ್ಲ" ಎಂದಿದ್ದಾನೆ. ಇದು ಅವನ ನಿಷ್ಪಕ್ಷಪಾತ ದೃಷ್ಟಿಗೆ ಒಂದು ಸಾಕ್ಷಿ.

ಸಂಸ್ಕೃತ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುವ ಶಕ್ತಿಯುಳ್ಳ ಮ್ಯಾಕ್ಸ್ ಮ್ಯೂಲರನಿಗೆ ಪಾಳಿ ಮತ್ತು ಬಂಗಾಳಿ ಭಾಷೆಗಳಲ್ಲೂ ಆಳವಾದ ಜ್ಞಾನವಿತ್ತು.

ಮೋಕ್ಷಮೂಲಾಚಾರ್ಯ :

'ನ ಮ್ಲೇಚ್ಛಿತ ವೈ. ನಾಪಭಾಷಿತವೈ' ಎಂದು ದೇವ ಭಾಷೆಗೆ ಮಡಿ ತೊಡಿಸಿದ್ದ ಭಾರತೀಯ ಸನಾತನಿ ಗಳನೇಕರು ವಿದೇಶೀಯನೊಬ್ಬನ ಈ ಕೃತಿಗೆ ಬಹಿಷ್ಕಾರ ಹಾಕಿದರು. ಹಲವು ವಿದೇಶೀ ವಿದ್ವಾಂಸರೂ ಸಹ ಮ್ಯಾಕ್ಸ್ ಮ್ಯೂಲರ್‌ನ 'ಸಂಸ್ಕೃತವು ಹಲವಾರು ಭಾಷೆಗಳ ಜನನಿ', 'ಋಗ್ವೇದವು ಮಾನವ ಕುಲದ ಮೂಲ ಗ್ರಂಥ'–ಎಂಬ ವಾದವನ್ನು ಖಂಡಿಸಲು ಪ್ರಾರಂಭಿಸಿದರು. ಆದರೆ ಕೊನೆಗೆ ಈತನ ನಿರ್ದುಷ್ಟ ಪಾಂಡಿತ್ಯವನ್ನೂ ಗ್ರಂಥದ ಮಹತ್ವವನ್ನೂ ಮನಗಂಡ ಪಂಡಿತವರ್ಗ ತನ್ನ ಅಭಿಪ್ರಾಯವನ್ನು ಬದಲಾಯಿಸಿತು. ಭಾರತದ ನಿಷ್ಠಾವಂತ ಶ್ರೋತ್ರಿಯ ವೃಂದವೊಂದು ಮ್ಯಾಕ್ಸ್‌ನ ಕೃತಿಯ ಪ್ರತಿ ಯೊಂದನ್ನು ಗುಟ್ಟಾಗಿ ಓದಿಸಿ ತಮ್ಮಲ್ಲಿದ್ದ ಅಶುದ್ಧ ಹಸ್ತ ಪ್ರತಿಗಳನ್ನು ತಿದ್ದಿಸಿಕೊಂಡಿತೆಂದೂ ಪ್ರತೀತಿ ಇದೆ. ಮ್ಲೇಚ್ಛ ಮ್ಯಾಕ್ಸ್ ಮ್ಯೂಲರ್ ಕ್ರಮೇಣ ಮೋಕ್ಷ ಮೂಲಾಚಾರ್ಯನಾದ. ಭಾರತೀಯ ಸಂಸ್ಕೃತಿಯು ಆತನಲ್ಲಿ ರಕ್ತಗತವಾಗಿಹೋಗಿತ್ತೆನ್ನಬೇಕು. ತನಗೆ ಆತ ಇಟ್ಟುಕೊಂಡ ಈ ಹೆಸರೇ ಅದಕ್ಕೆ ಸಾಕ್ಷಿ.

ವಾನಪ್ರಸ್ಥಾಶ್ರಮದ ವಶಿಷ್ಠ :

೧೮೯೬ರಲ್ಲಿ ಸ್ವಾಮಿ ವಿವೇಕಾನಂದರು ಇಂಗ್ಲೆಂಡಿಗೆ ಹೋದಾಗ ಪ್ರೊ. ಮ್ಯಾಕ್ಸ್ ಮ್ಯೂಲರನ್ನು ಆಕ್ಸ್‌ಫರ್ಡ್‌ನಲ್ಲಿ ಭೇಟಿ ಮಾಡಿದರು. ತಮ್ಮ ಜೀವನ ಚರಿತ್ರೆಯಲ್ಲಿ ಬರೆದಿರುವ ಆ ಭೇಟಿಯ ಅಪೂರ್ವ ಅನುಭವ ಮತ್ತು ಆ ಮಹನೀಯನ ಉನ್ನತ ವ್ಯಕ್ತಿತ್ವದ ವರ್ಣನೆ ನಮಗೆ ಪ್ರೊ. ಮ್ಯಾಕ್ಸ್ ಮ್ಯೂಲರನ ಒಂದು ಭಾವ ಚಿತ್ರವನ್ನು ಕೊಡಬಲ್ಲುದು. "ಈ ಭೇಟಿ ಒಂದು ಅಪೂರ್ವ ಅನುಭವ. ಅವರ ಸುಂದರ ವಾದ ಪುಟ್ಟಮನೆ ರಮ್ಯವಾದ ಉದ್ಯಾನದಿಂದ ಪರಿವೃತವಾಗಿತ್ತು. ನರೆಗೂದಲಿನಿಂದ ತುಂಬಿತ್ತು ಆ ಋಷಿಯ ತಲೆ. ಕರುಣೆ ಹಾಗೂ ಶಾಂತಿ ಉಕ್ಕುತ್ತಿತ್ತು ಅವನ ಮೊಗದಲ್ಲಿ. ಎಪ್ಪತ್ತು ಛಳಿಗಾಲಗಳ

ಪೆಟ್ಟು ತಾಕಿದ್ದರೂ ಅವರ ಹಣೆ ಮಗುವಿನ ಹಣೆಯಂತೆ ಮೃದುವಾಗಿತ್ತು. ಆ ಮುಖದಲ್ಲಿ ಚಿತ್ರಿತವಾಗಿದ್ದ ಒಂದೊಂದು ರೇಖಾವಿನ್ಯಾಸವೂ ಅದರ ಹಿಂದೆ ಇದ್ದ ಅಗಾಧವಾದ ಆಧ್ಯಾತ್ಮಿಕ ಗಣಿಯನ್ನು ಸೂಚಿಸುತ್ತಿತ್ತು. ಅವರ ಸಾಧ್ವೀಮಣಿ, ಜೀವನದ ಸಂಗಾತಿಯಾದ ಸತಿ, ದೀರ್ಘಕಾಲದ ಸ್ವಾರಸ್ಯಮಯವಾದ ಆತನ ವಿದ್ವಜ್ಜೀವನದಲ್ಲಿ ಖಂಡನೆ ಮತ್ತು ತಾತ್ಸಾರಗಳನ್ನು ಮನಸ್ಸಿಗೆ ತಾರದೆ ಕೊನೆಗೆ ಪುರಾತನ ಆರ್ಯಮಹರ್ಷಿಗಳ ಭಾವನೆಗೆ ಗೌರವವನ್ನು ಸಂಪಾದಿಸಿ ಕೊಟ್ಟರು. ಅಲ್ಲಿದ್ದ ತರುಲತೆಗಳು, ವೃಕ್ಷಗಳು. ಪ್ರಶಾಂತವಾದ ವಾತಾವರಣ, ಸ್ವಚ್ಛ ನೀಲಾಕಾಶ ಇವೆಲ್ಲ ನನ್ನನ್ನು ಕಲ್ಪನೆಯ ರೆಕ್ಕೆಯ ಮೇಲೆ ಅಡರಿಸಿಕೊಂಡು ಭಾರತದ ಬ್ರಹ್ಮರ್ಷಿಗಳಲ್ಲಿಗೆ, ರಾಜರ್ಷಿಗಳಲ್ಲಿಗೆ. ವಾನಪ್ರಸ್ಥರಾದ ವಸಿಷ್ಠ–ಅರುಂಧತಿಯರಲ್ಲಿಗೆ ಒಯ್ದಿತು." ಸ್ವಾಮಿ ವಿವೇಕಾನಂದರ ಈ ಕಾವ್ಯವಾಣಿ ಈ ಸಾಧಕನ ವಿಷಯದಲ್ಲಿ ಅಕ್ಷರಶಃ ಸತ್ಯ.

ಆದರ್ಶ ವೇದಾಂತಿ :

ಮ್ಯಾಕ್ಸ್ ಮ್ಯೂಲರ್ ಶ್ರೇಷ್ಠ ವೇದಾಂತಿ. 'ಮಾನವನ ಚಿಂತನೆಯ ಪರಾಕಾಷ್ಠೆ ವೇದಾಂತ' ಎಂಬುದು ಅವನ ಸ್ಪಷ್ಟ ಅಭಿಪ್ರಾಯ. ವೇದಾಂತ ಅವನಿಗೆ ತುಷ್ಟಿಯನ್ನೂ ಪುಷ್ಟಿಯನ್ನೂ ನೀಡಿತ್ತು. ವೃದ್ಧಾಪ್ಯದಲ್ಲಿ ಬರೆದ ತನ್ನ ಲೇಖನವೊಂದರಲ್ಲಿ 'ಜೀವನದ ಅನೇಕ ಆಘಾತಗಳನ್ನೆದುರಿಸುವುದರಲ್ಲಿ ನನಗೆ ವೇದಾಂತ ನೆರವಾಗಿದೆ' ಎನ್ನುತ್ತಾನೆ. 'ಭರತ ಖಂಡದ ಭಾವನಾಗಗನದಲ್ಲಿ ಮೂಡುತ್ತಿದ್ದ ಪ್ರತಿಯೊಂದು ಹೊಸ ತಾರೆಯನ್ನೂ ಭಾರತೀಯರಿಗೆ ಅದರ ಮಹಿಮೆಯು ಅರಿವಾಗುವುದಕ್ಕೆ ಮುಂಚೆಯೇ ಅಧ್ಯಯನ ಮಾಡಿ ತಿಳಿದುಕೊಳಲು ಪ್ರಯತ್ನಿಸುತ್ತಿದ್ದ ಉತ್ಸಾಹಪೂರ್ಣ ಚೇತನ ಅವನದು.

ಭಾರತದ ನೆಲದಲ್ಲಿ ಭೌತಿಕವಾಗಿ ಬದುಕಿ ಬಾಳದಿದ್ದರೂ ಭಾರತದ ಅಂತಶ್ಚೇತನವನ್ನೂ ಮೈಗೂಡಿಸಿಕೊಂಡು ತನ್ನ ಅಮೂಲ್ಯ ಕೃತಿಗಳ ಮೂಲಕ ಅದನ್ನು ಹೊರಗೆಡಹಿದ ಪರಿಣತ ಪ್ರಜ್ಞೆ ಮ್ಯಾಕ್ಸ್ ಮ್ಯೂಲರನದು. ಅವನು ಈ ಕಾರ್ಯವನ್ನು ಸಾಧಿಸಿ ಈಗಾಗಲೇ ಒಂದು ಶತಮಾನ ಸಂದಿದ್ದರೂ ಸಹ ಅವನ ಕೃತಿಗಳು ಇಂದಿಗೂ ಹೊಚ್ಚ ಹೊಸದಾಗಿವೆ. ನವನವೋನ್ಮೇಷಶಾಲಿನಿಯಾಗಿವೆ. ಅವನ ಕೆಲಸದ ಬಗೆಗೆ ಅವನ ಪಾಂಡಿತ್ಯದ ಬಗೆಗೆ ಅವನಿಗಿದ್ದ ಆತ್ಮವಿಶ್ವಾಸ ಅಪಾರ. ಅವನೇ ಹೇಳಿರುವಂತೆ: "ನಾನೀಗ ಇಲ್ಲಿಂದ ಹೊರಡಲು ಅಣಿಯಾಗಿದ್ದೇನೆ. ಸುದೀರ್ಘವಾದ ಈ ನನ್ನ ಬಾಳು ಕಳೆಯಿತು. ಆ ಬಾಳಿನ ಬಹುಪಾಲು ಧಾರ್ಮಿಕ ಹಾಗೂ ತಾತ್ತ್ವಿಕ ಸಮಸ್ಯೆಗಳಿಗೆ ಮುಡಿಪಾಯಿತು. ಹೀಗಾಗಿ ನಾನಿನ್ನೂ ಇಲ್ಲಿಂದ ಹೊರಡಲು ಅಣಿಯಾಗಿರದೆ ಹೋಗಿದ್ದರೆ ಅದೊಂದು ವಿಚಿತ್ರ ಸಂಗತಿಯಾಗುತ್ತಿತ್ತು. ಬೆಳಕಿನಿಂದ ಇಷ್ಟೊಂದು ತುಂಬಿ ತುಳುಕಿದ ಈ ದೀರ್ಘವಾದ ಬಾಳನ್ನು ಬದುಕಿ, ಜಗತ್ಪಿತನ ಕರುಣಾಮಯವಾದ ಕೈಯಾಸರೆಯಿಂದ ಎಲ್ಲ ಬಗೆಯ ಬಿರುಗಾಳಿಗಳಿಂದಲೂ. ಸೆಣಸಾಟಗಳಿಂದಲೂ ಪಾರಾಗಿ, ಕೊನೆಯ ಹೆಜ್ಜೆ ಇಡಲಿರುವ ಈ ಗಳಿಗೆಯಲ್ಲಿ ನಾನೇಕೆ ಅಂಜಲಿ? ನನ್ನ ಪಾಲಿನ ಕೆಲಸವನ್ನೆಲ್ಲ ನಾನೀಗ ಮುಗಿಸಿದ್ದೇನೆ; ಅಷ್ಟೇ ಅಲ್ಲ, ಈ ಕಾರ್ಯವನ್ನು ಕಿರಿಯರೂ ಸಮರ್ಥರೂ ಆದವರು ಮುಂದುವರಿಸುತ್ತಾರೆಂಬುದರ ಅರಿವೂ ನನಗಿದೆ. ಬಜಾರಿನಲ್ಲಿ ಬದಿಯೇರಿಯನ್ನು ಕಟ್ಟಲು ನಾನೆಂದೂ ಹವಣಿಸಲಿಲ್ಲ; ಆ ಕೆಲಸವನ್ನು ಸಂತೋಷವಾಗಿ ಇತರರ ಪಾಲಿಗೆ ಬಿಟ್ಟುಕೊಟ್ಟೆ. ನಾನಾದರೋ ಚಿರಕಾಲ ನಿಲ್ಲುವ ತಳಹದಿಯೊಂದನ್ನು ಹಾಕಿಕೊಟ್ಟಿದ್ದೇನೆ. ನದಿಯ ತಳದಲ್ಲಿ ಹುದುಗಿರುವ ನನ್ನ ಹಾಸುಗಲ್ಲುಗಳು ಜನರಿಗೀಗ ಕಾಣಿಸದಿರಬಹುದು. ಆದರೂ ಈ ಅಗೋಚರವಾದ ಹಾಸುಗಲ್ಲುಗಳ ಮೇಲೆಯೇ ಮುಂದೆ ಕಟ್ಟುವ ಸೇತುವೆ ನಿಲ್ಲುವುದು. ಇದಕ್ಕಿಂತ ಹೆಚ್ಚಿನ ಕೆಲಸವನ್ನು ನಾನನ್ನು ಮಾಡಲಾರೆ." ಕೇವಲ ಶುಷ್ಕ ಪಾಂಡಿತ್ಯವುಳ್ಳ. ನಿಜವಾದ ಸತ್ತ್ವವಿಲ್ಲದ ವ್ಯಕ್ತಿಯೊಬ್ಬನಿಂದ ಈ ಕೆಚ್ಚಿನ ಮಾತುಗಳು ಹೇಗೆ ಬಂದಾವು?

ಮ್ಯಾಕ್ಸ್ ಮ್ಯೂಲರನ ಕೊನೆಯ ಮಾತುಗಳು ಇವು: "ನಾನು ದುಡಿದು ದಣಿದಿದ್ದೇನೆ." ತಾನೇ ಹೇಳಿಕೊಂಡಿರುವಂತೆ ಅವನು ತನ್ನ ಇಡೀ ಜೀವನವನ್ನು ಗಂಧದ ಕೊರಡಿನಂತೆ ಸವೆಸಿ ಕಡೆಗೆ ೧೯೦೦ರ ಅಕ್ಟೋಬರ್ ೨೮ ರಂದು ದಿವಂಗತನಾದನು.

ಸಂಸ್ಕೃತವನ್ನು ಮೃತಭಾಷೆ ಎಂದು ಕರೆಯಲಾಗಿದೆ; ಸಂಸ್ಕೃತವು ಮಾತನಾಡುವ ಭಾಷೆ ಅಲ್ಲದಿದ್ದರೂ ಅದು ಅವರ ವಿಚಾರಗಳು, ಅವರ ಶ್ರದ್ಧೆ, ಅವರ ಭಾವನೆಗಳು ಹಾಗೂ ರಾಗದ್ವೇಷಗಳು—ಇವೆಲ್ಲಕ್ಕೂ ಜೀವಾಳ. ಬಹುತೇಕ ದೇಶಗಳಲ್ಲಿ ಆಡುಭಾಷೆಯೇ ಆಯಾದೇಶದ ಸಾಹಿತ್ಯಕ್ಕೂ, ತನ್ಮೂಲಕ ಆಯಾ ಜನಾಂಗದ ಸಾಮಾಜಿಕ, ನೈತಿಕ ಹಾಗೂ ಧಾರ್ಮಿಕ ಸ್ವರೂಪಕ್ಕೂ ಕೀಲಿಕೈಯಂತಿದೆ. ಭಾರತದ ವಿಷಯವಾದರೋ ಹಾಗಲ್ಲ. ಭಾರತೀಯ ಸಾಹಿತ್ಯದ ಇಂದಿನ ಸ್ವರೂಪವೂ ಸಹ ಹೆಚ್ಚು ಕಡಿಮೆ ಡಾಂಟೆಯ ಕಾಲದ ಇಟ್ಯಾಲಿಯನ್ ಸಾಹಿತ್ಯವಿದ್ದಂತೆಯೇ ಇದೆ. ಸಾಹಿತ್ಯ, ನ್ಯಾಯಶಾಸ್ತ್ರ ಹಾಗೂ ಧರ್ಮಗಳ ಆಡುಭಾಷೆಯು ಈಗಲೂ ಅರ್ಷೇಯ ಸಂಸ್ಕೃತವೇ ಆಗಿದೆ.

—ಮ್ಯಾಕ್ಸ್‌ಮ್ಯೂಲರ್

ಯಾರು ತನ್ನ, ತನ್ನ ಪೂರ್ವಜರ, ತನ್ನ ಚರಿತ್ರೆಯ ಅಥವಾ ತನ್ನ ಬೌದ್ಧಿಕ ವಿಕಾಸದ ಬಗ್ಗೆ ಗಮನ ಕೊಡುತ್ತಾನೋ ಅವನಿಗೆ ವೈದಿಕ ಸಾಹಿತ್ಯದ ಅಧ್ಯಯನ ಅನಿವಾರ್ಯ ಎಂದು ನಾನು ದೃಢವಾಗಿ ಅಭಿಪ್ರಾಯಪಡುತ್ತೇನೆ.

—ಮ್ಯಾಕ್ಸ್‌ಮ್ಯೂಲರ್

ಮೂಲ: ಡಾ. ಡಿ. ಎಂ. ನಂಜುಂಡಪ್ಪ

ಅನುವಾದ: ಜಿ. ಟಿ. ಮರುಳಸಿದ್ದಪ್ಪ

ಉನ್ನತ ಶಿಕ್ಷಣಕ್ಕಾಗಿ ಹಣ

ಉನ್ನತ ಶಿಕ್ಷಣಕ್ಕಾಗಿ ದಾಖಲಾಗುವವರ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಿರುವುದನ್ನು ಗಮನಿಸಿದಾಗ ಪ್ರೌಢವ್ಯಾಸಂಗಕ್ಕೆ ಇರುವ ಬೇಡಿಕೆ ಎಷ್ಟೆಂಬುದು ಕಂಡು ಬರುತ್ತದೆ ಮತ್ತು ಈ ಬೇಡಿಕೆ ಇಳಿಮುಖವಾಗುವ ಸೂಚನೆಗಳೇನೂ ಕಂಡುಬರುತ್ತಿಲ್ಲ. ಆದಕಾರಣ, ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಉನ್ನತ ಶಿಕ್ಷಣಕ್ಕೆ ಬೇಕಾದ ಸೌಲಭ್ಯಗಳನ್ನು ಹೆಚ್ಚಿಸಬೇಕಾಗಿದೆ. ಸಮಾನ ಅವಕಾಶವನ್ನು ಕಲ್ಪಿಸಿ ಕೊಡುವ ದೃಷ್ಟಿಯಿಂದಲೂ ಸಹ. ಕೇವಲ ಬಡತನದ ಕಾರಣಗಳಿಗಾಗಿ ಅಥವಾ ಹಣಕಾಸಿನ ಬೆಂಬಲ ದುರ್ಬಲವಾಗಿರುವುದರಿಂದಾಗಿ. ಸಾಮರ್ಥ್ಯವಿರುವ ಯಾರೊಬ್ಬರನ್ನೇ ಆಗಲಿ, ವಿಶ್ವವಿದ್ಯಾನಿಲಯ ಮಟ್ಟದ ವ್ಯಾಸಂಗದಿಂದ ಹೊರಗಿಡಲಾಗದು.

ಖಾಸಗಿ ಕ್ಷೇತ್ರವು ಅಪೇಕ್ಷಣೀಯವಾದ ಎಲ್ಲಾ ರೀತಿಯ ಮತ್ತು ಸಾಕಷ್ಟು ಪ್ರಮಾಣದ ವಿದ್ಯಾಭ್ಯಾಸ ಸೌಲಭ್ಯಗಳನ್ನೊದಗಿಸಲು ಬೇಕಾಗುವ ಹಣಕಾಸನ್ನು ಒದಗಿಸುತ್ತದೆ ಎಂಬುದಾಗಿ ಭಾವಿಸಲು ಸಾಧ್ಯವಿಲ್ಲದಿರುವುದರಿಂದ, ಸರಕಾರ ಈ ಪರಿಸ್ಥಿತಿಯನ್ನು ಬಗೆಹರಿಸುವ ಸಲುವಾಗಿ ಮಹತ್ತರವಾದ ಪಾತ್ರವನ್ನು ವಹಿಸಬೇಕಾಗುತ್ತದೆ. ಆದರೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ತೀವ್ರವಾದ ಹಣಕಾಸಿನ ಮುಗ್ಗಟ್ಟನ್ನು ಎದುರಿಸುತ್ತಿವೆ. ಹಾಗಾಗಿ, ಉನ್ನತ ಶಿಕ್ಷಣಕ್ಕಾಗಿ ವಿಶ್ವ ವಿದ್ಯಾನಿಲಯ ಅನುದಾನ ಆಯೋಗ (University Grants Commission) ಮತ್ತು ರಾಜ್ಯ ಸರಕಾರಗಳು ಒದಗಿಸುವ ತಲಾ ಸಹಾಯ ದ್ರವ್ಯದ (Per capita grants) ಪ್ರಮಾಣ, ವಿಶೇಷತಃ ಐದನೇ ಪಂಚ ವಾರ್ಷಿಕ ಯೋಜನೆಯ ನಂತರದ ಕಾಲದಲ್ಲಿ ತುಂಬಾ ಕಡಿಮೆಯಾಗಿರುವುದು ಕಂಡುಬರುತ್ತದೆ. ಅದೂ ಅಲ್ಲದೆ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಯೋಜನೆಗಳಲ್ಲಿ ಹಾಕಿಕೊಂಡಿರುವ ಆದ್ಯತೆಗಳ ವ್ಯವಸ್ಥೆಯನ್ನು (System of Priorities) ನೋಡಿದರೆ, ಸರಕಾರಗಳು ಉನ್ನತ ವಿದ್ಯಾಭ್ಯಾಸದ ಬೇಡಿಕೆಯನ್ನು ಪೂರೈಸುವ ಸಲುವಾಗಿ, ಅಪೇಕ್ಷಣೀಯವಾದ ರೂಪದಲ್ಲಿ ಮತ್ತು ಅಗತ್ಯಗಳಿಗೆ ಅನುಗುಣವಾದ ಮಟ್ಟದಲ್ಲಿ ಹಣವನ್ನು ಒದಗಿಸಬಲ್ಲುವೇ ಎಂಬುದು ಸಂದೇಹಾಸ್ಪದ ಸಂಗತಿ. ಈ ಪರಿಸ್ಥಿತಿಯಲ್ಲಿ, ವಿಶ್ವವಿದ್ಯಾನಿಲಯಗಳು ಹಣಕಾಸಿನ ತೀವ್ರವಾದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಜೊತೆಗೆ, ಈ ಸಮಸ್ಯೆಗಳು ವಿದ್ಯಾಭ್ಯಾಸದ ಗುಣಮಟ್ಟದ ಮೇಲೆ ಕೆಟ್ಟ ಪರಿಣಾಮಗಳನ್ನು ಬೀರಬಹುದು ಮತ್ತು ಅಂತಿಮವಾಗಿ ಉನ್ನತ ಶಿಕ್ಷಣದ ಮೂಲ ಉದ್ದೇಶಕ್ಕೆ ಸಂಚಕಾರವನ್ನುಂಟು ಮಾಡಬಹುದು. ಆದುದರಿಂದ, ವಿದ್ಯಾಭ್ಯಾಸಕ್ಕಾಗಿ, ಸರಕಾರದ

---

* ಈ ಲೇಖನದ ಕರ್ತೃ ಕರ್ನಾಟಕ ಸರಕಾರಕ್ಕೆ ಆರ್ಥಿಕ ಸಲಹೆಗಾರರಾಗಿದ್ದಾರೆ. ಲೇಖನದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳಾಗಿವೆ ಮತ್ತು ಅವುಗಳನ್ನು ಕರ್ನಾಟಕ ಸರಕಾರಕ್ಕೆ ಯಾವ ದೃಷ್ಟಿಯಿಂದಲೂ ಆರೋಪಿಸಬಾರದು.

ಪರಿಮಿತವಾದ ಸಂಪನ್ಮೂಲಗಳಿಂದ ಪಡೆದುಕೊಳ್ಳುವ ಸಹಾಯಧನವನ್ನು ಕಡಿಮೆ ಮಾಡುವಂತಹ ಮತ್ತು ಹೆಚ್ಚು ಸಮರ್ಪಕವಾದ ಹಣಕಾಸಿನ ವ್ಯವಸ್ಥೆಯೊಂದನ್ನು ಕಂಡು ಹಿಡಿಯಬೇಕಾದ ಆವಶ್ಯಕತೆ ಹೆಚ್ಚಾಗಿದೆ. ಒಂದು ವೇಳೆ ಈಗ ರೂಢಿಯಲ್ಲಿರುವ. ವಿಶ್ವವಿದ್ಯಾನಿಲಯ ಅನುದಾನ ಆಯೋಗ ಮತ್ತು ರಾಜ್ಯ ಸರಕಾರಗಳು ಒದಗಿಸುವ ಧನಸಹಾಯ ವ್ಯವಸ್ಥೆಯ ಮೂಲಕವೇ. ಹೆಚ್ಚುತ್ತಿರುವ ಉನ್ನತ ಶಿಕ್ಷಣದ ವಿಸ್ತಾರ ಬೇಡಿಕೆಗಳನ್ನು ಪೂರೈಸಲು ಸಾಧ್ಯವೆಂಬುದನ್ನು ಒಪ್ಪಿಕೊಂಡರೂ ಸಹ. ವಿಶ್ವವಿದ್ಯಾನಿಲಯಗಳ ಸ್ವಾಯತ್ತತೆ (autonomy) ಮತ್ತು ಸಮಾನತೆಯ (equity) ಆಧಾರಗಳ ದೃಷ್ಟಿಯಿಂದ. ಈಗ ಜಾರಿಯಲ್ಲಿರುವ ವ್ಯವಸ್ಥೆ ಅಪೇಕ್ಷಣೀಯವೇ ಎಂಬುದನ್ನು ಪ್ರಶ್ನಿಸದಂತಿರಲು ಸಾಧ್ಯವಿಲ್ಲ.

ಇತ್ತೀಚಿನ ದಿನಗಳಲ್ಲಿ ಉನ್ನತ ಶಿಕ್ಷಣದ ಸುಧಾರಣೆಯನ್ನು ಕುರಿತ ಪ್ರಸ್ತಾಪಗಳಲ್ಲಿ. ವಿಶ್ವವಿದ್ಯಾನಿಲಯಗಳ ಮೇಲೆ ಹೆಚ್ಚಿನ ನಿಯಂತ್ರಣವನ್ನು ಸರಕಾರ ಹೊಂದಿರಬೇಕೆಂಬ ಅಂಶವನ್ನು ಕಾಣಬಹುದು. ಉದಾಹರಣೆಗೆ. ಕರ್ನಾಟಕ ರಾಜ್ಯ ಸರಕಾರವು, ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಆಡಳಿತ ವ್ಯವಸ್ಥೆಯಲ್ಲಿಯೂ ಏಕ ರೂಪತೆಯನ್ನು ಜಾರಿಗೆ ತರಲು ಮತ್ತು ಅವುಗಳ ಮೇಲೆ ಹೆಚ್ಚಿನ ನಿಯಂತ್ರಣಾಧಿಕಾರವನ್ನು ಹೊಂದಿರಲು ಉದ್ದೇಶಿಸಿದೆ. ಈ ವಿಚಾರವನ್ನು ಕುರಿತ ಒಂದು ಮಸೂದೆಯನ್ನು ಶಾಸನಸಭೆಯ ಮುಂದೆ ಇಡಲಾಗಿದೆ.* ಬೇರೆ ಕೆಲವು ರಾಜ್ಯ ಸರಕಾರಗಳು ತಮ್ಮ ಆಡಳಿತ ವ್ಯವಸ್ಥೆಗೆ ಒಳಪಟ್ಟ ವಿಶ್ವವಿದ್ಯಾನಿಲಯಗಳ ಮೇಲೆ ಈಗಾಗಲೇ ಹೆಚ್ಚಿನ ನಿಯಂತ್ರಣವನ್ನು ಸ್ಥಾಪಿಸಿವೆ. ವಿಶ್ವವಿದ್ಯಾನಿಲಯಗಳು ತಮ್ಮ ಹಣಕಾಸಿನ ಅಗತ್ಯಗಳಲ್ಲಿ ಸುಮಾರು ಮೂರನೇ–ಎರಡು ಪಾಲು ಅಥವಾ ಅದಕ್ಕೂ ಹೆಚ್ಚಿನ ಮೊತ್ತಕ್ಕಾಗಿ ಸರಕಾರದಿಂದ ಬರುವ ಸಹಾಯಧನದ ಮೇಲೆ ಅವಲಂಬಿತವಾದಾಗ ಇಂತಹ ನಿಯಂತ್ರಣ ಅನಿವಾರ್ಯವಾಗುತ್ತದೆ. ಲೆಕ್ಕಪತ್ರಗಳನ್ನಿಡುವ ವಿಧಾನಗಳು. (patterns) ಕಟ್ಟಡಗಳ ರಚನೆ ಯೋಜನೆಯ ಪದ್ಧತಿಗಳು (methods) ಮತ್ತಿತರ ಬಂಡವಾಳ ರೂಪದ ಅಭಿವೃದ್ಧಿ ಕಾರ್ಯಗಳು ಈಗಾಗಲೇ ಸರಕಾರದ ಕಾರ್ಯ ವಿಧಾನಗಳಿಗೆ ಅನುಗುಣವಾಗಿವೆ. ವಿಶ್ವವಿದ್ಯಾನಿಲಯಗಳ ವೆಚ್ಚದಲ್ಲಿ ಹೆಚ್ಚಳವುಂಟಾಗಬಹುದಾದ ಸಾಧ್ಯತೆಗಳನ್ನು ಒಪ್ಪಿಕೊಂಡರೆ. ಈಗ ಕಂಡು ಬರುತ್ತಿರುವ ಸೂಚನೆಗಳ ಪ್ರಕಾರ. ವಿಶ್ವವಿದ್ಯಾನಿಲಯಗಳ ಮೇಲಿನ ಸರಕಾರದ ಹಿಡಿತದ ಪರಿಮಾಣ ಸಡಿಲಗೊಳ್ಳುವುದಕ್ಕಿಂತಲೂ ಇನ್ನೂ ಹೆಚ್ಚು ಬಿಗಿಯಾಗುವ ಸಂಭವವೇ ಜಾಸ್ತಿ. ವಿಶ್ವವಿದ್ಯಾನಿಲಯಗಳ ಮೇಲೆ ಸರಕಾರದ ಹಿಡಿತ ಬಿಗಿಯಾದ ಹಾಗೆಲ್ಲಾ. ಈಗಾಗಲೇ ಅನುಭವಕ್ಕೆ ಬಂದಿರುವ ಪ್ರಕಾರ. ಸರಕಾರದಿಂದ ಹಣಕಾಸಿನ ಮಂಜೂರಾತಿ ಪಡೆಯುವುದರಲ್ಲೇ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಸಮಯ ಹಾಗೂ ಶಕ್ತಿ ವ್ಯಯವಾಗುತ್ತದೆ. ವಿಶ್ವವಿದ್ಯಾನಿಲಯಗಳು ಹಣಕಾಸಿಗಾಗಿ. ಅತಿ ಹೆಚ್ಚಾಗಿ ರಾಜ್ಯ ಸರಕಾರದ ಮೇಲೆ ಅವಲಂಬಿತವಾಗಿರುವುದೇ ಈ ಎಲ್ಲಾ ತೊಂದರೆಯ ಮೂಲವಾಗಿದೆ. ಈಗ ಜಾರಿಯಲ್ಲಿರುವ ವ್ಯವಸ್ಥೆಯ ಪ್ರಕಾರ. ವಿಶ್ವವಿದ್ಯಾನಿಲಯಗಳು. ವಿಶ್ವವಿದ್ಯಾನಿಲಯ ಅನುದಾನ ಆಯೋಗ ಮತ್ತು ರಾಜ್ಯ ಸರಕಾರಗಳೊಡನೆ ಸಹಾಯಧನಕ್ಕಾಗಿ ವಾದ ಮಾಡಬೇಕು: ಪ್ರತಿಯಾಗಿ. ಆಯೋಗ ಕೇಂದ್ರದ ವಿದ್ಯಾಮಂತ್ರಿ ಖಾತೆಯೊಡನೆ ಮತ್ತು ಕೇಂದ್ರದ ಹಣಕಾಸಿನ ಸಚಿವ ಖಾತೆಯೊಡನೆ ವಾದ ಮಾಡಬೇಕು. ಕೇಂದ್ರ ವಿದ್ಯಾಮಂತ್ರಿ ಖಾತೆಯವರು ರಾಜ್ಯ ಸರಕಾರಗಳ ವಿದ್ಯಾಮಂತ್ರಿಗಳೊಡನೆ ವಾದ ಮಾಡಬೇಕು: ಪ್ರತಿಯಾಗಿ. ರಾಜ್ಯ ವಿದ್ಯಾಮಂತ್ರಿಗಳು ಅರ್ಥ ಸಚಿವರೊಡನೆ ಅಥವಾ ಯೋಜನಾ ಸಚಿವರೊಡನೆ ಒಂದು ರೀತಿಯ ಸಮರವನ್ನೇ ನಡೆಸಬೇಕು. ಈ ಸಮರದಲ್ಲಿ ವಿದ್ಯಾಮಂತ್ರಿಗಳೇ ಸೋಲುವ ಸಂಭವ ಹೆಚ್ಚು. ಈ ರೀತಿಯ ಕಾರ್ಯನಿರ್ವಹಣಾ ವ್ಯವಸ್ಥೆಯಿಂದ ವಿಪರೀತವಾದ ಕಾಲ ನಷ್ಟವುಂಟಾಗುತ್ತದೆ. ಮಹತ್ವದ ವಿಷಯಗಳಿಗೇ ಅಲ್ಲದೆ. ಸಾಮಾನ್ಯವಾದ ಸಣ್ಣಪುಟ್ಟ ವಿಚಾರಗಳಿಗೂ ಮೇಲಿನ ಕಾರ್ಯ ವಿಧಾನವನ್ನು

* ಇತ್ತೀಚೆಗೆ ಆ ಮಸೂದೆ ವಿಧಾನ ಮಂಡಲಗಳಲ್ಲಿ ಚರ್ಚಿಸಲ್ಪಟ್ಟು. ಕೆಲವು ಬದಲಾವಣೆಗಳೊಂದಿಗೆ ಅಂಗೀಕೃತವಾಗಿ. ರಾಜ್ಯಪಾಲರ ಅನುಮತಿಯನ್ನು ಪಡೆದು ಶಾಸನ ರೂಪದಲ್ಲಿ ಜಾರಿಗೆ ಬಂದಿದೆ.

ಅನ್ವಯಿಸಿದಾಗ. ಉನ್ನತ ಸ್ಥಾನದಲ್ಲಿ ಕುಳಿತು ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದವರ ಮೇಲಿನ ಭಾರ ದುಸ್ಸಹವಾಗುತ್ತದೆ. ೧೯೬೩–೬೪ರ ನಂತರ ಉದ್ಭವಿಸಿರುವಂತಹ ರಾಷ್ಟ್ರೀಯ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿ ಉಂಟಾದಾಗ. ಕಾರ್ಯನಿರ್ವಹಣಾ ವಿಧಾನ (procedure) ಹೆಚ್ಚು ಕಡಿಮೆ ಮುರಿದು ಬೀಳುವ ಮಟ್ಟವನ್ನು ತಲುಪುವಂತೆ ಕಂಡುಬರುತ್ತದೆ.[1] ಸರಕಾರದ ಈಗಿನ ನಿಯಂತ್ರಣವನ್ನು ಇನ್ನೂ ವಿಸ್ತೃತಗೊಳಿಸಿದಾಗ. ವಿಶ್ವವಿದ್ಯಾನಿಲಯಗಳು ಸರಕಾರದ ಮತ್ತೊಂದು ಇಲಾಖೆಯಾಗಿ ಹೋಗುತ್ತವೆ.

ಖಾಸಗೀ ಮೂಲಗಳಿಂದಲೇ ಆಗಲಿ ಅಥವಾ ಸರಕಾರಿ ಮೂಲಗಳಿಂದಲೇ ಆಗಲಿ, ಶಿಕ್ಷಣಕ್ಕಾಗಿ ಮಾಡುವ ವೆಚ್ಚ ಒಂದು ರೀತಿಯ ಬಂಡವಾಳ ಹೂಡಿಕೆ ಎಂದು ಸಾರ್ವತ್ರಿಕವಾಗಿ ಪರಿಗಣಿಸಲ್ಪಟ್ಟಿದೆ. ಉದಾಹರಣೆಗೆ, ಕರ್ನಾಟಕ ವಿಶ್ವವಿದ್ಯಾನಿಲಯವು ತನ್ನ ಮುಕ್ಕಾಲು ಭಾಗ ವೆಚ್ಚವನ್ನು ರಾಜ್ಯ ಸರಕಾರ ಮತ್ತು ವಿಶ್ವವಿದ್ಯಾನಿಲಯ ಅನುದಾನ ಆಯೋಗಗಳಿಂದ ಬರುವ ಸಹಾಯಧನದಿಂದ ನಿರ್ವಹಿಸುತ್ತದೆ. ವಿದ್ಯಾರ್ಥಿಗಳು ಕೊಡುವ ಶುಲ್ಕ ಉಳಿದ ಕಾಲು ಭಾಗದ ವೆಚ್ಚವನ್ನು ಭರಿಸುತ್ತದೆ. ಈ ರೀತಿ 'ಸಹಾಯ ಧನ'ದ ಮೂಲಕ ಹಣವನ್ನು ಒದಗಿಸುವ ವ್ಯವಸ್ಥೆಯು. ವಿಶ್ವವಿದ್ಯಾನಿಲಯ ಶಿಕ್ಷಣದ ಅನುಕೂಲ ಗಳನ್ನು ಅನುಭವಿಸುವವರಿಗೆ, ಉಳಿದ ಸಮುದಾಯದಿಂದ ಆದಾಯದ ನಿವ್ವಳ ವರ್ಗಾವಣೆ (net transfer of income) ಆಗುವುದನ್ನು ಒಳಗೊಳ್ಳುತ್ತದೆ. ಈ ವರ್ಗಾವಣೆಯ ಭಾರ ಯಾರ ಮೇಲೆ ಬೀಳುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿಯುವುದು ಕಷ್ಟ. ಆದರೂ. ಕೇಂದ್ರ ಮತ್ತು ರಾಜ್ಯ ಸರಕಾರಗಳ ತೆರಿಗೆ ಆದಾಯದ ಶೇ. ೮೦ಕ್ಕಿಂತಲೂ ಹೆಚ್ಚು ಭಾಗದ ಆದಾಯವು ಪರೋಕ್ಷ ತೆರಿಗೆಗಳಿಂದ ಭರಿಸಲ್ಪಡುವುದರಿಂದ, ವಿಶ್ವವಿದ್ಯಾನಿಲಯಗಳ ಶಿಕ್ಷಣ ವೆಚ್ಚದ ಭಾರವು ಕೇವಲ ಶ್ರೀಮಂತ ವರ್ಗದವರ ಮೇಲಷ್ಟೇ ಬೀಳುವುದಿಲ್ಲ; ಇದರ ಭಾರ ಸಾಮಾನ್ಯ ಜನರ ಮೇಲೂ ಹರಡಲ್ಪಡುತ್ತದೆ. ಆದರೆ. ಇದರಿಂದ ಒಂದು ಅಂಶವಂತೂ ಸ್ಪಷ್ಟವಾಗಿ ಗೋಚರಿಸುತ್ತದೆ. ಏನೆಂದರೆ, ಈ ವ್ಯವಸ್ಥೆಯ ಲಾಭವನ್ನು ಪಡೆಯುವ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ, ಮುಂದೆ ತನ್ನ ಜೀವನದಲ್ಲಿ ತನ್ನಷ್ಟೇ ಆದಾಯ ಪಡೆಯುವ ಇತರರಿಗಿಂತ ಹೆಚ್ಚಿನ ತೆರಿಗೆಯನ್ನೇನೂ ಕೊಡುವುದಿಲ್ಲ. ಹಾಗಾಗಿ, ಈಗಿನ ವ್ಯವಸ್ಥೆಯು. ವಿಶ್ವವಿದ್ಯಾನಿಲಯದವಿದ್ಯಾರ್ಥಿಗೆ ಅನುಕೂಲವಾಗುವಂತೆ. ಆದಾಯವು ಹಂಚಿಕೆ ಯಾಗುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಈ ಸಂದರ್ಭದಲ್ಲಿ. ತೆರಿಗೆಗಳು ಶ್ರೀಮಂತರ ಮೇಲೆ ಹಾಕಲ್ಪಡುತ್ತವೆ ಮತ್ತು ಶ್ರೀಮಂತರು ಕೊಡುವ ತೆರಿಗೆ ಆದಾಯದಿಂದ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಸರಕಾರ ಹಣ ಒದಗಿಸುವುದು ಧರ್ಮಸಮ್ಮತವಾದುದೇ ಆಗಿದೆ ಎಂದು ವಾದಿಸಬಹುದು. ಆದರೆ, ಹಿಂದೆಯೇ ತಿಳಿಸಿದ ಪ್ರಕಾರ. ಈ ಆದಾಯ ವರ್ಗಾವಣೆಯ ಭಾರವನ್ನು ಯಾರು ಹೊರುತ್ತಾರೆ ಎಂಬುದನ್ನು ಖಚಿತವಾಗಿ ಹೇಳುವುದು ತುಂಬಾ ಕಷ್ಟ. ಆದರೂ. ಈಗ ಜಾರಿಯಲ್ಲಿರುವ ವ್ಯವಸ್ಥೆಯು ಒಳಗೊಂಡಿರುವ. ಏಕರೂಪದ ಶುಲ್ಕ ಮತ್ತು ಅದರ ಜೊತೆಗೂಡಿರುವ ತಾರತಮ್ಯರಹಿತವಾದ (indiscrete) ಸಹಾಯದ್ರವ್ಯ ಪದ್ಧತಿ ಹಾಗೂ ಪರೋಕ್ಷ ತೆರಿಗೆಯನ್ನು ಗಮನಿಸಿದಾಗ, ಈ ಆದಾಯ ವರ್ಗಾವಣೆಯು ಶ್ರೀಮಂತರಿಂದ ಬಡವರಿಗೆ ಆಗಬಹುದು ಅಥವಾ ಅದಕ್ಕೆ ತದ್ವಿರುದ್ಧ ವಾಗಿಯೂ ಆಗಬಹುದು.

ಇದರ ಜೊತೆಗೆ. ಉನ್ನತ ಶಿಕ್ಷಣ ಪಡೆದವರಿಗೆ ಹೆಚ್ಚಿನ ಪ್ರತಿಫಲ ದೊರಕುವುದು ಖಚಿತವಾಗಿ ಕಂಡು ಬಂದಿದೆ; ಬಹಳ ಜನ ವಿಶ್ವವಿದ್ಯಾನಿಲಯದ ಪದವೀಧರರು ಅತ್ಯಂತ ಲಾಭದಾಯಕವಾದ ವಾಣಿಜ್ಯೋದ್ಯೋಗದಲ್ಲಿ (lucrative professional business) ಅಥವಾ ಅವಳಿತ

---

[1] ಇಂಗ್ಲೆಂಡಿನಲ್ಲಿ ಸಹ ಹೆಚ್ಚು ಕಡಿಮೆ ಇದೇ ರೀತಿಯ ಪರಿಸ್ಥಿತಿ ಉದ್ಭವಿಸಿರುವುದನ್ನು ಗಮನಿಸಬಹುದಾಗಿದೆ.

See *Report of the University of London* by Sir Douglas Logan for 1965–66.

ಸೇವೆಯಲ್ಲಿ ತೊಡಗಿದ್ದಾರೆ. ಹಾಗೆಯೇ, ವಿಶ್ವವಿದ್ಯಾನಿಲಯದ ಪದವೀಧರರಲ್ಲಿ ಕಡಿಮೆ ಆದಾಯದ ಗುಂಪುಗಳಿಗೆ ಸೇರಿದ ಶಾಲಾ ಉಪಾಧ್ಯಾಯರು, ಗುಮಾಸ್ತರು ಮುಂತಾದವರೂ ಇದ್ದಾರೆ. ಬೇರೆ ಬೇರೆ ಮಟ್ಟದ ವಿದ್ಯಾಭ್ಯಾಸ–ಉದಾ: ಪ್ರಾಥಮಿಕ, ಪ್ರೌಢ ಮತ್ತು ವಿಶ್ವವಿದ್ಯಾನಿಲಯ ಮಟ್ಟದ ವಿದ್ಯಾಭ್ಯಾಸ–ಮತ್ತು ನೌಕರಿಗೆ ಬೇಕಾದ ತರಬೇತಿ ಹಾಗೂ ಅವುಗಳಿಗಿರುವ ಪ್ರತಿಫಲಗಳನ್ನು ಕುರಿತ ಸಮಗ್ರವಾದ ಅಧ್ಯಯನಗಳು ತೀರಾ ವಿರಳ ಅಥವಾ ಆಗಿಯೇ ಇಲ್ಲವೆನ್ನಬಹುದು. ಆದಾಗ್ಯೂ ಸಹ ಉದ್ಯೋಗ ಮತ್ತು ಸಂಪಾದನೆಗಳನ್ನು ಕುರಿತಂತೆ ದೊರಕುವ ಅಂಕಿ–ಅಂಶಗಳು, ಪ್ರಾಥಮಿಕ ಮತ್ತು ಪ್ರೌಢಮಟ್ಟದ ಶಿಕ್ಷಣ ಪಡೆದವರ ಸಂಪಾದನೆಗಿಂತಲೂ, ವಿಶ್ವವಿದ್ಯಾನಿಲಯ ಮಟ್ಟದ ಶಿಕ್ಷಣ ಪಡೆದವರ ಸಂಪಾದನೆ ಹೆಚ್ಚಾಗಿರುತ್ತದೆ ಎಂಬುದನ್ನು ತೋರಿಸಿಕೊಟ್ಟಿವೆ. ವಿಶ್ವವಿದ್ಯಾನಿಲಯದ ಶಿಕ್ಷಣವನ್ನು ಪಡೆದಿರುವವರಲ್ಲೂ ಸಹ, ಅವರವರು ಪಾಸು ಮಾಡಿರುವ ಬೇರೆ ಬೇರೆ ಪರೀಕ್ಷೆಗಳಿಗೆ ಅನುಗುಣವಾಗಿ ಅವರುಗಳ ಮಾಸಿಕ ಸಂಪಾದನೆ ವ್ಯತ್ಯಾಸವಾಗುತ್ತದೆ. ಮುಖ್ಯವಾಗಿ, ಅತಿ ಹೆಚ್ಚಿನ (ಅಂದರೆ ೫೦೦ ರೂಪಾಯಿಗಳಿಗೂ ಹೆಚ್ಚು) ಸಂಪಾದನೆಯನ್ನು ಸಾಮಾನ್ಯವಾಗಿ ತಂತ್ರಜ್ಞರು (technologists) ಮತ್ತು ವೈದ್ಯಕೀಯ ವೃತ್ತಿಯಲ್ಲಿ ನಿರತರಾಗಿರುವವರಲ್ಲಿ ಕಾಣಬಹುದಾಗಿದೆ.[2] ಕಡಿಮೆ ವಿದ್ಯಾರ್ಹತೆ ಪಡೆದವರಲ್ಲೂ ಕೂಡ, ಸೇವೆಯ ಕಾಲಾವಧಿ ಹೆಚ್ಚಿದಂತೆ ಒದಗಿಬರುವ ಅವಕಾಶಗಳು ಮತ್ತು ಆ ಮೂಲಕ ಅವರ ಸಂಪಾದನೆ ಉತ್ತಮಗೊಳ್ಳುವ ಸಾಧ್ಯತೆಗಳನ್ನು ಗಣನೆಗೆ ತೆಗೆದುಕೊಂಡರೂ ಬಿ.ಎ. ಕಲೆ, ನ್ಯಾಯಶಾಸ್ತ್ರ ಅಥವಾ ಶಿಕ್ಷಣಶಾಸ್ತ್ರದ ಪದವಿ ಗಳಿಸಿರುವವರಿಗಿಂತಲೂ ವಿಜ್ಞಾನ ಮತ್ತು ವೈದ್ಯಶಾಸ್ತ್ರಗಳಲ್ಲಿ ಪದವಿ ಪಡೆದಿರುವವರ ಸಂಪಾದನಾಶಕ್ತಿ ಹೆಚ್ಚಾಗಿರುವುದನ್ನು ಅಂಕಿ–ಅಂಶಗಳು ಸೂಚಿಸುವಂತೆ ಕಂಡುಬರುತ್ತದೆ.[3] ಆದುದರಿಂದ, ವಿಶ್ವವಿದ್ಯಾನಿಲಯದ ಶಿಕ್ಷಣವನ್ನು ಪಡೆಯದ ಬಹುಸಂಖ್ಯಾತರಾದ ಇತರರೊಡನೆ ಹೋಲಿಸಿದಾಗ, ಪದವೀಧರರ ಜೀವಿತದ ಒಟ್ಟು ಸಂಪಾದನೆ ಬಹುಪಾಲು ಹೆಚ್ಚಾಗಿರುತ್ತದೆಯೆಂದು ಭಾವಿಸುವುದು ಅತ್ಯಂತ ಸಮಂಜಸವಾಗಿ ತೋರುತ್ತದೆ. ಈ ವಿಚಾರಸರಣಿಯನ್ನು ಒಪ್ಪಿಕೊಂಡರೆ, ವಿಶ್ವವಿದ್ಯಾನಿಲಯಗಳಿಗೆ ಧನಸಹಾಯ ಒದಗಿಸುವ ವ್ಯವಸ್ಥೆಗೆ ಅನುಕೂಲಕರವಾದ ಸಮಾನತೆ ವಾದಕ್ಕೆ (equity argument) ಸುಸ್ಪಷ್ಟವಾದ ಸಮರ್ಥನೆಯಿಲ್ಲ.

ಸರಕಾರದ ಸಹಾಯಧನ ವ್ಯವಸ್ಥೆಯ ಮೂಲಕ ಉನ್ನತ ಶಿಕ್ಷಣಕ್ಕೆ ಬೇಕಾಗುವ ಹಣಕಾಸನ್ನು ಒದಗಿಸುವುದರಿಂದ ಕೆಲವು ವ್ಯಕ್ತಿಗಳಿಗೆ ನಿಶ್ಚಿತವಾದ ಪ್ರಯೋಜನ ದೊರಕುವುದು ಸುಸ್ಪಷ್ಟ; ಆದುದರಿಂದ ಉನ್ನತ ಶಿಕ್ಷಣಕ್ಕಾಗಿ ಹಣಕಾಸನ್ನು ಒದಗಿಸುವ ಪದ್ಧತಿಯನ್ನು ನಿರ್ಧರಿಸುವಾಗ ಕೆಲವು ವ್ಯಕ್ತಿಗಳಿಗೆ ದೊರಕುವ ಪ್ರಯೋಜನಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಲೇ ಬೇಕು. ಈ ಸಂಬಂಧದಲ್ಲಿ, ಉನ್ನತ ಶಿಕ್ಷಣದಿಂದ ಸಮಾಜಕ್ಕೆ ಒದಗುವ ಪರೋಕ್ಷ ಪ್ರಯೋಜನಗಳೂ ಬಹಳ ಹೆಚ್ಚು ಎಂಬುದಾಗಿ ಕೆಲವು ಮೂಲಗಳು ವಾದಿಸುತ್ತವೆ.[4] ವಿಶ್ವವಿದ್ಯಾನಿಲಯ ಶಿಕ್ಷಣದ ಪ್ರಯೋಜನಗಳು ಸಮಾಜದಲ್ಲೆಲ್ಲಾ ವ್ಯಾಪಕವಾಗಿ ಪ್ರಸರಿಸಲ್ಪಡುವುದರಿಂದ, ಅಂತಹ ಶಿಕ್ಷಣದ ಆರ್ಥಿಕ ಪ್ರಯೋಜನಗಳನ್ನು ಇಡೀ ಸಮುದಾಯವೇ ಪಡೆಯುತ್ತದೆಯೇ ಹೊರತು ಕೇವಲ ಸಂಬಂಧಪಟ್ಟ ವ್ಯಕ್ತಿಯಲ್ಲ. ಈ ನಿಲುವಿನ ಆಧಾರದ ಮೇಲೆ, ಒಬ್ಬ ವ್ಯಕ್ತಿಯ ಜೀವಿತದ ಸಂಪಾದನೆಯು ವಿಶ್ವವಿದ್ಯಾನಿಲಯದ

[2] V.K.R.V. Rao ; *University Education and Employment.*

[3] D. M. Nanjundappa ; "Expenditure on Education," *Journal of Karnataka University* (Sociai Sciences) Vol.: 1 pp 80-94

[4] Mark Bloug "The Rate of Return on Investment in Education in Great Britain," *Manchester School of Economics and Social Studies*, September 1965, pp 205-251.

ಶಿಕ್ಷಣದ ಪರಿಣಾಮವಾಗಿ ಹೆಚ್ಚಾಗುವ ಸಾಧ್ಯತೆಯಿಲ್ಲ ಮತ್ತು ಧನ ಸಹಾಯ ಪದ್ಧತಿಯ ಮೂಲಕ ವಿಶ್ವವಿದ್ಯಾನಿಲಯದ ಶಿಕ್ಷಣಕ್ಕೆ ಹಣ ಒದಗಿಸುವುದರಿಂದ, ಪ್ರಯೋಜನ ತತ್ತ್ವದ (benefit principle) ಉಲ್ಲಂಘನೆಯಾಗುವುದಿಲ್ಲ ಎಂದು ಸಮರ್ಥಿಸಲಾಗಿದೆ.

ಶಿಕ್ಷಣದಿಂದ ದೊರಕುವ ಪರೋಕ್ಷ ಅಥವಾ ಸಾಮಾಜಿಕ ಪ್ರಯೋಜನಗಳು ಅಥವಾ ಪ್ರತಿಫಲಗಳು, ಖಾಸಗಿಯಾದ ವೈಯಕ್ತಿಕ ಪ್ರಯೋಜನಗಳಿಗಿಂತಲೂ ಅಧಿಕವಾಗಿರುತ್ತವೆ ಎಂಬ ವಾದ ವಿವಾದಾತೀತವಾದುದಾಗಿ ಕಂಡುಬರುತ್ತದೆ. ಆದರೆ, ಬಹುಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ವ್ಯಕ್ತಿಗಳ ಜೀವಿತ ಕಾಲದ ಸಂಪಾದನೆಗಳು ಉನ್ನತ ಶಿಕ್ಷಣದ ಪರಿಮಾಣದಿಂದ ಬಹುಮಟ್ಟಿಗೆ ಪ್ರಭಾವಿತವಾಗಿರುತ್ತವೆ ಎಂಬ ವಿಷಯ. ಅಮೆರಿಕಾದಲ್ಲಿ ಷುಲ್ಟ್ಜ್, ಬೆಕರ್ ಮೊದಲಾದವರು ನಡೆಸಿರುವ ವ್ಯಾಪಕವಾದ ಅಧ್ಯಯನಗಳಿಂದ ಸ್ಪಷ್ಟವಾಗಿ ಸ್ಥಾಪಿಸಲ್ಪಟ್ಟಿದೆ. ಜೊತೆಗೆ, ಕೇವಲ ಹಣಕಾಸಿನ ಪ್ರತಿಫಲಗಳಷ್ಟೇ ಅಲ್ಲ; ಈ ಮೊದಲೇ ಚರ್ಚಿಸಿದಂತೆ, ಅವಕಾಶಗಳ ಆಯ್ಕೆಯ (choice of opportunities) ವಿಚಾರದಲ್ಲಿರುವ ಹೆಚ್ಚಿನ ವ್ಯಾಪಕತೆ (greater range), ಹೆಚ್ಚಿನ ಮಟ್ಟದ ಭದ್ರತೆ ಮೊದಲಾದ ಇನ್ನಿತರ ಪ್ರಯೋಜನಗಳೂ ಇವೆ. ಈ ರೀತಿ ಹಣಕಾಸಿನ (monetary) ಮತ್ತು ಹಣಕಾಸೇತರ (non-monetary) ಪ್ರಯೋಜನಗಳು ಒಬ್ಬ ವ್ಯಕ್ತಿಯಲ್ಲಿ ಕೇಂದ್ರೀಕರಿಸಲ್ಪಡುತ್ತವೆ. ಆದಕಾರಣ, ವಿಶ್ವವಿದ್ಯಾನಿಲಯಗಳಿಗೆ ಈಗಿರುವ ಧನಸಹಾಯ ವ್ಯವಸ್ಥೆಯನ್ನು 'ಪ್ರಯೋಜನ ತತ್ತ್ವದೊಡನೆ ಸುಲಭವಾಗಿ ಸಮನ್ವಯಗೊಳಿಸುವುದು ಸಾಧ್ಯವಾಗಲಾರದು.

ಉನ್ನತ ಶಿಕ್ಷಣದ ಮೂಲಪ್ರಯೋಜನವು ಪ್ರಧಾನವಾಗಿ ಎಲ್ಲಿರುವುದೋ ಅಲ್ಲಿಯೇ ಅದರ ವೆಚ್ಚವೂ ಇರಬೇಕು; ಸಹಾಯ ದ್ರವ್ಯವು ಗೌಪ್ಯವಾಗಿರುವುದಕ್ಕಿಂತಲೂ (concealed) ಅತ್ಯಂತ ಸ್ಪಷ್ಟವಾಗಿ ಪ್ರಕಟಗೊಂಡಿರಬೇಕು; ಮತ್ತು ವಿಶ್ವವಿದ್ಯಾನಿಲಯ ಶಿಕ್ಷಣದ ಪ್ರಯೋಜನವು ಪ್ರಥಮತಃ ವೈಯಕ್ತಿಕವಾಗಿ ವಿದ್ಯಾರ್ಥಿಗೆ ದೊರಕುವುದರಿಂದ, ಆ ಶಿಕ್ಷಣದ ವೆಚ್ಚವನ್ನು ವಿದ್ಯಾರ್ಥಿಯಿಂದಲೇ ಶುಲ್ಕದ ರೂಪದಲ್ಲಿ ಹಿಂದಕ್ಕೆ ಪಡೆದುಕೊಳ್ಳಬೇಕು; ಸಮುದಾಯಕ್ಕೂ ಕೂಡ ಆನುಷಂಗಿಕ ಪ್ರಯೋಜನ (secondary benifit) ಇರುವುದರಿಂದ, ಶಿಕ್ಷಣ ವೆಚ್ಚದ ಭಾರದಲ್ಲಿ ಒಂದು ಭಾಗವನ್ನು ಸಮಾಜ ಹೊರಬೇಕು. ಆದರೆ, ಬಹುಪಾಲು ಭಾಗದ ಭಾರವನ್ನು ಪ್ರಧಾನ (primary) ಪ್ರಯೋಜನಗಳನ್ನು ಪಡೆಯುವವರೇ ಹೊರಬೇಕಾಗುತ್ತದೆ–ಈ ರೀತಿಯಾಗಿ ಇಂಗ್ಲೆಂಡಿನ, ಉನ್ನತ ಶಿಕ್ಷಣವನ್ನು ಕುರಿತ ರಾಬಿನ್ಸ್ ಸಮಿತಿಯ ಮುಂದೆ ನೀಡಿದ ಸಾಕ್ಷ್ಯದಲ್ಲಿ ಕಾರ್ಟರ್ ಮತ್ತು ವಿಲಿಯಮ್ಸ್ ವಾದಿಸಿದ್ದಾರೆ[5].

ಪರಸ್ಪರ ಕೊಟ್ಟು ತೆಗೆದುಕೊಳ್ಳುವ ಪದ್ಧತಿಯ ಮೇಲೆ ಆಧಾರಿತವಾದ ವೆಚ್ಚ ಮತ್ತು ಪ್ರಯೋಜನಗಳು ಹಾಗೂ ಹಣ ಹರಿಯುವಿಕೆಯನ್ನು ನಿರ್ದೇಶಿಸುವುದು–ಇವುಗಳಿಗೆ ಸಂಬಂಧಪಟ್ಟಂತೆ ಸರಕಾರಗಳು ಅನುಸರಿಸಬೇಕಾದ ತತ್ತ್ವಗಳನ್ನು ಸ್ಟೀಫನ್ ಮೆರ್ರೆಟ್[6] ಪ್ರತಿಪಾದಿಸಿದ್ದಾನೆ. ಅವನು ಶಿಕ್ಷಣ ಕ್ರಮವಿಧಾನ (Process of Education) ವನ್ನು ಅತ್ಯಂತ ವೈಶಿಷ್ಟ್ಯದಿಂದೊಡಗೂಡಿದ ಶೈಲಿಯಲ್ಲಿ ಪ್ರತಿಪಾದಿಸಿದ್ದಾನೆ. ಅವನು ಹೇಳುವಂತೆ 'ಯಂತ್ರ' ಎಂದು ಕರೆಯಬಹುದಾದ, ಕೌಶಲ್ಯಗಳ ಒಂದು ಸಮುದಾಯವನ್ನು (a bundle of skills) ತಯಾರಿಸಲು ಭೂಮಿ, ಕಟ್ಟಡಗಳು, ಸಿಬ್ಬಂದಿ, ಮತ್ತು ಪ್ರಾಥಮಿಕ ಶ್ರಮದ ಘಟಕ (Primary labour unit)–ವಿದ್ಯಾರ್ಥಿ–

---

[5] C.F. Carter and B.R. Williams: " Proposals for Reform in University Finance, " *The Manchester School of Economics and Social Studies*, September 1963, pp 255-260.

[6] Stephen Merret: " Student Finance in Higher Education " *The Economic Journal*, June 1967, pp 288-302.

ಇವೇ ಮೊದಲಾದ ಉತ್ಪಾದನಾ ಅಂಗಗಳು ಒಂದು ನಿರ್ದಿಷ್ಟ ಗರ್ಭಾವಧಿ ಕಾಲದಲ್ಲಿ (gestation period) ಸಂಯೋಜಿಸಲ್ಪಡುತ್ತವೆ. ಈ ಯಂತ್ರವು 'ಪ್ರಾಥಮಿಕ ಶ್ರಮದ ಘಟಕ'ದೊಡನೆ ಅವಿಚ್ಛೇದವಾದ ಸಂಬಂಧವನ್ನು ಹೊಂದಿರುತ್ತದೆ ಮತ್ತು ಅದರ. ಉಳಿದ ಕೆಲಸ ಮಾಡುವ ಜೀವಿತ ಕಾಲದಲ್ಲಿ ಆರ್ಥಿಕತೆಗೆ ಬಾಡಿಗೆಗಾಗಿ ಕೊಡಲ್ಪಡುತ್ತದೆ. ಈ ರೀತಿಯಲ್ಲಿ ವಿವರಿಸಿದಾಗ. ನಾವು ಶಿಕ್ಷಣವನ್ನು ನಿರಾತಂಕವಾಗಿ ಮಾರುವ ಮತ್ತು ಕೊಳ್ಳುವ ಒಂದು ಸರಕು. ಎಂಬಂತೆ ಪರಿಗಣಿಸುತ್ತೇವೆ. ಆದರೆ ವಾಸ್ತವವಾಗಿ ಅಮೆರಿಕಾದಂತಹ ಬಂಡವಾಳಶಾಹಿ ದೇಶದಲ್ಲಿ ಕೂಡ ಈ ಸಂಗತಿ ಸತ್ಯವಲ್ಲ. ಒಮ್ಮೆ ನಾವು ಶಿಕ್ಷಣವನ್ನು ಒಂದು ಆರ್ಥಿಕ ಸರಕು (economic commodity) ಎಂಬುದಾಗಿ ಒಪ್ಪಿಕೊಂಡರೆ. ಆಗ ಶಿಕ್ಷಣದ 'ಪ್ರಾಥಮಿಕ ಶ್ರಮದ ಘಟಕ'ವಾದ ವಿದ್ಯಾರ್ಥಿಯನ್ನು ಅರ್ಹತೆಯ (merit) ಆಧಾರದ ಮೇಲೆ ಆಯ್ಕೆ ಮಾಡಬೇಕಾದ ಅಗತ್ಯವನ್ನು ಮೆರ್ರಿಟ್ ಒತ್ತಿ ಹೇಳುತ್ತಾನೆ. ಅರ್ಹತಾ ಪ್ರಾಶಸ್ತ್ಯ (meritocracy)ವನ್ನು ಹೆಚ್ಚಾಗಿ ಒತ್ತಿ ಹೇಳಬೇಕಾದ ಅವಶ್ಯಕತೆ. ಪರಿಮಿತವಾದ ಸಾಧನ ಸಂಪತ್ತನ್ನು (limited resources) ಹೊಂದಿದ ಬಡದೇಶಗಳಿಗೆ ಅತ್ಯಂತ ಉಚಿತವಾಗಿದೆ. ಕೇವಲ ಭಾವನಾತ್ಮಕತೆಯ ಆಧಾರದ (sentimental grounds) ಮೇಲೆ ಉನ್ನತ ಶಿಕ್ಷಣಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದಾಖಲಾಗುವುದನ್ನು ಪ್ರೋತ್ಸಾಹಿಸುವ ನಮ್ಮ ಶಿಕ್ಷಣದ ನೀತಿಯನ್ನು ತಡೆಗಟ್ಟದಿದ್ದರೆ. ಈಗಾಗಲೇ ಕ್ಷೀಣಿಸುತ್ತಿರುವ ಶಿಕ್ಷಣದ ಗುಣಮಟ್ಟದ ಕಾರಣದಿಂದಾಗಿ, ನಿರುದ್ಯೋಗಿ ವಿದ್ಯಾವಂತರು ಮನಃಕ್ಷೋಭೆಗೊಂಡು ಚಳುವಳಿಗಳನ್ನು ನಡೆಸಲು ದಾರಿ ಮಾಡಿಕೊಟ್ಟಂತಾಗುವ ಅಪಾಯವಿದೆ ಎಂಬುದನ್ನು ನಾವು ಗಮನಿಸಬೇಕು. ಕೇವಲ ಪದವೀಧರರು ಮತ್ತು ಕೆಲವೊಂದು ಸಂದರ್ಭಗಳಲ್ಲಿ ಪದವೀಧರರಲ್ಲದವರೇ ನಿರ್ವಹಿಸಬಹುದಾದಂತಹ ಉದ್ಯೋಗಗಳನ್ನು. ದ್ವಿಪದವೀಧರರು ಕೈಗೊಳ್ಳುವುದಾದರೆ. ಅಂತಹ 'ಅರೆಬೆಂದ' ದ್ವಿಪದವೀಧರರನ್ನು ತಯಾರು ಮಾಡಲು ವಿರಳವಾದ ಸಾಧನ-ಸಂಪತ್ತನ್ನು (Scarce resources) ವ್ಯಯಮಾಡುವುದು ಖಂಡಿತವಾಗಿಯೂ ದಕ್ಷತೆಯಿಂದ ಕೂಡಿದ ಪದ್ಧತಿಯಲ್ಲ.[7] ಅರ್ಹತಾ ಪ್ರಾಶಸ್ತ್ಯ ಪದ್ಧತಿಯಲ್ಲಿ ಆರ್ಥಿಕ ಯುಕ್ತತೆ ಕಂಡುಬರುತ್ತದೆ. ಅರ್ಹತಾ ಪ್ರಾಶಸ್ತ್ಯಕ್ರಮವನ್ನು (meritocratic approach) ಮತ್ತು ಕೌಶಲ್ಯದ ಒಂದು ಸಮುದಾಯವನ್ನು (a bundle of skills) ಉತ್ಪಾದಿಸುವುದನ್ನು. ಅಂದರೆ. ಆರ್ಥಿಕ ಸರಕು ಆಗಿರುವ. ಯೋಗ್ಯತೆಯುಳ್ಳ ಮಾನವ ಬಲವನ್ನು ನಿರ್ಮಿಸುವುದನ್ನು ನಾವು ಒಮ್ಮೆ ಒಪ್ಪಿಕೊಂಡರೆ. ಆಗ ಶಿಕ್ಷಣದ ಪ್ರಯೋಜನವನ್ನು ಹೊಂದುವವರಿಗೆ. ಅದರ ವೆಚ್ಚವನ್ನೂ ಹೊರಿಸಬೇಕೆಂಬ ತತ್ತ್ವವನ್ನು ಒಪ್ಪಲೇಬೇಕಾಗುತ್ತದೆ. ಒಂದು ದೇಶದ ತಲಾ ಆದಾಯ (per capita income) ಕಡಿಮೆಯಾಗಿದ್ದಷ್ಟೂ ಆ ಆದಾಯದ ಸೀಮಾಂತ ತುಷ್ಟಿಗುಣ (marginal utiilty of income) ಹೆಚ್ಚಾಗಿರುತ್ತದೆ: ಆದುದರಿಂದ. ಭಾರತದಂತಹ ದೇಶದಲ್ಲಿ ಆರ್ಥಿಕವಾಗಿ ಅತ್ಯಂತ ಸಮರ್ಥವಾದ ಶಿಕ್ಷಣ ವ್ಯವಸ್ಥೆಯನ್ನು ಸ್ಥಾಪಿಸಬೇಕಾದ ಅಗತ್ಯ ಅತ್ಯಂತ ತೀವ್ರವಾಗಿದೆ. ಈ ರೀತಿ ನಿರ್ಣಯಿಸಿದಾಗ. ಉನ್ನತ ಶಿಕ್ಷಣಕ್ಕಾಗಿ ಧನಸಹಾಯದ ಮೂಲಕ ಹಣವನ್ನೊದಗಿಸುವ ಈಗಿನ ವ್ಯವಸ್ಥೆ 'ಸಮಾನತೆಯ ತತ್ತ್ವದ' ಆಧಾರದ ಮೇಲಾಗಲೀ ಅಥವಾ 'ಪ್ರಯೋಜನ ತತ್ತ್ವ'ದ ಆಧಾರದ ಮೇಲಾಗಲೀ ಅಷ್ಟು ಸಮಂಜಸವಾಗಿ ಕಂಡು ಬರುವುದಿಲ್ಲ. ಇನ್ನುಳಿದ ವಾದವೆಲ್ಲಾ ಶಿಕ್ಷಣದ ವೆಚ್ಚಕ್ಕೆ ಮತ್ತು ವಿದ್ಯಾರ್ಥಿಗಳು ಶುಲ್ಕದ ರೂಪದಲ್ಲಿ ತೆರುವ ಶಿಕ್ಷಣದ ಬೆಲೆಗೆ ಪರಸ್ಪರ ನಿಕಟವಾದ ಹೊಂದಾಣಿಕೆಯನ್ನುಂಟುಮಾಡುವ ವಿಚಾರಕ್ಕೆ ಅನುಕೂಲಕರವಾಗಿದೆ. ಈ ರೀತಿ ಸೂಚಿಸುವುದರಿಂದ. ವಿಶ್ವವಿದ್ಯಾನಿಲಯಗಳೂ ಸಹ. ಪ್ರತಿಯೊಂದು ಪದಾರ್ಥದ ಸೀಮಾಂತ ವೆಚ್ಚ (marginal cost) ಮತ್ತು ಅದರ ಬೆಲೆ–ಇವುಗಳಲ್ಲಿ ನಿಕಟವಾದ

---

[7] D.M. Nanjundpapa: ' An Employment Oriented Economic Policy, ' Proceedings of the Seminar on Employment Potential for Educated Youth in Vijayanagar Steel Plant, Karnataka University, 1972, pp 1–10.

ಸಮತೋಲನವನ್ನು ಸಾಧಿಸುವ ಉದ್ದೇಶವನ್ನು ಹೊಂದಿರುವ ವ್ಯಾಪಾರ ಸಂಸ್ಥೆಗಳಂತೆಯೇ ವರ್ತಿಸಬೇಕೆಂದು ಹೇಳಿದಂತಾಗುವುದಿಲ್ಲ. ಇದು ಏಕೆ ಹೀಗಾಗಬಾರದು ಮತ್ತು ಆಗಲಾರದು ಎಂಬುದಕ್ಕೆ ಅನೇಕ ಕಾರಣಗಳಿವೆ. ಖಾಸಗಿ ವೆಚ್ಚಗಳು–ಪ್ರಯೋಜನಗಳಿಗೂ ಮತ್ತು ಸಾಮಾಜಿಕ ವೆಚ್ಚಗಳು–ಪ್ರಯೋಜನಗಳಿಗೂ ಇರುವ ವ್ಯತ್ಯಾಸಗಳು, ಬೇರೆ ಬೇರೆಯ ಪಠ್ಯಮಾಲಿಕೆಗಳು (different courses) ಮತ್ತು ಅಧ್ಯಾಪನವನ್ನು ಸಂಶೋಧನೆಯೊಂದಿಗೆ ಸಂಯೋಜಿಸುವುದು ಮುಂತಾದ ಅನೇಕ ಅವಿಭಕ್ತ ಪದಾರ್ಥಗಳನ್ನು ಒಟ್ಟಿಗೇ ದೊರಕಿಸಿಕೊಟ್ಟಾಗ ಅವುಗಳ ವೆಚ್ಚವನ್ನು ಪ್ರತ್ಯೇಕಿಸುವುದರಲ್ಲಿರುವ ಕ್ಲಿಷ್ಟತೆಗಳು ಕೆಲವೊಂದು ಸಮಸ್ಯೆಗಳನ್ನು ತಂದೊಡ್ಡುತ್ತವೆ. ಆದರೂ ಸಹ, ವಿಶ್ವವಿದ್ಯಾನಿಲಯದ ಹಣಕಾಸಿನ ವಿಚಾರದಲ್ಲಿ ಒಂದು ರೀತಿಯ ಬೆಲೆಯನ್ನು ನಿರ್ಣಯಿಸುವುದು ಯುಕ್ತವಾದುದೆಂಬುದನ್ನು ಈ ಸಮಸ್ಯೆ ಸೂಚಿಸುತ್ತದೆ. ಈ ನಿಯಮವನ್ನು ಆಚರಣೆಗೆ ತರುವುದರಿಂದ, ಸಾಧನ ಸಂಪತ್ತಿನ–ಹಣಕಾಸಿನ ಮತ್ತು ಮಾನವ ಬಲದ–ಉತ್ತಮವಾದ ಹಂಚುವಿಕೆಗೆ ಅವಕಾಶವುಂಟಾಗುತ್ತದೆ. ಉದಾಹರಣೆಗೆ, ವೈಜ್ಞಾನಿಕ ಸೇವೆಗಳನ್ನು ದೊರಕಿಸಿಕೊಳ್ಳುವ ಬೆಲೆ, ಅವುಗಳನ್ನು ತಯಾರಿಸುವ ವೆಚ್ಚಕ್ಕಿಂತಲೂ ಬಹಳ ಕಡಿಮೆಯಾಗಿದ್ದಾಗ, ಖಾಸಗಿ ಕೈಗಾರಿಕೆಗಳು ಮತ್ತು ಇತರರು, ಅವರುಗಳ ಅಗತ್ಯಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ವಿಜ್ಞಾನಿಗಳ ಸೇವೆಗಾಗಿ ಬೇಡಿಕೆಯನ್ನು ಮುಂದೊಡ್ಡುತ್ತಾರೆ. ಆ ಮೂಲಕ, ದೊರೆಯುವ ಸಾಧನ ಸಂಪತ್ತು ಅಸಗತ್ಯ ರೀತಿಯಲ್ಲಿ ಹಂಚಲ್ಪಡಲು ಅವಕಾಶವಾಗುತ್ತದೆ. ಅದಕ್ಕೆ ಬದಲಾಗಿ, ಬೇರೆ ಬೇರೆ ಪಠ್ಯಮಾಲಿಕೆಗಳನ್ನು ಒದಗಿಸಲು ತಗಲುವ ವೆಚ್ಚಕ್ಕೂ ಅವುಗಳಿಗಾಗಿ ವಿಧಿಸುವ ಶುಲ್ಕಕ್ಕೂ ನಿಕಟವಾದ ಹೊಂದಾಣಿಕೆಯಿದ್ದರೆ, ಆಗ ಮಾನವ ಬಲದ ಉತ್ತಮವಾದ ಹಂಚುವಿಕೆಗೆ ಆಸ್ಪದವುಂಟಾಗಬಹುದು. ಈ ರೀತಿ ಶುಲ್ಕಗಳಿಗೂ ಶಿಕ್ಷಣ ವೆಚ್ಚಗಳಿಗೂ ನಿಕಟವಾದ ಹೊಂದಾಣಿಕೆಯನ್ನು ತರುವ ಪ್ರಯತ್ನದ ಫಲವಾಗಿ ರಾಷ್ಟ್ರೀಯ ಹಿತಕ್ಕೆ ಧಕ್ಕೆಯುಂಟಾಗುವ ರೀತಿಯಲ್ಲಿ ವಿದ್ಯಾರ್ಥಿಗಳು, ಕೆಲವು ಪಠ್ಯಮಾಲಿಕೆಗಳಿಂದ ಬೇರೆಯ ಪಠ್ಯಮಾಲಿಕೆಗಳಿಗೆ ವರ್ಗಾಯಿಸಲ್ಪಡಬಹುದು ಎಂಬುದಾಗಿಯೂ ವಾದಿಸಬಹುದು. ಅಂತಹ ಪರಿಸ್ಥಿತಿಯು, ನಿರ್ದಿಷ್ಟವಾದ ಕೆಲವು ಪಠ್ಯಮಾಲಿಕೆಗಳಿಗೆ, ಯೋಗ್ಯವಾದ ಸಂದರ್ಭಗಳಲ್ಲಿ ಸಹಾಯಧನವನ್ನು ಒದಗಿಸಬೇಕಾದ ಅಗತ್ಯವನ್ನಷ್ಟೇ ಸೂಚಿಸುತ್ತದೆ. ನಿರ್ದಿಷ್ಟವಾಗಿ ಕಂಡುಕೊಂಡ ಮತ್ತು ಆಯ್ಕೆರೂಪದ ಸಹಾಯಧನ (selective subsidy) ಪದ್ಧತಿ, ಈಗ ಜಾರಿಯಲ್ಲಿರುವ ಗೌಪ್ಯವಾದ ಮತ್ತು ತಾರತಮ್ಯವಿಲ್ಲದ (indiscriminate) ಸಹಾಯಧನ ಪದ್ಧತಿಗಿಂತಲೂ ಹೆಚ್ಚು ಸಮರ್ಪಕವಾಗಿ, ವಿರಳವಾದ ಸಾಧನ ಸಂಪತ್ತು, ಸಾಮಾಜಿಕವಾಗಿ ಹಂಚಲ್ಪಡುವುದಕ್ಕೆ ನೆರವಾಗುತ್ತದೆ.

ಶಿಕ್ಷಣ ವೆಚ್ಚ ಮತ್ತು ಶುಲ್ಕಗಳ ನಿಕಟವಾದ ಹೊಂದಾಣಿಕೆಯನ್ನು ಕುರಿತು ಮಾತನಾಡುವಾಗ ಅತಿ ಮುಖ್ಯವಾಗಿ ಗಮನ ನೀಡಬೇಕಾದ ಮತ್ತೊಂದು ವಿಚಾರವೆಂದರೆ, ವಿಶ್ವವಿದ್ಯಾನಿಲಯದ ಕಾರ್ಯ ಚಟುವಟಿಕೆಗಳ ಆರ್ಥಿಕ ದಕ್ಷತೆ. ಒಂದು ವಿಶ್ವವಿದ್ಯಾನಿಲಯವು ತನ್ನ ಪೂರ್ಣಸಾಮರ್ಥ್ಯದ (full capacity) ಮಟ್ಟದಲ್ಲಿ ಕಾರ್ಯವನ್ನು ನಿರ್ವಹಿಸದೇ ಇರಬಹುದು. ಅದರಿಂದಾಗಿ ಅಲ್ಲಿಯ ಬಂಡವಾಳ ರೂಪದ ಸಲಕರಣೆ (capital equipment) ಮೊದಲಾದ ಸಾಮಗ್ರಿಗಳು ನಿರುಪಯೋಗಿಯಾಗಿರಬಹುದು.[8] ಅಂತಹ ವಿಶ್ವವಿದ್ಯಾನಿಲಯ ಪೂರ್ಣ ಸಾಮರ್ಥ್ಯದ ಮಟ್ಟದಲ್ಲಿ ಕೆಲಸ ನಿರ್ವಹಿಸುವಂತೆ ಮಾಡುವುದರ ಮೂಲಕ ಶಿಕ್ಷಣ ವೆಚ್ಚವು ಕನಿಷ್ಠ ಮೊತ್ತಕ್ಕೆ ಇಳಿಯುವಂತೆ ಮಾಡುವುದು ಸಾಧ್ಯವಿಲ್ಲವೇ? ಅಥವಾ ದುಬಾರಿಯಾದ ಕಟ್ಟಡಗಳು ಮತ್ತು ಉಪಕರಣಗಳು ಅರ್ಧಮಾತ್ರ ಉಪಯೋಗಿಸಲ್ಪಡುವಂತಹ ಪರಿಸ್ಥಿತಿಯನ್ನು ನಿವಾರಿಸುವುದು ಅಸಾಧ್ಯವೇ? ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳುವುದರ ಪರಿಣಾಮಗಳೇನು? ಒಂದು ವ್ಯಾಸಂಗ ವರ್ಷ (Academic year) ದಲ್ಲಿ, ಉಪನ್ಯಾಸ ಮತ್ತು ಪ್ರಯೋಗ ಶಾಲೆಯ ವೇಳಾಪಟ್ಟಿಯನ್ನು ಪುನರ್‌ವ್ಯವಸ್ಥೆಗೊಳಿಸಿದರೆ

[8] See B. R. Williams; "Capacity and Output of Universities" *The Manchester School of Economics and Social Studies*, 1963, pp 185–202.

ಮತ್ತು ತರಗತಿಯ ಕೊಠಡಿಗಳು ಹಾಗೂ ಪ್ರಯೋಗ ಶಾಲೆಗಳ ಮೇಲಿನ ಒತ್ತಡವನ್ನು (load factors) ಹೆಚ್ಚಿಸುವುದಕ್ಕಾಗಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚು ಮಾಡಿದರೆ, ಆಗ ಅಧ್ಯಾಪಕರು, ಕಛೇರಿಗಳು, ಗ್ರಂಥಾಲಯ ಇನ್ನೂ ಮೊದಲಾದ ವಿದ್ಯಾರ್ಥಿ ಸೌಕರ್ಯಗಳ ಕೊರತೆ ಹೆಚ್ಚಾಗುತ್ತದೆ. ಅಧ್ಯಾಪಕರನ್ನು ಹೆಚ್ಚು ಗಂಟೆಗಳ ಕಾಲ ಪಾಠ ಹೇಳುವಂತೆ ಕೇಳಿದರೆ, ಅದರಿಂದ ಬೋಧನೆಯ ಗುಣಮಟ್ಟಕ್ಕೆ ಧಕ್ಕೆಯೊದಗಬಹುದು; ಅಲ್ಲದೆ ಇದು ಒಂದು ಆದರ್ಶಪ್ರಾಯವಾದ ಪರಿಹಾರೋಪಾಯವೂ ಅಲ್ಲ; ಮೇಲಾಗಿ, ಇದರ ನೈಜ ವೆಚ್ಚವೂ (real cost) ಕಡಿಮೆಯಲ್ಲ. ಅಲ್ಲದೆ, ಯಾವುದೇ ವಿಶ್ವವಿದ್ಯಾನಿಲಯದ ಅತ್ಯುನ್ನತ ಗುಣಮಟ್ಟದ (high quality) ಅಧ್ಯಾಪಕರನ್ನು ಸೇರಿಸಿಕೊಳ್ಳುವ ಮತ್ತು ಒಳ್ಳೆಯ ವಿದ್ಯಾರ್ಥಿಗಳನ್ನು ಆಕರ್ಷಿಸುವ ಸಾಮರ್ಥ್ಯ, ಅಲ್ಲಿ ದೊರೆಯುವ ಸೌಕರ್ಯಗಳಿಂದ ಬಹುಮಟ್ಟಿಗೆ ಪ್ರಭಾವಿತವಾಗಿರುತ್ತದೆ. ಈ ಸಮಸ್ಯೆಯೂ ಬಹು ಮುಖ್ಯವಾದುದು. ವಿಶ್ವವಿದ್ಯಾನಿಲಯದ ಜನಸಂಖ್ಯೆ ಹೆಚ್ಚಾದ ಹಾಗೆಲ್ಲಾ 'ಸೌಕರ್ಯಗಳ ಅಂತರ'ವೂ (amenity gap) ಹೆಚ್ಚಾಗುತ್ತದೆ. ವಿಶ್ವವಿದ್ಯಾನಿಲಯದ ಜನಸಂಖ್ಯೆಯಲ್ಲಿ ಹೆಚ್ಚಳ ಉಂಟಾಗುವುದರಿಂದ ವಿದ್ಯಾರ್ಥಿನಿಲಯಗಳಲ್ಲಿ ವಸತಿ ಸೌಕರ್ಯ ಮತ್ತು ಅಧ್ಯಾಪಕವೃಂದದವರಿಗೆ ವಾಸಗೃಹಗಳ ಕೊರತೆಗಳು ಉದ್ಭವಿಸುತ್ತವೆ. ಎಲ್ಲಕ್ಕಿಂತ ಮಿಗಿಲಾಗಿ, ಶಿಕ್ಷಣದ ಗುಣಮಟ್ಟವನ್ನು ಅಳೆಯುವ ಮಾಪನಗಳಲ್ಲೊಂದಾದ ಅಧ್ಯಾಪಕ-ವಿದ್ಯಾರ್ಥಿ ಪ್ರಮಾಣ (teacher-student ratio) ಇನ್ನೂ ಕ್ಷೀಣಿಸುತ್ತದೆ. ಆದುದರಿಂದ, ಶಿಕ್ಷಣದ ಉನ್ನತ ಗುಣಮಟ್ಟವನ್ನು ಕಾಪಾಡಿಕೊಂಡು ಬರುವ ದೃಷ್ಟಿಯಿಂದ, ದೊರಕುವ ಸೌಕರ್ಯಗಳಿಗೆ ಅನುಗುಣವಾಗಿ, ವಿದ್ಯಾರ್ಥಿಗಳ ದಾಖಲಾತಿಯನ್ನು ಮಿತಗೊಳಿಸಬೇಕು.

ದೊರಕುವ ಕಟ್ಟಡಗಳ ಮತ್ತು ಉಪಕರಣಗಳ ಉತ್ತಮವಾದ ಹಾಗೂ ಸಂಪೂರ್ಣವಾದ ಬಳಕೆ ಸಾಧ್ಯ. ಗುಣಮಟ್ಟವನ್ನು ತ್ಯಜಿಸದೆಯೇ ಇಂತಹ ಪ್ರಯತ್ನವನ್ನು ಮಾಡಬಹುದೆಂಬುದನ್ನು ಅಮೆರಿಕದ ಅನುಭವ ಸೂಚಿಸುತ್ತದೆ. ಉದಾಹರಣೆಗೆ, ಉಪನ್ಯಾಸ ಮಂದಿರಗಳ ಕೊರತೆಯು, ಅನೇಕ ವಿಶ್ವವಿದ್ಯಾನಿಲಯಗಳು ಇತ್ತೀಚಿನ ವರ್ಷಗಳಲ್ಲಿ ಕಂಡುಕೊಂಡಿರುವ ಸಮಸ್ಯೆಯಾಗಿದೆ. ಈಗ ರೂಢಿಯಲ್ಲಿರುವ ಕೆಲಸದ ವೇಳೆಯನ್ನೇ ಮುಂದುವರಿಸಿಕೊಂಡು ಹೋದರೆ, ವಿಶ್ವವಿದ್ಯಾನಿಲಯಕ್ಕೆ ಇನ್ನೂ ಕೆಲವು ಉಪನ್ಯಾಸ ಮಂದಿರಗಳ ಅಗತ್ಯವುಂಟು. ಆದರೆ, ಯುಕ್ತವಾದ ಪರ್ಯಾಯ ಕ್ರಮದಲ್ಲಿ (proper staggering) ವೇಳಾಪಟ್ಟಿಗಳನ್ನು ತಯಾರಿಸುವುದರ ಮೂಲಕ ಮತ್ತು ಉಪನ್ಯಾಸ ಮಂದಿರಗಳ ಮೇಲೆ ಐಕ್ಯ (unified) ನಿಯಂತ್ರಣವನ್ನು ಹೊಂದಿರುವುದರ ಮೂಲಕ, ಶಿಕ್ಷಣದ ಗುಣಮಟ್ಟವು ಇಳಿಯದಂತೆ ಕಾಪಾಡಿಕೊಂಡೂ ಉಪನ್ಯಾಸ ಮಂದಿರಗಳ ಕೊರತೆಯ ಸಮಸ್ಯೆಯನ್ನು ಬಹು ಪರಿಣಾಮಕಾರಿಯಾಗಿ ನಿವಾರಿಸಲು ಸಾಧ್ಯ. ಜೊತೆಗೆ, ಕಟ್ಟಡಗಳನ್ನು ಕಟ್ಟುವ ಸಮಯದಲ್ಲೇ ಸರಿಯಾದ ಮತ್ತು ಜಾಗರೂಕತೆಯಿಂದ ಕೂಡಿದ ಪ್ರಯೋಜನಗಳ ಮೂಲಕ, ಅವುಗಳು ಹೆಚ್ಚು ಕ್ರಿಯಾತ್ಮಕ ಅಥವಾ ಪ್ರಯೋಜನಕಾರಿಯಾಗುವ ಹಾಗೆ ಮಾಡಬಹುದು. ವೆಚ್ಚ ಮತ್ತು ಬೆಲೆಗಳ ನಿಕಟ ಹೊಂದಾಣಿಕೆ ಈ ಕೆಲವು ಚಟುವಟಿಕೆಗಳಲ್ಲಿ ದಕ್ಷತೆಯನ್ನು ಹೆಚ್ಚಿಸುತ್ತದೆ. ಹೆಚ್ಚಿನ ಕಾರ್ಯ ನಿರ್ವಹಣಾ ವೆಚ್ಚಗಳು ಮತ್ತು ದುಬಾರಿಯಾದ ಹೆಚ್ಚಿನ ಶುಲ್ಕದ ದೆಸೆಯಿಂದಾಗಿ, ಸಾಕಷ್ಟು ವಿದ್ಯಾರ್ಥಿಗಳನ್ನು ಪಡೆದುಕೊಳ್ಳುವುದರಲ್ಲಿ ವಿಶ್ವವಿದ್ಯಾನಿಲಯಗಳು ತೊಂದರೆ ಪಡಬೇಕಾಗಿ ಬಂದರೆ, ಆಗ ಅವುಗಳು ನಿರ್ವಾಹವಿಲ್ಲದೆ ದಕ್ಷತೆಯನ್ನು ಕಾಪಾಡಿಕೊಳ್ಳಬೇಕಾಗುತ್ತದೆ ಮತ್ತು ದೊರೆಯುವ ಸಾಧನ ಸಾಮಗ್ರಿಗಳನ್ನು ಹೆಚ್ಚು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಬೇಕಾಗುತ್ತದೆ.

ವಿಶ್ವವಿದ್ಯಾನಿಲಯಗಳಿಗೆ, ಶಿಕ್ಷಣಕ್ಕಾಗಿ ಹಣಕಾಸನ್ನು ಒದಗಿಸುವ ಒಂದು ಪರ್ಯಾಯ ವ್ಯವಸ್ಥೆ (alternative system) ಯೆಂದರೆ, ಸಾರ್ವಜನಿಕ ನಿಧಿಯಿಂದ, ಅಗತ್ಯವಾದ ಬಹುಪಾಲು ಹಣವನ್ನು ನೇರವಾಗಿ ವಿದ್ಯಾರ್ಥಿಗಳಿಗೇ ಕೊಡುವುದು; ಪ್ರತಿಯಾಗಿ, ಅವರ ಶಿಕ್ಷಣದ ಪೂರ್ಣವೆಚ್ಚವನ್ನು ಅವರೇ ಕೊಡುವಂತೆ ಮಾಡುವುದಾಗಿದೆ. ಈ ವ್ಯವಸ್ಥೆಯಲ್ಲಿ, ಅಗತ್ಯವಾದ ಪ್ರೌಢ ವಿದ್ಯಾಮಟ್ಟವನ್ನು ಹೊಂದಿದ್ದು, ಆರ್ಥಿಕವಾಗಿ ಕಡಿಮೆ ಆದಾಯದ ಗುಂಪಿಗೆ ಸೇರಿದ ಎಲ್ಲಾ

ಸಮರ್ಥ ವಿದ್ಯಾರ್ಥಿಗಳಿಗೂ, ಸಾರ್ವಜನಿಕ ನಿಧಿಯಿಂದ, ಸಾಲದ ರೂಪದಲ್ಲಿ ಅಗತ್ಯವಿರುವಷ್ಟು ಮೊತ್ತದ ಹಣವನ್ನು ಒದಗಿಸಲಾಗುವುದು. ಆದರೆ ಅದು ಒಂದು ಷರತ್ತಿಗೆ ಒಳಪಟ್ಟಿರುವುದು. ಏನೆಂದರೆ, ಈ ಸೌಲಭ್ಯವನ್ನು ಪಡೆಯುವ ವಿದ್ಯಾರ್ಥಿಗಳು, ಹಣ ಸಂಪಾದಿಸುವ ಮಟ್ಟವನ್ನು ತಲುಪಿದ ನಂತರ, ಕಂತುಗಳ ರೂಪದಲ್ಲಿ, ಅವರು ಸಾಲವಾಗಿ ಪಡೆದ ಹಣವನ್ನು ಬಡ್ಡಿಯಿಲ್ಲದೆ. ಅವರ ಜೀವಿತದ ಕಾಲದ ಸರಾಸರಿ ಸಂಪಾದನೆಯ ಅವಧಿಯಲ್ಲಿ ಸರಕಾರಕ್ಕೆ ಹಿಂತಿರುಗಿಸುವುದಾಗಿ, ಸರಕಾರದೊಡನೆ ಒಂದು ಒಪ್ಪಂದವನ್ನು ಮಾಡಿಕೊಳ್ಳಬೇಕು.

ಕನಿಷ್ಠ ಶಿಕ್ಷಣ ಮಟ್ಟವನ್ನು ಪಡೆದಿರುವ ಪ್ರತಿಯೊಬ್ಬ ಭಾವಿ ವಿದ್ಯಾರ್ಥಿಗೂ ಸಾಲವನ್ನು ಕೊಡಬೇಕೇ ಅಥವಾ ಬಡ ತಂದೆತಾಯಿಗಳನ್ನು ಹೊಂದಿದ ವಿದ್ಯಾರ್ಥಿಗಳಿಗೆ ಮಾತ್ರ ಅದನ್ನು ಸೀಮಿತಗೊಳಿಸಬೇಕೇ ಎಂಬುದು. ಧ್ಯೇಯೋದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಧರಿಸಬೇಕಾದ ವಿಚಾರ. ಉನ್ನತ ಶಿಕ್ಷಣದ ಸೌಲಭ್ಯಗಳನ್ನು ನಾವು ವಿಸ್ತರಿಸಬೇಕು ಮತ್ತು ಶಿಕ್ಷಣಕ್ಕಾಗಿ ಬೇಕಾದ ಎಲ್ಲಾ ಹಣಕಾಸನ್ನೂ. ಬೇರೆಕಡೆ. ಆದ್ಯತೆಯ ಬಂಡವಾಳ ಹೂಡಿಕೆಯನ್ನು ತಗ್ಗಿಸದೆ ಸರಕಾರ ದೊರಕಿಸಿಕೊಳ್ಳಬಲ್ಲದು ಎಂಬುದು ಅಸಂಭವ. ಈಗ ಜಾರಿಯಲ್ಲಿರುವ. ವ್ಯಾಸಂಗಕ್ಕೆ (Academic) ಸಂಬಂಧಪಟ್ಟ ಒಟ್ಟು ವೆಚ್ಚದಲ್ಲಿ ಸುಮಾರು ಶೇ. ೧೦–೧೫ರಷ್ಟನ್ನು ಮಾತ್ರ ಸರಿದೂಗಿಸುವ, ಶಿಕ್ಷಣ ಶುಲ್ಕದ ರಚನೆಯಲ್ಲಿ. ಅಸಮರ್ಥನೀಯವೂ ತಾರತಮ್ಯರಹಿತವೂ ಆದ 'ಸಹಾಯಧನ' ಅಡಕವಾಗಿದೆ. ಬಡವಿದ್ಯಾರ್ಥಿಗಳಿಗೆ ಕೊಡಲಾಗುವ ವಿದ್ಯಾರ್ಥಿವೇತನ ಮತ್ತು ಶುಲ್ಕ ವಿನಾಯಿತಿಗಳು, ಒಟ್ಟು ವಿದ್ಯಾರ್ಥಿ ಸಮುದಾಯದ ಅತ್ಯಲ್ಪ ಭಾಗ (fraction) ವನ್ನು ಮಾತ್ರ ಒಳಗೊಳ್ಳುತ್ತವೆ. ಇದರಿಂದಾಗಿ. ಬಡತಂದೆತಾಯಂದಿರನ್ನು ಪಡೆದ ಹೆಚ್ಚು ಜನ ವಿದ್ಯಾರ್ಥಿಗಳಿಗೆ ಒಂದು ಮುಖ್ಯ ಸಮಸ್ಯೆ ಎದುರಾಗುತ್ತವೆ. ಅದೇನೆಂದರೆ. ತಂದೆತಾಯಂದಿರು. ತಮ್ಮ ವೈಯಕ್ತಿಕವಾದ ಹಣಕಾಸಿನ ಕಾರಣಗಳಿಗಾಗಿ, ತಮ್ಮ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಕೊಡಿಸುತ್ತಿರುವ ಶಿಕ್ಷಣವನ್ನು ನಿಲ್ಲಿಸಬೇಕು. ಇಲ್ಲವೇ ಮಕ್ಕಳ ಶಿಕ್ಷಣಕ್ಕೆ ಬೇಕಾಗುವ ಹಣವನ್ನೊದಗಿಸಲು ಅತ್ಯಂತ ದುಬಾರಿ ಬಡ್ಡಿದರದಲ್ಲಿ ಸಾಲವನ್ನು ಪಡೆಯಬೇಕು. ಈಗ ರೂಢಿಯಲ್ಲಿರುವ ಶುಲ್ಕ ಒಳಗೊಂಡಿರುವ ಸಹಾಯಧನವು. ಬಡ ಕುಟುಂಬಗಳವರು, ಅವರ ಮಕ್ಕಳನ್ನು ಉನ್ನತ ಶಿಕ್ಷಣಕ್ಕಾಗಿ ಕಳಿಸಿಕೊಡಲು ಅವಕಾಶ ಮಾಡಿಕೊಡಬೇಕಾದ ಸಮಸ್ಯೆಗೆ ಸೂಕ್ತವಾದ ಉತ್ತರವಲ್ಲ.

ಈಗ ಜಾರಿಯಲ್ಲಿರುವ ಶಿಕ್ಷಣ ಶುಲ್ಕವು ಅತ್ಯಂತ ಕಡಿಮೆ ಮಟ್ಟದ್ದಾಗಿರುವುದರಿಂದ. ಉನ್ನತ ಶಿಕ್ಷಣಕ್ಕೆ ಬೇಡಿಕೆಯೂ ಬಹಳ ಹೆಚ್ಚಾಗಿದೆ; ಅಲ್ಲದೆ. ಉನ್ನತ ಶಿಕ್ಷಣದಿಂದ ಪ್ರಯೋಜನ ಪಡೆಯಲಾರದವರನ್ನೂ ಸಹ ಯಾವ ರೀತಿಯಲ್ಲೂ ತಡೆಹಿಡಿಯಲಾಗುತ್ತಿಲ್ಲ. ಶ್ರೀಮಂತರಿಗೆ, ಈಗಿನ ವ್ಯವಸ್ಥೆ ಅಸಮಾನವಾದ (inequitable) ಬಹುಮೊತ್ತದ ಸಹಾಯಧನವನ್ನು ಅನುಗ್ರಹಿಸುತ್ತದೆ (confers); ಬಡವರಿಗಾದರೋ. ಶಿಕ್ಷಣದ ವಿಚಾರವಾಗಿ ವಿದ್ಯಾರ್ಥಿಗಳು ಶ್ರದ್ಧಾಯುಕ್ತರಾಗುವಂತೆ ಮಾಡುವ ಯಾವ ಪ್ರೋತ್ಸಾಹಕ (incentive) ಅಂಶವೂ ಇಲ್ಲ.

ಈ ರೀತಿಯಲ್ಲಿ ವಿಚಾರ ಮಾಡಿದಾಗ. ತಾಯ್ತಂದೆಗಳ ಆದಾಯವು ಒಂದು ನಿರ್ದಿಷ್ಟ ಮಿತಿಗಿಂತಲೂ (ವಾರ್ಷಿಕ ಆದಾಯ ಸುಮಾರು ೧೫.೦೦೦ ರೂಪಾಯಿಗಳು ಎಂದಿಟ್ಟುಕೊಳ್ಳೋಣ) ಕಡಿಮೆಯಾಗಿರುವಂತಹ, ಕನಿಷ್ಠ ಶಿಕ್ಷಣ ಮಟ್ಟವನ್ನು ಪಡೆದಿರುವ ಭಾವಿ ವಿದ್ಯಾರ್ಥಿಗಳಿಗೆ ಮಾತ್ರ, ಬಡ್ಡಿರಹಿತವಾದ, ತಾತ್ಕಾಲಿಕ ಸಾಲರೂಪದ ಪರೋಕ್ಷವಾದ ಹಣಕಾಸಿನ ಪದ್ಧತಿಯನ್ನು ವಿಸ್ತರಿಸಬೇಕೆಂದು ನಾವು ಭಾವಿಸುತ್ತೇವೆ. ಇಂತಹ ಒಂದು ಯೋಜನೆಯು (scheme), ಅಗತ್ಯವಿರುವವರಿಗೆ ಹಣಕಾಸು ದೊರಕುವಂತೆ ಮಾಡುತ್ತದೆ ಮತ್ತು ಇದರ ಅಂತರ್ಗತ ಗುಣವಿಶೇಷ (inherent characteristic) ವೇನೆಂದರೆ, ಈ ವ್ಯವಹಾರದ ಅತ್ಯಂತ ಪ್ರಮುಖವಾದ ಘಟಕ ವಿದ್ಯಾರ್ಥಿಯೇ ಹೊರತು ಅವನ ತಾಯ್ತಂದೆಗಳಲ್ಲ. ಸಾಲವನ್ನು ಪಡೆಯಲು ಬೇಕಾದ ಅರ್ಹತೆಯನ್ನು ತಾಯ್ತಂದೆಗಳ ಆದಾಯವು ನಿರ್ಧರಿಸಿದರೂ ಸಹ, ಸಾಲದ ಮರುಪಾವತಿಯು, ವಿದ್ಯಾರ್ಥಿಗಳ ಸ್ವಂತ ಸಂಪಾದನೆಯೊಂದಿಗೆ ಬಂಧಿಸಲ್ಪಟ್ಟಿರುತ್ತದೆ. ಶ್ರೀಮಂತರನ್ನು ಈ ವ್ಯವಸ್ಥೆಯಿಂದ ಹೊರಗಡೆ

ಇಡುವುದರ ಮೂಲಕ. ಹುಕ್ಕಾಗಿ ಬರುವ ಬೇಡಿಕೆಯನ್ನಷ್ಟೇ ತಡೆಗಟ್ಟಲು ಉದ್ದೇಶಿಸಲಾಗಿದೆ. ಅಂತೆಯೇ, ಹಿಂತಿರುಗಿಸಬೇಕಾದಂತಹ ಸಾಲದ ವಿಚಾರದಲ್ಲಿ ಶ್ರೀಮಂತರು ಯಾವ ರೀತಿಯ ಆಸಕ್ತಿಯನ್ನೂ ಹೊಂದಿರುವುದಿಲ್ಲ ಎಂದು ಆಲೋಚಿಸಿದರೆ ಅದು ಅವಿವೇಕದ ವಿಚಾರವಾಗಲಾರದು. ಏಕೆಂದರೆ, ಅವರೇ ಹೆಚ್ಚಿನ ಆದಾಯ ಮತ್ತು ವಿನಿಯೋಗಿಸಬಹುದಾದ ಸಂಪತ್ತನ್ನು ಹೊಂದಿರುತ್ತಾರೆ. ಸಮಾನತಾ ತತ್ತ್ವವೂ ಸಹ, ಬಡ್ಡಿರಹಿತ ಸಾಲ ಕೊಡುವುದರ ಮೂಲಕ ಶ್ರೀಮಂತರಿಗೆ ಸಹಾಯ ಧನವನ್ನು ನೀಡಬೇಕಾಗಿಲ್ಲ ಎಂಬುದನ್ನೇ ಅಪೇಕ್ಷಿಸುತ್ತದೆ.

ಸಾಲ ಯೋಜನೆಯ ಪೂರ್ಣ ಕಾರ್ಯಾಚರಣೆ, ಅದರ ಸ್ವರೂಪದ ವಿಶ್ಲೇಷಣೆ ಮತ್ತಿತರ ವಿವರಣೆಗಳನ್ನು ಕೊಡುವುದು ಈ ಅಧ್ಯಯನದ ವ್ಯಾಪ್ತಿಯಿಂದ ಹೊರತಾಗಿದೆ. ಆದಾಗ್ಯೂ ಕೂಡ, ಈ ಯೋಜನೆಯು ಕಾರ್ಯ ನಿರ್ವಹಿಸಬಹುದಾದ ಮಾರ್ಗ ಮತ್ತು ಉದ್ಭವಿಸಬಹುದಾದ ಕೆಲವು ಅಡ್ಡಿ ಆತಂಕಗಳನ್ನು ನಿವಾರಿಸಲು ಸಾಧ್ಯವಾಗುವ ಮಾರ್ಗಗಳನ್ನು ಕುರಿತಾದ ಸ್ಥೂಲ ವಿವರಣೆಯನ್ನು ನಾವು ಕೊಡಲೇ ಬೇಕು.

ಈ ಸಮಸ್ಯೆಯ ಮೊಟ್ಟಮೊದಲನೆಯ ಮುಖವೆಂದರೆ, ಆರಂಭದಲ್ಲಿ ಕೊಡುವ ಸಾಲದ ಪ್ರಮಾಣ. ಮೇಲೆ ತಿಳಿಸಿರುವ ವ್ಯವಸ್ಥೆಯು ಪರಿಣಾಮಕಾರಿಯಾಗಿ, ಬಡಕುಟುಂಬಕ್ಕೆ ಸೇರಿದ ವಿದ್ಯಾರ್ಥಿಯು ವಿಶ್ವವಿದ್ಯಾನಿಲಯದ ಶಿಕ್ಷಣ ಪಡೆಯಲು ನೆರವಾಗಬೇಕಾದರೆ, ಸ್ವಾಭಾವಿಕವಾಗಿಯೇ ವಿಶ್ವವಿದ್ಯಾನಿಲಯದ ಶಿಕ್ಷಣದ ಪೂರ್ಣ ವೆಚ್ಚವನ್ನು ನಿರ್ವಹಿಸಲು ಸಾಕಾಗುವಷ್ಟು ಮೊತ್ತದ ಹಣವನ್ನು ಒದಗಿಸಲೇಬೇಕಾಗುತ್ತದೆ. ಹಾಗೆ ಭಾವಿಸಿದಾಗ, ಶಿಕ್ಷಣ ಸಾಲದ ಗರಿಷ್ಠ ಮೊತ್ತವು ಸಾಧಾರಣವಾಗಿ ಎರಡು ಅಥವಾ ಮೂರು ವರ್ಷಗಳ ಕಾಲದ ಸ್ನಾತಕೋತ್ತರ ತರಬೇತಿಯ ಶೈಕ್ಷಣಿಕ ವೆಚ್ಚ (academic cost) ಮತ್ತು ಆ ಅವಧಿಯಲ್ಲಿ ವಿದ್ಯಾರ್ಥಿಯ ವಿದ್ಯಾರ್ಥಿನಿಲಯ ವೆಚ್ಚ, ಪುಸ್ತಕಗಳು, ಉಡುಪು ಇತ್ಯಾದಿ ಜೀವನ ನಿರ್ವಹಣಾ ವೆಚ್ಚಗಳನ್ನು ಭರಿಸುವಷ್ಟಿರಬೇಕಾಗುತ್ತದೆ. ಒಂದು ವೇಳೆ, ಯಾವನೇ ಒಬ್ಬ ವಿದ್ಯಾರ್ಥಿಯು ವ್ಯಾಸಂಗದ ಅವಧಿಯಲ್ಲಿ ತಾಯ್ತಂದೆಗಳ ಜೊತೆಯಲ್ಲಿ ವಾಸಿಸುವ ಕಾರಣದಿಂದಲೋ, ಅವನು ವ್ಯಾಸಂಗ ಮಾಡುವ ವಿಶ್ವವಿದ್ಯಾನಿಲಯವು ಕಡಿಮೆ ವೆಚ್ಚದ್ದಾಗಿರುವುದರಿಂದಲೋ ಅಥವಾ ಅವನು ವಿದ್ಯಾರ್ಥಿವೇತನದ ರೂಪದಲ್ಲಿ ಬೇರೆ ಇನ್ನಿತರ ಮೂಲದಿಂದ ಹಣ ಪಡೆಯುತ್ತಿರುವುದರಿಂದಲೋ, ಶೈಕ್ಷಣಿಕ ಮತ್ತು ಜೀವನಾಧಾರಕ್ಕೆ ಸಾಕಾಗುವಷ್ಟು ವೆಚ್ಚಕ್ಕಿಂತ ಕಡಿಮೆ ಸಾಲವನ್ನು ಪಡೆಯಲು ಇಚ್ಛಿಸಿದರೆ, ಅಷ್ಟರ ಮಟ್ಟಿಗೆ ಅವನು ಈ ಯೋಜನೆಯ ಒಪ್ಪಂದದಲ್ಲಿ ಕಡಿಮೆ ಮಾಡಿಕೊಳ್ಳುತ್ತಾನೆ.

ಹಾಗೆಯೇ ಸಾಲದ ಮರುಪಾವತಿಯ ವಿಷಯದಲ್ಲಿ, ಸಹಾಯದ್ರವ್ಯದ ಒಂದು ಅಂಶವನ್ನು ಸೇರಿಸುವುದು ಅಪೇಕ್ಷಣೀಯ. ಉದಾಹರಣೆಗೆ, ಯೋಗ್ಯತೆಯನ್ನು (merit) ಗುರುತಿಸಲು ಮತ್ತು ಪ್ರೋತ್ಸಾಹಿಸಲು, ಮೊದಲನೆಯ ದರ್ಜೆಯನ್ನು ಗಳಿಸುವ ಮೂಲಕ ತಮ್ಮ ಹೆಗ್ಗಳಿಕೆಯನ್ನು (distinction) ಸ್ಥಾಪಿಸುವ ವಿದ್ಯಾರ್ಥಿಗಳಿಗೆ, ಅವರು ಮರುಪಾವತಿ ಮಾಡಬೇಕಾದ ಸಾಲದ ಹೊಣೆಗಾರಿಕೆಯಲ್ಲಿ ಶೇ. ೨೫ರಷ್ಟನ್ನು ಕಡಿಮೆ ಮಾಡಬಹುದು.

ಮರುಪಾವತಿ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಈ ಶಿಕ್ಷಣ ಸಾಲದ ಹಣವನ್ನು, ವ್ಯಕ್ತಿಯ ಆದಾಯದ ಮೂಲದಲ್ಲೇ ಮುರಿದುಕೊಳ್ಳುವ ವ್ಯವಸ್ಥೆ ಮತ್ತು ಅವನ ಆದಾಯ ತೆರಿಗೆ ಪಾವತಿಯ ಜೊತೆ ಅಳವಡಿಸಬಹುದು. ಜೊತೆಗೆ, ವ್ಯಾಸಂಗದ ಅವಧಿ ಮುಗಿದ ಮೇಲೆ ಎರಡು ವರ್ಷಗಳ ಕಾಲಾವಧಿಯನ್ನು ಕೊಟ್ಟು, ಆ ನಂತರ ಪ್ರತಿವರ್ಷವೂ ಕಂತುಗಳ ರೂಪದಲ್ಲಿ ಸಾಲದ ಹಣವಿಂದ ಶಿಕ್ಷಣ ಪಡೆದ ವಿದ್ಯಾರ್ಥಿಯು, ಸಾಧಾರಣವಾಗಿ ಸೇವೆಯಿಂದ ನಿವೃತ್ತನಾಗುವ ೫೮ರಿಂದ ೬೦ ವರ್ಷಗಳ ವಯಸ್ಸಿನೊಳಗೆ, ಸಾಲದ ಹಣವನ್ನು ಹಿಂತೆಗೆದುಕೊಳ್ಳಬಹುದು.

ವಿಶ್ವವಿದ್ಯಾನಿಲಯದ ಶಿಕ್ಷಣಕ್ಕೆ ಬೇಕಾದ ಹಣವನ್ನು ಪರೋಕ್ಷಪದ್ಧತಿಯಿಂದ, ಸಾಲ ವ್ಯವಸ್ಥೆಯ ಮೂಲಕ ಒದಗಿಸಿಕೊಡುವುದರ ಅತ್ಯಂತ ಹೆಚ್ಚಿನ ಪ್ರಯೋಜನವೆಂದರೆ, ಈ ಪದ್ಧತಿಯು, ಶಿಕ್ಷಣ ವೆಚ್ಚ ಮತ್ತು ಶುಲ್ಕಗಳಿಗೆ ಅತ್ಯಂತ ನಿಕಟವಾದ ಹೊಂದಾಣಿಕೆಯನ್ನು ತರಲು ಅನುವುಮಾಡಿಕೊಡುತ್ತದೆ

ಮತ್ತು ಸಾಲ ವ್ಯವಸ್ಥೆಯ ಮೂಲಕ. ಹೆಚ್ಚಿನ ಶುಲ್ಕಪಾವತಿಗೆ ಅವಕಾಶವೀಯುತ್ತದೆ. ವಿದ್ಯಾರ್ಥಿಗೆ ಹಣವು ಅತ್ಯಾವಶ್ಯಕವಾಗಿದ್ದಾಗ, ಅದನ್ನು ಕೊಡಲಾಗುತ್ತದೆ ಮತ್ತು ಅದರಿಂದ ಪಡೆದುಕೊಂಡ ಪ್ರಯೋಜನಕ್ಕನುಗುಣವಾಗಿ, ಅವನ (ಹಣ ಹಿಂತಿರುಗಿಸುವ) ಶಕ್ತಿ ಹೆಚ್ಚಿದಾಗ ಅದನ್ನು ಹಿಂತೆಗೆದು ಕೊಳ್ಳಲಾಗುತ್ತದೆ. ಶ್ರೀಮಂತರ ವಿಚಾರದಲ್ಲಾದರೋ, ಈಗ ಕೊಡಲಾಗುತ್ತಿರುವ ತಾರತಮ್ಯರಹಿತವಾದ ಸಹಾಯ ದ್ರವ್ಯವನ್ನು ಹಿಂತೆಗೆದುಕೊಳ್ಳಲಾಗುವುದು ಮತ್ತು ಅವರು ಶಿಕ್ಷಣದ ಪೂರ್ಣ ವೆಚ್ಚವನ್ನು ಕೊಡಬೇಕಾಗುತ್ತದೆ. ಕೇವಲ ತಂದೆತಾಯಿಗಳ ಬಡತನದ ಸಲುವಾಗಿ ಯಾವನೇ ವಿದ್ಯಾರ್ಥಿಯು ಉನ್ನತ ಶಿಕ್ಷಣದ ಪ್ರವೇಶಾವಕಾಶದಿಂದ ವರ್ಜಿತನಾಗುವುದಿಲ್ಲ. ಅಲ್ಲದೆ, ಉನ್ನತ ಶಿಕ್ಷಣಕ್ಕಾಗಿ ಕೊಡ ಲಾಗುತ್ತಿರುವ ಸಹಾಯದ್ರವ್ಯದಲ್ಲಿ ಕಡಿತ ಉಂಟಾಗುವುದರಿಂದ, ಅಷ್ಟರ ಮಟ್ಟಿಗೆ ಸರಕಾರಕ್ಕೆ ತೆರಿಗೆಯನ್ನು ಕಡಿಮೆ ಮಾಡಲು ಅಥವಾ ಇತರ ಅಭಿವೃದ್ಧಿ ಕಾರ್ಯಗಳಿಗಾಗಿ ವೆಚ್ಚವನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಹಾಗೆಯೇ, ಈ ವ್ಯವಸ್ಥೆಯಿಂದ ಶಿಕ್ಷಣದ ಹೂಟೆಗಾಗಿ (educational investment) ಹಣವನ್ನು ಪುನಃ ಪುನಃ ಒದಗಿಸುವ ಒಂದು ಪರಿಸ್ಥಿತಿಯನ್ನು ನಿರ್ಮಿಸಲು ಅವಕಾಶವಾಗುತ್ತದೆ ಮತ್ತು ಉನ್ನತ ಶಿಕ್ಷಣ ಕ್ಷೇತ್ರವು, ಸರಕಾರ ಮಿತವ್ಯಯ ಸಾಧಿಸಲು ಮಾಡುವ ಹಣ ನೀಡಿಕೆಯ ಕಡಿತದಿಂದ, ಮುಕ್ತವಾಗುತ್ತದೆ. ಅದಕ್ಕಿಂತಲೂ ಮಿಗಿಲಾಗಿ, ವ್ಯಾಸಂಗದ ವಿಷಯದಲ್ಲಿ, ವಿದ್ಯಾರ್ಥಿಗಳಲ್ಲಿ ಒಳ್ಳೆಯ ಪ್ರತಿಕ್ರಿಯೆ ಮೂಡಿಸುವಂತೆ ಕಂಡುಬರುತ್ತದೆ.

ಅಷ್ಟೇ ಅಲ್ಲದೆ, ಉನ್ನತ ಶಿಕ್ಷಣದಿಂದ ಅಧಿಕ ಸಂಪಾದನೆ, ಭದ್ರತೆ ಮತ್ತು ಪ್ರತಿಷ್ಠೆ ಮುಂತಾದ ರೂಪದಲ್ಲಿ ಅನೇಕ ನಿಶ್ಚಿತವಾದ ಪ್ರಯೋಜನಗಳು ದೊರಕುವುದರಿಂದ, ಸಮಾನತೆಯ ಆಧಾರದ ಮೇಲೆ ಕೂಡಾ, ಯಾರು ಈ ರೀತಿ ಪ್ರಯೋಜನವನ್ನು ಹೊಂದುತ್ತಾರೆಯೋ ಅವರು, ಈ ವಿಶೇಷ ಸೌಲಭ್ಯಕ್ಕಾಗಿ, ತಕ್ಕ ಬೆಲೆಯನ್ನು ಕೊಡಲೇಬೇಕು. ಈ ಯೋಜನೆಯು (ಆರ್ಥಿಕ) ಮರುಹಂಚಿಕೆಯ (redistribution) ಒಂದು ಶಕ್ತಿಯುತವಾದ ನಿಯೋಗಿಯಾಗುತ್ತದೆ. ಏಕೆಂದರೆ,ಶ್ರೀಮಂತರು ಇದರಿಂದ ಹೊರಗಡೆ ಇಡಲ್ಪಟ್ಟು, ನೈಜ ಸಾಧನ ಸಂಪತ್ತುಗಳ ವೆಚ್ಚವನ್ನು ಕೊಡುವಂತಾಗುತ್ತದೆ. ಅದೇ, ಬಡವರು ಉನ್ನತ ಶಿಕ್ಷಣವನ್ನು ಪಡೆಯಲು ನೆರವಾಗುತ್ತದೆ ಮತ್ತು ಆ ಮೂಲಕ ಅವರ ಆದಾಯವು ಉತ್ತಮಗೊಳ್ಳುತ್ತದೆ. ಇದು, ಆದಾಯದಲ್ಲಿ ಕಂಡು ಬರುವ ಅಸಮಾನತೆಯನ್ನು ತಗ್ಗಿಸಲು ಇರುವ ಸುಲಭವಾದ ಮತ್ತು ಖಚಿತವಾದ ಮಾರ್ಗವಾಗಿದೆ. ಆ ರೀತಿ ಮಾಡುವಾಗ, ಬಡವರಿಗೆ ಪ್ರೋತ್ಸಾಹಕ ಸಹಾಯದ್ರವ್ಯವನ್ನು ನೀಡಲಾಗುವುದು. ಅದು, ಸಮಾನತೆ ಮತ್ತು ದಕ್ಷತೆಗಳ ದೃಷ್ಟಿಯಿಂದಲೂ ಸಮರ್ಥನೀಯವಾಗಿದೆ.

ಆದರೆ ನಾವು ಪ್ರತಿಪಾದಿಸುತ್ತಿರುವ ಶಿಕ್ಷಣ ಸಾಲ ವ್ಯವಸ್ಥೆಗೆ ಪ್ರತಿರೋಧವಿಲ್ಲದೆಯೇ ಇಲ್ಲ. ಅಂದರೆ, ಈ ವ್ಯವಸ್ಥೆಯ ಬಗ್ಗೆ ಪ್ರತಿವಾದಗಳು ಇರುವುದನ್ನೂ ನಾವು ಮನಗಾಣಬಹುದು.

ಮೊದಲನೆಯದಾಗಿ, ಶಿಕ್ಷಣ ಮತ್ತು ಸಂಪಾದನೆಗಳಿಗಿರುವ ಸಂಬಂಧವನ್ನು ಕುರಿತ ಸ್ವರಭಾರ (stress) ವನ್ನು ಅತಿ ಹೆಚ್ಚು ಮಾಡಲಾಗಿದೆ ಎಂದು ವಾದಿಸಬಹುದು. ಸಾಲ ಯೋಜನೆಯ ಪರಿಣಾಮವಾಗಿ, ಆ ರೀತಿ ತರಬೇತಿ ಪಡೆದವರ ವೇತನವೂ ಉಬ್ಬಬಹುದು (inflate). ಆದರೆ, ಈಗಿನ ಪರಿಸ್ಥಿತಿಯ ವಾಸ್ತವಿಕತೆಯಲ್ಲಿ, ಉದ್ಯೋಗ ಮತ್ತು ವಿಶ್ವವಿದ್ಯಾನಿಲಯದ ಪದವಿ ಗಳಿಗಿರುವ ಸಂಬಂಧ ಹಾಗೂ ಆ ಮೂಲಕ ಗಳಿಸಿದ ನೈಪುಣ್ಯ ಮತ್ತು ವೇತನಶ್ರೇಣಿಗಳಿಗಿರುವ ಪರಸ್ಪರ ಸಂಬಂಧ—ಇವುಗಳನ್ನು ಗಮನಿಸಿದಾಗ, ಸಂಪಾದನೆಗೂ ಶಿಕ್ಷಣಕ್ಕೂ ಇರುವುದೆಂದು ಹೇಳಲಾಗುವ 'ದುರ್ಬಲ ಸಂಬಂಧ'ದ (weak link) ವಾದವನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ, ದೊರಕುವ ಆಧಾರಗಳು ಮತ್ತು ಪ್ರಚಲಿತವಿರುವ ಭಾವನೆಗಳು, ಎಷ್ಟೇ ಮಿತವಾಗಿದ್ದರೂ ಸಹ. ಉನ್ನತ ಶಿಕ್ಷಣ ಮತ್ತು ಹೆಚ್ಚಿನ ಆದಾಯಗಳಿಗಿರುವ ಸ್ಪಷ್ಟವಾದ ಪರಸ್ಪರ ಸಂಬಂಧದ ಸೂಚಕವಾಗಿವೆ.

ಎರಡನೆಯದಾಗಿ, ಉನ್ನತ ಶಿಕ್ಷಣಕ್ಕಾಗಿ ಬೇಕಾಗುವ ಹಣದ ವೆಚ್ಚ, ಅದು ತೋರಿ ಬರುವಷ್ಟು ಅಧಿಕವಾಗಿಲ್ಲವಾದುದರಿಂದ, ಈಗ ರೂಢಿಯಲ್ಲಿರುವ ಪರೋಕ್ಷ ಪದ್ಧತಿಯ ಮೂಲಕ ವಿಶ್ವ ವಿದ್ಯಾ ನಿಲಯದ ಶಿಕ್ಷಣಕ್ಕೆ ಹಣ ಒದಗಿಸುತ್ತಿರುವ ವ್ಯವಸ್ಥೆಗೆ, ಬದಲಿ ವ್ಯವಸ್ಥೆಯನ್ನು ಜಾರಿಗೆ ತರುವ ಆವಶ್ಯ

ಕತೆಯಿಲ್ಲ ಎಂದೂ ವಾದಿಸಬಹುದು. ಆದರೆ, ಈಗ ದೊರಕುವ ಶೈಕ್ಷಣಿಕ ವೆಚ್ಚ ಮತ್ತು ಖಾಸಗಿ ವೆಚ್ಚದ ಅಂದಾಜುಗಳು, ಸರಕಾರ ಮತ್ತು ವಿಶ್ವವಿದ್ಯಾನಿಲಯ ಅನುದಾನ ಆಯೋಗಗಳು ವಿಶ್ವವಿದ್ಯಾನಿಲಯಗಳಿಗೆ ಕೊಡುತ್ತಿರುವ ಅಪಾರವಾದ ಸಹಾಯದ್ರವ್ಯ, ಧಾರಾಳವಾಗಿ ಸಹಾಯಧನ ದೊರಕುತ್ತಿದ್ದರೂ ಸಹ ವಿಶ್ವವಿದ್ಯಾನಿಲಯಗಳ ಹಣಕಾಸಿನ ಪರದಾಟ (financial plight) ಇವುಗಳು, ಉನ್ನತ ಶಿಕ್ಷಣಕ್ಕಾಗಿ ಒದಗಿಸಬೇಕಾದ ಹಣಕಾಸಿನ ವೆಚ್ಚ ಅಧಿಕವಾಗಿರುವುದನ್ನು ಸ್ಥಿರಪಡಿಸುತ್ತವೆ. ಹಾಗೆಯೇ ಮುಂಬರುವ ವರ್ಷಗಳಲ್ಲಿ ಉನ್ನತ ಶಿಕ್ಷಣಕ್ಕಾಗಿ ಬರುವ ಬೇಡಿಕೆಯನ್ನು ಸಹಾಯದ್ರವ್ಯ ಪದ್ಧತಿಯು ಸಮರ್ಥವಾಗಿ ನಿಭಾಯಿಸಲಾರದು ಎಂಬುದೂ ದೃಢವಾಗುತ್ತದೆ.

ಮೂರನೆಯದಾಗಿ, ಉನ್ನತ ಶಿಕ್ಷಣದ ಪರಿಣಾಮಕಾರಿ (effective) ಬೆಲೆಯನ್ನು ಹೆಚ್ಚಿಸಿದಾಗ, ಅದನ್ನು ಪಡೆದುಕೊಳ್ಳಲು ಮುಂದೆ ಬರುವವರ ಸಂಖ್ಯೆ ತಗ್ಗಬಹುದು ಎಂಬ ಭಯವನ್ನು ವ್ಯಕ್ತಪಡಿಸಬಹುದು. ಆ ಸಂಖ್ಯೆ ಎಷ್ಟರ ಮಟ್ಟಿಗೆ ತಗ್ಗುತ್ತದೆ ಎನ್ನುವುದು ಅಭಿಪ್ರಾಯದ ಮಾತು. ಆದರೆ ಈ ಬಗ್ಗೆ ಸರಿಯಾದ ನಿಲುವೆಂದರೆ, ಬದಲಿ ವ್ಯವಸ್ಥೆಗೆ ಸಂಬಂಧಪಟ್ಟ ಪರಿಣಾಮವನ್ನು ತಿಳಿದುಕೊಳ್ಳಬೇಕು. ಶಿಕ್ಷಣ ಶುಲ್ಕವನ್ನು ಅದರ ವೆಚ್ಚದ ಮಟ್ಟಕ್ಕೆ ಏರಿಸಿದರೆ, ಉನ್ನತ ಶಿಕ್ಷಣಕ್ಕೆ ಹೋಗುವ ಶ್ರೀಮಂತ ವಿದ್ಯಾರ್ಥಿಗಳ ಸಂಖ್ಯೆ ಮಾತ್ರ ತಗ್ಗಬಹುದು. ಏಕೆಂದರೆ, ಬಡವರಾದ ತಂದೆತಾಯಿಗಳನ್ನು ಹೊಂದಿರುವ ವಿದ್ಯಾರ್ಥಿಗಳು, ಅವರ ಉನ್ನತ ಶಿಕ್ಷಣಕ್ಕೆ ಅಗತ್ಯವಾದ ಹಣಕಾಸು ದೊರಕುವ ಭರವಸೆಯನ್ನು ಹೊಂದಿರುತ್ತಾರೆ. ಆದುದರಿಂದ, ಉನ್ನತ ಶಿಕ್ಷಣವನ್ನರಸಿ ಬರುವ ಬಡ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಇಳಿತಾಯ ಪ್ರವೃತ್ತಿ ಕಂಡು ಬರುವುದು ನಿಜವಲ್ಲ. ಅದಕ್ಕೆ ಬದಲಾಗಿ, ಬಡ ತಂದೆತಾಯಿಗಳನ್ನು ಹೊಂದಿದ ಯಾವುದೇ ವಿದ್ಯಾರ್ಥಿಗೆ, ಉನ್ನತ ಶಿಕ್ಷಣಕ್ಕಾಗಿ ಬೇಕಾದ ಹಣಕಾಸಿನ ನಿರಾಕರಣೆಯಾಗುವುದಿಲ್ಲವಾದ್ದರಿಂದ ಅಂತಹ ವಿದ್ಯಾರ್ಥಿಗಳ ಸಂಖ್ಯೆ ಇನ್ನೂ ಹೆಚ್ಚಾಗುತ್ತದೆ. ಹಾಗೆ ನೋಡಿದರೆ, ಈಗ ಜಾರಿಯಲ್ಲಿರುವ ವ್ಯವಸ್ಥೆಯಲ್ಲಿ, ಯಾರು ತಮ್ಮ ಮಕ್ಕಳ ವ್ಯಾಸಂಗಕೋಸ್ಕರ ತಮ್ಮ ಸ್ವಂತ ಜೀವನ ಸೌಕರ್ಯಗಳನ್ನು ತ್ಯಾಗ ಮಾಡಿ, ಹೆಚ್ಚಿನ ಬಡ್ಡಿದರದಲ್ಲಿ ಸಾಲ ಪಡೆಯಲು ಧೈರ್ಯ ಮಾಡುತ್ತಾರೆಯೋ, ಅಂಥವರು ಮಾತ್ರ ತಮ್ಮ ಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ಕಳಿಸಲು ಶಕ್ತರಾಗಿರುತ್ತಾರೆ. ಶ್ರೀಮಂತ ವರ್ಗದಿಂದ ಬರುವ ವಿದ್ಯಾರ್ಥಿಗಳ ಸಂಖ್ಯೆ ತಗ್ಗುವುದೆಂಬ ಭಯವೂ ಸಹ ನಿರಾಧಾರವಾದುದು. ಅವರ ಬಂಡವಾಳ ಹೂಡಿಕೆಗೆ ಪ್ರತಿಯಾಗಿ ಹೆಚ್ಚಿನ ಪ್ರತಿಫಲ ದೊರಕುವ ಭರವಸೆ ಖಾತ್ರಿಯಾಗಿರುವಾಗ, ಅವರು ತಮ್ಮ ಸ್ವಂತ ಇಚ್ಛೆಯಿಂದಲೇ ಉನ್ನತ ಶಿಕ್ಷಣಕ್ಕಾಗಿ ಹೆಚ್ಚಿನ ಶುಲ್ಕವನ್ನು ಕೊಡುತ್ತಾರೆ. ಒಂದು ವೇಳೆ, ಉನ್ನತ ಶಿಕ್ಷಣಕ್ಕಾಗಿ ಮಾಡುವ ವೆಚ್ಚವು ಯೋಗ್ಯವಾದ ಬಂಡವಾಳ ಹೂಡಿಕೆ ಅಲ್ಲವೆಂದು ಅವರು ಭಾವಿಸಿದರೆ, ಆಗ ಶಿಕ್ಷಣದ ದಾಖಲಾತಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ವಿಭಾಗಗಳಿಗೆ ಪ್ರವೇಶಕ್ಕಾಗಿ ಈಗ ಕಂಡುಬರುತ್ತಿರುವ ಉನ್ಮತ್ತ ನೂಕುನುಗ್ಗಲು (mad rush) ತನ್ನಂತೆಯೇ ನಿಯಂತ್ರಿಸಲ್ಪಡುತ್ತದೆ.

ನಾಲ್ಕನೆಯದಾಗಿ, ಬಡ ಕುಟುಂಬಗಳು ಸಾಲದ ಕಟ್ಟುಪಾಡಿಗೆ ಹೊಣೆಯಾಗಲು ಇಚ್ಛಿಸದೇ ಇರಬಹುದು ಎಂಬುದು ಇನ್ನೊಂದು ವಾದ. ಈ ವಾದ ಅತ್ಯಂತ ದುರ್ಬಲವಾದುದು. ಏಕೆಂದರೆ, ಸಾಲದ ಮರುಪಾವತಿಯ ಹೊಣೆಗಾರಿಕೆ ತಂದೆತಾಯಿಗಳ ಮೇಲಿರುವುದಿಲ್ಲ. ಪ್ರತಿಯಾಗಿ, ಇದು ವಿದ್ಯಾರ್ಥಿಗಳ ಭವಿಷ್ಯದ ಸಂಪಾದನೆಗೆ ಸಂಬಂಧಿಸಿರುತ್ತದೆ. ಅಲ್ಲದೆ, ಗೃಹನಿರ್ಮಾಣ, ಬಾಳಿಕೆ ಬರುವ ಆಸ್ತಿಗಳ (durable assets) ಸಂಪಾದನೆ ಮುಂತಾದ ಅಗತ್ಯ ಜವಾಬ್ದಾರಿಗಳನ್ನು ಜನರು ಒಪ್ಪಿಕೊಳ್ಳುವಾಗ, ಆದಾಯದ ಹೊನಲನ್ನು ಶಿಕ್ಷಣದಲ್ಲಿ ಬಂಡವಾಳ ಹೂಡುವುದಕ್ಕೆ ಅವರ ಹಿಂಜರಿಯುವಿಕೆ ತುಂಬಾ ಕಡಿಮೆಯಾಗಿರಬೇಕು.

ಐದನೆಯದಾಗಿ, ಈ ಹೊಸ ಯೋಜನೆಯನ್ನು ಜಾರಿಗೆ ತಂದರೆ, ಜನರ ಮೇಲೆ ಎರಡು ತೆರಿಗೆ ವಿಧಿಸಿದಂತಾಗುತ್ತದೆ ಎಂದೂ ಹೇಳಬಹುದು. ಉನ್ನತ ಶಿಕ್ಷಣವನ್ನು ಪಡೆದುಕೊಳ್ಳುವ ಮತ್ತು ಉನ್ನತ ಮಟ್ಟದ ಆದಾಯವನ್ನು ಮುಟ್ಟುವ ವ್ಯಕ್ತಿ, ವಸ್ತುಸ್ಥಿತಿ ಬೇರೆಯಾಗಿರುವಾಗಿಗಿಂತಲೂ ಭಿನ್ನವಾಗಿ, ಹೆಚ್ಚಿನ ದರದಲ್ಲಿ ಆದಾಯ ತೆರಿಗೆ ಮತ್ತು ಇನ್ನಿತರ ಪ್ರತ್ಯಕ್ಷ ತೆರಿಗೆಗಳನ್ನು ಕೊಡಬೇಕಾಗುತ್ತದೆ.

ಅವರ ಜೊತೆಗೆ ಸಾಲವನ್ನು ಮರುಪಾವತಿ ಮಾಡಬೇಕಾಗುತ್ತದೆ ಎಂಬುದಾಗಿಯೂ ವಾದಹೂಡಬಹುದು. ಅವನು ಹೆಚ್ಚಿನ ದರವಲ್ಲಿ ತೆರಿಗೆಗಳನ್ನು ಕೊಡುವಷ್ಟರ ಮಟ್ಟಿಗೆ, ಅದು ಹೆಚ್ಚಿನ ಭಾರವನ್ನು ಸೂಚಿಸುತ್ತದೆ. ಈ ವಾದವೂ ಸಹ ಅಷ್ಟು ಸರಿಯಾದುದಲ್ಲ. ಏಕೆಂದರೆ, ಸಾಲದ ಮರುಪಾವತಿ ಹಣವನ್ನು, ತೆರಿಗೆ ಕೊಡಬೇಕಾಗಿರುವ ಒಟ್ಟು ಆದಾಯದಲ್ಲಿ ಕಳೆಯಲಾಗುವುದು ಮತ್ತು ಅಂತಹ ಯಾವ ಮರು ಪಾವತಿಯನ್ನೂ ಮಾಡದ ಇತರರಿಗಿಂತ ಇವನೇ ಹೆಚ್ಚಿನ ರೀತಿಯಲ್ಲಿ ತೆರಿಗೆಯ ಪಾವತಿಯ ಹೊಣೆ ಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಾನೆ.

ಆರನೆಯದಾಗಿ, ಮಹಿಳಾ ವಿದ್ಯಾರ್ಥಿಗಳಿಗೆ ಮತ್ತು ವಲಸೆ ಹೋಗುವವರಿಗೆ ಈ ಯೋಜನೆಯನ್ನು ಅನ್ವಯಿಸುವುದರಲ್ಲಿ ಅನೇಕ ತೊಂದರೆಗಳಿವೆ ಎಂಬುದಾಗಿಯೂ ಅಭಿಪ್ರಾಯಪಡಬಹುದು. ಉದಾ ಹರಣೆಗೆ, ಶಿಕ್ಷಣಕ್ಕಾಗಿ ಸಾಲಪಡೆದಿರುವ ಒಬ್ಬ ಮಹಿಳಾ ವಿದ್ಯಾರ್ಥಿಯು, ಅವಳ ವಿವಾಹಾನಂತರ ಉದ್ಯೋಗದಲ್ಲಿ ಮುಂದುವರಿಯದೇ ಇರಬಹುದು. ಅಂದರೆ, ಅವಳ ಮದುವೆಯಾದ ಮೇಲೆ, ಸಾಲ ಮರುಪಾವತಿಯ ಕರಾರರನ್ನು ರದ್ದುಗೊಳಿಸಬೇಕು ಅಥವಾ ಮದುವೆಯು ಸಾಲ ತೀರುವೆಯ ಕರಾರಿಗೆ ಯಾವುದೇ ರೀತಿಯ ವ್ಯತ್ಯಯವನ್ನೂ ಉಂಟು ಮಾಡಬಾರದು ಎಂದು ಇದರಿಂದ ಅರ್ಥ ವಾಗುತ್ತದೆ. ಆದರೆ, ಸಾಲಮರುಪಾವತಿಯ ಕರಾರನ್ನು ರದ್ದುಗೊಳಿಸುವುದರಿಂದ, ವಿವಾಹಿತ ಮತ್ತು ಅವಿವಾಹಿತ ಮಹಿಳೆಯರು; ಅಂತೆಯೇ ವಿವಾಹಿತರಾಗಿದ್ದು ನೌಕರಿಯಲ್ಲಿರುವ ಮಹಿಳೆಯರು ಮತ್ತು ನೌಕರಿಯಲ್ಲಿ ಇಲ್ಲದಿರುವವರು–ಇವರುಗಳ ಮಧ್ಯೆ ತಾರತಮ್ಯ ಮಾಡಿದಂತಾಗುತ್ತದೆ. ವಿವಾಹದ ನಂತರವೂ ಉದ್ಯೋಗದಲ್ಲಿ ಮುಂದುವರಿಯುವ ಮಹಿಳೆಯರ ವಿಚಾರದಲ್ಲಿ ಹೇಳುವುದಾದರೆ, ಸಾಲ ಮರುಪಾವತಿಯ ಬಗ್ಗೆ ಯಾವುದೇ ತೊಂದರೆಯೂ ಆಗಬಾರದು. ಯಾವುದೋ ಒಂದು ಘಟ್ಟದಲ್ಲಿ ಆಕೆ ನೌಕರಿ ಮಾಡುವುದನ್ನು ನಿಲ್ಲಿಸಿದರೆ, ಆಗ ಸಾಲ ಮರುಪಾವತಿಯ ಉಳಿದಿರುವ ಹೊಣೆಗಾರಿಕೆಯು ಅವಳ ಗಂಡನಿಗೆ ವರ್ಗಾಯಿಸಲ್ಪಡಬೇಕು. ಗಂಡನೂ ಸಹ, ಶಿಕ್ಷಣಕ್ಕಾಗಿ ತೆಗೆದು ಕೊಂಡಿದ್ದ ಸಾಲವನ್ನು ತೀರಿಸಬೇಕಾಗಿದ್ದರೆ, ಆಗ ಸಾಲ ಮರುಪಾವತಿಯ ಭಾರ ಅಧಿಕವಾಗುತ್ತದೆ ಮತ್ತು ಅವನ ಆದಾಯದ ಹೆಚ್ಚಿನ ಪ್ರಮಾಣ ಸಾಲ ತೀರಿಸುವುದಕ್ಕಾಗಿ ಬಳಸಲ್ಪಡುತ್ತದೆ. ಅಂತಹ ಸಂದರ್ಭಗಳಲ್ಲಿ, ವ್ಯಾವಹಾರಿಕ ಸಮನ್ವಯ ದೃಷ್ಟಿಯಿಂದ, ಗಂಡನು ಹೊರಬೇಕಾದ ಹೊಣೆಗಾರಿಕೆಯಲ್ಲಿ, ತನ್ನ ಹೆಂಡತಿಯಿಂದ ಮರುಪಾವತಿಯಾಗದೆ ಬಾಕಿ ಉಳಿದಿರುವ ಹಣದಲ್ಲಿ ಶೇ. ೫೦ರಷ್ಟನ್ನು ಕಡಿಮೆ ಮಾಡಬಹುದು. ಹಾಗೆ ನೋಡಿದರೆ, ಆ ರೀತಿಯ ಕಟ್ಟುಪಾಡು (commitment), ವಿವಾಹಿತ ಮಹಿಳೆಯರು ಉದ್ಯೋಗವನ್ನು ತ್ಯಜಿಸುವ ಪ್ರವೃತ್ತಿಯನ್ನು ತಡೆಗಟ್ಟುತ್ತದೆ. ಅಲ್ಲದೆ, ಪುರುಷರೊಡನೆ ಸಮಾನತೆಯನ್ನು ಪಡೆಯುವ ದೃಷ್ಟಿಯಿಂದ ಮಹಿಳೆಯರು ಉದ್ಯೋಗದಲ್ಲಿ ತೊಡಗುವುದನ್ನು ಪ್ರೋತ್ಸಾಹಿಸಬೇಕಾದ ಅಗತ್ಯ ಕಂಡು ಬರುವ ಸನ್ನಿವೇಶದಲ್ಲಿ, ಮಹಿಳೆಯರ ಶಿಕ್ಷಣ ಸಾಲದ ಮರು ಪಾವತಿಯ ಹೊಣೆಗಾರಿಕೆ ಅಪೇಕ್ಷಣೀಯವೆಂದು ಭಾವಿಸಬಹುದು.

ವಿಶ್ವವಿದ್ಯಾನಿಲಯದ ಶಿಕ್ಷಣಕ್ಕಾಗಿ ಸಾಲ ಪಡೆದವರು, ಪದವಿಗಳನ್ನು ಗಳಿಸಿದ ನಂತರ ಬೇರೆ ದೇಶಗಳಿಗೆ ವಲಸೆಹೋದರೆ, ಅವರಿಗೆ ಕೊಟ್ಟಿದ್ದ (ಶಿಕ್ಷಣದ) ಸಾಲದ ಹಣವನ್ನು ಹಿಂದಕ್ಕೆ ಪಡೆ ಯುವುದು ತುಂಬಾ ಕಷ್ಟವಾಗುತ್ತದೆ ಎಂಬ ಅಭಿಪ್ರಾಯ ಕೇಳಿಬರುತ್ತದೆ. ಆದರೆ, ವಿಶ್ವವಿದ್ಯಾನಿಲಯದ ಶಿಕ್ಷಣವು ಬಹುಮಟ್ಟಿಗೆ ಸಹಾಯದ್ರವ್ಯದ ಮೂಲಕ ನಡೆಯುತ್ತಿರುವ ಇಂದಿನ ಶೈಕ್ಷಣಿಕ ಕ್ರಮದಲ್ಲಿ ಮೇಲಿನ ಅಡಚಣೆ ಇನ್ನೂ ಕ್ಲಿಷ್ಟವಾಗಿದೆ. ಈಗಿನ ಶಿಕ್ಷಣ ವ್ಯವಸ್ಥೆಯ ಪ್ರಯೋಜನವನು ಪಡೆದುಕೊಂಡ ನಂತರ, ಹೆಚ್ಚಿನ ಆದಾಯವನ್ನು ಗಳಿಸಲು, ಪದವೀಧರರು ಬೇರೆ ದೇಶಗಳಿಗೆ ವಲಸೆ ಹೋಗುತ್ತಾರೆ ಮತ್ತು ಆ ಮೂಲಕ ತಾಯ್ನಾಡು ಅವರ ಸೇವೆಯಿಂದ ವಂಚಿತವಾಗುವಂತೆ ಮಾಡುತ್ತಾರೆ. ಅಷ್ಟರ ಮಟ್ಟಿಗೆ, ತಾಯ್ನಾಡಿಗೆ ನ್ಯಾಯವಾಗಿ ದೊರಕಬೇಕಾದ ಉನ್ನತ ಶಿಕ್ಷಣದ ಪ್ರಯೋಜನಗಳು ಬೇರೊಂದು ದೇಶಕ್ಕೆ ವರ್ಗಾಯಿಸಲ್ಪಡುತ್ತವೆ. ಇನ್ನೂ ಮಹತ್ವದ ಸಂಗತಿಯೆಂದರೆ, ಆ ವಿದೇಶವು ಇವರ ಶೈಕ್ಷಣಿಕ ವೆಚ್ಚವನ್ನು ಭರಿಸುವುದಕ್ಕಾಗಿ ಯಾವ ತೆರಿಗೆ ಆದಾಯಗಳನ್ನೂ ವಸೂಲ್ಮಾಡಿರುವುದಿಲ್ಲ; ಅಥವಾ ಅಪಾರವಾದ ಸಹಾಯದ್ರವ್ಯವನ್ನು ಅವಲಂಬಿಸಿದ ಶಿಕ್ಷಣವನ್ನು ಒದಗಿಸಿದ ಆ ಪದವೀಧರರ

ತಾಯ್ನಾಡಿಗೆ, ಪರಿಹಾರವನ್ನು ನೀಡುವ ಯಾವುದೇ ಹೊಣೆಗಾರಿಕೆಯನ್ನು ಹೊತ್ತಿರುವುದಿಲ್ಲ. ಆದುದರಿಂದ, ಈ ಹೊಸ, ಸಾಲದ ಯೋಜನೆ ಮತ್ತು ಶಿಕ್ಷಣ ವೆಚ್ಚ ಹಾಗೂ ಶಿಕ್ಷಣ ಶುಲ್ಕಗಳ ಅತ್ಯಂತ ನಿಕಟವಾದ ಹೊಂದಾಣಿಕೆ ಇವುಗಳು ವಲಸೆ ಹೋಗುವವರ ಸಮಸ್ಯೆಯನ್ನು ಎದುರಿಸುವ ದಿಕ್ಕಿನಲ್ಲಿ ನಿಶ್ಚಯವಾಗಿಯೂ ಒಂದು ಸರಿಯಾದ ಹೆಜ್ಜೆ ಎಂದು ಹೇಳಬಹುದು. ಎಲ್ಲಿ ಶಿಕ್ಷಣದ ಪೂರ್ಣ ವೆಚ್ಚವನ್ನೂ ಶುಲ್ಕಗಳು ಸಂಪೂರ್ಣವಾಗಿ ಒಳಗೊಳ್ಳುತ್ತವೆಯೋ ಅಲ್ಲಿ, ವಿದ್ಯಾವಂತ ವಲಸಿಗರ ವಿಚಾರದಲ್ಲಿ ವ್ಯಥೆಪಡಬೇಕಾದ ಅಗತ್ಯವಿಲ್ಲ. ಸಾಲ ಪಡೆದು ವಿದ್ಯಾರ್ಜನೆ ಮಾಡಿದ ನಂತರ ವಲಸೆ ಹೋಗುವವನು, ಒಂದು ವೇಳೆ ವಲಸೆ ಹೋದರೆ, ಆ ನಂತರವೂ ಅವನು ಸಾಲದ ಮರುಪಾವತಿಯ ಹೊಣೆಗಾರಿಕೆಯನ್ನು ಗೌರವಿಸಲೇಬೇಕೆಂಬ ಒಂದು ಷರತ್ತನ್ನು ಸಾಲದ ಕರಾರು ಒಳಗೊಂಡಿರಬೇಕು; ಅಥವಾ, ಅದಕ್ಕೆ ಬದಲಾಗಿ, ಅವನು ವಲಸೆ ಹೋಗುವ ಮೊದಲೇ, ಸಾಲದ ಮರುಪಾವತಿಯ ಹೊಣೆಗಾರಿಕೆಯಿಂದ ಬಿಡುಗಡೆ ಹೊಂದುವುದಕ್ಕಾಗಿ ಪೂರಾ ಹಣವನ್ನು ಒಂದೇ ಗಂಟಿನಲ್ಲಿ ಕೊಡಬೇಕು. ಒಂದು ವೇಳೆ ವಲಸೆ ಹೋದವರು, ಸಾಲದ ಮರುಪಾವತಿಯ ಬಗ್ಗೆ ತಪ್ಪಿದಲ್ಲಿ, ನಮ್ಮ ದೇಶದ ರಾಯಭಾರಿ ಕಛೇರಿಗಳ ಮೂಲಕ ಅಂಥವರ ಪ್ರವಾಸಾಧಿಕಾರಪತ್ರವನ್ನು (ರಹದಾರಿಯನ್ನು) ಕಾನೂನು ಪ್ರಕಾರ ಮುಟ್ಟುಗೋಲು ಹಾಕಲು ಅಥವಾ ಅವರ ವಿದೇಶವಾಸದ ಅವಧಿಯ ವಿಸ್ತರಣೆಯನ್ನು ಕೊಡದಿರಲು ಸಾಧ್ಯವಾಗುವಂತಿರಬೇಕು. ಈ ರೀತಿ, ವಲಸೆ ಹೋಗುವುದು ಹೊಸ ಶಿಕ್ಷಣ ಯೋಜನೆಗೆ ಯಾವುದೇ ರೀತಿಯ ಸಮಸ್ಯೆಗಳನ್ನೂ ತಂದೊಡ್ಡುವಂತೆ ಕಂಡು ಬರುವುದಿಲ್ಲ.

ಕೊನೆಯದಾಗಿ, ಈ ಯೋಜನೆಯನ್ನು ಕಾರ್ಯಾಚರಣೆಗೆ ತರುವುದಕ್ಕೆ ಸಂಬಂಧಿಸಿದಂತೆ ಕೆಲವು ವಿವಾದಾಂಶಗಳು ಇರಬಹುದು. ಈ ಯೋಜನೆಯು ಸರಕಾರದ ಒಂದು ಇಲಾಖೆಯಿಂದ ನಿರ್ವಹಿಸಲ್ಪಡಬೇಕೇ ಅಥವಾ ಬೇರೊಂದು ಸ್ವಯಮಧಿಕಾರವುಳ್ಳ ಕಾರ್ಪೋರೇಷನ್ ಅಥವಾ ಆಡಳಿತ ಮಂಡಲಿಯಂತಹ ನಿಯೋಗದಿಂದ ನಿರ್ವಹಿಸಲ್ಪಡಬೇಕೇ ಎಂಬ ವಿಚಾರ, ಕೇವಲ ಒಂದು ಸೂಕ್ಷ್ಮವಾದ ನಿಯೋಗವನ್ನು ಆರಿಸುವುದಾಗಿದೆ. ಈ ರೀತಿಯ ಒಂದು ಕಾರ್ಯಾಚರಣೆಗೆ ಬಂಡವಾಳ ಮಾರುಕಟ್ಟೆಯಿಂದ ಹಣವನ್ನು ಆಕರ್ಷಿಸುವ ದೃಷ್ಟಿಯಿಂದ, ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಗತ್ಯ ಕಂಡು ಬಂದಂತಹ ಸಹಾಯವನ್ನು ಪಡೆದುಕೊಂಡು ಈ ಯೋಜನೆಯನ್ನು ನಿರ್ವಹಿಸುವುದಕ್ಕಾಗಿ, ಒಂದು ಕಾರ್ಪೋರೇಷನ್ ಸ್ಥಾಪಿಸುವುದರಲ್ಲಿ ಕೆಲವು ಸ್ಪಷ್ಟವಾದ ಅನುಕೂಲಗಳಿವೆ. ಒಂದು ರೀತಿಯಲ್ಲಿ, ಮರುಪಾವತಿ ಮಾಡಬೇಕಾದ ಷರತ್ತುಗಳ ಮೇಲೆ ವಿದ್ಯಾರ್ಥಿಗಳಿಗೆ ಸಾಲವನ್ನು ಒದಗಿಸುವ ಮುಖ್ಯವಾದ ಸ್ವರೂಪವನ್ನು ಹೊಂದಿದ, ಭಾರತ ಸರಕಾರದ, ರಾಷ್ಟ್ರೀಯ ಸಾಲ ವಿದ್ಯಾರ್ಥಿವೇತನಗಳ ಯೋಜನೆಯು ದೇಶದಲ್ಲಿ ಈಗಾಗಲೇ ಆಚರಣೆಯಲ್ಲಿರುವುದರಿಂದ, ನಮಗೆ ಈ ಬಗ್ಗೆ ಸ್ವಲ್ಪ ಅನುಭವ ದೊರೆಯುತ್ತಿದೆ. ಶಿಕ್ಷಣ ವೆಚ್ಚಗಳು ಮತ್ತು ಶುಲ್ಕಗಳಿಗೆ ಪರಸ್ಪರ ನಿಕಟವಾದ ಹೊಂದಾಣಿಕೆಯನ್ನು ತರುವುದರ ಮೂಲಕ ಮತ್ತು ಕನಿಷ್ಠ ವಿದ್ಯಾಭ್ಯಾಸ ಮಟ್ಟವನ್ನು ಹೊಂದಿರುವ ಎಲ್ಲಾ ಭಾವೀ ವಿದ್ಯಾರ್ಥಿಗಳಿಗೂ, ಈಗ ಅಸ್ತಿತ್ವದಲ್ಲಿರುವ ಯೋಜನೆಯನ್ನು ವಿಸ್ತರಿಸುವುದಷ್ಟೇ ಉಳಿದಿರುವ ಪ್ರಶ್ನೆ. ಒಟ್ಟಿನಲ್ಲಿ ಹೇಳುವುದಾದರೆ, ಹೊಸ ಸಾಲ ಯೋಜನೆಯ ಪರವಾದ ಅಭಿಪ್ರಾಯಗಳು, ಅದನ್ನು ಆಚರಣೆಗೆ ತರುವುದಕ್ಕೆ ಬಹಳ ಮಟ್ಟಿಗೆ ಅನುಕೂಲಕರವಾಗಿರುವುದನ್ನು ನಾವು ಕಾಣುತ್ತೇವೆ. ಈ ಯೋಜನೆಗೆ ಇರುವ ಸಮರ್ಥನೆ, ಮುಂದೆ ಎಂದೋ ಭವಿಷ್ಯದಲ್ಲಿ ಅಡಗಿ ಕೂತಿರುವುದಾಗಿಲ್ಲ; ಬದಲಾಗಿ, ತತ್ಕ್ಷಣವೇ ಆಚರಣೆಗೆ ತರಲು ಸರ್ವಥಾ ಯೋಗ್ಯವಾದುದಾಗಿ ಕಂಡು ಬರುತ್ತದೆ.

ಮೂಲ: ಕೆ. ಎನ್. ವೆಂಕಟರಾಯಪ್ಪ

ಅನುವಾದ: ಕೃಷ್ಣವೇಣಿ

ಬದಲಾಗುತ್ತಿರುವ ರೈತ ಸಮುದಾಯ

ಭಾರತದ ಆರ್ಥಿಕ ಮತ್ತು ಸಾಮಾಜಿಕ ಜೀವನಕ್ಕೆ ರೈತ ಸಮುದಾಯವು ವಿಶಿಷ್ಟವಾದ ಮಾದರಿಯಾಗಿದೆ. ಅದರ ರಕ್ತಸಂಬಂಧಗಳು ಹಾಗೂ ಸಾಮಾಜಿಕರಚನೆಯು ಉದ್ಯೋಗೀಕೃತ ಮತ್ತು ನಾಗರಿಕ ಸಮಾಜಗಳಿಗಿಂತಲೂ ಹೆಚ್ಚು ಕಟ್ಟುನಿಟ್ಟಾದುದು. ಅವುಗಳಲ್ಲಿನ ಸಾಮ್ಯ ಅಪೂರ್ವವಾದ ಒಂದು ಗುಣ ವೈಶಿಷ್ಟ್ಯ. ಈ ವಿಶಿಷ್ಟ ಗುಣಗಳೆಲ್ಲವೂ ಅನೇಕ ಪ್ರಭಾವಗಳ ಪರಿಣಾಮವಾಗಿ ಬದಲಾವಣೆ ಹೊಂದುತ್ತಿವೆ. ಶಿಕ್ಷಣ, ಔದ್ಯೋಗೀಕರಣ, ನಾಗರಿಕತೆ, ಪರಕೀಯ ಸಂಸ್ಕೃತಿಗಳನ್ನು ಹೊಂದಿರುವ ಜನಗಳೊಡನೆ ಸಂಪರ್ಕ–ಇವು ರೈತ ಸಮುದಾಯದ ಬದಲಾವಣೆಗೆ ಪ್ರಚೋದಕವಾದ ಕೆಲವು ಪ್ರಮುಖ ಪ್ರಭಾವಗಳು. ಸರ್ಕಾರವು ಅನುಸರಿಸಿರುವ ಅನೇಕ ನೀತಿಗಳೂ ಈ ಬದಲಾವಣೆಗೆ ಕಾರಣವಾಗಿವೆ. ಆದರೆ ಸಾಮಾನ್ಯವಾಗಿ ರೈತ ಸಮುದಾಯದಲ್ಲಿನ ಬದಲಾವಣೆ ಅಗ್ನಿಪರ್ವತದಂತೆಸಿಡಿಯುವಂಥದಲ್ಲ. ಬದಲಾವಣೆ ಸೂಕ್ಷ್ಮ ರೀತಿಯಲ್ಲಿ ಮತ್ತು ಕ್ರಮೇಣ ಸಂಭವಿಸುವಂಥದು. ರೈತ ಸಮುದಾಯವು ಸರ್ವತೋಮುಖವಾದ ಬದಲಾವಣೆಗಳಿಗೆ ಒಳಗಾಗಿಲ್ಲವೆಂಬುದೂ ದಿಟ; ಏಕೆಂದರೆ ಸಾಮಾಜಿಕ ಬದಲಾವಣೆಯು ಮೂಲತಃ ವೈವಿಧ್ಯವುಳ್ಳದ್ದೂ ಮತ್ತು ಪರಿಣಾಮದಲ್ಲಿ ಬಹುಮುಖವುಳ್ಳದ್ದೂ ಆಗಿದೆ. ಭಾರತದ ಇತಿಹಾಸದಲ್ಲಿ ದೀರ್ಘ ಕಾಲಾವಧಿಗಳಲ್ಲಿ ಪರದೇಶದವರೊಂದಿಗೆ ಸಂಪರ್ಕವನ್ನು ಹೊಂದಿರುವ ಕಡಲತೀರದ ಹಳ್ಳಿಗಳೇ ಇದಕ್ಕೆ ದೃಷ್ಟಾಂತ. ಕಡಲತೀರದ ಹಳ್ಳಿಗಳು ಅನೇಕ ವಿಧಗಳಲ್ಲಿ ಗ್ರೀಕ್ ಮತ್ತು ರೋಮನರಿಂದ ಪ್ರಭಾವಿತವಾಗಿವೆ. ಮೌರ್ಯ ಹಾಗೂ ಕುಶಾನ ಚಕ್ರಾಧಿಪತ್ಯಗಳು ವ್ಯಾಪಾರ ಮತ್ತು ವಾಣಿಜ್ಯವನ್ನು ಪ್ರೋತ್ಸಾಹಿಸಿದುವು. ಅವುಗಳಿಂದ ಕಡಲತೀರದ ಹಳ್ಳಿಗಳು ಮೊಟ್ಟಮೊದಲಿಗೆ ಪ್ರಭಾವಿತವಾದುವು. ಕ್ರಿಸ್ತಶಕದ ವರ್ಷಗಳಲ್ಲಿಯೂ ವ್ಯಾಪಾರ ಮತ್ತು ವಾಣಿಜ್ಯ ಸಂಪರ್ಕಗಳು ಈ ಕಡಲತೀರದ ಹಳ್ಳಿಗಳಲ್ಲಿ ಅನೇಕ ಬದಲಾವಣೆಗಳನ್ನು ತಂದವು. ಆದರೆ ಈ ಸಂಪರ್ಕಗಳಿಂದಲೂ ರೈತ ಸಮುದಾಯದ ಕೆಲವು ದೃಷ್ಟಿಕೋನಗಳು ಬದಲಾಗದಿರುವುದನ್ನು ಯಾರಾದರೂ ಗಮನಿಸಬಹುದು. ರಕ್ತಸಂಬಂಧದ ಬಾಂಧವ್ಯ, ಜಾತಿವ್ಯವಸ್ಥೆಗಳು ಹೆಚ್ಚು ಪ್ರಭಾವಿತವಾಗಿಲ್ಲ. ಆದ್ದರಿಂದ ರೈತ ಸಮುದಾಯದಲ್ಲಿ ಸಾಮಾಜಿಕ ಬದಲಾವಣೆ ಭಿನ್ನ ಮೂಲಗಳನ್ನು ಹೊಂದಿದ್ದು ಪರಿಣಾಮಗಳಲ್ಲಿಯೂ ಹೆಚ್ಚು ವ್ಯತ್ಯಾಸಗಳಾಗಿವೆ.

ರೈತ ಸಮುದಾಯದಲ್ಲಿ ಬದಲಾವಣೆಯನ್ನುಂಟುಮಾಡಿದ ಔದ್ಯೋಗೀಕರಣ ಮತ್ತು ನಾಗರಿಕತೆಗಳನ್ನು ಸಾಮಾನ್ಯವಾಗಿ ಬ್ರಿಟಿಷರು ಭಾರತಕ್ಕೆ ತಂದರೆಂದು ಭಾವಿಸಲಾಗುತ್ತದೆ. ಆದರೆ ನಾಗರಿಕ ಜೀವನ ಭಾರತಕ್ಕೆ ಅಪರಿಚಿತವೇನೂ ಆಗಿರಲಿಲ್ಲ. ಮಹಾಭಾರತದಲ್ಲಿ ಹಸ್ತಿನಾಪುರ ಮತ್ತು ಇಂದ್ರಪ್ರಸ್ಥವೆಂಬ ಎರಡು ಮಹಾನಗರಗಳ ಉಲ್ಲೇಖವಿದೆ. ಆದ್ದರಿಂದ ನಾಗರಿಕ ಜೀವನವನ್ನು ಮಹಾಭಾರತದ ಕಾಲದಿಂದಲೇ ಗುರುತಿಸಬಹುದಾದರೂ ಅದರಿಂದಾಗಿರುವ ಸಾಮಾಜಿಕ ಬದಲಾವಣೆ ಮಾತ್ರ ಅತ್ಯಲ್ಪ ಪ್ರಮಾಣದ್ದು.

ರೈತ ಸಮುದಾಯದಲ್ಲಿನ ಸಾಮಾಜಿಕ ಬದಲಾವಣೆಯು ವಿಭಿನ್ನ ಘಟ್ಟಗಳಲ್ಲಿ ಪ್ರಾರಂಭವಾಗಿ ವಿಭಿನ್ನ ನಿರ್ಣಾಯಕ ಸಂಬಂಧಗಳಲ್ಲಿ ಕೊನೆಗೊಳ್ಳುತ್ತದೆ. ಇತ್ತೀಚಿನ ವರ್ಷಗಳಲ್ಲಿ ಎನ್.ಇ.ಎಸ್., ಸಿ.ಡಿ.ಪಿ. ಮುಂತಾದ ಸರ್ಕಾರದ ಅನೇಕ ಯೋಜನೆಗಳಿಂದ ರೈತರ ಆರ್ಥಿಕಪರಿಸ್ಥಿತಿ, ಸಾಮಾಜಿಕರಚನೆ ಮತ್ತು ರಾಜಕೀಯ ಜೀವನಗಳು ಬದಲಾಗಿವೆ. ಆರ್ಥಿಕ ಪುರೋಭಿವೃದ್ಧಿಯುಂಟಾಗಿದೆ. ಉತ್ತಮ ಶೈಕ್ಷಣಿಕಸೌಲಭ್ಯ, ರಾಜಕೀಯ ಪರಿಜ್ಞಾನ ಇದಕ್ಕೆ ಕಾರಣಗಳಾಗಿವೆ. ಜಾತಿಪದ್ಧತಿ ಮತ್ತು ಅವಿಭಕ್ತ ಕುಟುಂಬಜೀವನಗಳಲ್ಲಿ ತೀವ್ರವಾದ ಪರಿಣಾಮಗಳು ಕಾಣಿಸಿಕೊಂಡಿವೆ. ಸಾಮಾಜಿಕ ಬದಲಾವಣೆಗೆ ಕಾರಣವಾದ ಮೇಲೆ ಹೇಳಿದ ಎಲ್ಲ ವಿಚಾರಗಳನ್ನೂ ಚರ್ಚಿಸುವುದು ಈ ಲೇಖನದ ಉದ್ದೇಶವಲ್ಲ. ಆದರೆ ನಾಗರಿಕತೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ಅಂಶಗಳು ರೈತ ಸಮುದಾಯದಲ್ಲಿ ಎಂತಹ ಬದಲಾವಣೆಗಳನ್ನುಂಟುಮಾಡಿವೆ ಎಂಬುದನ್ನು ಕರ್ನಾಟಕದ ಕೆಳಗೆ ಉಕ್ತವಾಗಿರುವ ಎರಡು ಹಳ್ಳಿಗಳಲ್ಲಿ ನಡೆಸಿದ ವೀಕ್ಷಣೆಯ ಪಕ್ಷಿನೋಟವನ್ನು ಇಲ್ಲಿ ಕೊಡಲಾಗಿದೆ. ಇದಕ್ಕಾಗಿ ಆಯಾ ಹಳ್ಳಿಗಳಲ್ಲಿ ವಾಸಿಸಿ ಪ್ರತ್ಯಕ್ಷದರ್ಶನದಿಂದಲೂ ಪ್ರಶ್ನಾವಳಿ ಮೂಲಕವೂ ವಿಷಯಗಳನ್ನು ಸಂಗ್ರಹಿಸಲಾಗಿದೆ.

ಮೈಸೂರು ನಗರದ ಪೂರ್ವಕ್ಕೆ ೧೦ ಮೈಲಿಗಳ ದೂರದಲ್ಲಿನ ಗ್ರಾಮ ಪದ್ಮ. ಇಲ್ಲಿನ ಭೂಮಿ ಕೆಂಪು. ಬಾವಿಗಳು ೪ ಅಡಿಗಳಿಗಿಂತಲೂ ಹೆಚ್ಚು ಆಳವಿಲ್ಲ. ಹಳ್ಳಿಯ ಸುತ್ತಲಿನ ಬಹುತೇಕ ಹೊಲಗಳು ಬರಡಾಗಿವೆ. ಈ ಹಳ್ಳಿಯ ಹೆಚ್ಚಿನ ನಿವಾಸಿಗಳ ಕಸುಬು ವ್ಯವಸಾಯ. ಹಳ್ಳಿಯ ಜನರು ಮುಂಗಾರು ಮಳೆಯನ್ನೇ ಅವಲಂಬಿಸಿದ್ದಾರೆ.

ಈ ಹಳ್ಳಿಯಲ್ಲಿ ೧೫೫ ಕುಟುಂಬಗಳಿವೆ. ಅವುಗಳಲ್ಲಿ ಶೇಕಡ ೫೭ ಭಾಗ ಲಿಂಗಾಯಿತರದು. ಉಳಿದಂತೆ ಶೇಕಡ ೧೪.೯ ಕುರುಬರ, ಶೇಕಡ ೧೧ ಅಕ್ಕಸಾಲಿಗರ (ಆಚಾರಿಗಳು), ಶೇಕಡ ೮ ಅಗಸರ, ಶೇಕಡ ೪ ಗಾಣಿಗರ ಹಾಗೂ ಶೇಕಡ ೨ ಭಾಗ ಶ್ರೀವೈಷ್ಣವರ ಕುಟುಂಬಗಳು. ಹಳ್ಳಿಯ ಮಧ್ಯಭಾಗದಲ್ಲಿ ಲಿಂಗಾಯಿತರು ವಾಸಿಸುತ್ತಿದ್ದು ಪಶ್ಚಿಮಕ್ಕೆ ಕುರುಬರು, ಗಾಣಿಗರು, ಅಗಸರು, ನಾಯಿಂದರು ವಾಸಿಸುತ್ತಾರೆ. ಶ್ರೀವೈಷ್ಣವರು ವೈಷ್ಣವ ಮತಾವಲಂಬಿಗಳಾದರೂ ಬ್ರಾಹ್ಮಣರಲ್ಲ. ಲಿಂಗಾಯಿತರೇ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಆರ್ಥಿಕವಾಗಿಯೂ ಅವರದೇ ಮೇಲುಗೈ. ಅವರ ಮನೆಗಳು ದೊಡ್ಡದಾಗಿದ್ದು ಉತ್ತಮ ಸಲಕರಣೆಗಳಿಂದ ಕಟ್ಟಲಾಗಿವೆ. ಸಂಖ್ಯಾಬಲದಲ್ಲಿ ಅಕ್ಕಸಾಲಿಗರದು ಎರಡನೆಯ ಸ್ಥಾನ. ಅವರಲ್ಲಿ ಅನೇಕರಿಗೆ ವಾಸಿಸಲು ಮನೆಗಳಿವೆ. ನಂತರದ ಸ್ಥಾನ ಕುರುಬರದು. ಅವರೆಲ್ಲಾ ಹೆಚ್ಚಾಗಿ ಕೃಷಿಕರು. ಅವರಲ್ಲಿ ಕೆಲವರಿಗೆ ವಾಸಿಸಲು ಮನೆಗಳಿಲ್ಲ. ಅಗಸರು, ಗಾಣಿಗರು, ನಾಯಿಂದರು ಅಲ್ಪಸಂಖ್ಯಾತರು. ಅವರ ಮನೆಗಳೂ ಗಟ್ಟಿಮುಟ್ಟಾಗಿಲ್ಲ. ಲಕ್ಷಣವಾಗಿಯೂ ಇಲ್ಲ. ಒಂದೇ ಮನೆಯಲ್ಲಿ ೩ ರಿಂದ ೪ ಸಂಸಾರಗಳು ಒಟ್ಟಾಗಿ ವಾಸಿಸುವುದು ಕಂಡುಬರುತ್ತದೆ.

ಈ ಹಳ್ಳಿಯ ಅವಿಭಕ್ತ ಕುಟುಂಬಗಳಲ್ಲಿ ಸಾಮಾನ್ಯವಾಗಿ ಎರಡು ಅಥವ ಮೂರು ತಲೆಮಾರುಗಳವರು ವಾಸಿಸುತ್ತಿದ್ದು ಪುತ್ರಧರ್ಮದ ಬಾಂಧವ್ಯ ಅವರನ್ನು ಪರಸ್ಪರ ಬಂಧಿಸಿದೆ. ತಂದೆಯು ಕುಟುಂಬದ ಯಜಮಾನ. ಸಾಧಾರಣವಾಗಿ ಅವಿಭಕ್ತ ಕುಟುಂಬಗಳು ವಾಸಿಸುವ ಮನೆಗಳು ದೊಡ್ಡದಾಗಿವೆ. ತನ್ನ ಕುಟುಂಬದ ಸದಸ್ಯರ ಸ್ಥಳಾವಕಾಶಕ್ಕಾಗಿ ಕೆಲವು ವಿಶೇಷ ವಿನ್ಯಾಸಗಳನ್ನು ಒಳಗೊಂಡಿರುತ್ತವೆ. ಕುಟುಂಬದ ಎಲ್ಲ ಸದಸ್ಯರು ಇಲ್ಲಿಯೇ ಉಂಡು, ವಿಶ್ರಾಂತಿ ಪಡೆಯುತ್ತಾರೆ; ಮಲಗುತ್ತಾರೆ. ಕುಟುಂಬದ ಮುಖ್ಯವಾದ ಧಾರ್ಮಿಕ ಮತ್ತು ಸಾಮಾಜಿಕ ಸಮಾರಂಭಗಳು ಇಂತಹ ಮನೆಗಳಲ್ಲಿ ಜರುಗುವುವು.

ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ಚರ ಮತ್ತು ಸ್ಥಿರ ಎಂದು ಎರಡು ಬಗೆ. ಮನೆ ಮತ್ತು ಭೂಮಿ ಸ್ಥಿರಾಸ್ತಿಗಳು. ವ್ಯವಸಾಯೋಪಕರಣಗಳು, ಜಾನುವಾರುಗಳು, ಪಾತ್ರೆಗಳು, ಆಭರಣ, ವಾಹನಗಳು ಮತ್ತು ಇತರ ಆಧುನಿಕ ಸೌಕರ್ಯಗಳು ಚರ ಆಸ್ತಿಗಳು.

ಇತ್ತೀಚಿನ ತಲೆಮಾರುಗಳಲ್ಲಿ ಈ ಹಳ್ಳಿಯಲ್ಲಿ ಅವಿಭಕ್ತ ಕುಟುಂಬಗಳು ವಿಭಕ್ತವಾಗುತ್ತಿರುವುದನ್ನು ಯಾರಾದರೂ ಗಮನಿಸಬಹುದು ಮತ್ತು ಅದಕ್ಕೆ ಹಲವಾರು ಕಾರಣಗಳೂ ಇವೆ. ಆಸ್ತಿಯ ಬಗ್ಗೆ ತಿಕ್ಕಾಟ, ಶ್ರಮದ ಹಂಚಿಕೆ, ಹಳ್ಳಿಯ ಹೆಂಗಸರಲ್ಲಿ ಘರ್ಷಣೆ, ಸ್ವಾತಂತ್ರ್ಯದ ಅಭಿಲಾಷೆ, ನ್ಯಾಯಕ್ಕಾಗಿ

ಮೊಕದ್ದಮೆ ಮತ್ತು ಬಡತನ ಪ್ರಮುಖ ಕಾರಣಗಳು. ಕೇವಲ ಒಂದು ಇಲ್ಲವೆ ಅನೇಕ ಕಾರಣಗಳಿಂದ ಅವಿಭಕ್ತ ಕುಟುಂಬಗಳು ಒಡೆಯಬಹುದು. ಸಾಮಾಜಿಕ ಬದಲಾವಣೆ, ಚಲನೆ ಮತ್ತು ವಲಸೆ ಹೋಗುವಿಕೆಯೂ ಕೆಲವೊಮ್ಮೆ ಕುಟುಂಬದ ವಿಭಕ್ತತತೆಗೆ ಕಾರಣವಾಗಬಹುದು.

ಅವಿಭಕ್ತಕುಟುಂಬಗಳು ಒಡೆದು ಹೋಗಿ ವಿಭಕ್ತಕುಟುಂಬಗಳಾಗಿರುವುದು ಕಂಡುಬರುತ್ತದೆ, ಈ ವಿಭಕ್ತ ಕುಟುಂಬಗಳ ಸದಸ್ಯರ ಸಂಖ್ಯೆ ಮಿತಿಯಾಗಿದೆ. ಅದರ ವ್ಯಯವೂ ಅಲ್ಪ ಪ್ರಮಾಣದ್ದು ಅವಲಂಬಿಗಳೂ ಕಡಿಮೆ. ಏಕಾಂತತೆಗೆ ಹೆಚ್ಚಿನ ಅವಕಾಶವಿದ್ದು ಪತಿಪತ್ನಿಯರ ನಡುವೆ ಆತ್ಮೀಯತೆ ಗಾಢವಾಗಿರುತ್ತದೆ. ಮಕ್ಕಳಿಗೆ ಉತ್ತಮ ಆಹಾರ ಮತ್ತು ಬಟ್ಟೆಬರೆಗಳನ್ನು ಒದಗಿಸಿ ಅವರ ಯೋಗಕ್ಷೇಮಕ್ಕೆ ಹೆಚ್ಚು ಗಮನ ನೀಡಲಾಗುತ್ತದೆ. ಅವಿಭಕ್ತ ಕುಟುಂಬಗಳು ಆಚರಿಸಲೇಬೇಕಾದ ಸಮಾರಂಭಗಳ ಬಗೆಗೆ ಇವರಿಗೆ ಹೆಚ್ಚು ಸ್ವಾತಂತ್ರ್ಯವಿರುತ್ತದೆ.

ಈ ಹಳ್ಳಿಯಲ್ಲಿ ಅವಿಭಕ್ತಕುಟುಂಬಗಳು ಅತಿ ಶೀಘ್ರವಾಗಿ ಮೂಲದಿಂದ ಬೇರೆಯಾಗುತ್ತಿವೆ. ಶೇಕಡ ೭೭ ಭಾಗ ಲಿಂಗಾಯಿತ ಕುಟುಂಬಗಳೂ, ಶೇಕಡ ೧೦೦ ಭಾಗ ಕುರುಬರ, ಶೇಕಡ ೮೦ ಭಾಗ ಅಕ್ಕಸಾಲಿಗರ ಮತ್ತು ಶೇಕಡ ೫೦ ಭಾಗ ಅಗಸರ ಕುಟುಂಬಗಳೂ ವಿಭಕ್ತವಾಗುತ್ತಿವೆ. ಇದರ ಪರಿಣಾಮವಾಗಿ ಭೂಮಿಗಳೂ ಹಂಚಿಹೋಗಿವೆ. ಹೀಗೆ ಪಂಚಿಹೋದ ಭೂಮಿಗಳು ಆರ್ಥಿಕ ದೃಷ್ಟಿಯಿಂದ ಲಾಭದಾಯಕವಾದುವಲ್ಲ. ಹಂಚಿಹೋಗಿರುವ ಈ ಭೂಮಿಗಳಲ್ಲಿ ಲಾಭದಾಯಕ ಬೆಳೆಗಳನ್ನು ಬೆಳೆಯುವುದು ಕಷ್ಟವೆಂಬುದು ಅವರ ಅರಿವಿಗೆ ಬಂದಿದೆ.

ಈ ರೀತಿಯ ವಿಭಕ್ತ ಕುಟುಂಬಗಳಿಗೆ ಇನ್ನೂ ಇತರ ತೆರನ ಕಷ್ಟಗಳಿದ್ದು ಮುಖ್ಯವಾಗಿ ಬೇಸಾಯದ ಅಭಿವೃದ್ಧಿಗೆ ಇದು ಬಾಧಕವಾಗಿದೆ. ಬೇಸಾಯ ಸಾಮಾನ್ಯವಾಗಿ ಕೂಡಿಮಾಡುವ ಕೆಲಸ. ಅಲ್ಲದೆ ವಿಭಕ್ತ ಕುಟುಂಬಗಳಲ್ಲಿ ಸದಸ್ಯರ ಸಂಖ್ಯೆ ಒಂದು ಮಿತಿಯಲ್ಲೇ ಇರುವುದರಿಂದ ಶಕ್ತರಾದವರ ದುಡಿಮೆ ಲಭಿಸದೆ ವ್ಯವಸಾಯಕ್ಕೆ ಸಾಕಷ್ಟು ಅಡಚಣೆಯುಂಟಾಗಿದೆ. ವ್ಯವಸಾಯಕ್ಕೆ ದೈಹಿಕ ಶ್ರಮ ಅತ್ಯವಶ್ಯ. ವಿಭಕ್ತ ಕುಟುಂಬಗಳ ಸದಸ್ಯರು ಒಂದು ಮಿತಿಯಲ್ಲೇ ಇರುವುದರಿಂದ ವಿಶೇಷವಾಗಿ ಬೀಜವನ್ನು ಬಿತ್ತುವಾಗ ಮತ್ತು ಬೆಳೆಯನ್ನು ಕೊಯ್ಯುವಾಗ ಸಾಕಷ್ಟು ಜನಸಹಾಯವನ್ನು ಒದಗಿಸುವಲ್ಲಿ ಅಸಹಾಯಕರಾಗುತ್ತಾರೆ. ಇನ್ನೂ ಒಂದು ಸಮಸ್ಯೆ ಇಲ್ಲಿ ಉದ್ಭವಿಸಿದೆ. ಜಾನುವಾರು ಮತ್ತು ವ್ಯವಸಾಯೋಪಕರಣಗಳು ಬೇಸಾಯದ ಮೂಲ ಸಾಧನಗಳು. ಇವುಗಳು ಸಹ ವಿಭಕ್ತಕುಟುಂಬಗಳಲ್ಲಿ ಹಂಚಿ ಹೋಗುವುದರಿಂದ ಇವುಗಳ ಕೊರತೆಯುಂಟಾಗಿ ಕೃಷಿಗೆ ತೀವ್ರ ಅಪಾಯ ಸಂಭವಿಸುತ್ತದೆ. ವಿಭಕ್ತ ಕುಟುಂಬಗಳಲ್ಲಿ ಸಾಕಷ್ಟು ಉಪಕರಣಗಳಾಗಲೀ. ಸಾಧನಗಳಾಗಲೀ ಇರುವುದಿಲ್ಲ. ಪಾಲಿಗೆ ಬಂದ ಭೂಮಿ ಸಹ ಅಲ್ಪಪ್ರಮಾಣದ್ದು. ಹೀಗೆ ಇವುಗಳೆಲ್ಲಾ ಅನಾನುಕೂಲವಾಗಿ ಪರಿಣಮಿಸಿದೆ. ಲಿಂಗಾಯಿತ ಅವಿಭಕ್ತ ಕುಟುಂಬಗಳಲ್ಲಿ ಸರಾಸರಿ ಭೂಮಿಯನ್ನು ಹೊಂದಿರುವವರ ಸಂಖ್ಯೆ ಶೇಕಡ ೧೧ ಇದ್ದರೆ. ವಿಭಕ್ತ ಕುಟುಂಬಗಳಲ್ಲಿ ಸರಾಸರಿ ಸಂಖ್ಯೆ ಶೇಕಡಾ ೩ ಭಾಗ ಮಾತ್ರ. ಅಕ್ಕಸಾಲಿಗರಲ್ಲಿ ಅವಿಭಕ್ತಕುಟುಂಬಗಳಲ್ಲಿ ಭೂಮಿಯನ್ನು ಹೊಂದಿರುವವರ ಸಂಖ್ಯೆ ಶೇಕಡ ೫೦. ಅಂತೆಯೇ ವಿಭಕ್ತಕುಟುಂಬಗಳಲ್ಲಿ ಭೂಮಿಯನ್ನು ಹೊಂದಿರುವವರ ಸಂಖ್ಯೆ ಶೇಕಡಾ ೧೦. ಅಗಸರು, ಗಾಣಿಗರು ಅವಿಭಕ್ತ ಹಾಗೂ ವಿಭಕ್ತಕುಟುಂಬಗಳನ್ನು ಹೊಂದಿದ್ದು ಇವರ ಭೂಮಿಯ ಪ್ರಮಾಣದಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ. ವಿಭಕ್ತ ಕುಟುಂಬಗಳಲ್ಲಿ ಜಾನುವಾರು ಮತ್ತು ಉಪಕರಣಗಳು ಕಡಿಮೆ ಪ್ರಮಾಣದಲ್ಲಿವೆ. ಭೂಮಿ ಮತ್ತು ಜಾನುವಾರುಗಳು ಹಾಗೂ ಮತ್ತಿತರ ಸಾಧನಗಳನ್ನು ಒಂದು ಮಿತಿಯಾದ ಪ್ರಮಾಣದಲ್ಲಿ ಹೊಂದಿರುವುದರಿಂದ ತಮ್ಮ ಭೂಮಿಗಳಲ್ಲಿ ಹೆಚ್ಚು ಉತ್ಪನ್ನ ಸಾಧ್ಯವಿಲ್ಲವೆಂದು ಈ ವಿಭಕ್ತಕುಟುಂಬಗಳ ಯಜಮಾನರು ತಿಳಿಸಿದ್ದಾರೆ. ಅವಿಭಕ್ತಕುಟುಂಬಗಳು ವಿಭಕ್ತಕುಟುಂಬಗಳಾಗಿರುವುದರ ಫಲಿತಾಂಶವೆಂದರೆ ಸಾಕಷ್ಟು ವ್ಯವಸಾಯೋತ್ಪನ್ನವಿಲ್ಲದಿರುವಿಕೆ.

ಹಳೆಯ ತಲೆಮಾರಿನ ಶೇಕಡ ೯೨ ಭಾಗ ಜನರು ವಿಭಕ್ತಕುಟುಂಬಗಳ ಬಗೆಗೆ ಕಾತುರತೆಯನ್ನು ಸೂಚಿಸಿದ್ದಾರೆ. ಆದರೆ ಅವರು ನಿಸ್ಸಹಾಯಕರು. ಯುವಜನಾಂಗದಲ್ಲಿ ಶೇಕಡ ೯೮ ಭಾಗ ಹಿರಿಯರಂತೆ ನಿರಾಶಾವಾದಿಗಳಲ್ಲ. ಅವಿಭಕ್ತಕುಟುಂಬಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಕ್ಷುದ್ರ ಮನೋಭಾವಗಳು.

ದ್ವೇಷಾಸೂಯೆ ಹಾಗೂ ಸ್ವಾತಂತ್ರ್ಯದ ಅಭಾವ ವಿಭಕ್ತಕುಟುಂಬಗಳಲ್ಲಿ ಕಾಣಸಿಕೊಳ್ಳುವುದಿಲ್ಲ. ಆಧುನಿಕ ಪರಿಸ್ಥಿತಿಗಳಿಗನುಗುಣವಾಗಿ ವಿಭಕ್ತಕುಟುಂಬವು ಸುವ್ಯವಸ್ಥಿತವಾಗಿರಬಹುದೆಂಬುದು ಅವರ ನಂಬಿಕೆ. ಆದರೆ ವಾಸ್ತವವಾಗಿ ಭೂಮಿಯ ಒಡೆತನ ಮತ್ತು ಉಪಕರಣಗಳ ಬಲ ವಿಭಕ್ತಕುಟುಂಬಗಳಲ್ಲಿ ಅಲ್ಪಪ್ರಮಾಣದಲ್ಲಿರುತ್ತವೆ. ತುಂಡು ಭೂಮಿಗಳಲ್ಲಿ ವ್ಯವಸಾಯ ಮಾಡುವುದಕ್ಕೆ ಅಧಿಕ ವೆಚ್ಚ ತಗಲುವುದೆಂಬುದನ್ನೂ. ಅಂತಹವುಗಳಲ್ಲಿ ಕೆಲವು ಬೆಳೆಗಳನ್ನು ಬೆಳೆಯುವುದು ಆರ್ಥಿಕ ದೃಷ್ಟಿಯಿಂದ ಲಾಭದಾಯಕವಾದುದಲ್ಲವೆಂಬುದನ್ನೂ ಗಮನಿಸಿದ್ದಾರೆ. ಉದಾಹರಣೆಗೆ ಎಣ್ಣೆಬೀಜಗಳು ಮತ್ತು ದ್ವಿದಳಧಾನ್ಯಗಳನ್ನು ಹೆಚ್ಚು ಪ್ರಮಾಣದಲ್ಲಿ ಬೆಳೆದರೆ ಮಾತ್ರ ಲಾಭದಾಯಕ. ಹಾಗೆಂದಮಾತ್ರಕ್ಕೆ ಅಲ್ಪ ಪ್ರಮಾಣದಲ್ಲಿ ಬೆಳೆಯುವ ಬೆಳೆಗಳೆಲ್ಲಾ ಲಾಭದಾಯಕವಾದುದೇ ಅಲ್ಲವೆಂಬುದು ಇದರ ಅರ್ಥವಲ್ಲ. ಕೆಲವೊಮ್ಮೆ ಅವು ಅತ್ಯಂತ ಲಾಭದಾಯಕವಾಗಬಲ್ಲವು. ಶೇಕಡ ೩೫ರಷ್ಟು ವಿಭಕ್ತಕುಟುಂಬಗಳು ತಮ್ಮ ಅಲ್ಪ ಪ್ರಮಾಣದ ಭೂಮಿಯಿಂದಲೇ ಹೆಚ್ಚು ಅಭಿವೃದ್ಧಿ ಹೊಂದಿದ್ದಾರೆ. ವಿಭಕ್ತ ಕುಟುಂಬಗಳ ಸಾಧನೆಯ ಉತ್ಸಾಹ ಹಾಗೂ ಸ್ವಾತಂತ್ರ್ಯ ಮನೋಭಾವವು ಸರಿಯಾದ ಮಾರ್ಗವನ್ನು ಅನುಸರಿಸಿ ಹೆಚ್ಚು ಉತ್ಪಾದನೆಗೆ ಸಹಾಯಕವಾಗಿರುವುದನ್ನು ಗಮನಿಸಬಹುದು. ಆದರೆ ಕೆಲವೊಮ್ಮೆ ಅಭದ್ರತೆಯ ಭಯ ಈ ವಿಭಕ್ತಕುಟುಂಬಗಳಲ್ಲಿ ಕಂಡುಬಂದಿದೆ. "ಒಳಿತಿಗೋ, ಕೆಡುಕಿಗೋ ನಾನು ಬೇರೆಯಾಗಿದ್ದೇನೆ. ಆದರೆ ನನ್ನ ಹೊಸ ಜೀವನದಲ್ಲಿ ಸ್ಥಿರತೆಯನ್ನು ಸಾಧಿಸುವುದು ಅವಶ್ಯವಾಗಿದೆ. ಇಲ್ಲದಿದ್ದಲ್ಲಿ ಹಾಸ್ಯಕ್ಕೀಡಾಗುತ್ತೇನೆ. ಆದರೂ ಮುಂದೇನಾಗುತ್ತದೋ ತಿಳಿಯದು" ಎಂಬ ವಿಭಕ್ತಕುಟುಂಬದ ಒಡೆಯನ ಮಾತುಗಳು ಪರಿಸ್ಥಿತಿಯನ್ನು ಚಿತ್ರಿಸುತ್ತದೆ. "ಸ್ವತಂತ್ರನಾಗಿ ಬಾಳುತ್ತಿದ್ದೇನೆ ಎಂಬುದು ನನಗೆ ಸಂತೋಷ ನೀಡಿದೆ. ನನ್ನ ಸಹೋದರರೊಂದಿಗೆ ಇನ್ನೂ ಹೆಚ್ಚು ದಿನ ಇರುವುದು ಯಾತನಾಮಯವಾಗುತ್ತಿತ್ತು. ದಾರುಣವಾದ ಬಡತನ ಬಂದರೂ ನಾನು ಅದನ್ನು ಎದುರಿಸುತ್ತೇನೆ. ಅದು ದೈವೇಚ್ಛೆ" ಎನ್ನುತ್ತಾನೆ ಆ ಯಜಮಾನ. ಅವಿಭಕ್ತಕುಟುಂಬಗಳು ಒಡೆದಿರುವುದರಿಂದ ಸೌಖ್ಯ ಮತ್ತು ಅಭದ್ರತೆಗಳ ಮಿಶ್ರಪರಿಣಾಮಗಳುಂಟಾಗಿವೆ.

ಪದ್ಮ ಗ್ರಾಮದ ನಿವಾಸಿಗಳಲ್ಲಿ ಧರ್ಮದ ಬಗೆಗಿರುವ ಭಾವನೆಗಳನ್ನು ತಿಳಿಯುವುದು ಕುತೂಹಲಕರವಾಗಿದೆ. ಬಹುಮಂದಿ (ಶೇಕಡ ೯೨ರಷ್ಟು) ದೇವರ ಅಸ್ತಿತ್ವವನ್ನು ನಂಬಿದ್ದಾರೆ. ಅಂತಿಮವಾಗಿ ದೇವನೊಬ್ಬನೇ ವಿಶ್ವದ ಶಕ್ತಿ. ಕಷ್ಟಕಾಲದಲ್ಲಿ ಆತನಿಂದ ನೆರವನ್ನು ಪಡೆಯಬಹುದು ಎಂದೂ ನಂಬಿದ್ದಾರೆ. ಜೀವನದ ಬಿಕ್ಕಟ್ಟಿನ ಸಂದರ್ಭಗಳಲ್ಲಿ ದೇವತೆಗಳನ್ನು ಮೊರೆಹೋಗುತ್ತಾರೆ. ದೇವರ ನಿರಾಕಾರ ರೂಪ ಅವರನ್ನು ಆಕರ್ಷಿಸಿದಂತೆ ಕಾಣುವುದಿಲ್ಲ. ದೇವರ ಸಾಕಾರರೂಪ ಅವರಿಗೆ ಹೆಚ್ಚು ಒಪ್ಪಿಗೆಯಾಗಿದೆ. ಪೂಜಾಸಮಯದಲ್ಲಿ ಧಾರ್ಮಿಕ ಕ್ರಿಯೆಗಳನ್ನು ಆಚರಿಸುತ್ತಾರೆ. ಅದು ಅವರಲ್ಲಿನ ದೈವೀನಂಬುಗೆಯನ್ನು ಬಲಪಡಿಸುತ್ತದೆ. ಅವರ ಈ ನಂಬಿಕೆ ಪೂರ್ವಿಕರು ಆಚರಿಸುತ್ತಿದ್ದ ಸಂಪ್ರದಾಯಗಳನ್ನು ಆಚರಿಸಲು ಒತ್ತಾಯಿಸುತ್ತದೆ. ಹೀಗಿದ್ದರೂ ಹಳ್ಳಿಯ ನವಜನಾಂಗಗಳು ಈ ಸಾಂಪ್ರದಾಯಿಕ ನಂಬಿಕೆಗಳಿಗೆ ಹೆಚ್ಚು ಪ್ರಧಾನ್ಯತೆ ಕೊಟ್ಟಿಲ್ಲ. ಮತ್ತು ಅವರು (ಶೇಕಡ ೮೦ರಷ್ಟು) ತಮ್ಮ ಬದಲಾದ ದೃಷ್ಟಿಕೋನಕ್ಕೆ ವೈಜ್ಞಾನಿಕ ಕಾರಣವನ್ನು ಕೊಡುತ್ತಾರೆ. ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡಾಗ ರೈತರು ಸಾಂಪ್ರದಾಯಿಕ ಪದ್ಧತಿಗಳನ್ನೇ ಅನುಸರಿಸಿದರೂ ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನೂ ಬಳಸಿಕೊಂಡು ಆ ಸಾಂಕ್ರಾಮಿಕ ರೋಗಗಳ ಸಮಸ್ಯೆಯನ್ನು ಪರಿಹರಿಸಲು ಯತ್ನಿಸುವುದನ್ನು ಸಾಮಾನ್ಯವಾಗಿ ಕಾಣುತ್ತೇವೆ.

ವಿವಾಹದ ಬಗೆಗಿನ ಭಾವನೆಗಳೂ ಬದಲಾಗುತ್ತಿವೆ. ಈ ಮೊದಲು ಮದುವೆ ಅವಿಭಕ್ತಕುಟುಂಬವನ್ನು ಬಲಗೊಳಿಸುತ್ತಿತ್ತು. ಇಂದು ಹಾಗಿಲ್ಲ. ಅನೇಕ ಸಂದರ್ಭಗಳಲ್ಲಿ ಯುವಕರು (ಶೇಕಡ ೯೫ ಭಾಗ) ಮದುವೆಯಾದ ಕೂಡಲೇ ಅವಿಭಕ್ತಕುಟುಂಬದ ಆಸ್ತಿಯಲ್ಲಿ ಭಾಗವನ್ನು ಅಪೇಕ್ಷಿಸುತ್ತಾರೆ. ತಮ್ಮದೇ ಸ್ವಂತ ಸಂಸಾರವನ್ನು ನೆಲೆಗೊಳಿಸಲು ಪ್ರಯತ್ನಿಸುತ್ತಾರೆ. ಈಗಿನ ಯುವಕರು ಮದುವೆಯಾದ ಮೇಲೆ ಮೊದಲಿನಂತೆ ವಿಧೇಯರಾಗಿರುವುದಿಲ್ಲವೆಂದು ಹಿರಿಯರು ಆಕ್ಷೇಪಿಸುತ್ತಾರೆ.

ಪದ್ಮ ಗ್ರಾಮದ ಜೀವನದಲ್ಲಿ ಹುಟ್ಟು ಮತ್ತು ಸಾವುಗಳು ನಾಟಕೀಯವಾಗಿದೆ. ಅವು ಜೀವನದ ಪ್ರಮುಖ ಘಟನೆಗಳಾಗಿವೆ. ಹುಟ್ಟಿನೊಂದಿಗೇ ಅದಕ್ಕೆ ಸಂಬಂಧಿಸಿದ ಸಂಸ್ಕಾರ ಕಾರ್ಯಗಳು ನಡೆ

ಯುತ್ತವೆ. ದೇವರಿಗೆ ಪ್ರಾರ್ಥನೆಗಳನ್ನು ಸಲ್ಲಿಸಲಾಗುತ್ತದೆ. ಪ್ರತಿ ಕುಟುಂಬದಲ್ಲಿಯೂ ಜನಿಸಬಹುದಾದ ಮಕ್ಕಳ ಸಂಖ್ಯೆಯನ್ನು ದೇವರು ನಿರ್ಧರಿಸುತ್ತಾನೆಂಬುದು ಗ್ರಾಮಸ್ಥರ (ಶೇ. ೮೫ ಭಾಗ) ನಂಬಿಕೆಯಾಗಿದೆ. ಆದ್ದರಿಂದ ಸರ್ಕಾರದವರು ರೂಪಿಸಿರುವ ಜನನನಿಯಂತ್ರಣ ಪದ್ಧತಿಯನ್ನು ಸಂಪೂರ್ಣವಾಗಿ ಅವರು ಪಾಲಿಸುವುದಿಲ್ಲ. ಆದರೂ ಕ್ರಮೇಣ ಅನಿಯಂತ್ರಿತ ಮಕ್ಕಳ ಸಂಖ್ಯೆ ಕೊನೆಗೆ ಹೊರೆಯಾಗುತ್ತದೆಂಬುದನ್ನು ಅರಿಯುತ್ತಿದ್ದಾರೆ. ಹೆಚ್ಚಿನ ಸಂಖ್ಯೆಯ ಮಕ್ಕಳಿಗೆ ಅಶನಾಚ್ಛಾದನ. ವಸತಿಗಳನ್ನು ಒದಗಿಸುವುದು ಕಷ್ಟವೆಂಬುದನ್ನು ಅವರು ಕಂಡುಕೊಂಡಿದ್ದಾರೆ. ಬೇರೆ ಕಡೆಗಳಂತೆಯೇ ಈ ಹಳ್ಳಿಯಲ್ಲೂ ಮರಣ ದುಃಖದಾಯಕ ಎಂಬ ಗ್ರಹಿಕೆ ಇದೆ. ಮರಣಕ್ಕೆ ಸಂಬಂಧಿಸಿದ ಅನೇಕ ಸಂಸ್ಕಾರಗಳನ್ನು ನಡೆಸುತ್ತಾರೆ. ಕುಟುಂಬದ ದುಃಖದಲ್ಲಿ ಎಲ್ಲರೂ ಪಾಲ್ಗೊಂಡು ವಿಯೋಗೀ ಕುಟುಂಬಕ್ಕೆ ತಮ್ಮ ಸಹಾಯವನ್ನು ನೀಡುತ್ತಾರೆ. ಮನುಷ್ಯನ ಮರಣಾನಂತರ ಆತನ ಸದ್ಗುಣಗಳನ್ನು ಗಾನಮಾಡುವುದು ಸಹಜ. ಸಾಧಾರಣವಾಗಿ ರಕ್ತಸಂಬಂಧದ ಚೌಕಟ್ಟಿನಲ್ಲಿ ಸಾವು ದ್ವೇಷವನ್ನು ಶಮನಮಾಡುತ್ತದೆ. ಸಾವು ನಿಯಾಮಕನ ಇಚ್ಛೆ ಎಂಬುದನ್ನು ಹಳ್ಳಿಗರು ನಂಬುತ್ತಾರೆ. ಔಷಧಿಗಳು ಜೀವನದ ಹರವನ್ನು ಮುಂದುವರಿಸುವುದಿಲ್ಲವೆಂದೂ, ಪ್ರತಿಯೊಬ್ಬನೂ ಪೂರ್ವನಿಶ್ಚಿತ ರೀತಿಯಲ್ಲಿ, ಅಂದರೆ ಮುಪ್ಪು, ಅಪಘಾತ ಅಥವ ರೋಗದಿಂದ ಸಾಯುತ್ತಾನೆ ಎಂದೂ ಅವರು ಅಭಿಪ್ರಾಯಪಡುತ್ತಾರೆ. ಸಾಮಾಜಿಕ ಜೀವನದಲ್ಲಿ ರಕ್ತಸಂಬಂಧದ ಬಾಂಧವ್ಯ ಗಣನೀಯ. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಸಂಬಂಧ ಸಡಿಲವಾಗುತ್ತಿದೆ, ಉಪೇಕ್ಷಿಗೊಳಗಾಗಿದೆ. ಜೀವನದ ಈ ರೀತಿಯ ಬದಲಾವಣೆಗೆ ಗುಂಪುಗಾರಿಕೆ ಮತ್ತು ಪಟ್ಟಣಗಳೊಂದಿಗೆ ಜನಗಳ ಸಂಪರ್ಕ ಕಾರಣಗಳಾಗಿವೆ. ಈ ರಕ್ತಸಂಬಂಧದ ಬಾಂಧವ್ಯ ಸಡಿಲಗೊಳ್ಳುತ್ತಿರುವುದಕ್ಕಾಗಿ ಹಿರಿಯರು (ಶೇ. ೯೫ ಭಾಗ) ಹೆಚ್ಚಾಗಿ ಮರುಗುತ್ತಾರೆ. ಹಿಂದೆ ಈ ಹಳ್ಳಿಯ ಜನರು ಆಹಾರ ಮತ್ತು ಆಶ್ರಯವನ್ನು ತಮ್ಮ ಸಂಬಂಧಿಕರಲ್ಲೇ ಅರಸುತ್ತಿದ್ದರು. ಆದರೆ ಇಂದು ಆತ್ಮೀಯತೆಯ ಪರಿಮಾಣ ಅಂದಿನಷ್ಟಿಲ್ಲ. ರಕ್ತಸಂಬಂಧ ದೂರವಾದಂತೆಲ್ಲಾ ಆತ್ಮೀಯತೆ ಕಡಿಮೆಯಾಗುತ್ತದೆ.

ಪರಸ್ಪರ ವೈಯಕ್ತಿಕ ಸಂಬಂಧವೂ ಬದಲಾಗುತ್ತಿರುವುದನ್ನು ಗುರುತಿಸಬಹುದು. ಯುವಕರನ್ನು ತಾವು ಬೇರೆಯವರೆಂದು ಭಾವಿಸುವುದಿಲ್ಲವೆಂದು ಹಿರಿಯರು ಹೇಳುತ್ತಾರೆ. ಹಿರಿಯರು ಅವರಿಂದ ಹೆಚ್ಚು ಗೌರವವನ್ನೂ ನಿರೀಕ್ಷಿಸುತ್ತಾರೆ. ಈ ವಿಷಯದಲ್ಲಿ ತಲೆಮಾರುಗಳಲ್ಲಿ ಭಿನ್ನಾಭಿಪ್ರಾಯ ಕಂಡು ಬರುತ್ತದೆ. ಈ ಪರಿಸ್ಥಿತಿ ಅವಿಭಕ್ತಕುಟುಂಬಗಳು ಒಡೆಯಲು ಕಾರಣವಾಗಿದೆ.

ಪತಿಪತ್ನಿಯರ ಬಾಂಧವ್ಯಕ್ಕೆ ಸಂಬಂಧಿಸಿದಂತೆ ಹೆಚ್ಚು ಬದಲಾವಣೆಯನ್ನು ಗಮನಿಸಬಹುದು ಪತ್ನಿಯರು (ಶೇ. ೧೦೦ ಭಾಗ) ತಮ್ಮ ಪತಿಯರಿಗೆ ನಮ್ರರೂ, ವಿಧೇಯರೂ ಆಗಿದ್ದಾರೆ. ಸಹೋದರರಲ್ಲಿ ಪರಸ್ಪರ ಸ್ವತಂತ್ರ ಮನೋಭಾವ ರೂಪುಗೊಳ್ಳುತ್ತಿರುವುದನ್ನು ಗುರುತಿಸಬಹುದು. ಹೇಗಾದರೂ ಹಿರಿಯ ಸಹೋದರನು ಚಿಕ್ಕವರಿಗಿಂತ ಹೆಚ್ಚು ಗೌರವ ಮತ್ತು ಸ್ಥಾನಮಾನಗಳನ್ನು ಪಡೆದಿದ್ದಾನೆ. ಕಿರಿಯರ ಮೇಲೆ ಅಧಿಕಾರ ಚಲಾಯಿಸುವ ಹಾಗೂ ಕುಟುಂಬದಲ್ಲಿ ಹೆಚ್ಚಿನ ಗೌರವವನ್ನು ಪಡೆಯುವ ಹಕ್ಕು ಇದ್ದೇ ಇದೆ.

ಈ ಗ್ರಾಮದ ನಿವಾಸಿಗಳು ಸರ್ಕಾರದ ಬಗೆಗೆ ಹೆಚ್ಚು ಗೌರವವಿಟ್ಟಿದ್ದಾರೆ. ಸರ್ಕಾರದ ಕಂದಾಯ, ಜನೋಪಯೋಗಿ ಮತ್ತು ವ್ಯವಸಾಯ ಇಲಾಖೆಯ ಅಧಿಕಾರಿಗಳಿಗೆ ಭಯ ಪಡುತ್ತಾರೆ. ಆದರೆ ಇನ್ನೂ ಕೆಲವು ಗ್ರಾಮಸ್ಥರು (ಶೇ. ೨೫ ಭಾಗ) ಹರಿಸಿದ ಭೂಕಂದಾಯಗಳನ್ನು ಬಲಾತ್ಕಾರವಾಗಿ ವಸೂಲು ಮಾಡುವ ಭೂಕಂದಾಯ ಇಲಾಖೆಯ ಅಧಿಕಾರಿಗಳನ್ನು ಶತ್ರುಗಳೆಂದೇ ಭಾವಿಸಿದ್ದಾರೆ. ಕೆಲವರು (ಶೇ. ೨೫ ಭಾಗ) ಜನೋಪಯೋಗಿ ಇಲಾಖೆಯನ್ನು ಟೀಕಿಸುತ್ತಾರೆ. ಗ್ರಾಮದ ಕೆರೆಯನ್ನು ದುರುಸ್ತು ಗೊಳಿಸುವಲ್ಲಿ ಮಿತಿಮೀರಿದ ವಿಳಂಬವಾಗುವುದರಿಂದ ವ್ಯವಸಾಯ ಇಲಾಖೆಯವರು ನಿಷ್ಕರುಣಿಗಳೆಂದೂ. ನಿರ್ಲಕ್ಷ್ಯ ಮನೋಭಾವದವರೆಂದು ಸಹ ಅವರು ಹೇಳುತ್ತಾರೆ. ಉತ್ತಮ ಬೀಜ ಮತ್ತು ಗೊಬ್ಬರಗಳನ್ನು ಗ್ರಾಮದ ಕೆಲವು ಪ್ರಭಾವಿತ ವ್ಯಕ್ತಿಗಳಿಗೆ ಮಾತ್ರ ಇಲಾಖೆಯು ಹಂಚುತ್ತದೆಂದು. ಸಾಮಾನ್ಯ ರೈತ ಅಲಕ್ಷಿತನಾಗಿದ್ದಾನೆ ಎಂದು ಶೇ. ೬೦ ಭಾಗ ಜನರು ಹೇಳುತ್ತಾರೆ. ಪ್ರಾಪಂಚಿಕವಾಗಿ

ಮುಂದುವರೆದ ಬಹುಸಂಖ್ಯಾತ ಜಾತಿಗಳವರು ಸರ್ಕಾರದಿಂದ ಉತ್ತಮ ಸೌಲಭ್ಯಗಳನ್ನು ಪಡೆಯುತ್ತಾರೆ ಮತ್ತು ಕೆಳಗಿನ ಜಾತಿಗಳವರು ಅಲಕ್ಷಿತರಾಗಿದ್ದಾರೆ ಎಂಬುದು ಅವರ ನಂಬಿಕೆ. ಆದರೆ ಆ ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಹಿಂಜರಿಯುತ್ತಾರೆ. ಎನ್.ಇ.ಎಸ್. ಸಂಸ್ಥೆಯು ಉಪಯೋಗವಾದ ಯಾವ ಕಾರ್ಯವನ್ನೂ ಮಾಡಿಲ್ಲ. ಅದರಿಂದ ಸಾರ್ವಜನಿಕ ಹಣ ಪೋಲಾಗುತ್ತಿದೆ ಎಂದು ದೂರುತ್ತಾರೆ.

ಮೊದಲು ಈ ಹಳ್ಳಿಯಲ್ಲಿ 'ಜಾತಿ ಪಂಚಾಯತಿಗಳು' ಮತ್ತು 'ಹಿರಿಯರ ಸಭೆ'ಗಳು ತಮ್ಮ ತಮ್ಮ ಜಾತಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುತ್ತಿದ್ದುವು. ಪಂಚಾಯತಿ ರಾಜ್ಯ ಅಸ್ತಿತ್ವಕ್ಕೆ ಬಂದಮೇಲೆ ಈ ವಿವಾದಗಳನ್ನೂ ಜಾತಿ ಪಂಚಾಯತಿಗಳ ಬದಲು ಗ್ರಾಮ ಪಂಚಾಯತಿಗಳು ಪರಿಶೀಲಿಸತೊಡಗಿದವು. ಹೇಗಾದರೂ ಪಂಚಾಯತಿಗಳ ಸದಸ್ಯರು ಚುನಾಯಿತರಾಗುತ್ತಿದ್ದ ಕಾರಣ ಬಹುಸಂಖ್ಯಾಕರಾದ ಲಿಂಗಾಯಿತರೇ ಹೆಚ್ಚಿನ ಸಂಖ್ಯೆಯಲ್ಲಿ ಚುನಾಯಿತರಾಗುತ್ತಿದ್ದರು. ಸಂಖ್ಯಾಬಲದಿಂದಲೂ. ಆರ್ಥಿಕ ದೃಷ್ಟಿಯಿಂದಲೂ ಅವರು ಪ್ರಬಲರಾಗಿರುವುದರಿಂದ ಪಂಚಾಯತಿಯ ತೀರ್ಪುಗಳೂ ಹೆಚ್ಚಾಗಿ ಲಿಂಗಾಯಿತರ ಪರವಾಗಿಯೇ ಆಗುತ್ತವೆ. ಪಂಚಾಯತಿಗಳಲ್ಲಿ ಲಿಂಗಾಯತರ ಸಂಖ್ಯೆಯೇ ಹೆಚ್ಚಾಗಿರುವುದರಿಂದ ತಮಗೆ ನ್ಯಾಯ ದೊರೆಯುವುದಿಲ್ಲವೆಂದು ಕುರುಬರು. ಅಗಸರು ಅಕ್ಕಸಾಲಿಗರು ದೂರುತ್ತಾರೆ.

ನಾಗ ಎಂಬುದು ಈ ಅಧ್ಯಯನಕ್ಕೊಳಪಟ್ಟ ಇನ್ನೊಂದು ಗ್ರಾಮ. ಇದು ಮೈಸೂರಿನ ಪೂರ್ವಕ್ಕೆ ೧೫ ಮೈಲಿ ದೂರದಲ್ಲಿ ತಿ. ನರಸೀಪುರಕ್ಕೆ ಹೋಗುವ ಹೆದ್ದಾರಿಯಲ್ಲಿದೆ. ಈ ಗ್ರಾಮ ಚೊಕ್ಕಟವಾಗಿದ್ದು ಇಲ್ಲಿ ಮನೆಗಳನ್ನು ಒಪ್ಪವಾಗಿ ಕಟ್ಟಲಾಗಿದೆ. ರಸ್ತೆಗಳು ಸಾಕಷ್ಟು ಅಗಲವಾಗಿ ವಿಸ್ತಾರವಾಗಿ ಇವೆ. ೧೨೮ ಕುಟುಂಬಗಳಿರುವ ಈ ಹಳ್ಳಿಯ ಒಟ್ಟು ಜನಸಂಖ್ಯೆ ೮೧೬. ಗ್ರಾಮದ ಒಟ್ಟು ವಿಸ್ತೀರ್ಣ ೨೨೫೭ ಎಕರೆಗಳು. ಅದರಲ್ಲಿ ಶೇಕಡ ೧೦ ಭಾಗ ಬಂಜರು ಭೂಮಿ. ಶೇಕಡ ೩೦ ಭಾಗ ತೋಟದ ಭೂಮಿಯಾಗಿದ್ದು ಉಳಿದದ್ದು ಗದ್ದೆಯಾಗಿದೆ. ರಾಗಿ, ಭತ್ತ, ಹುರುಳಿ, ಕಡಲೆಕಾಯಿ ಮತ್ತು ಕಬ್ಬು ಮುಖ್ಯ ಬೆಳೆಗಳು. ಸಮೃದ್ಧವಾಗಿ ಮೇವು ದೊರೆಯುವುದರಿಂದ ಹಳ್ಳಿಯಲ್ಲಿರುವ ಜಾನುವಾರುಗಳು ಒಳ್ಳೆಯ ತಳಿಗಳಲ್ಲದಿದ್ದರೂ ಉತ್ತಮವಾಗಿವೆ. ಕೆಲವರು ಕುರಿ ಮತ್ತು ಆಡುಗಳನ್ನೂ ಸಾಕಿದ್ದಾರೆ. ಎಮ್ಮೆಗಳು ಸ್ಥಳೀಯ ತಳಿಗಳದ್ದು. ಒಳ್ಳೆಯ ತಳಿಯ ಗೂಳಿಯೊಂದನ್ನು ಒಬ್ಬರು ಪೋಷಿಸಿದ್ದಾರೆ. ಬೆದೆಗೆ ಬಂದ ಪಶುಗಳಿಗೆ ಇದರಿಂದ ಉಪಯೋಗ ಪಡೆಯುತ್ತಾರೆ.

೧೯೩೦ಕ್ಕೆ ಮೊದಲು ಈ ಹಳ್ಳಿಯಲ್ಲಿ ಕೇವಲ ಹೊಲಗಳಿದ್ದುವು. ಹಳ್ಳಿಯಲ್ಲಿದ್ದ ಕೆರೆಯಿಂದ ವ್ಯವಸಾಯಕ್ಕೆ ಸಾಕಷ್ಟು ನೀರು ಒದಗುತ್ತಿರಲಿಲ್ಲ. ಅನಿಶ್ಚಿತವಾದ ಮುಂಗಾರು ಮಳೆಯು ಅವರಿಗೆ ನೆರವನ್ನು ನೀಡುತ್ತಿರಲಿಲ್ಲ. ೧೯೩೦ರ ನಂತರ ತೋಡಿಸಲಾದ ಕಾಲುವೆಗಳು ನೀರಾವರಿ ಸೌಲಭ್ಯಗಳನ್ನೊದಗಿಸಿ ಹಳ್ಳಿಯ ಸ್ವರೂಪವನ್ನೇ ಬದಲಾಯಿಸಿದುವು. ಸುಮಾರು ಶೇಕಡ ೯೦ ಭಾಗದಷ್ಟು ಹೊಲಗಳನ್ನು ಗದ್ದೆಗಳನ್ನಾಗಿ ಪರಿವರ್ತಿಸಲಾಯಿತು. ಭತ್ತ ಮತ್ತು ಕಬ್ಬಿನ ವ್ಯವಸಾಯವು ಗ್ರಾಮಸ್ಥರ ಆರ್ಥಿಕ ಪರಿಸ್ಥಿತಿಯಲ್ಲಿ ಕ್ರಾಂತಿಯನ್ನುಂಟುಮಾಡಿತು. ಈಗ ವರ್ಷವರ್ಷವೂ ಅವರು ಅಭಿವೃದ್ಧಿಗೊಳ್ಳುತ್ತಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿನ ಸಂಪರ್ಕ ಹಾಗೂ ಸಾಗಾಣಿಕೆಯ ಅನುಕೂಲಗಳು ಹಳ್ಳಿಯಲ್ಲಾಗಿರುವ ಬದಲಾವಣೆಗಳಿಗೆ ಕಾರಣಗಳಾಗಿವೆ. ನಾಗ ಹಳ್ಳಿಯು ಬೆಂಗಳೂರಿನ ಹೆದ್ದಾರಿಯಲ್ಲಿರುವುದರಿಂದ ಕೊಳ್ಳೇಗಾಲ. ಚಾಮರಾಜನಗರ. ಯಳಂದೂರು. ಸತ್ಯಮಂಗಲ ಮತ್ತಿತರಕೆಲವು ಊರುಗಳಿಗೆ ವಾಹನ ಸೌಕರ್ಯವನ್ನು ಹೊಂದಿದ್ದು ಸಂಪರ್ಕವನ್ನು ಸುಲಭವಾಗಿಸಿವೆ. ಲಾರಿಗಳು ಸಹ ಸಾಮಾನುಗಳ ಸಾಗಾಣಿಕೆಗೆ ಸಹಾಯಕವಾಗಿವೆ. ಪ್ರಮುಖ ವ್ಯಾಪಾರ ಕೇಂದ್ರಗಳಾಗಿರುವ ಈ ಊರುಗಳಲ್ಲಿ ಗ್ರಾಮಸ್ಥರು ತಮ್ಮ ವ್ಯವಸಾಯೋತ್ಪನ್ನಗಳನ್ನು ಸುಲಭವಾಗಿ ಮಾರಿ ಮನೆಗೆ ಬೇಕಾಗುವ ದೈನಂದಿನ ಆವಶ್ಯಕ ವಸ್ತುಗಳನ್ನೂ ಇತರ ಸಾಮಾನುಗಳನ್ನೂ ಕೊಳ್ಳಬಲ್ಲರು. ಸಾಗಾಣಿಕೆಯ ಖರ್ಚು ಹೆಚ್ಚಾಗಿಲ್ಲದ ಕಾರಣ ವ್ಯವಸಾಯೋತ್ಪನ್ನಗಳು ಬೆಂಗಳೂರು ಮತ್ತು ಮೈಸೂರುಗಳಲ್ಲಿಯೂ ಮಾರಾಟವಾಗುತ್ತವೆ. ಈ ಇತರ ಸಂಪರ್ಕ ಇವರ ಸಾಮಾಜಿಕ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳನ್ನುಂಟುಮಾಡಿವೆ.

ನಾಗ ಗ್ರಾಮದಲ್ಲಿ ಹಲವಾರು ಜಾತಿಯ ಜನಗಳಿದ್ದಾರೆ. ಅಲ್ಲಿನ ೧೨೮ ಕುಟುಂಬಗಳಲ್ಲಿ ಶೇಕಡ ೯೩ ಒಕ್ಕಲಿಗರ, ಶೇಕಡ ೭ ರಷ್ಟು ಗಾಣಿಗರ, ಶೇಕಡ ೨ ರಷ್ಟು ಅಕ್ಕಸಾಲಿಗರ ಶೇಕಡ ೧ಕ್ಕಿಂತಲೂ ಕಡಿಮೆ ನಾಯಿಂದರ ಮತ್ತು ಲಿಂಗಾಯಿತರ ಕುಟುಂಬಗಳೂ ಇವೆ. ಸಂಖ್ಯಾಬಲದಿಂದಲೂ, ಆರ್ಥಿಕವಾಗಿಯೂ ಒಕ್ಕಲಿಗರು ಪ್ರಬಲರಾಗಿದ್ದಾರೆ. ಸಮಾಜದಲ್ಲಿ ಮೇಲಿನ ಶ್ರೇಣಿಯಲ್ಲಿದ್ದಾರೆ. ಉತ್ತಮ ಆರ್ಥಿಕ ಸ್ಥಿತಿಯು ಅವರಿಗೆ ಮಾನ್ಯತೆಯನ್ನು ನೀಡಿದೆ. ಒಕ್ಕಲಿಗರು ಹೇಳಿದುದೇ ಕಾನೂನು. ಯಾವ ಕಾರ್ಯಕ್ಕೂ ಅವರ ಸಮ್ಮತಿ ಅವಶ್ಯಕ. ಸಾಮಾಜಿಕವಾಗಿ ದ್ವಿತೀಯ ಸ್ಥಾನ ಗಾಣಿಗರದು. ತೆಲ್ಲಿಗ ಕಸುಬಿನ ಇವರು ಸಿದ್ದಪ್ಪಾಜಿ ದೇವರ ಅರ್ಚಕರಾಗಿದ್ದಾರೆ. ನಂತರದ ಸ್ಥಾನ ಲಿಂಗಾಯಿತರದು. ಇವರು ತಾವು ಬ್ರಾಹ್ಮಣರಿಗಿಂತ ಶ್ರೇಷ್ಠರೆಂದು ವಾದಿಸುತ್ತಾರೆ. ತಮ್ಮ ಮೂಲಪುರುಷನು ಬ್ರಹ್ಮನ ನೇತ್ರದಿಂದ ಜನಿಸಿದವನೆಂದು ಹೇಳಿಕೊಳ್ಳುವ ನಾಯಿಂದರು ಸಾಮಾಜಿಕ ಶ್ರೇಣಿಯಲ್ಲಿ ಲಿಂಗಾಯಿತರಿಗೂ ಕೆಳಗಿನವರು. ಸಾಂಪ್ರದಾಯಿಕ ಕಸುಬಾದ ಕ್ಷೌರಿಕ ವೃತ್ತಿಯನ್ನು ಇವರು ಅವಲಂಬಿಸಿದ್ದಾರೆ. ಎಲ್ಲ ಜಾತಿಗಳಿಗಿಂತ ಉತ್ತಮರೆಂದು ಸಾಧಿಸಿದರೂ ಕೊನೆಯ ಸ್ತರಕ್ಕೆ ಸೇರಿದವರು ಅಕ್ಕಸಾಲಿಗರು. ವಿವಿಧ ಜಾತಿಯವರು ವಿವಿಧ ರೀತಿಯ ಸಾಮಾಜಿಕ ಸ್ಥಾನಮಾನಗಳನ್ನು ಪಡೆದಿದ್ದಾರೆ.

ಆದರೆ ಇಂದು ಇಲ್ಲಿ ಸಾಮಾಜಿಕ ಬದಲಾವಣೆಗಳಾಗಿವೆ. ೧೯೫೦ಕ್ಕೆ ಮೊದಲು ಆರ್ಥಿಕವಾಗಿ ಪ್ರಬಲವಾಗಿದ್ದ ಗುಂಪು ಸಮಾಜದಲ್ಲಿ ಉನ್ನತವರ್ಗಕ್ಕೆ ಸೇರಿದ್ದೆಂದು ಮಾನ್ಯತೆ ಪಡೆದಿತ್ತು. ಆದರೆ ಈಗ ಕಾರಣಾಂತರಗಳಿಂದ ಅವರ ಅಧಿಕಾರ ಮೊಟಕಾಗಿದೆ. ಮೂರು ಸಾರ್ವತ್ರಿಕ ಚುನಾವಣೆಗಳು ಜಾತಿಪದ್ಧತಿಯಲ್ಲಿ ಕ್ರಾಂತಿಯನ್ನುಂಟುಮಾಡಿವೆ. ಈಗ ಎಲ್ಲ ಜಾತಿಗಳವರೂ ತಾವು ಸರಿಸಮಾನರೆನಿಸಿಕೊಂಡು ಹೆಚ್ಚು ಸ್ವಾತಂತ್ರ್ಯವನ್ನು ಪಡೆದಿದ್ದಾರೆ. ಪ್ರಮುಖವಾದ ಸಾಮಾಜಿಕ ಕಾರ್ಯಗಳಲ್ಲಿ ಪರಸ್ಪರ ಸಹಕಾರೀ ಮನೋಭಾವವನ್ನು ತೋರಿಸುತ್ತಾರೆ. ಗಾಣಿಗರು ಮತ್ತು ಒಕ್ಕಲಿಗರು ಪರಸ್ಪರರಲ್ಲಿ ಊಟಮಾಡುವ ಪದ್ಧತಿಯೂ ಬರುತ್ತಿದೆ. ನಾಯಿಂದರು ಹಳ್ಳಿಯಲ್ಲಿರುವ ಎಲ್ಲ ಜಾತಿಯವರೊಡನೆ ಊಟಮಾಡುತ್ತಾರೆ. ಲಿಂಗಾಯಿತರು ಮತ್ತು ಉಳಿದ ಜಾತಿಯವರ ನಡುವೆ ಊಟಮಾಡುವ ವಿಷಯದಲ್ಲಿ ಹೆಚ್ಚಿನ ಬೇಧಗಳು ಉಳಿದಿಲ್ಲ. ಇದರ ಪರಿಣಾಮವಾಗಿ ಸಿದ್ದಪ್ಪಾಜಿಯನ್ನು ಅರ್ಚಿಸುವ ಧಾರ್ಮಿಕ ಪದ್ಧತಿಯಲ್ಲಿಯೂ ಅನೇಕ ಮಾರ್ಪಾಡುಗಳುಂಟಾಗಿವೆ. ಸಿದ್ದಪ್ಪಾಜಿ ದೇವರಿಗೆ ನೀಡುತ್ತಿದ್ದ ಪಶುಬಲಿಯನ್ನು ನಿಲ್ಲಿಸಲಾಗಿದೆ. ಅವಿಭಕ್ತಕುಟುಂಬಗಳಲ್ಲಿ ಆಸ್ತಿಪಾಲಾಗುವಾಗ ಎಲ್ಲ ಜಾತಿಯವರೂ ಸಹಕಾರ ನೀಡಿ ಬರಬಹುದಾದ ಸಮಸ್ಯೆಗಳನ್ನು ಪರಿಹರಿಸುತ್ತಾರೆ. ಹಾಗಾಗಿ ಎಲ್ಲ ಜಾತಿಯವರೂ ಸಮಾನ ಸ್ಥಾನಮಾನಗಳನ್ನು ಅನುಭವಿಸಿ ಪರಸ್ಪರ ಸಹಕಾರ ನೀಡುತ್ತಾರೆ. ವಿಸ್ತೃತಗೊಂಡ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಚಟುವಟಿಕೆಗಳು ಈ ಬದಲಾವಣೆಗೆ ಮುಖ್ಯಕಾರಣಗಳು.

ಬಹುಹಿಂದಿನಿಂದ ಈ ಹಳ್ಳಿಯಲ್ಲಿ ಅವಿಭಕ್ತಕುಟುಂಬ ಪದ್ಧತಿಯನ್ನು ಸಾಂಪ್ರದಾಯಿಕ ವ್ಯವಸ್ಥೆಯೆಂದು ಭಾವಿಸಲಾಗಿತ್ತು. ಈ ಪದ್ಧತಿ ಕುಟುಂಬದ ಪ್ರತಿಯೊಬ್ಬ ವ್ಯಕ್ತಿಗೂ ಭದ್ರತೆ ಮತ್ತು ರಕ್ಷಣೆಯನ್ನು ನೀಡುತ್ತಿತ್ತು. ಸುಖ–ದುಃಖಗಳನ್ನು ಎಲ್ಲರೂ ಹಂಚಿಕೊಳ್ಳುತ್ತಿದ್ದರು. ದುರ್ಬಲರಿಗೂ, ಅಶಕ್ತರಿಗೂ ರಕ್ಷಣೆ ಲಭಿಸುತ್ತಿತ್ತು. ಆದರೆ ೧೯೩೦ರಿಂದ ಅವಿಭಕ್ತಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಒಡೆಯುತ್ತಿವೆ. ಅವಿಭಕ್ತಕುಟುಂಬಗಳು ಒಡೆಯುವುದಕ್ಕೆ ಇನ್ನಿತರ ಕಾರಣಗಳಿದ್ದರೂ ಆರ್ಥಿಕ ಅಭಿವೃದ್ಧಿ ಪ್ರಮುಖವಾದ ಒಂದು ಕಾರಣವೆಂದು ಗ್ರಾಮಸ್ಥರು ಹೇಳುತ್ತಾರೆ. ಯುವಕರ ಶಿಕ್ಷಣ, ಕುಟುಂಬದ ವ್ಯಕ್ತಿಗಳ ಸ್ವಾತಂತ್ರ್ಯಾಪೇಕ್ಷೆ, ಅವರು ವ್ಯವಸಾಯವನ್ನಲ್ಲದೆ ಇತರ ವೃತ್ತಿಗಳನ್ನು ಅನುಸರಿಸುವುದು–ಇತ್ಯಾದಿಗಳು ಅವಿಭಕ್ತಕುಟುಂಬಗಳು ವಿಭಕ್ತವಾಗಲು ಪ್ರಮುಖ ಕಾರಣಗಳಾಗಿವೆ. ವಿಭಕ್ತಕುಟುಂಬಗಳಿಗೆ ನಿಶ್ಚಿತವಾದ ಅನಾನುಕೂಲಗಳಿದ್ದರೂ ಮೇಲೆ ಹೇಳಿದ ಕಾರಣಗಳಿಂದ ಪರಿಸ್ಥಿತಿಗಳಿಗೀಡಾಗಿ ಗ್ರಾಮಸ್ಥರು ವಿಭಕ್ತಕುಟುಂಬಿಗಳಾಗಲು ಇಚ್ಛಿಸಿದ್ದಾರೆ. ೧೯೪೦ರಲ್ಲಿ ಈ ಹಳ್ಳಿಯಲ್ಲಿ ೫೦ ಅವಿಭಕ್ತಕುಟುಂಬಗಳಿದ್ದುವು. ಈಚಿನ ಮೂರು ದಶಕಗಳಲ್ಲಿ ಶೇಕಡ ೩೦ಕ್ಕೂ ಹೆಚ್ಚು ಕುಟುಂಬಗಳು ಅನೇಕ ಬದಲಾವಣೆಗಳಿಂದಾಗಿ ಒಡೆದು ವಿಭಕ್ತಕುಟುಂಬಗಳಾಗಿವೆ. ಈಗ ಉಳಿದಿರುವ ಅವಿಭಕ್ತಕುಟುಂಬಗಳಲ್ಲಿಯೂ ವಿಭಕ್ತಗೊಳ್ಳುವ ಲಕ್ಷಣಗಳು ಕಾಣಿಸಿಕೊಳ್ಳುತ್ತಿವೆ.

ಈ ಗ್ರಾಮಸ್ಥರಿಗೆ (ಶೇ. ೯೧ ಭಾಗ) ದೇಶದ ಜನಸಂಖ್ಯೆ ಸಮಸ್ಯೆಯ ಅರಿವಿದೆ. ತಮ್ಮ ಕುಟುಂಬದ ಪರಿಮಾಣ ಹೆಚ್ಚುತ್ತಿರುವುದನ್ನು ಅವರು ಬಲ್ಲರು. ಆದರೂ ಅದನ್ನು ಮಿತಿಗೊಳಿಸುವುದಕ್ಕಿಂತಲೂ ಹೆಚ್ಚಿನ ಆಸಕ್ತಿ ಭೂಮಿಯ ಆಸ್ತಿಯನ್ನು ಹೆಚ್ಚಿಸುವುದರಲ್ಲಿದೆ. ಇಂದಿಗೂ ಮಕ್ಕಳ ಜನನ ದೈವಸಂಕಲ್ಪವೇ ಹೊರತು ಮಾನವನಿಯಂತ್ರಿತವಲ್ಲವೆಂದೇ ಅವರು ನಂಬಿದ್ದಾರೆ. ಮಕ್ಕಳು ದೇವರ ಕೊಡುಗೆ. ಪ್ರಕೃತಿ ನಿಯಮವನ್ನು ಅಡ್ಡಿಪಡಿಸುವುದು ಯಾರಿಂದಲೂ ಸಾಧ್ಯವಿಲ್ಲ. ಹಾಗೆ ಮಾಡಿದ್ದೇ ಆದರೆ ಅವನಿಗೆ ನರಕ ಪ್ರಾಪ್ತಿಯಾಗುತ್ತದೆ ಎಂದೇ ಅವರ ನಂಬುಗೆ. ಎಂತಲೇ ಈ ಗ್ರಾಮಸ್ಥರಿಗೆ ಕುಟುಂಬಯೋಜನೆಯ ಗುರಿ ಮತ್ತು ಉದ್ದೇಶಗಳನ್ನು ತಿಳಿಸಿ ಮನವೊಲಿಸುವ ಕಾರ್ಯ ಅಧಿಕಾರಿಗಳಿಗೆ ಕಷ್ಟಸಾಧ್ಯವಾಯಿತು. ಆದರೆ ಪರಿಪರಿಯಿಂದ ಅವರ ಮನವೊಲಿಸಿದುದರಿಂದ ಕೆಲವರಾದರೂ (ಶೇ. ೮ ಭಾಗ) ಈಗ ಜನನನಿಯಂತ್ರಣದ ಬಗೆಗಿನ ತಮ್ಮ ಭಾವನೆಗಳನ್ನು ಬದಲಾಯಿಸಲು ಸಾಧ್ಯವಾಗಿದೆ.

ಈ ಹಳ್ಳಿಯ ಆರ್ಥಿಕ ಅಭಿವೃದ್ಧಿ ಗಣನೀಯವಾದುದು. ೧೯೫೦ರ ವರೆಗೆ ನೀರಾವರಿಯ ಸೌಕರ್ಯವಿಲ್ಲದಿದ್ದುದರಿಂದ ಈ ಹಳ್ಳಿಯ ಅರ್ಧದಷ್ಟು ಭೂಮಿ ಬರಡಾಗಿತ್ತು. ಆ ವರ್ಷದಲ್ಲಿ ಒಟ್ಟು ೧೯೯೫ ಎಕರೆಯಷ್ಟು ಭೂಮಿ ಬರಡಾಗಿತ್ತು. ಅದರಲ್ಲಿ ಶೇಕಡ ೫೭ ಭಾಗವನ್ನು ನೀರಾವರಿಗೊಳಪಡಿಸಲಾಯಿತು. ೧೯೫೧ರಲ್ಲಿ ಚಿಕ್ಕದೇವರಾಜಕಾಲುವೆಯನ್ನು ತೆಗೆದಾಗ ವ್ಯವಸಾಯ ಯೋಗ್ಯವಾದ ಭೂಮಿ ಶೇಕಡ ೮೪ರಷ್ಟಕ್ಕೆ ಏರಿತು. ೧೯೫೧ಕ್ಕೆ ಮೊದಲು ಪ್ರತಿಕುಟುಂಬಕ್ಕೆ ಸರಾಸರಿ ೫.೫ ಎಕರೆ ವ್ಯವಸಾಯಯೋಗ್ಯವಾದ ಭೂಮಿ ಇದ್ದು ೧೯೫೧ರ ನಂತರ ಅದು ೧೩.೧೫ ಎಕರೆಯಾಗಿದೆ. ೧೯೫೧ರ ನಂತರ ಆರ್ಥಿಕ ವ್ಯವಸ್ಥೆ ಸುಭದ್ರಗೊಂಡಿದೆ. ೧೯೫೧ಕ್ಕೆ ಮೊದಲು ಜೀವನಾಧಾರದ ಆರ್ಥಿಕ ವ್ಯವಸ್ಥೆಹೊಂದಿದ್ದ ಈ ಗ್ರಾಮವು ೧೯೫೧ರ ನಂತರ ಸಮತೋಲನ ಆರ್ಥಿಕ ವ್ಯವಸ್ಥೆಯನ್ನು ಹೊಂದಿದೆ. ೧೯೫೧ರಿಂದ ಆರ್ಥಿಕ ಸ್ಥಿತಿ ವರ್ಧಿಸುತ್ತಿದೆ. ಆದಾಯದ ಪರಿಮಾಣರೇಖೆ ವರ್ಷದಿಂದ ವರ್ಷಕ್ಕೆ ಕ್ರಮವಾಗಿ ಏರುತ್ತಿದೆ. ಇದರ ಪರಿಣಾಮವಾಗಿ ೧೯೬೦ರಲ್ಲಿ ಶೇಕಡ ೧೮ ಕುಟುಂಬಗಳು ೫೦೧ ಮತ್ತು ೧೦೦೦ ರೂ ಆದಾಯವುಳ್ಳ ಗುಂಪಿಗೆ ಸೇರಿವೆ: ಶೇಕಡ ೨೫ರಷ್ಟು ಕುಟುಂಬಗಳು ೧೦೦೧ ಮತ್ತು ೨೦೦೦ ರೂಗಳು ಹಾಗೂ ಶೇಕಡ ೧೬ರಷ್ಟು ಕುಟುಂಬಗಳು ೨೦೦೦ ರೂ ಮತ್ತು ಅದಕ್ಕೆ ಹೆಚ್ಚಿನ ಆದಾಯವುಳ್ಳ ಗುಂಪುಗಳಿಗೆ ಸೇರಿವೆ. ೧೯೭೪ರಲ್ಲಿ ೫೦೦ ರೂ ಮತ್ತು ಅದಕ್ಕೂ ಕಡಿಮೆ ಆದಾಯವುಳ್ಳವರು ಶೇಕಡಾ ೫ ರಷ್ಟು ಕುಟುಂಬಗಳು ಮಾತ್ರ ಇದ್ದದ್ದು ಗಮನಕ್ಕೆ ಬಂದಿದೆ. ೫೦೧ ಮತ್ತು ೧೦೦೦ರೂ ಆದಾಯವುಳ್ಳ ಕುಟುಂಬಗಳು ಶೇಕಡ ೩೧ರಷ್ಟು ಇದ್ದುವು: ಶೇಕಡ ೨೪ ರಷ್ಟು ಕುಟುಂಬಗಳು ೧೦೦೧ ಮತ್ತು ೨೦೦೦ರೂ ಆದಾಯವುಳ್ಳವುಗಳು. ಶೇಕಡ ೪೦ರಷ್ಟು ಕುಟುಂಬಗಳು ೨೦೦೦ ರೂ.ಗೂ ಮೇಲ್ಪಟ್ಟು ಆದಾಯವುಳ್ಳ ಗುಂಪಿಗೆ ಸೇರಿದುವು. ಗಣನೀಯವಾದ ಈ ಹೆಚ್ಚುವರಿ ಆದಾಯ ಅವರ ದೈನಂದಿನ ಜೀವನ ಮತ್ತು ವಿಚಾರಗಳಲ್ಲಿ ಬದಲಾವಣೆಗಳನ್ನುಂಟು ಮಾಡಿವೆ.

ಈ ಹಳ್ಳಿಯಲ್ಲಿ ಹಣವನ್ನು ಬಡ್ಡಿ ವ್ಯವಹಾರದಲ್ಲಿ ತೊಡಗಿಸುವ ಪದ್ಧತಿ ತೊಡಕಿನದಾಗಿದೆ. ಹಣವನ್ನು ಸಾಲವಾಗಿ ಕೊಡುವವರು ಬಹುಮಟ್ಟಿಗೆ ಹಿರಿಯ ಭೂಮಾಲಿಕರು. ಸಾಮಾನ್ಯವಾಗಿ ಇವರು (ಶೇ. ೫) ಶಕ್ತಿಶಾಲಿಯಾದ ಜಾತಿಗೆ ಸೇರಿದ್ದು ಹೆಚ್ಚಿನ ಅಧಿಕಾರವನ್ನು ಚಲಾಯಿಸುತ್ತಿದ್ದು ಗೌರವಾನ್ವಿತ ವ್ಯಕ್ತಿಗಳೆನಿಸಿಕೊಂಡಿದ್ದರು. ವಿಪರೀತ ಬಡ್ಡಿಯನ್ನು ಅವರು ವಸೂಲು ಮಾಡುತ್ತಿದ್ದ ಕಾರಣ ಅನೇಕ ಬಡರೈತರು ನಿರ್ಗತಿಕರಾದರು. ಕಡಿಮೆ ಆದಾಯವುಳ್ಳವರೂ ಬಡವರೂ ಸಾಲ ತೀರಿಸಲು ಅಶಕ್ತರಾಗಿದ್ದರು. ೧೯೫೦ರಲ್ಲಿ ಸ್ಥಾಪನೆಗೊಂಡ ಸಹಕಾರ ಸಂಘಗಳು ಅಲ್ಪಾದಾಯದ ಜನರ ತೊಂದರೆಗಳನ್ನು ಹೆಚ್ಚಿನಮಟ್ಟಿಗೆ ನಿವಾರಿಸಿಲ್ಲ. ಜನರ ತುರ್ತು ಬೇಡಿಕೆಗಳನ್ನು ಪೂರೈಸುವುದರಲ್ಲಿ ಅದು ಸೋತಿದೆ. ಸಹಕಾರ ಸಂಘಗಳಿಂದ ಸಾಲವನ್ನು ಪಡೆಯಲು ಅನೇಕ ನಿಯಮಗಳನ್ನು ಪಾಲಿಸಬೇಕು. ತುರ್ತಿನ ವೇಳೆಯಲ್ಲಿ ಈ ಎಲ್ಲ ನಿಯಮಗಳನ್ನು ಪೂರೈಸುವುದು ಕಷ್ಟವೆಂದೂ ಅದರ ಪರಿಣಾಮವಾಗಿ ಸಾಲವಿತರಣೆ ತಡವಾಗುವುದೆಂದೂ ಜನ ಹೇಳುತ್ತಾರೆ. ಇದು ಸಾಲ ನೀಡುವವರಿಗೆ ಉಪಯೋಗವಾಗಿ ಪರಿಣಮಿಸಿದೆ. ಕಡಿಮೆ ಆದಾಯವುಳ್ಳವರು ತಮ್ಮ ಹದಿನೈದನೆ ಒಂದು ಭಾಗ ಭೂಮಿಯನ್ನು

ಸಾಲ ನೀಡುವವರಿಗೆ ಭೋಗ್ಯಕ್ಕೆ ಬಿಟ್ಟುಕೊಡುತ್ತಾರೆ. ಹೆಚ್ಚು ಬಡ್ಡಿದರದ ಮೇಲೆ ಸಾಲ ತೆಗೆದುಕೊಳ್ಳುವುದರಿಂದ ಸಾಲ ತೀರುವ ಬದಲು ಹೆಚ್ಚುತ್ತಾ ಹೋಗುತ್ತದೆ. ಬೆಳೆಗಳಲ್ಲಿ ನಷ್ಟ, ಕುಟುಂಬದಲ್ಲಿ ಮದುವೆ, ಅನಾರೋಗ್ಯ ಇತ್ಯಾದಿಗಳು ನಿಗದಿಯಾದ ವೇಳೆಗೆ ಸಾಲವನ್ನು ಪರಿಹರಿಸುವಲ್ಲಿ ಅಡಚಣೆಯಾಗುತ್ತವೆ. ಅವರು ಎಂದೆಂದಿಗೂ ಸಾಲಗಾರರಾಗಿಯೇ ಉಳಿಯುವಂತಾಗುತ್ತದೆ.

ಅಧ್ಯಯನಕ್ಕೊಳಪಟ್ಟ ಈ ಎರಡು ಹಳ್ಳಿಗಳ ಸಾಮಾಜಿಕ ಬದಲಾವಣೆಗಳನ್ನು ಗಮನಿಸಿದಾಗ ಕೆಲವು ಸಿದ್ಧಾಂತಗಳನ್ನು ರೂಪಿಸಬಹುದು. ಆರ್ಥಿಕ ಮತ್ತು ಸಾಮಾಜಿಕ ಜೀವನಕ್ಕೆ ಮಾದರಿಯಾದ ರೈತಸಮುದಾಯ ರಕ್ತಸಂಬಂಧ, ಅತಿಯಾದ ಕಟ್ಟುನಿಟ್ಟಿನ ಸಾಮಾಜಿಕ ರಚನೆ ಮತ್ತು ಸಮಾನತೆಯ ಅದ್ವಿತೀಯ ವಿಶೇಷ ಗುಣಗಳನ್ನು ಹೊಂದಿವೆ. ಔದ್ಯೋಗೀಕರಣ, ನಾಗರಿಕತೆ ಮತ್ತು ಬೇರೆ ನಾಗರಿಕ ಜನರ ಸಂಪರ್ಕ ಇತ್ಯಾದಿಗಳು ರೈತ ಸಮುದಾಯದಲ್ಲಿದ್ದ ಈ ವಿಶೇಷಗುಣಗಳು ಬದಲಾವಣೆ ಹೊಂದಲು ಪ್ರೋತ್ಸಾಹಿಸುತ್ತಿವೆ. ಸರ್ಕಾರ ಅನುಸರಿಸಿರುವ ಅನೇಕ ನೀತಿಗಳೂ ಈ ಬದಲಾವಣೆಗೆ ಕಾರಣವಾಗಿವೆ.

ಸಂಪ್ರದಾಯಬದ್ಧ ರೈತ ಸಮುದಾಯದ ಕುಟುಂಬಗಳಲ್ಲಿ ಬದಲಾವಣೆಗಳಾಗುತ್ತಿವೆ. ಅವಿಭಕ್ತ ಕುಟುಂಬಗಳಲ್ಲಿ ಆಚರಿಸಲಾಗುತ್ತಿದ್ದ ಅನೇಕ ಸಮಾರಂಭಗಳು ಕುಟುಂಬದವರ ವ್ಯಕ್ತಿತ್ವವನ್ನು ರೂಪಿಸಲು ಹೇತುಗಳಾಗಿದ್ದುವಲ್ಲದೆ ರೈತ ಸಮುದಾಯದ ಪ್ರತಿಯೊಬ್ಬನ ಏಳಿಗೆಯೂ ಆಗಿತ್ತು. ಆದರೆ ಸ್ವತಂತ್ರ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವ ಪ್ರವೃತ್ತಿಯಿಂದ ಅವಿಭಕ್ತಕುಟುಂಬದ ಸದಸ್ಯರಲ್ಲಿ ಋಜುತ್ವ ಕಡಿಮೆಯಾಗುತ್ತಿದೆ. ರೈತ ಸಮುದಾಯದ ಆಧುನಿಕ ಯುವಕರ ಬೇಡಿಕೆಗಳನ್ನು ಪೂರೈಸಲು ಅವಿಭಕ್ತಕುಟುಂಬಗಳು ಅಸಮರ್ಥವಾಗಿವೆ. ಇದರ ಪರಿಣಾಮವಾಗಿ ಕುಟುಂಬದ ಯಜಮಾನನ ಪ್ರಶ್ನಾತೀತವಾದ ಹಕ್ಕಿಗೇ ಚ್ಯುತಿಬಂದಿದೆ. ಇದರಿಂದ ಅವಿಭಕ್ತಕುಟುಂಬ ಪದ್ಧತಿಯು ಒಡೆಯುತ್ತಿದೆ ಹಾಗೂ ಭೂಮಿಯ ಹಂಚಿಕೆಯೂ ಅನಿವಾರ್ಯವಾಗಿದೆ. ಭೂಮಿ, ಜಾನುವಾರು, ಧಾನ್ಯ ಮತ್ತು ವ್ಯವಸಾಯೋಪಕರಣ ಇತ್ಯಾದಿಗಳು ವಿಭಜಿಸಲ್ಪಡುತ್ತಿವೆ. ಅಂತಹ ಸಂದರ್ಭಗಳಲ್ಲಿ ಘರ್ಷಣೆಗಳುಂಟಾಗಿ ಈ ಪ್ರವೃತ್ತಿ ಪ್ರತಿಕೂಲ ಪರಿಸ್ಥಿತಿಯನ್ನುಂಟುಮಾಡುತ್ತಿವೆ. ಅವಿಭಕ್ತಕುಟುಂಬದ ಉನ್ನತಿಗೆ ಅಡ್ಡಿಯನ್ನುಂಟುಮಾಡಿದೆ. ಸಾಮಾನ್ಯವಾಗಿ ವ್ಯವಸಾಯಕ್ಕೆ ಅವಶ್ಯಕವಾದ ಮನುಷ್ಯಬಲ ದೊರೆಯದೆ ತೊಂದರೆಗಳುಂಟಾಗಿವೆ. ಅವಿಭಕ್ತ ಕುಟುಂಬಗಳು ವಿಭಕ್ತಗೊಳ್ಳುವುದರಿಂದ ಜಾನುವಾರಗಳ ಮತ್ತು ಸಲಕರಣೆಗಳ ಅಭಾವ ಉಂಟಾಗುತ್ತದೆ. ವ್ಯವಸಾಯ ಹೆಚ್ಚು ಕಡಿಮೆ ಒಟ್ಟಾಗಿ ಮಾಡುವ ಕೆಲಸ. ಬೇರೆಯಾಗುವುದರಿಂದ ಕೆಲಸಗಾರರ ಸಂಖ್ಯೆ ಇಳಿಮುಖವಾಗಿದೆ. ಇದು ವ್ಯವಸಾಯಕ್ಕೆ ಧಕ್ಕೆಯನ್ನುಂಟುಮಾಡಿದೆ. ವಿಭಕ್ತ ಕುಟುಂಬಗಳಲ್ಲಿ ಸಾಕಷ್ಟು ವ್ಯವಸಾಯೋಪಕರಣಗಳಾಗಲೀ ಸಂಘಶಕ್ತಿಯಾಗಲೀ ಇಲ್ಲದಾಗಿದೆ. ಅವರ ಭೂಮಿಯ ಪ್ರಮಾಣವೂ ಅಲ್ಪವೇ. ಆದ್ದರಿಂದ ಅವಿಭಕ್ತ ಕುಟುಂಬಗಳ ವಿಭಕ್ತ ಪದ್ಧತಿಯು ವ್ಯವಸಾಯ ಉತ್ಪಾದನೆಗೆ ಮಾರಕವಾಗಿ ಪರಿಣಮಿಸಿದೆ.

ಅವಿಭಕ್ತಕುಟುಂಬಗಳು ವಿಭಕ್ತಗೊಳ್ಳುವ ಪ್ರವೃತ್ತಿಯೊಂದಿಗೆ ತಮ್ಮ ಸಂಸಾರವನ್ನು ಮಿತಿಗೊಳಿಸಲು ಸಂತಾನನಿಯಂತ್ರಣ ಪದ್ಧತಿಯನ್ನು ಒಪ್ಪುವ ಪ್ರವೃತ್ತಿಯೂ ಕಂಡುಬಂದಿದೆ. ವಿಭಕ್ತಗೊಂಡ ಕುಟುಂಬಗಳ ಯಜಮಾನರಿಗೆ ತಮ್ಮ ಜವಾಬ್ದಾರಿಯ ಅರಿವು ಮೂಡಿರುವುದೂ ಇದಕ್ಕೆ ಕಾರಣವಿರಬಹುದು.

ರೈತ ಸಮುದಾಯದ ಆರ್ಥಿಕ ಪರಿಸ್ಥಿತಿಯಲ್ಲಿ ಗಣನೀಯವಾದ ಅಭಿವೃದ್ಧಿಯನ್ನು ಕಾಣಬಹುದು. ಹೆಚ್ಚುತ್ತಿರುವ ಸಂಪರ್ಕಸಾಧನಗಳು, ಉದ್ಯೋಗಾವಕಾಶಗಳು, ಆಹಾರಧಾನ್ಯಗಳ ಬೆಳೆಯಲ್ಲಿ ಏರಿಕೆ, ಉತ್ತಮವಾದ ಮಾರುಕಟ್ಟೆ ಸೌಲಭ್ಯ ಮತ್ತು ಮುಂದುವರಿದ ವ್ಯವಸಾಯ ಪದ್ಧತಿಗಳು ಇದಕ್ಕೆ ಮುಖ್ಯಕಾರಣಗಳು.

ರೈತ ಸಮುದಾಯದಲ್ಲಿ ಅನೇಕ ಪ್ರಾಚೀನ ಪದ್ಧತಿಗಳು ಮಾಯವಾಗುತ್ತಿವೆ. ಆದರೆ ಅವುಗಳ ಸ್ಥಾನದಲ್ಲಿ ನವೀನ ಮಾದರಿಗಳು ತಲೆದೋರಿಲ್ಲ. ಎಲ್ಲಾ ಮಾದರಿಗಳು ತಲೆದೋರಿ ಹಳೆಯ ಹಾಗೂ

ಹೊಸದರ ಮಿಶ್ರಣವಾಗಿದೆ. ಧರ್ಮದ ಬಗೆಗಿರುವ ರೈತ ಸಮುದಾಯದ ಭಾವನೆಗಳಲ್ಲಿ ಇದು ಹೆಚ್ಚು ಸ್ಪಷ್ಟವಾಗಿ ಕಂಡುಬಂದಿದೆ.

ರೈತ ಸಮುದಾಯದಲ್ಲಿ ರಾಜಕೀಯ ಜಾಗೃತಿ ಉಂಟಾಗಿದೆ. ಮೊದಲು ನ್ಯಾಯ ಪರಿಪಾಲನೆ ಮತ್ತು ರಾಜಕೀಯ ಸಮಾರಂಭಗಳು ಜಾತೀಯ ಸಂಸ್ಥೆಗಳ ಮೂಲಕ ನಡೆಯುತ್ತಿದ್ದುವು. ಆದರೆ ಈಗ ಈ ಸಮಾರಂಭಗಳನ್ನು ಪಂಚಾಯತಿಗಳು ವಹಿಸಿಕೊಂಡಿವೆ. ಅದರಿಂದಾಗಿ ಜಾತಿ ಪಂಚಾಯತಿಗಳ ಪ್ರಾಮುಖ್ಯತೆ ಇಳಿಮುಖವಾಗಿದೆ. ಆದರೂ ಈ ಜಾತೀಯ ಸಂಸ್ಥೆಗಳ ಚಟುವಟಿಕೆಗಳು ರೈತ ಸಮುದಾಯದಲ್ಲಿ ಇನ್ನೂ ಕಂಡುಬಂದಿದ್ದು ಅವು ಪ್ರಜಾಪ್ರಭುತ್ವದ ವಿಕೇಂದ್ರೀಕರಣ ಪದ್ಧತಿಗೆ ಸವಾಲಾಗಿದೆ ಎಂಬುದನ್ನು ಈಗಲೂ ಸುಲಭವಾಗಿ ಗುರುತಿಸಬಹುದು. ಈಗಲೂ ಮೇಲು ಜಾತಿಗಳವರು ಮತ್ತು ಆರ್ಥಿಕವಾಗಿ ಹಾಗೂ ಸಂಖ್ಯಾಬಲದಲ್ಲಿ ಶಕ್ತಿಯುತರಾಗಿರುವವರು ಗ್ರಾಮ ಪಂಚಾಯತಿಯ ಅಧಿಕಾರ ನಡೆಸುತ್ತಿದ್ದಾರೆಂಬುದನ್ನೂ ಕಾಣಬಹುದಾಗಿದೆ.

ರೈತ ಸಮುದಾಯದ ಜೀವನವನ್ನು ಉತ್ತಮಗೊಳಿಸುವ ಸಲುವಾಗಿ ಸರಕಾರದಿಂದ ಪೋಷಿತವಾದ ಅನೇಕ ಸಂಸ್ಥೆಗಳು ಮುಂದೆ ಬಂದಿವೆ. ರೈತರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ಅವು ಉತ್ತಮಗೊಳಿಸಿವೆ. ಆದರೂ ಸಮರ್ಥರಾದ ಮತ್ತು ಹೆಚ್ಚು ಭೂಮಿಯುಳ್ಳ ರೈತರು ಸಣ್ಣ ರೈತರಿಗೆ ಲಭಿಸಬಹುದಾದ ಲಾಭಗಳನ್ನು ಈ ಸಂಘಗಳ ಮೂಲಕ ದುರುಪಯೋಗಪಡಿಸಿಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಸಣ್ಣ ಹಿಡುವಳಿದಾರರು ಹೆಚ್ಚು ಲಾಭವನ್ನು ಹೊಂದುತ್ತಿಲ್ಲವೆಂಬುದನ್ನು ಯಾರಾದರೂ ಕಾಣಬಹುದು. ಮೇಲಿನ ಜಾತಿಯವರು ಹೆಚ್ಚು ಶಕ್ತಿಶಾಲಿಗಳಾಗಿ, ಕೀಳುಜಾತಿಯವರು ಶಕ್ತಿಗುಂದುತ್ತಿರುವುದನ್ನೂ ಮತ್ತು ಶಕ್ತರು ಹೆಚ್ಚು ಶಕ್ತರಾಗುತ್ತಾ, ದುರ್ಬಲರು ಇನ್ನೂ ದುರ್ಬಲರಾಗುತ್ತಿರುವುದನ್ನೂ ನಾವು ಕಾಣಬಹುದಾಗಿದೆ.

ಪ್ರಧಾನ್ ಗುರುದತ್ತ

ಭಾಷಾಂತರ ಉದ್ಯಮ-೧

ಭಾಷಾಂತರದ ಸಿದ್ಧಾಂತ ಹಾಗೂ ಆಚರಣೆ (ಅಥವಾ ಅನುಷ್ಠಾನ)ಗಳೆರಡಕ್ಕೂ ಆಗೊಮ್ಮೆ ಈಗೊಮ್ಮೆ ಪ್ರಚಾರ ದೊರೆಯುತ್ತಿರುತ್ತದೆ; ಇವುಗಳಲ್ಲಿ ಒಂದಕ್ಕೆ ಭಾಷಾವಿಜ್ಞಾನಿಗಳಿಂದಲೂ, ಇನ್ನೊಂದಕ್ಕೆ ಸಕ್ರಿಯ ಭಾಷಾಂತರಕಾರರಿಂದಲೂ ಪ್ರಚಾರ ದೊರೆಯುತ್ತಿರುತ್ತದೆ. ಆದರೆ, ಸಾಕೂ–ಸಾಲದೆಂಬಂತೆ—ಅದೂ ಹಾಗೆ ಮಾಡಿದಲ್ಲಿ ಮಾತ್ರ—ದಾಖಲಿಸಲಾಗುವ ಅಂಶವೆಂದರೆ ಭಾಷಾಂತರದ ವ್ಯವಹಾರ: ಅಂದರೆ ಒಂದು ಭಾಷೆಯಲ್ಲಿ ಹಾಗೂ ಒಂದು ದೇಶದಲ್ಲಿ ಪ್ರಕಟವಾದ ಪುಸ್ತಕಗಳಲ್ಲಿನ ಅತ್ಯಲ್ಪ ಪ್ರಮಾಣದಷ್ಟು ಪುಸ್ತಕಗಳು ಅಂತಿಮವಾಗಿ ಬೇರೊಂದು ಭಾಷೆ ಹಾಗೂ ದೇಶದಲ್ಲಿನ ಪ್ರಕಾಶಕನ ಪಟ್ಟಿಯಲ್ಲಿ ಕಾಣಿಸಿಕೊಳ್ಳುವ ಪ್ರಕ್ರಿಯೆ ಸಾಕೂ ಸಾಲದೆಂಬಂತೆ ದಾಖಲಿತವಾಗಿರುತ್ತದೆ. ಈ ಪುಸ್ತಕಗಳನ್ನು ಓದುವಂಥ ಜನ, ಪ್ರಯೋಜನಕಾರಿಯಾದಂಥ ಸೂಕ್ಷ್ಮಾಭಿಸರಣ ಪ್ರಕ್ರಿಯೆಯಿಂದ ಭಾಷಾಂತರ ಕಾರ್ಯ ನಡೆಯುತ್ತಿರುತ್ತದೆ ಹಾಗೂ ಅದರ ಬಗೆಗೆ ವಿಚಾರಣೆ ನಡೆಸುವಂಥ ಅಗತ್ಯವಿಲ್ಲವೆಂಬಂಥ ಆಲಸ್ಯಜನ್ಯ–ವಿಶ್ವಾಸವನ್ನು ಮೂಡಿಸಿಕೊಳ್ಳುವ ಹಕ್ಕಿಗೆ ಬಹುಶಃ ಅರ್ಹರಾಗಿರುತ್ತಾರೆ. ಮತ್ತೊಂದು ದೇಶದ ಸಾಹಿತ್ಯಿಕ ಜೀವನದ ಬಗೆಗಿನ ಸಾಕಷ್ಟು ವ್ಯಾಪಕವಾದ ಅರಿವನ್ನು ಹೊಂದಿರುವ ಯಾವುದೇ ವ್ಯಕ್ತಿ, ಇದರ (ಅಂದರೆ ಭಾಷಾಂತರ ವ್ಯವಹಾರದ) ವಿಶಿಷ್ಟ ಗುಣಗಳನ್ನು ಅಲಕ್ಷಿಸಲಾಗಿದೆ ಅಥವಾ ತಪ್ಪಾಗಿ ನಿರೂಪಿಸಲಾಗಿದೆ ಎಂದು ಯೋಚಿಸತೊಡಗಿದಾಗ ಹಾಗೂ ಇದಕ್ಕೆ ಕಾರಣರಾಗಿರುವ ಅಪರಾಧಿಗಳನ್ನು ಬೆಟ್ಟುಮಾಡಿ ತೋರಿಸಬಹುದೆಂಬ ಭರವಸೆಯಿಂದ ಚೋದಿತನಾದಾಗ ಅಡಿಗಡಿಗೆ ಆತಂಕಕ್ಕೊಳಗಾಗುತ್ತಾನೆ.

ಯುನೆಸ್ಕೋ ಸಂಗ್ರಹಿಸಿ ಪ್ರಕಟಿಸುವ Index Traslationum' ಪ್ರತಿವರ್ಷವೂ ಹಿಂದಿನ ಹನ್ನೆರಡು ತಿಂಗಳುಗಳಲ್ಲಿ ಪ್ರಕಟವಾದ ಭಾಷಾಂತರಗಳ ಸಂಖ್ಯೆಯನ್ನೂ, ಪುಸ್ತಕಗಳ ಶೀರ್ಷಿಕೆಗಳನ್ನೂ, ತೃಪ್ತಿಕರವೆನ್ನಬಹುದಾದಷ್ಟು ಸಮಗ್ರ ರೂಪದಲ್ಲಿ, ದಾಖಲಿಸುತ್ತದೆ; ಈ 'ಸಮಷ್ಟಿ ಸೂಚಿ'ಯಲ್ಲಿನ ವಿವಿಧ ರಾಷ್ಟ್ರಗಳ ತೌಲನಿಕ ನೆಲೆಬೆಲೆಗಳನ್ನು ಸಾಂಸ್ಕೃತಿಕ ಪ್ರತ್ಯೇಕತೆಯ ಸೂಚ್ಯಂಕವಾಗಿ ಯಾರಾದರೂ ಒಬ್ಬರು, ಎಲ್ಲಿಯಾದರೂ ಒಂದು ಕಡೆ ಉಪಯೋಗಿಸುತ್ತಲೇ ಇರುತ್ತಾರೆ. ಆದರೆ, ಈ ಉದ್ಯಮವನ್ನು ಯಾವ ರೀತಿಯಲ್ಲಿ ನಡೆಸಲಾಗುತ್ತಿದೆ ಎಂಬುದರ ಬಗೆಗೆ ಪೂರಕ ಅಧ್ಯಯನವೇನನ್ನೂ ಕೈಗೊಳ್ಳದಿರುವಾಗ, ಭಾಷಾಂತರ ಉದ್ಯಮದ ಒಟ್ಟಾರೆ ಉತ್ಪಾದನೆ ಎಷ್ಟು ಎಂಬುದನ್ನು ಲೆಕ್ಕ ಹಾಕುವುದು ಸ್ವತಃ ಭ್ರಮಾತ್ಮಕವೂ, ವಿಘ್ನಕಾರಕವೂ ಆಗುತ್ತದೆ.

ಹೀಗಾಗಿ, ಸಾಹಿತ್ಯಿಕ ಪ್ರಕಟಣೆಗಳ ಬಗೆಗೆ ಬ್ರಿಟಿಷ್ ಪ್ರಕಾಶಕರ ಧೋರಣೆಗಳು ಮತ್ತು ವಾಡಿಕೆಗಳನ್ನು ಕುರಿತಂತೆ ಸಂಬದ್ಧ–ವಸ್ತುಸ್ಥಿತಿ–ಮಾಹಿತಿಯನ್ನು ಕಲೆಹಾಕುವ ಉದ್ದೇಶದಿಂದ, ನಾವೇ ಸಿದ್ಧಪಡಿಸಿದ್ದ ಪ್ರಶ್ನಾವಳಿಯೊಂದನ್ನು, ಈ ಬೇಸಿಗೆಯ ಮೊದಲಲ್ಲೇ ಅವರಿಗೆ ಕಳುಹಿಸಿದೆವು. ಅದು 'ಗೃಹ–ನಿರ್ಮಿತ'ವಾಗಿದ್ದುದರಿಂದ ಅಂದರೆ ನಾವೇ ಸಿದ್ಧಪಡಿಸಿದ ಪ್ರಶ್ನಾವಳಿಯಾಗಿದ್ದುದರಿಂದ, ಅದರ 'ವಿಧಾನ' ನಿಜಕ್ಕೂ ದುರ್ಬಲವಾಗಿತ್ತು. ಆದರೆ, ಲಂಡನ್ನಿನ ಇಪ್ಪತ್ತೆರಡು ಮಂದಿ ಪ್ರಕಾಶಕರು

ಪೂರ್ಣವಾಗಿಯೋ, ಆಂಶಿಕವಾಗಿಯೋ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಿದ್ದರು. ಇದಕ್ಕಾಗಿ–ಆದರಲ್ಲಿಯೂ ತಮ್ಮ ದಾಖಲೆಗಳನ್ನು ಪರಿಶೀಲಿಸಿ ಉತ್ತರ ಕೊಡಬೇಕಾಗಿದ್ದಂಥ ಭಾಗಗಳನ್ನು ಉತ್ತರಿಸಿದ್ದಕ್ಕಾಗಿ–ಅವರಿಗೆ ನಮ್ಮ ವಂದನೆಗಳನ್ನು ಸಲ್ಲಿಸುತ್ತೇವೆ.

'Times Literary Supplement ನ ಈ ಸಂಚಿಕೆ ಹಾಗೂ ಮುಂದಿನ ವಾರದ ಸಂಚಿಕೆಗಳಲ್ಲಿ ನಾವು ಕೊಡಲಿರುವ, ಉತ್ತರಗಳ ಸಂಬದ್ಧ ಜೋಡಣೆ ವ್ಯಾಖ್ಯಾನಾತ್ಮಕ ಸ್ವರೂಪದ್ದೇ ಹೊರತು, ತಾಂತ್ರಿಕ ಸ್ವರೂಪದ್ದಲ್ಲ; ಏಕೆಂದರೆ, ನಾವು ಸಂಗ್ರಹಿಸಿದ್ದ ಅಂಕಿ–ಅಂಶಗಳನ್ನು ಸಾರಣೀಕರಿಸಿದ್ದಲ್ಲಿ ಅಥವಾ ರೇಖಾಚಿತ್ರಗಳಾಗಿ ಅವುಗಳನ್ನು ಜಗ್ಗಿಸಿ–ಅಳವಡಿಸಿದಲ್ಲಿ ಸ್ವಯಂಪ್ರೇರಿತ ಸಂಶೋಧನೆಯ ಕಾರ್ಯವೊಂದಕ್ಕೆ ಆದಕ್ಕೆ ಅರ್ಹತೆಯೇ ಇಲ್ಲದಂಥ ಆಧಿಕಾರಿಕತೆಯನ್ನು ತಂದು ಕೊಡುವಂಥ ಉಬ್ಬಿಸಿ–ಮೇಲೆ ತಳ್ಳುವ ಕ್ರಮವಾಗುತ್ತಿತ್ತು. ಹಾಗೆ ಮಾಡುವುದಕ್ಕೆ ಬದಲಾಗಿ ಸಾಧ್ಯವಾದಲ್ಲೆಲ್ಲ ಈ ಮಾಹಿತಿಯನ್ನು ವ್ಯಾಖ್ಯಾನಕ್ಕೆ, ವಿಚಾರ–ವಿಮರ್ಶೆಗೆ ನೆಪವಾಗಿ ಬಳಸಿಕೊಂಡಿದ್ದೇವೆ. ನಮ್ಮ ಎರಡು ಲೇಖನಗಳು ಭಾಷಾಂತರ ಉದ್ಯಮದ ವಿವರಣೆ ಮಾತ್ರವಾಗಬೇಕೆಂದು ಉದ್ದೇಶಿಸಿಲ್ಲ.

* * * *

ನಮ್ಮ ಈ ಮಾದರಿ–ಪ್ರಕಾಶಕರು ಪ್ರತಿವರ್ಷ ಹೊರತಂದ ಸಾಹಿತ್ಯಕೃತಿಗಳ ಭಾಷಾಂತರಗಳ ಸಂಖ್ಯೆ ಎಷ್ಟು ಎಂಬುದರ ಪರಿಗಣನೆಯೇ ಇಂಥ ವಿಚಾರಣೆಯೊಂದನ್ನು ಪ್ರಾರಂಭಿಸಲು ಅತ್ಯಂತ ತರ್ಕಸಮ್ಮತವಾದ ಎಡೆಯಾಗುತ್ತದೆ. ಈ ಮಾದರಿ ಶುದ್ಧವಾದುದಾಗಲೀ, ವೈಜ್ಞಾನಿಕವಾದುದಾಗಲೀ, ಯಾದೃಚ್ಛಿಕವಾಗಿ ಅತ್ಯಂತ ಎಚ್ಚರಿಕೆಯಿಂದ ಆಯ್ದುದಾಗಲೀ ಆಗಿರಲಿಲ್ಲ; ನಮ್ಮ ಅನುಕೂಲಕ್ಕನುಗುಣವಾಗಿ ಹಾಗೂ ನಿರಾಶೆಗೆ ಎಡೆದೊರೆಯಬಾರದೆಂಬುವಾಗಿ ನಾವೇ ಉದ್ದೇಶಪೂರ್ವಕವಾಗಿ ಮಾಡಿದ್ದ ಆಯ್ಕೆ ಅದು; ಏಕೆಂದರೆ, ಹೀಗೆ ಆಯ್ದುಕೊಂಡಿದ್ದ ಸಂಸ್ಥೆಗಳೆಲ್ಲ ನಿಯತವಾಗಿ ಹಾಗೂ ಗಣನೀಯ ಪ್ರಮಾಣದಲ್ಲಿ ಭಾಷಾಂತರಗಳನ್ನು ಹೊರತರುವುದರಲ್ಲಿ ಪ್ರಸಿದ್ಧವಾಗಿದ್ದಂಥವೆ. ಅವುಗಳಲ್ಲಿ ಹತ್ತೊಂಬತ್ತು ಸಂಸ್ಥೆಗಳು ನಮ್ಮ ಪ್ರಶ್ನಾವಳಿಯ ಮೊದಲ ಭಾಗಕ್ಕೆ ವಿವರವಾಗಿ ಉತ್ತರಗಳನ್ನು ಕೊಟ್ಟುವು.

ಹಿಂದಿನ ಐದು ವರ್ಷಗಳಲ್ಲಿ ಅವು ಪ್ರಕಟಿಸಿದ ಭಾಷಾಂತರಗಳ ಸರಾಸರಿ ಸಂಖ್ಯೆ ೧೧ರಿಂದ ೧೨ ಆಗಿದ್ದುದಾಗಿ ತಿಳಿಯಬಂದಿತು. ಯಾವುದೇ ಒಬ ಪ್ರಕಾಶಕನ ಅತ್ಯಂತ ಹೆಚ್ಚಿನ ಸರಾಸರಿ ೩೦ ಆಗಿತ್ತು. ಅತ್ಯಂತ ಕಡಿಮೆ ಸರಾಸರಿ ೧ ಆಗಿತ್ತು. ವರ್ಷವೊಂದಕ್ಕೆ ಪ್ರಕಾಶಕನೊಬ್ಬನ ಸರಾಸರಿ ೧೧ ರಿಂದ ೧೨ ಭಾಷಾಂತರಗಳು ಎಂಬ ಸಂಖ್ಯೆಯೇನೋ ಪ್ರಶಂಸಾರ್ಹವಾಗಿ ತೋರುತ್ತದೆ. ಆದರೆ ಅದೇ ಅವಧಿಯಲ್ಲಿನ ಅದೇ ಪ್ರಕಾಶಕನ ಒಟ್ಟಾರೆ ಹೊಸ ಪ್ರಕಟಣೆಗಳನ್ನೂ ದೃಷ್ಟಿಯಲ್ಲಿರಿಸಿಕೊಂಡು ಈ ಸರಾಸರಿಯನ್ನು ಮತ್ತೆ ಲೆಕ್ಕಹಾಕುವುದು ಅಗತ್ಯವಾಗುತ್ತದೆ. ಎಲ್ಲ ಪುಸ್ತಕಗಳನ್ನೂ ದೃಷ್ಟಿಯಲ್ಲಿರಿಸಿಕೊಂಡು ಭಾಷಾಂತರದ ಪ್ರಮಾಣವನ್ನು ಲೆಕ್ಕ ಹಾಕಿದಾಗ ಈ ೧೯ ಮಂದಿ ಪ್ರಕಾಶಕರ ಒಟ್ಟಾರೆ ಸರಾಸರಿ ಬಹುಮಟ್ಟಿಗೆ ಹಿಂದಿನಷ್ಟೇ–ಶೇ. ೧೧ಕ್ಕಿಂತ ಕೊಂಚ ಜಾಸ್ತಿ–ಆಗಿತ್ತು. ಯಾವುದೇ ಒಂದು ಸಂಸ್ಥೆಯ ಅತ್ಯಂತ ಹೆಚ್ಚಿನ ಸರಾಸರಿ, ವಿಕ್ರಮದ ಪ್ರತೀಕವಾಗಿದ್ದಂಥ "ಶೇ. ೩೩ರಿಂದ ೪೦" ಆಗಿತ್ತು; ಅತ್ಯಂತ ಕಡಿಮೆ ಸರಾಸರಿ ಎಂದಿನಂತೆ ಶೇ. ೧ ಆಗಿತ್ತು (ಪೂರ್ಣಾಂಕವಾಗಿ ಪರಿಗಣಿಸಲೂ ಸಾಧ್ಯವಾಗದಂಥ ಅತ್ಯಲ್ಪ ಸಂಖ್ಯೆಯನ್ನು ಸೌಮ್ಯೋಕ್ತಿಯ ರೂಪದಲ್ಲಿ ಹೀಗೆ ಸೂಚಿಸಿರುವ ಸಂಭವವೇ ಹೆಚ್ಚು).

ನಿಕಟ ಭವಿಷ್ಯವೆಂದು ಉಚಿತವಾಗಿ ಪರಿಗಣಿಸಬಹುದಾದ ಅವಧಿಯಲ್ಲಿ ತಾವು ಪ್ರಕಟಿಸುವುದಾಗಿ ಒಪ್ಪಂದ ಮಾಡಿಕೊಂಡಿರುವ ಭಾಷಾಂತರಗಳ ಸಂಖ್ಯೆ ಎಷ್ಟೆಂಬುದನ್ನೂ ತಿಳಿಸಬೇಕೆಂದು ನಾವು ಪ್ರಕಾಶಕರನ್ನು ಕೇಳಿಕೊಂಡಿದ್ದೆವು. ಈ ವಿಚಾರದಲ್ಲಿನ ಪ್ರತಿ ಪ್ರಕಾಶನಿ ಸರಾಸರಿ ೨೦ಕ್ಕಿಂತ ಸ್ವಲ್ಪ ಹೆಚ್ಚಾಗಿತ್ತು. ಇವುಗಳಲ್ಲಿ ಒಂದು ಸಂಸ್ಥೆ ೧೩೧ ಭಾಷಾಂತರಗಳು ಸಿದ್ಧವಾಗುತ್ತಿವೆಯೆಂದು ಹೇಳಿಕೊಂಡಿದ್ದರೆ ಮತ್ತೊಂದು ಸಂಖ್ಯೆ ಈ ಸಂಸ್ಥೆ ೫೦ ಎಂಬುವಾಗಿ ತಿಳಿಸಿತ್ತು. ಹಿಂದಿನ ವರ್ಷಗಳಲ್ಲಿನ ಪ್ರಕಟಣೆಗಳ ಅಂಕಿಅಂಶಗಳ ಜೊತೆಯಲ್ಲಿ ಈ ಭವಿಷ್ಯವಾಣಿಗಳನ್ನು ಹೆಗಲೆಣೆಯಾಗಿ ನಿಲ್ಲಿಸಲು ಸಾಧ್ಯವಾಗುವಂಥ ಅತ್ಯಂತ ಸಮಾಧಾನಕಾರವಾದ ಮಾರ್ಗವಾವುದೂ ಇಲ್ಲ. ಏಕೆಂದರೆ, ಮೊದಲನೆಯದಾಗಿ,

ಒಪ್ಪಂದಗಳಿನುಗುಣವಾಗಿ ನಿಯೋಜಿಸಲಾಗಿರುವ ಈ ಎಲ್ಲ ಭಾಷಾಂತರಗಳು ಚಾಚೂ ತಪ್ಪದಂತೆ ಪ್ರಕಟವಾಗುವ ಸಂಭವವಿರಲಿಲ್ಲ. ಅಷ್ಟೇ ಅಲ್ಲ "ಒಪ್ಪಂದ ಮಾಡಿಕೊಳ್ಳಲಾಗಿರುವ" ಎಂಬ ಶಬ್ದವನ್ನು ಪ್ರಶ್ನಾವಳಿಯಲ್ಲಿ ನಾವು ನಿರ್ದಿಷ್ಟವಾಗಿ ವಿವರಿಸಿರಲಿಲ್ಲ–ಅಂದರೆ "ಒಪ್ಪಂದ ಮಾಡಿಕೊಳ್ಳಲಾಗಿರುವ" ಎಂಬ ಶಬ್ದವನ್ನು ಮೂಲ ಪ್ರಕಾಶಕರಿಂದ ಪ್ರಕಟಣೆ ಹಕ್ಕುಗಳನ್ನು ಪಡೆದುಕೊಂಡಿರುವ ಗ್ರಂಥಗಳಿಗಾಗಿ ಬಳಸದೆ, ಭಾಷಾಂತರಕಾರರನ್ನು ಗೊತ್ತುಪಡಿಸಲಾಗಿರುವಂಥ ಗ್ರಂಥಗಳಿಗೆ ಮಾತ್ರ ಬಳಸಬೇಕೆಂದು ಸೂಚಿಸಿರಲಿಲ್ಲ. ಎರಡನೆಯದಾಗಿ, ೨೦ ಭಾಷಾಂತರಗಳನ್ನು ಹೊರತರಲು ಪ್ರಕಾಶಕನೊಬ್ಬನಿಗೆ ಎಷ್ಟು ಕಾಲ ಬೇಕಾಗಬಹುದೆಂಬುದನ್ನು ಗೊತ್ತುಪಡಿಸಲು 'ಮಧ್ಯಸ್ಥ ಅವಧಿ' ಯಾವುದೂ ಇಲ್ಲ; ಸ್ಪಷ್ಟವಾಗಿರುವ ಕಾರಣಗಳಿಂದಾಗಿ, ಸ್ವಭಾಷೆಯಲ್ಲಿ ಸ್ವತಂತ್ರ ಗ್ರಂಥವೊಂದನ್ನು ಹೊರತರುವುದಕ್ಕಿಂತಲೂ ಭಾಷಾಂತರವನ್ನು ಹೊರತರುವುದು ದೀರ್ಘ ಪ್ರಕ್ರಿಯೆ.

ಇಷ್ಟಾಗಿಯೂ, ೧೧ರಿಂದ ೧೨ ಭಾಷಾಂತರಗಳ ವಾರ್ಷಿಕ ಸರಾಸರಿಯ ಹಿನ್ನೆಲೆಯಲ್ಲಿ ಸರಾಸರಿ ೨೦ ಭಾಷಾಂತರಗಳು ಹೊರಬರಲಿರುವ ಸಂಭವ ಈ ಉದ್ಯಮ ನಿಕಟ ಭವಿಷ್ಯದಲ್ಲಿ ಬಹುಮಟ್ಟಿಗೆ ತನ್ನ ಇಂದಿನ ಪ್ರಮಾಣದಲ್ಲಿಯೇ ಮುಂದುವರಿಯುತ್ತದೆಂಬುದನ್ನು ಸೂಚಿಸುತ್ತದೆ. ಅಂದರೆ, ಭಾಷಾಂತರಗಳ ಪ್ರಕಟಣೆಯ ತಮ್ಮ ಶೇಕಡಾವಾರು ಪ್ರಮಾಣ ಏರುಪೇರಾಗದಂತೆ, ತಮ್ಮ ಭರವಸೆಗಳನ್ನು ಕಾರ್ಯರೂಪಕ್ಕೆ ತರಲು ಪ್ರಕಾಶಕರು ಎರಡು ವರ್ಷಗಳಿಗಿಂತ ಸ್ವಲ್ಪ ಕಡಿಮೆ ಸಮಯವನ್ನು ತೆಗೆದುಕೊಳ್ಳಬಹುದು. ಹೊಸ ಪುಸ್ತಕಗಳ ಒಟ್ಟಾರೆ ಪ್ರಕಟಣ ಸಂಖ್ಯೆ ಬದಲಾಗದೆ ಇರುತ್ತದೆಂಬ ಗ್ರಹಿಕೆಯ ಮೇಲೆ ಹೀಗೆ ಹೇಳಬಹುದಾಗಿದೆ.

ಈಗಾಗಲೇ ಕೊಟ್ಟಿರುವ ಅಂಕಿ ಅಂಶಗಳು ಪ್ರಕಾಶಕ–ಪ್ರಕಾಶಕರ ನಡುವೆ ಎಷ್ಟು ಅಗಾಧವಾದ ಕಂದರವಿದೆಯೆಂಬುದನ್ನು ಸ್ಪಷ್ಟಪಡಿಸುತ್ತವೆ. ಬಹುಪಾಲು ಭಾಷಾಂತರಗಳನ್ನು ಪ್ರಕಟಿಸುತ್ತಿದ್ದ ಸಂಸ್ಥೆಗಳೆಲ್ಲ ವಿಶೇಷೀಕರಣಕ್ಕೆ ಹೆಸರಾಗಿದ್ದಂಥವೇ. ಒಬ್ಬ ಮಕ್ಕಳ ಪುಸ್ತಕಗಳ ಪ್ರಕಾಶಕ, ಒಬ್ಬ ಕಲಾ ಪುಸ್ತಕಗಳ ಪ್ರಕಾಶಕ; ಮತ್ತೊಂದು ತೆಳುಹೊದಿಕೆ ಪುಸ್ತಕಗಳ ಪ್ರಕಾಶನ ಸಂಸ್ಥೆ. ಅವು ಪ್ರಕಟಣ ಕ್ಷೇತ್ರದಲ್ಲಿ ವಿಶೇಷೀಕರಣವನ್ನು ಸಾಧಿಸಿರುವುದರಿಂದಾಗಿ, ಪುಸ್ತಕಗಳು ತಮ್ಮ ವಿಶೇಷೀಕರಣ ಪ್ರವೃತ್ತಿಗೆ ಕೊಡುಗೆಯಾಗಬಲ್ಲವು ಹಾಗೂ ತಮ್ಮ ಮಾಲೆಯಲ್ಲಿ ಪ್ರಕಟಣೆಗೆ ಅರ್ಹವಾಗಿವೆ ಎಂಬುದು ದೃಢಪಟ್ಟಲ್ಲಿ ಅವು ಮೂಲತಃ ಯಾವ ಭಾಷೆಯಲ್ಲಿ ರಚಿತವಾಗಿವೆ ಎಂಬುದನ್ನು ಅವರು ಅಷ್ಟಾಗಿ ಗಮನಿಸದೆಯೂ ಇರಬಹುದು. ತುಂಬ ಮೆಚ್ಚುಗೆಗೆ ಪಾತ್ರನಾಗಿರುವಂಥ ವ್ಯಕ್ತಿ ವಿದೇಶಿ ಲೇಖಕನೋ ವಿದ್ವಾಂಸನೋ ಆಗಿದ್ದಾನೆಂದು ತನಗೆ ಮನವರಿಕೆಯಾದಲ್ಲಿ ಇಂಗ್ಲಿಷೇತರ ಭಾಷೆಗಳಲ್ಲಿನ ಗ್ರಂಥಗಳ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಳ್ಳಲು ತಾನು ಸದಾ ಸಿದ್ಧನಾಗಿರುವುದಾಗಿ ಒಬ್ಬ ಪ್ರಕಾಶಕ ತಿಳಿಸಿದ. ಅನೇಕ ಮಕ್ಕಳ ಪುಸ್ತಕಗಳು ಹಾಗೂ ಕಲೆಯ ಬಗೆಗಿನ ಪುಸ್ತಕಗಳ ವಿಷಯದಲ್ಲಾಗುವಂತೆ, ಪುಸ್ತಕದ ಪಠ್ಯಭಾಗ ಕಡಿಮೆಯಾಗಿದ್ದರೆ ಹೆಚ್ಚುವರಿ ವೆಚ್ಚ ಅಷ್ಟೇನೂ ಗಣನೀಯವಾಗಿರುವುದಿಲ್ಲ. ಪ್ರಕಾಶಕರಿಗೆ ಇಂತಿಷ್ಟು ಹಸ್ತಪ್ರತಿಗಳನ್ನು ಸಲ್ಲಿಸಲಾಗಿದೆ ಎಂಬುದಕ್ಕಿಂತ ಪ್ರಕಾಶಕರೇ ಇಂತಿಷ್ಟು ಗ್ರಂಥಗಳ ಪ್ರಕಟಣೆಯ ಸಂಬಂಧದಲ್ಲಿ ಕಾರ್ಯನಿಯೋಜನೆ ಮಾಡಿದ್ದಾರೆ ಎನ್ನುವ ಕ್ರಮ ಹೆಚ್ಚು ಜನಪ್ರಿಯವಾಗುತ್ತದೆ. (ಈ ಬೇಸಿಗೆಯಲ್ಲಿನ ತನ್ನ ವ್ಯವಹಾರದ ಶೇ. ೮೦ರಷ್ಟು ಭಾಗ ಕಾರ್ಯನಿಯೋಜನೆಯೇ ಆಗಿತ್ತು ಎಂಬುದಾಗಿ ಫ್ರೆಂಚ್ ಪ್ರಕಾಶಕನೊಬ್ಬ ತಿಳಿಸಿದ.) ಏಕೆಂದರೆ, ಲೇಖಕನ ನಾಡಿನಲ್ಲಿಯೇ ಅಥವಾ ಭಾಷಾಸಮುದಾಯದಲ್ಲಿಯೇ ಮೂಲ–ಅರ್ಥಾತ್ ಭಾಷಾಂತರವಾಗದ–ಪಠ್ಯವನ್ನು ಬೇರೊಬ್ಬ ಪ್ರಕಾಶಕನಿಗೆ ಮಾರಾಟ ಮಾಡುವುದರ ಮೂಲಕ ಹೆಚ್ಚುವರಿ ವೆಚ್ಚವನ್ನು ತುಂಬಿಕೊಳ್ಳಬಹುದು.

ಯಾವುದೋ ಒಂದು ಬಗೆಯ ಪುಸ್ತಕಗಳ ಪ್ರಕಟಣೆಯಲ್ಲಿ ಅಥವಾ ಪುಸ್ತಕಗಳ ಮಾರಾಟದಲ್ಲಿ ವಿಶೇಷೀಕರಣವನ್ನು ಸಾಧಿಸಿರುವ ಪ್ರಕಾಶಕರೇ ಅಲ್ಲದೆ, ನಮ್ಮ ಮಾದರಿ ಸರ್ವೇಕ್ಷಣದಲ್ಲಿ ಭಾಗವಹಿಸಿದ್ದ ಇನ್ನಿಬ್ಬರು ಪ್ರಕಾಶಕರು, ವಿದೇಶಗಳಲ್ಲಿನ ಸೃಜನಾತ್ಮಕ ಬರಹಕ್ಕೆ ವಿಶೇಷ ಪ್ರೋತ್ಸಾಹ ಕೊಡುವುದಕ್ಕೆ ಸಂಬಂಧಿಸಿದಂತೆ ದೀರ್ಘ ಕಾಲದಿಂದಲೂ ಹೆಸರು ಪಡೆದಿದ್ದ ಸಂಸ್ಥೆಗಳವರೇ ಆಗಿದ್ದರು. ಇಂಥ

ವಿಶಿಷ್ಟ ಸಂಸ್ಥೆಗಳು ಸಾಧಿಸಿದ ಪ್ರಕಟಣೆಯ ಶೇಕಡಾವಾರು ಅಂಕಿಅಂಶಗಳು. ನಾವು ಸಾದರ ಪಡಿಸಿರುವ ಜಾಗತಿಕ ಅಂಕಿಅಂಶಗಳ ಮೇಲೆ ತುಂಬ ಪ್ರಭಾವ ಬೀರಿವೆ: ಅದ್ದರಿಂದ ಒಟ್ಟಾರೆ ಬ್ರಿಟಿಷ್ ಪ್ರಕಟಣ ಪ್ರಪಂಚದ ವೈಲಕ್ಷಣ್ಯಗಳನ್ನು ಚಿತ್ರಿತೋರಿಸುವ ಸಲುವಾಗಿ ಈ ಅಂಕಿಅಂಶಗಳನ್ನು ವಿಸ್ತರಿಸಿಕೊಳ್ಳುವ ಅಥವಾ ಅನ್ವಯಿಸಿಕೊಳ್ಳುವ ಪ್ರಶ್ನೆಯೇ ಏಳುವುದಿಲ್ಲ. ಪ್ರತಿವರ್ಷವೂ ನಮ್ಮ ನಾಡಿನಲ್ಲಿ ಪ್ರಕಟವಾಗುವ ಪುಸ್ತಕಗಳಲ್ಲಿ ಶೇ. ೧೦ ರಿಂದ ೧೫ರಷ್ಟು ಪುಸ್ತಕಗಳು ಭಾಷಾಂತರಗಳಾಗಿರುತ್ತವೆಂದು ನಂಬುವುದು ಅತ್ಯಂತ ಅವಾಸ್ತವಿಕವಾಗುತ್ತದೆ. ೧೯೬೭ರ 'Index translationum ಅನ್ನು ಗಣನೆಗೆ ತೆಗೆದುಕೊಂಡರೆ, ಆ ವರ್ಷ ಇಂಗ್ಲೆಂಡಿನಲ್ಲಿ (ಯುನೈಟೆಡ್ ಕಿಂಗ್ಡಮ್‌ನಲ್ಲಿ) ೭೮೪ ಭಾಷಾಂತರಗಳು ಹೊರಬಂದಿದ್ದುವು. 'Book seller' ವರದಿಯ ಪ್ರಕಾರ ಅದೇ ವರ್ಷ ಒಟ್ಟಾರೆ ೨೨,೫೪೪ ಹೊಸ ಪುಸ್ತಕಗಳು ಪ್ರಕಟವಾಗಿದ್ದುವು. ವಿಭಿನ್ನ ಆಕರಗಳಿಂದ ಅಥವಾ ದತ್ತಾಂಶಗಳಿಂದ ಈ ಅಂಕಿ-ಅಂಶಗಳನ್ನು ಲೆಕ್ಕ ಹಾಕಿರುವ ಸಂಭವ ಉಂಟು. ಏಕೆಂದರೆ UNESCOಸಂಸ್ಥೆಯ ಅಂತರರಾಷ್ಟ್ರೀಯ ಅಧಿಕಾರವರ್ಗ ಪರಿಗಣನೆಗೆ ಒಳಪಡಿಸದಂಥ ಪ್ರಕಟಣೆಗಳನ್ನೂ 'Book seller' ಪುಸ್ತಕಗಳೆಂದು ವರ್ಗೀಕರಿಸುತ್ತದೆಂಬುದರಲ್ಲಿ ಅನುಮಾನವಿಲ್ಲ. ಇಷ್ಟಾಗಿಯೂ, ಈ ಎರಡು ಮೂಲಗಳ ಅಂಕಿಅಂಶಗಳನ್ನು ಪರಸ್ಪರ ವರ್ಗಾಯಿಸಿಕೊಂಡಲ್ಲಿ, ೧೯೬೭ರಲ್ಲಿ ಪ್ರಕಟವಾದ ಪುಸ್ತಕಗಳ ಪೈಕಿ ಭಾಷಾಂತರಗಳ ಪ್ರಮಾಣ, ಅಷ್ಟೇನೂ ಉತ್ತಾಹದಾಯಕವಲ್ಲದ ಶೇ. ೩.೪೫ಕ್ಕೆ ಕುಸಿಯುತ್ತದೆ.

ಬ್ರಿಟಿಷ್ ಪ್ರಕಾಶನ ಅತ್ಯಂತ ಸಂಕುಚಿತ ದೃಷ್ಟಿಯನ್ನುಳ್ಳದ್ದೇ ಅಥವಾ ಇಲ್ಲವೇ ಎಂಬುದನ್ನು ಚರ್ಚಿಸುವ ಸಂದರ್ಭದಲ್ಲಿ, ಪರಕೀಯನ ಕಾಮುಕತಾ ಪ್ರವೃತ್ತಿಯ ಜನ ಈ ಅಂಕಿಅಂಶಗಳನ್ನು ಆಧರಿಸುತ್ತಾರೆ. ಆದರೆ, ಹೀಗೆ ಮಾಡುವುದೂ ತಪ್ಪಾಗುತ್ತದೆ; ಏಕೆಂದರೆ, 'Book seller' ನೀಡುವ ಅಂಕಿಅಂಶಗಳಲ್ಲಿ, ಭಾಷಾಂತರ ನಡೆಯದೆ ಇರುವ ಹಾಗೂ ಅದಕ್ಕೆ ಅಂಥ ಯಾವುದೇ ಅಗತ್ಯವೂ ಇರದ ಧವಲಪತ್ರಾದ ಪ್ರಕಟಣ ಶಾಖೆಗಳ ಪ್ರಕಟಣೆಗಳೂ-ಕೈಪಿಡಿಗಳೂ ಮತ್ತು ಶಾಲಾ ಪುಸ್ತಕಗಳೂ ಎದ್ದು ಕಾಣುವ ಇಂಥ ಉದಾಹರಣೆಗಳು-ಸೇರಿರುತ್ತವೆ. ಭಾಷಾಂತರಗೊಂಡಲ್ಲಿ, ಸಾಹಿತ್ಯಿಕ ಭಾಷಾಂತರಗಳೆಂಬ ಹೆಸರಿಗೆ ಅರ್ಹವಾಗುವಂಥ ಕೃತಿಗಳಿಗೆ ಮಾತ್ರ ಸಂಕುಚಿತ ದೃಷ್ಟಿಕೋನದ ಬಗೆಗಿನ ವಾದವಿವಾದ ಸಂಬಂಧಪಟ್ಟಿರಬಹುದು: ಅನೇಕ ಶಿಕ್ಷಣ ಶಾಖೆಗಳು ಹಾಗೂ ಸೃಜನಾತ್ಮಕ ಬರವಣಿಗೆಯಲ್ಲಿ ತೊಡಗಿರುವಂಥ ಪ್ರತಿಷ್ಠಿತವರ್ಗ-ಇದರ ವ್ಯಾಪ್ತಿಗೆ ಒಳಪಡುತ್ತವೆ.

ಪರಿಸ್ಥಿತಿ ಹೀಗಿರುವಾಗ 'ಸಾಹಿತ್ಯಿಕ' ಕೃತಿಗಳಲ್ಲಿನ ಭಾಷಾಂತರದ ಶೇಕಡಾವಾರು ಪ್ರಮಾಣ. ೩.೪೫ ಮತ್ತು ೧೦ರ ನಡುವೆ ಎಲ್ಲೋ ಒಂದೆಡೆ ಇರುತ್ತದೆ ಎಂದು ಮಾತ್ರ ನಾವು ಹೇಳಬಹುದು ಆದರೆ ಇದರಿಂದ ಉಪಯೋಗವೇನೂ ಆಗುವುದಿಲ್ಲ. ಇತರ ಭಾಷಾಮೂಲದ ಗಮನಾರ್ಹ ಪ್ರಮಾಣದ ಪುಸ್ತಕಗಳನ್ನು ಪ್ರಕಟಿಸದೆ ಇರುವುದರಿಂದ, ರಾಷ್ಟ್ರವೊಂದರ ಪ್ರಕಾಶಕರು ಸಂಕುಚಿತ ದೃಷ್ಟಿಯ ಪ್ರಾಂತೀಯವಾದಿಗಳಾಗಿದ್ದಾರೆಂದು ಭಾವಿಸಿ ಶೋಕಿಸುತ್ತ ಕುಳಿತುಕೊಳ್ಳುವುದರಿಂದಲೂ-ಏನೂ ಉಪಯೋಗವಾಗುವುದಿಲ್ಲ. ಪ್ರಕಾಶಕನ ಪಟ್ಟಿಯಲ್ಲಿ ವಿದೇಶೀಯ ಲೇಖಕರೇ ತುಂಬಿಕೊಂಡಿದ್ದಾರೆಂಬ ದೃಷ್ಟಿಯಿಂದ ನಮಗಿಂತಲೂ ಕಡಿಮೆ ಸಂಕುಚಿತ ದೃಷ್ಟಿಯ ಪ್ರಕಾಶನಾಭ್ಯಾಸ ಪ್ರಚಲಿತವಾಗಿದೆಯೆಂದು ಹೇಳಬಹುದಾದ ರಾಷ್ಟ್ರಗಳು ನಮ್ಮ ನೆರೆಹೊರೆಯಲ್ಲಿಯೇ ಇವೆ. ಉದಾಹರಣೆಗೆ, ಇಟಲಿ ಮತ್ತು ಸ್ಪೇನ್. ಆದರೆ, ಅಂಥ ಪ್ರಕಾಶಕರು ಯಾವುದೇ ಸಾಂಸ್ಕೃತಿಕ ಸಾರ್ವತ್ರಿಕತೆಯಂಥ ಉದಾತ್ತ ಆದರ್ಶವನ್ನು ಬೆಂಬತ್ತಿರುವವರಲ್ಲ; ಮಾರುಕಟ್ಟೆಯ ಆರ್ಥಿಕತೆಯನ್ನು ದೃಷ್ಟಿಯಲ್ಲಿರಿಸಿಕೊಂಡಿರುವಂಥ ಇತರ ಯಾವನೇ ಪ್ರಕಾಶಕನಂತೆ ಅವರೂ ಅದೇ ವಾಣಿಜ್ಯ ಅಗತ್ಯಗಳಿಗೆ ತಲೆವಾಗಿರುವಂಥವರು; ಅವರು ಭಾಷಾಂತರಗಳನ್ನು ಪ್ರಕಟಿಸುವುದಕ್ಕೆ ಕಾರಣವೇನೆಂದರೆ, ಅದು ಅವರಿಗೆ ಲಾಭದಾಯಕವಾಗಿರುವುದು. 'ಪೊವೆ'ಲೀಯ ಸಾಹಿತ್ಯ ಸಂಪ್ರದಾಯದ ಲೇಖಕರಾಗಿ ವಿಕಸಿಸುತ್ತಾರೆಂದು ನಂಬಲಾಗಿರುವ ಸ್ಥಳೀಯ ಲೇಖಕರ ದೃಷ್ಟಿಯಿಂದ ಇದು ಕೆಟ್ಟ ಸುದ್ದಿ. ಆದರೆ, ಸ್ಥಳೀಯ ಪ್ರತಿಭೆಯ ಸಾಧಾರಣತ್ವದತ್ತ ಕೈದೋರುವ ಮೂಲಕ ಈ ಪ್ರಕಾಶಕರು ವಿದೇಶೀಯ ಲೇಖಕರ ಬಗೆಗಿನ ತಮ್ಮ ಪಕ್ಷಪಾತದ ಧೋರಣೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ಇತ್ತ, ಕೆಲವು ರಾಷ್ಟ್ರಗಳಲ್ಲಿ, ಬಹುಮಟ್ಟಿನ ಭಾಷಾಂತರಗಳನ್ನು ಪ್ರಕಟಿಸ್ಸು

ವವರು ಅತ್ಯಂತ ಜಾಗರೂಕರೂ, ಪುರೋಗಾಮಿಗಳೂ ಆಗಿರುವ ಪ್ರಕಾಶಕರೇ ಎಂಬುದೂ ಗಮನಾರ್ಹ ಸಂಗತಿಯಾಗಿದೆ.

ಒಂದು ರಾಷ್ಟ್ರದೊಡನೆ ಇನ್ನೊಂದು ರಾಷ್ಟ್ರವನ್ನು ಹೋಲಿಸುವುದು, ಹೇಗೂ ಅವಾಸ್ತವವಾದ ಸಂಗತಿ. ಏಕೆಂದರೆ ಇದಕ್ಕೆ ಸಂಬಂಧಪಟ್ಟಿರುವ ಅತ್ಯಂತ ಮಹತ್ವಪೂರ್ಣ ಅಂಶವೆಂದರೆ ನಿರ್ದಿಷ್ಟ ಭಾಷಾಸಮುದಾಯಗಳ ಗಾತ್ರ. ಇಂಗ್ಲಿಷ್ ಭಾಷಾಸಮುದಾಯ ಬೃಹತ್ತಾದದೂ, ಇತರ ಭಾಷಾ ಸಮುದಾಯಗಳಿಗಿಂತ ಸಾಪೇಕ್ಷವಾಗಿ ಹೆಚ್ಚು ಸುಶಿಕ್ಷಿತವಾದುದೂ, ಇತರ ಸಂಭಾವ್ಯ ದೇಶಾತೀತ ಭಾಷೆಗಳಿಗಿಂತ ಹೆಚ್ಚು ವಿಕಾಸಶೀಲ ಸಾಮ್ರಾಜ್ಯವನ್ನು ಹೊಂದಿರುವಂಥದೂ ಆಗಿದೆ. ಯಾವುದೇ ಒಂದು ವರ್ಷದಲ್ಲಿ ಇಂಗ್ಲಿಷಿಗೆ ಭಾಷಾಂತರವಾಗುವುದಕ್ಕಿಂತ ಇಂಗ್ಲಿಷಿನಿಂದ ಇತರ ಭಾಷೆಗಳಿಗೆ ಭಾಷಾಂತರಗೊಳ್ಳುವ ಪುಸ್ತಕಗಳ ಸಂಖ್ಯೆಯೇ ಹೆಚ್ಚಾಗಿರುತ್ತದೆ. ಇದು, ಬ್ರಿಟನ್ ಇತರ ಯಾವುದೇ ರಾಷ್ಟ್ರಕ್ಕಿಂತ–ಉದಾಹರಣೆಗೆ, ಯುಗೋಸ್ಲಾವಿಯಾಕ್ಕಿಂತ–ಹೆಚ್ಚು ಪ್ರಾಂತೀಯವಾದೀ ರಾಷ್ಟ್ರವೆಂದು ಹೇಳುವುದಕ್ಕೆ ಪ್ರಮಾಣವಾಗುವುದಿಲ್ಲ. ಏಕೆಂದರೆ, ಯುಗೋಸ್ಲಾವಿಯನ್ನರು ಪ್ರತಿವರ್ಷವೂ ಭಾಷಾಂತರದ ಕ್ಷೇತ್ರದಲ್ಲಿ ನಮ್ಮನ್ನು ಮೀರಿ ಮುಂದೆ ಹೋಗುತ್ತಿರುತ್ತಾರೆ. ಅನೇಕ ರಾಷ್ಟ್ರಗಳು ಅನಿವಾರ್ಯವಾಗಿ ಅಗಾಧಪ್ರಮಾಣದಲ್ಲಿ ಭಾಷಾಂತರಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ, ಹಾಗೆ ಮಾಡದಿದ್ದಲ್ಲಿ ಆ ರಾಷ್ಟ್ರಗಳಿಗೆ ಓದಲು ಬಹುಮಟ್ಟಿಗೆ ಏನೂ ಇರುವುದೇ ಇಲ್ಲ.

ಅರ್ಥಪೂರ್ಣ ಹೋಲಿಕೆಯೊಂದನ್ನು ಮಾಡಬಹುದಾದಲ್ಲಿ, ಅದು ಬ್ರಿಟನ್ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ನಡುವೆ ಮಾತ್ರ. ಹಾಗೆ ಮಾಡಿದಾಗಲೂ ನಾವು ಮಹತ್ವದ್ದೇನನ್ನೂ ಮಾಡಿದಂತಾಗುವುದಿಲ್ಲ. ೧೯೬೦ರಲ್ಲಿ ನಮ್ಮ ಪ್ರಕಟಣಸಂಖ್ಯೆಯಾದ ೭೮ಳಕ್ಕೆ ಪ್ರತಿಯಾಗಿ ಅಮೆರಿಕನ್ನರು ಮೂರುಪಟ್ಟು –ಅಂದರೆ ೨೦೪೫–ಪುಸ್ತಕಗಳನ್ನು ಹೊರತಂದಿದ್ದರು. ಬ್ರಿಟಿಷ್ ಪ್ರಕಾಶಕರೊಡನೆ ಸಂಯುಕ್ತ ಪ್ರಕಟಣೆಯಾಗಿ ಅಥವಾ ಬ್ರಿಟಿಷ್ ಪ್ರಕಾಶಕರಿಗೆ ಅವುಗಳನ್ನು ಮಾರಿಬಿಟ್ಟು ತರುವಾಯ ಇವುಗಳಲ್ಲಿ ಎಷ್ಟು ಪುಸ್ತಕಗಳು ನಮ್ಮ ನಾಡಿನಲ್ಲಿ ಬೆಳಕುಕಂಡವು ಎಂಬುದನ್ನು ಲೆಕ್ಕಹಾಕುವುದು ಕಾರ್ಯಸಾಧ್ಯವಾದ ಕ್ರಮವೇನೂ ಅಲ್ಲ ಅಥವಾ ಅಂಥ ಉಪಯುಕ್ತ ಕಾರ್ಯವೇನೂ ಅಲ್ಲ. ಇಂಥ ಸಂಭವದ ಪ್ರಮಾಣವನ್ನು ಎಷ್ಟಕ್ಕೇ ನಿಗದಿಗೊಳಿಸಲಿ, ಆಗಲೂ ಉಳಿಕೆಯ ಪ್ರಮಾಣ ನಮಗೆ ವಿರುದ್ಧವಾಗಿಯೇ ಇರುತ್ತದೆ. ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿನ ಒಟ್ಟಾರೆ ಪ್ರಕಟಣೆ ನಮ್ಮದಕ್ಕಿಂತ ಸ್ವಲ್ಪ ಮಾತ್ರ ಹೆಚ್ಚಾಗಿದೆ. ಆದರೆ ಅದರಲ್ಲಿ ಗಮನಾರ್ಹವಾಗುವಷ್ಟು ಹೆಚ್ಚಿನ ಪ್ರಮಾಣದಲ್ಲಿರುವುದು ಭಾಷಾಂತರಗಳೇ.

* * * *

ಹೀಗಾಗಿ, ನಮ್ಮದೇ ಅಥವಾ ಯಾವುದೇ ರಾಷ್ಟ್ರದ ಪ್ರಕಾಶನೋದ್ಯಮ ಸಂಕುಚಿತ ದೃಷ್ಟಿಯನ್ನುಳ್ಳದ್ದಾಗಿದೆಯೆಂಬ ಆರೋಪ ಬಹುಮಟ್ಟಿಗೆ ಸಮಯಸ್ಫೂರ್ತಿಯದೂ ನಿರರ್ಥಕವಾದುದೂ ಆಗಿರುತ್ತದೆ. ಪ್ರಕಾಶಕರು ಯೋಗ್ಯವಾದಂಥ ಪುಸ್ತಕಗಳನ್ನು ಭಾಷಾಂತರಿಸುವುದಿಲ್ಲವೆಂಬ ವಿಚಾರದ ಬಗ್ಗೆ ನಾವು ಅವರೊಡನೆ ಯಥಾರ್ಥವೂ, ಉಪಯುಕ್ತವೂ ಆದಂಥ ಜಗಳವನ್ನು ನಡೆಸಬಹುದು. ಹೀಗೆ ಮಾಡುವುದರ ಅರ್ಥ ಸಮಗ್ರ ಉದ್ಯಮವೊಂದರ ಸಾಪೇಕ್ಷ್ಯವಾಗಿ ಕಡಿಮೆ ಸ್ಪಷ್ಟವಾಗಿರುವಂಥ, ಅಭಿರುಚಿ ಮತು ಮೌಲ್ಯಗಳಿಗೆ ವಿರುದ್ಧವಾಗಿ ವೈಯಕ್ತಿಕ ಅಭಿರುಚಿ ಮತ್ತು ಮೌಲ್ಯಗಳನ್ನು ಒಡ್ಡುವುದು ಎಂದಾಗುತ್ತದೆ. ಇಷ್ಟಾಗಿಯೂ ಇಲ್ಲಿ ವೈಚಾರಿಕ ಮತಭೇದಕ್ಕೆ ಎಡೆದೊರೆಯುತ್ತದೆ; ಸಾಹಿತ್ಯವೊಂದರಿಂದ ನಾವು ಮಾಡುವ ಭಾಷಾಂತರಗಳು ಆ ಭಾಷೆಯ ವಿಶಿಷ್ಟ ವೈಖರಿಗಳನ್ನೂ ಸಾಧನೆಗಳನ್ನೂ ಪ್ರತಿಬಿಂಬಿಸುವಂಥವಾಗಿರಬೇಕೆಂದು ಹೇಳುವ ಆದರ್ಶವಾದಿಗಳ, ಮತ್ತು ಭಾಷಾಂತರ ವಿದೇಶೀಯ ಸಾಂಸ್ಕೃತಿಕ ರೀತಿನೀತಿಗಳ ಬಗೆಗಿನ ಕಸರತ್ತು ಆಗಿರುತ್ತದೆಂದು ಭಾವಿಸುವ ಭೂಬದ್ಧ ಜೀವಿಗಳ ನಡುವೆ ಮತಭೇದ ಏರ್ಪಡುತ್ತದೆ. ಈ

ಏರಡನೆಯ ವರ್ಗ, ಸ್ಥಳೀಯ ಪುಸ್ತಕ ಮಾರುಕಟ್ಟೆಯ ನೈಜ ಅಥವಾ ಊಹೆಯ ಅಪೇಕ್ಷೆಯೊಂದಿಗೆ ಅಂತಿಮವಾಗಿ ಹೊಂದಿಕೊಳ್ಳುತ್ತದೆಂಬ ಕಾರಣಕ್ಕಾಗಿ ಭಾಷಾಂತರಕ್ಕೆ ಕೃತಿಗಳನ್ನು ಆಯಲಾಗುತ್ತದೆಂದು ಭಾವಿಸಿದೆ. ಇತರ ರಾಷ್ಟ್ರಗಳ ಮನೋಧರ್ಮವೂ ಬಹುಮಟ್ಟಿಗೆ ನಮ್ಮ ಮನೋಧರ್ಮದಂತೆಯೇ ಇರುತ್ತದೆಂಬ ನಂಬಿಕೆ ಈ ಎರಡನೆಯ ದೃಷ್ಟಿಕೋನದ ಉಪ-ಉತ್ಪನ್ನ ಅಥವಾ ಅಡಕ್ಕಿರುವ ಪ್ರೇರಣೆ.

ಈ ಎರಡು ಸಿದ್ಧಾಂತಗಳಲ್ಲಿ ಯಾವುದನ್ನೇ ನಾವು ಎತ್ತಿ ಹಿಡಿಯಲಿ. ಪ್ರಕಾಶನ ಉದ್ಯಮದಲ್ಲಿ ಸಂಸ್ಕೃತಿಗಳ ನಡುವಣ ಮಧ್ಯವರ್ತಿಗಳಾಗಿ ಕೆಲಸಮಾಡುವವರು ಹಾಗೂ ಯಾವ ಯಾವ ಪುಸ್ತಕಗಳನ್ನು ಭಾಷಾಂತರಿಸಬೇಕು ಎಂಬ ಬಗ್ಗೆ ಅವರು ಹೇಗೆ ತೀರ್ಮಾನವನ್ನು ಕೈಗೊಳ್ಳುತ್ತಾರೆ ಎಂಬುದನ್ನು ನಿರ್ಧರಿಸುವುದು ನಿಜಕ್ಕೂ ಪ್ರಯತ್ನಯೋಗ್ಯವಾದ ಕಾರ್ಯವಾಗುತ್ತದೆ. ನಮ್ಮ ಪ್ರಶ್ನಾವಳಿಯ ಇನ್ನೊಂದು ಭಾಗವನ್ನು ಈ ದೃಷ್ಟಿಯಿಂದ-ಅಂದರೆ ಈ ಮಧ್ಯವರ್ತಿಗಳು ಯಾರು ಎಂಬುದನ್ನು ಗುರುತಿಸುವ ಹಾಗೂ ಅವರ ವಿಧಾನಗಳನ್ನು ವರ್ಗೀಕರಿಸುವ ದೃಷ್ಟಿಯಿಂದ-ರೂಪಿಸಲಾಗಿತ್ತು. ಪುಸ್ತಕ ವ್ಯಾಪಾರದ ಸಾಂಪ್ರದಾಯಿಕ ಸಂದರ್ಭಗಳಲ್ಲಿ ಒಂದೂ, ಪ್ರೇಕ್ಷಣೀಯ ರೀತಿಯಲ್ಲಿ ಭಾಷಾಂತರ ಪ್ರಕಟಣೆಯ ಹಕ್ಕಿಗಾಗಿ ಅರಸುವ ಮತ್ತು ಅಂಥ ಹಕ್ಕುಗಳನ್ನು ಕೊಂಡುಕೊಳ್ಳುವ ಕಾರ್ಯ ನಡೆಯುವ ಸಂದರ್ಭವೂ ಆದ 'ಫ್ರಾಂಕ್‌ಫರ್ಟ್ ಗ್ರಂಥೋತ್ಸವ'ದ ಅವಧಿಯಲ್ಲಿಯೇ ನಮ್ಮ ನಮ್ಮ ಫಲಿತಾಂಶಗಳನ್ನು ಪ್ರಕಟಿಸಲು ಸಾಧ್ಯವಾಗಿರುವುದು ನಿಜಕ್ಕೂ ಒಂದು ಸುಯೋಗ. ವಾಸ್ತವವಾಗಿ, ಈ ಉತ್ಸವದ ಬಗೆಗೆ ಕೆಲವು ವಿದೇಶೀಯ ವ್ಯಾಪಾರ ಪತ್ರಿಕೆಗಳಲ್ಲಿ ಅನಂತರದಲ್ಲಿ ಪ್ರಕಟವಾದ ವರದಿಗಳು, ಯಾವ ಹಕ್ಕುಗಳು ಪ್ರಕಾಶನ ಕ್ಷೇತ್ರದ ಯಾವ ಬಾದಶಹರಿಂದ ಯಾರಿಗೆ ಹಸ್ತಾಂತರಗೊಂಡುವೆಂಬುದರ ಬಗ್ಗೆ ಸಾಮಾನ್ಯವಾಗಿ ವಿಶ್ವಸನೀಯ ಮಾರ್ಗದರ್ಶಿಗಳಾಗಿರುತ್ತವೆ.

ಯೋಗ್ಯ ವಿದೇಶೀಯ ಗ್ರಂಥಗಳ ಬಗ್ಗೆ ಬ್ರಿಟಿಷ್ ಪ್ರಕಾಶಕರಿಗೆ ಮಾಹಿತಿ ಮೊಟ್ಟಮೊದಲು ಹೇಗೆ ದೊರೆಯುತ್ತದೆ ಎಂಬುದನ್ನು ನಿಷ್ಕರ್ಷಿಸುವುದು ನಮ್ಮ ಪ್ರಶ್ನಾವಳಿಯ ಈ ಭಾಗದ ಪ್ರಥಮೋದ್ದೇಶವಾಗಿದ್ದಿತು. ಅತ್ಯಂತ ಸಾಮಾನ್ಯವಾದ ಹಾಗೂ ಯಾವ್ಯಾವ ಸಂದರ್ಭದಲ್ಲಿಯೂ ವಿಶಿಷ್ಟವಲ್ಲದೆ ಇದ್ದ, ಮಾಹಿತಿಯ ಮಾಧ್ಯಮವೆಂದರೆ ಮೂಲ ಪ್ರಕಾಶಕನೆ. ನಮ್ಮ ಪ್ರಶ್ನಾವಳಿಯನ್ನು ಉತ್ತರಿಸಿದ್ದ ಪ್ರಕಾಶಕರಲ್ಲಿ ಶೇ. ನೂರಕ್ಕೆ ನೂರರಷ್ಟು ಮಂದಿ ಈ ರೀತಿ ಉತ್ತರಿಸಿದ್ದರು. ಶೇ. ೯೦ರಷ್ಟು ಪ್ರಕಾಶಕರು ಮತ್ತೆ ಮತ್ತೆ ಅಥವಾ ಆಗೊಮ್ಮೆ ಈಗೊಮ್ಮೆ 'ಸಂಸ್ಥೆಯ ಹೊರಗಿನ ಯಾರೋ ಒಬ್ಬ' ವ್ಯಕ್ತಿಯಿಂದಲೂ ಇಂಥ ಮಾಹಿತಿ ತಮಗೆ ಲಭ್ಯವಾಗುತ್ತದೆಂದು ತಿಳಿಸಿದ್ದರು. ಈ ವ್ಯಕ್ತಿ 'ಛಾಯಾಸದೃಶ ವ್ಯಕ್ತಿ'ಯಾಗಿದ್ದು, ಮುಂದಿನ ಯಾವುದಾದರೂ ಒಂದು ಸಂಶೋಧನೆಯಲ್ಲಿ ಅವನ ಬಗೆಗಿನ ನಿರ್ದಿಷ್ಟ ವಿವರಗಳನ್ನು ಕೊಡುವುದು ಉಪಯುಕ್ತವಾಗುತ್ತದೆ. ಏಕೆಂದರೆ, ಈ ಮಾಹಿತಿ ತುಂಬ ಪ್ರಭಾವಕಾರಿಯಾಗಿರುವಂಥದು. ಕೆಲವು ರೀತಿಗಳಲ್ಲಿ ಹೊರಗಿನ ಪ್ರಭಾವ, ವಾಸ್ತವವಾಗಿ ಒಳಗಿನ ಪ್ರಭಾವಕ್ಕಿಂತ ಉತ್ತಮವಾಗಿ ಕೆಲಸ ಮಾಡುತ್ತದೆ. ಏಕೆಂದರೆ ಶೇ. ೬೦ರಷ್ಟು ಮಂದಿ ಪ್ರಕಾಶಕರು ಮಾತ ಸಂಸ್ಥೆಯಲ್ಲಿನ ಯಾರೋ ಒಬ್ಬರಿಂದಲೇ ಪುಸ್ತಕವೊಂದರ ಬಗೆಗೆ ತಮಗೆ ಮಾಹಿತಿ ಲಭ್ಯವಾಗುವುದಾಗಿ ತಿಳಿಸಿದರು. ಇದಕ್ಕಿಂತಲೂ ಕಡಿಮೆ ಪ್ರಮಾಣದ ಅಂದರೆ, ಶೇ. ೫೦ರಷ್ಟು ಮಂದಿ ಪ್ರಕಾಶಕರು ಲೇಖಕನ ಏಜೆಂಟರುಗಳ ಮೂಲಕ ಕೆಲವೊಮ್ಮೆ ಮಾಹಿತಿಯನ್ನು ನಿರೀಕ್ಷಿಸುತ್ತಿರುವುದಾಗಿ ತಿಳಿಸಿದರು. ಈ ಅಂಶದ ಬಗ್ಗೆ ನಮ್ಮ ಪರಿಭಾಷೆಯೇ ದೋಷಪೂರ್ಣವಾಗಿದ್ದಿರುವ ಸಾಧ್ಯತೆಯೂ ಉಂಟು. ಏಕೆಂದರೆ ಅತ್ಯಂತ ಉನ್ನತಾಧಿಕಾರವನ್ನುಳ್ಳ ಅಂತರರಾಷ್ಟ್ರೀಯ ಸಾಹಿತ್ಯಿಕ ಏಜೆಂಟರುಗಳಿದ್ದಾರೆ. ಪ್ರಕಾಶಕನ ದೃಷ್ಟಿಯಲ್ಲಿ ಇವರು ವೈಯಕ್ತಿಕ ಲೇಖಕನ ಪ್ರತಿನಿಧಿಯಾಗಿರುವುದಕ್ಕಿಂತಲೂ ಸಂಸ್ಥೆಯ ಹೊರಗಿನ ವ್ಯಕ್ತಿಗಳಾಗಿದ್ದಿರುವ ಸಂಭವವೇ ಹೆಚ್ಚು. ಶೇ. ೨೦ರಷ್ಟು ಮಂದಿ ಪ್ರಕಾಶಕರು ಮಾತ್ರ ಲೇಖಕನ ಮೂಲಕವೇ ಪುಸ್ತಕದ ಬಗೆಗಿನ ಮಾಹಿತಿ ಲಭ್ಯವಾಗುವ ನಿರೀಕ್ಷೆಯನ್ನಿಟ್ಟುಕೊಂಡಿದ್ದರು. ದೂರಸ್ಥ ದೇಶಗಳಲ್ಲಿನ ತಮ್ಮ ಬೇಹುಕಾರರ ಶಿಫಾರಸುಗಳಲ್ಲಿ ವ್ಯಾಪಾರಶೀಲತೆಗಿಂತಲೂ ಉತ್ಸಾಹವೇ ಹೆಚ್ಚಾಗಿರುವ ಸಂಭವವಿರುವುದರಿಂದ ಈ ತಂತ್ರ ನಿರರ್ಥಕವೆಂಬ ಅನುಮಾನ ಒಂದು ಪ್ರಸಂಗದಲ್ಲಿ ಉಂಟಾಗಿದ್ದರೂ, ನಮ್ಮ ಪ್ರಶ್ನಾವಳಿಯನ್ನು ಉತ್ತರಿಸಿದ ಸಂಸ್ಥೆಗಳಲ್ಲಿ ಮೂರು ಸಂಸ್ಥೆಗಳು ಒಂದು ಅಥವಾ ಹಲವು ವಿದೇಶೀಯ ರಾಷ್ಟ್ರಗಳಲ್ಲಿ ಬೇಹುಕಾರರನ್ನು ಇರಿಸಿಕೊಂಡಿದ್ದುವು.

ಪುಸ್ತಕಗಳನ್ನು ಮೊದಲಿಗೆ ಪ್ರಕಟಿಸಿದ ರಾಷ್ಟ್ರಗಳಲ್ಲಿ, ಆ ಪುಸ್ತಕಗಳ ಬಗ್ಗೆ ಪ್ರಕಟವಾಗುವ ಅಥವಾ ಈ ಪತ್ರಿಕೆಯಲ್ಲಿ ಪ್ರಕಟವಾಗುವ ವಿಮರ್ಶೆ ಪ್ರಕಾಶಕರ ಮೇಲೆ ಏನೂ ಪ್ರಭಾವ ಬೀರುವುದಿಲ್ಲ. ಏಕೆಂದರೆ ನಮ್ಮ ಪ್ರಶ್ನಾವಳಿಗಳಿಗೆ ಉತ್ತರಗಳನ್ನು ಕಳುಹಿಸಿದ ಅನೇಕ ಪ್ರಕಾಶಕರು ತಿಳಿಸಿರುವಂತೆ, ಉತ್ತಮ ಪುಸ್ತಕವೊಂದರ ಬಗೆಗೆ ಪತ್ರಿಕೆಗಳಲ್ಲಿ ವಿಮರ್ಶೆ ಬರುವರೆಗೆ ಕಾಯ್ದರೆ ನಮ್ಮನ್ನು ಹೊರತು ಪಡಿಸಿಯೇ, ಭಾಷಾಂತರ ಸಂಬಂಧವಾದ ಹಕ್ಕುಗಳ ವ್ಯವಹಾರ ಮುಗಿದುಹೋಗಿರುತ್ತದೆ. ಬಹುತೇಕ ಸಂದರ್ಭಗಳಲ್ಲಿ, ಪ್ರಕಾಶಕನ ಮೊಟ್ಟಮೊದಲ ತೀರ್ಮಾನ ಪುಸ್ತಕವೊಂದನ್ನು ಆಯುವುದು ಹಾಗೂ ಮೂಲಪ್ರಕಾಶಕರಿಂದ ಪರಿಶೀಲನಾರ್ಥ ಪ್ರತಿಯೊಂದನ್ನು ತರಿಸಿಕೊಳ್ಳುವುದು–ಇವಕ್ಕೆ ಸೀಮಿತ ವಾಗಿರುತ್ತದೆ. ಕೃತಿಯ ಗುಣದ ಬಗೆಗಿನ ತನ್ನ ಸ್ವಂತ ತೀರ್ಮಾನವನ್ನು ಸಮರ್ಥಿಸಲು ಅಥವಾ ಶಿಥಿಲಗೊಳಿಸಲು ಮುಂದೆ ಅಂಥ ವಿಮರ್ಶೆಗಳನ್ನು ಪರಿಶೀಲಿಸಬಹುದು. ಪ್ರಶ್ನಾವಳಿಯನ್ನು ಉತ್ತರಿಸಿದ ೨೧ ಮಂದಿ ಪ್ರಕಾಶಕರಲ್ಲಿ ೧೩ ಮಂದಿ ನಿಯತವಾಗಿ ಅಥವಾ, ಆಗೊಮ್ಮೆ ಈಗೊಮ್ಮೆ ಭಾಷಾಂತರ ಯೋಗ್ಯವಾದ ಕೃತಿಗಳ ಬಗೆಗಿನ ವಿಮರ್ಶೆಯಿಂದ ಪ್ರಭಾವಿತರಾಗುತ್ತಿದ್ದುದಾಗಿ ತಿಳಿಸಿದ್ದರು. ಮತ್ತಿಬ್ಬರು ಈ ವಿಮರ್ಶೆಗಳು ತಮ್ಮ ಮೇಲೆ "ಪ್ರಭಾವ ಬೀರುವುದೇ ಇಲ್ಲ"ವೆಂದು ಖಂಡತುಂಡವಾಗಿ ತಿಳಿಸಿದ್ದರು. ತಮ್ಮ ಅತ್ಯಂತ ಪ್ರಿಯವಾದ ಹೊಸ ಬಗೆಯ ಪ್ರಕಟಣೆಗಳ ಬಗ್ಗೆ ಪ್ರಕಟವಾದ ಕಟುವಿಮರ್ಶೆಯನ್ನು ಕಂಡು ವ್ಯಗ್ರಚಿತ್ತರಾದ ಪ್ರಕಾಶಕರಲ್ಲಿ ಇಂಥ ಪ್ರವೃತ್ತಿ ಇರುತ್ತದೆಂದು ಸಾಮಾನ್ಯವಾಗಿ ಆರೋಪಿಸ ಲಾಗುತ್ತದೆ. ಆದರೆ, ವಿಮರ್ಶೆಯನ್ನು ಓದಿ ಪುಸ್ತಕವೊಂದನ್ನು ತರಿಸಿಕೊಳ್ಳಬಹುದೇ ಹಾಗೂ ಕೊಳ್ಳ ಬಹುದೇ ಎಂಬುದನ್ನು ನಿರ್ಧರಿಸುವಂಥ ಸಾಮಾನ್ಯ ವಿಮರ್ಶಾವಾಚಕನ ಸನ್ನಿವೇಶದಲ್ಲಿ ಪ್ರಕಾಶಕರು ತಾವೇ ಇರುವಂಥ ಸಂದರ್ಭದಲ್ಲಿ ಇದನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತದೆ.

ಸ್ಥಳೀಯ ಕೃತಿಗಳಿಗೆ ಕೊಡುವಷ್ಟು ಗೌರವ–ಆದರ–ಗಮನಗಳನ್ನು ಬ್ರಿಟಿಷ್ ಪ್ರಕಾಶಕರು ಭಾಷಾಂತರಗಳಿಗೂ ಕೊಡುತ್ತಾರೆಯೆ ಎಂಬುದನ್ನು ತಿಳಿಯುವ ಕುತೂಹಲವೂ ನಮಗಿತ್ತು. ಇದಕ್ಕೆ ಸಂಬಂಧಿಸಿದ ಪ್ರಶ್ನೆಗಳ ಸರಣಿಗೆ ಉತ್ತರ ಕೊಟ್ಟಿದ್ದ ೧೩ ಮಂದಿ ಪ್ರಕಾಶಕರಲ್ಲಿ ೫ ಮಂದಿ ತಮ್ಮ 'ಶಿಷ್ಟತೆ' ಹಾಗೂ ವಿಧಾನಗಳು ಮೂಲಭೂತವಾಗಿ ಒಂದೇ ಆಗಿವೆಯೆಂದು ಅಸಂದಿಗ್ಧವಾಗಿ ಉತ್ತರಿಸಿದ್ದರು. ಮತ್ತೆ ಮೂವರು ಸಾಮಾನ್ಯವಾಗಿ ಅವು ಒಂದೇ ಆಗಿರುತ್ತವೆಂದು ಹೇಳಿದ್ದರೂ ಅವು ಹೇಗೆ ಬದಲಾಗಬಹುದೆಂಬುದನ್ನು ತಿಳಿಸಿರಲಿಲ್ಲ. ಉಳಿದವರಲ್ಲಿ ೪ ಮಂದಿ ಭಾಷಾಂತರಿತ ಗ್ರಂಥದ ವಿಷಯದಲ್ಲಿನ ಹೆಚ್ಚಿನ ಶಿಷ್ಟತೆ ಅಥವಾ ಗುಣಮಟ್ಟವನ್ನು ತಾವು ಅಪೇಕ್ಷಿಸುವುದಾಗಿ ತಿಳಿಸಿದ್ದರು. ಭಾಷಾಂತರಗಳ ಪ್ರಕಟಣೆಯ ವೆಚ್ಚ ಹೆಚ್ಚಾಗಿರುವುದು ಇದಕ್ಕೆ ಕಾರಣವೆಂಬುದನ್ನೂ ಅವರು ಪರ್ಯಾಯವಾಗಿ ಸೂಚಿಸಿದ್ದರು. ಭಾಷಾಂತರಗಳಿಗೆ ಸಂಬಂಧಿಸಿದಂತೆ, ಸಂಸ್ಥೆಯ ಹೊರಗಿನವರ ಸಲಹೆಗಳ ಬಗ್ಗೆ ಹೆಚ್ಚಿನ ನಂಬಿಕೆ ಇರುವುದೇ ವಿಧಾನದಲ್ಲಿನ ವ್ಯತ್ಯಾಸಗಳಿಗೆ ಕಾರಣವೆಂದು ಒಬ್ಬ ಪ್ರಕಾಶಕ ಭಾವಿಸಿದ್ದ.

ಭಾಷೆ ಅಜ್ಞೇಯವಾಗಿರುವಂಥ ಸಂದರ್ಭದಲ್ಲಿ ಹೊರತು ಉಳಿದಂತೆ (ಹದಿನೈದು ಮಂದಿ ಪ್ರಕಾಶಕರಲ್ಲಿ) ಹತ್ತು ಮಂದಿ ಪ್ರಕಾಶಕರು ವಿದೇಶೀಯ ಪುಸ್ತಕಗಳನ್ನು ಅಭಿಪ್ರಾಯಕ್ಕಾಗಿ ಒಬ್ಬನೇ ಒಬ್ಬ ನಿಯತ ಓದುಗನ ಬಳಿಗೆ ಕಳುಹಿಸುತ್ತಾರೆ; ಎಂಟು ಮಂದಿ ಪ್ರಕಾಶಕರು ವಿದೇಶೀಯ ಭಾಷೆ ಗಳಲ್ಲಿನ ಪುಸ್ತಕಗಳಿಗೆ ಸಂಬಂಧಿಸಿದಂತೆ ವಿಶೇಷ ಓದುಗರ ಸೇವೆಯನ್ನು ಬಳಸುತ್ತಾರೆ. ಈ ವಿಭಾಗವನ್ನು ಉತ್ತರಿಸಿದ ಪ್ರತಿಯೊಬ್ಬ ಪ್ರಕಾಶಕನೂ, ಭಾಷೆ ತಮಗೆ ಎಟಕುವಂಥದಾದಲ್ಲಿ ಹೊರಗಿನ ಓದುಗನ ಜೊತೆಗೆ ಸಂಸ್ಥೆಯಲ್ಲಿಯೂ ಯಾರಾದರೂ ಒಬ್ಬರು ಅಂಥ ಪುಸ್ತಕಗಳನ್ನು ಓದುತ್ತಾರೆಂಬುದಾಗಿ ತಿಳಿಸಿದ್ದ. ಹೀಗಾಗಿ, ಬಹುತೇಕ ಸಂದರ್ಭಗಳಲ್ಲಿ, ಭಾಷಾಂತರ ಉದ್ಯಮ, ಪ್ರಕಾಶಕರು ಸಾಮಾನ್ಯವಾಗಿ ಸಮಾಲೋಚಿಸುವಂಥ ಅಥವಾ ಗೊತ್ತುಪಡಿಸಿಕೊಳ್ಳುವಂಥ ವ್ಯಕ್ತಿಗಳನ್ನು ಬಿಟ್ಟು, ಇತರರನ್ನು ಬಳಸಿ ಕೊಳ್ಳುತ್ತದೆ. ಅವರಲ್ಲಿ ಕೆಲವರು ಗಮನಾರ್ಹ ಪ್ರಮಾಣದಲ್ಲಿ ನಿರ್ಣಯದ ಅಧಿಕಾರವನ್ನು ಚಲಾಯಿ ಸುತ್ತಾರೆ. ನಿಯತ ಅಥವಾ ಸಾಂದರ್ಭಿಕ ಓದುಗ ವಿದೇಶೀಯ ಪುಸ್ತಕದ ಬಗ್ಗೆ ಕೊಡುವ ತೀರ್ಮಾನ ಆತ ಇಂಗ್ಲಿಷ್ ಪುಸ್ತಕದ ಬಗ್ಗೆ ಕೊಡುವ ತೀರ್ಮಾನದಷ್ಟೇ ನಿರ್ದಿಷ್ಟವಾಗಿರುವುದಿಲ್ಲ–ಅಂದರೆ

ಆತನ ತೀರ್ಮಾನದ ನಿಕಷ ಒಂದೇ ರೀತಿಯಾಗಿರುವುದಿಲ್ಲ. ಏಕೆಂದರೆ, ಒಂದು ಸಂದರ್ಭದಲ್ಲಿ ಆತ ಹಸ್ತಪ್ರತಿಯೊಂದರ ಬಗ್ಗೆ ತನ್ನ ತೀರ್ಮಾನವನ್ನು ತಿಳಿಸಿದರೆ, ಇನ್ನೊಂದು ಸಂದರ್ಭದಲ್ಲಿ ಮೊದಲಿನ ಓದುಗನೊಬ್ಬನ ಅನುಮೋದನೆಯ ಫಲವಾಗಿ ಆಗಲೇ ಪ್ರಕಟಗೊಂಡಿರುವಂಥ ಕೃತಿಯೊಂದರ ಬಗ್ಗೆ ತೀರ್ಮಾನ ಕೊಡಬೇಕಾಗುತ್ತದೆ.

ಮೇಲಾಗಿ ಭಾಷಾಂತರವೊಂದನ್ನು ಪ್ರಕಟಿಸಲು ಪ್ರಕಾಶಕ ಭರಿಸಬೇಕಾಗಿರುವ ಅಗಾಧ ವೆಚ್ಚದ ವಿಚಾರವನ್ನು ಯಾವೊಬ್ಬ 'ಅಭ್ಯಸ್ತ' ಓದುಗನೂ ನಿರ್ಲಕ್ಷಿಸಲು ಸಾಧ್ಯವಿಲ್ಲ. ತಮಗೆ ಕೊಡಲಾಗುತ್ತಿರುವ ಸಂಭಾವನೆಯ ದರದ ಬಗ್ಗೆ ಆಕ್ಷೇಪಮಾಡದಿರುವ ಅಥವಾ ದೂರದಿರುವ ಭಾಷಾಂತರಕಾರರೇ ಇಲ್ಲ. ಅವರ ದೂರಿಗೆ ಹಿಂದೆ ಇದ್ದಂಥ ಸಮರ್ಥನೆ ಇಂದು ಇಲ್ಲವಾಗಿದೆಯಾದರೂ, ದೂರು ಇದ್ದೇ ಇದೆ. ಭಾಷಾಂತರಗಳ ಪ್ರಕಟಣೆಯ ಸಂಖ್ಯೆ ಕೆಳಗೇ ಇರುವುದಕ್ಕೆ ಅಥವಾ ಕಡಿಮೆಯಾಗಿಯೇ ಇರುವುದಕ್ಕೆ ಅವರ ಶುಲ್ಕವೇ ಕಾರಣವಾಗಿದೆ. ನಮ್ಮ, ಎರಡು ಲೇಖನಗಳ ಮಾಲೆಯಲ್ಲಿನ, ಎರಡನೆಯ ಲೇಖನದಲ್ಲಿ, ಮುಂದಿನವಾರ, ಭಾಷಾಂತರಕಾರರು ಮತ್ತು ಪ್ರಕಾಶಕರ ನಡುವಣ ಸಂಬಂಧಗಳನ್ನು ಸವಿವರವಾಗಿ ಪರಿಶೀಲಿಸಲಿದ್ದೇವೆ ಹಾಗೂ ಭಾಷಾಂತರ ಉದ್ಯಮದಲ್ಲಿ ಮುಂಬರಲಿರುವ ಬದಲಾವಣೆಗಳ ಬಗ್ಗೆ ವಿಚಾರಮಾಡಲಿದ್ದೇವೆ.[1]

---

1. ಮೂಲ: 18 ಸೆಪ್ಟೆಂಬರ್ 1970ರ "Times Literary Supplement" ಪತ್ರಿಕೆಯ 'The Translation Industry-1' ಎಂಬ ಲೇಖನ.

ಕೆ. ರಘುಪತಿ ಭಟ್ಟ

ಸ್ಥಳನಾಮಗಳಲ್ಲಿ ಸಂಸ್ಕೃತೀಕರಣ

ಹಳೆಯದನ್ನು ಬಿಡುವುದು, ಹೊಸತಾದುದನ್ನು ತೊಡುವುದು ಮನುಷ್ಯನ ಸಹಜ ಪ್ರವೃತ್ತಿ; ಮೂಲಭೂತವಾದುದು ಕೂಡ. ಜೀವನದ ಎಲ್ಲ ಕ್ಷೇತ್ರಗಳಲ್ಲಿ ಈ ನಾವೀನ್ಯಪ್ರಿಯತೆ ಕಂಡುಬರುತ್ತದೆ. ಬಟ್ಟೆಬರೆಗಳ ವಿನ್ಯಾಸದಲ್ಲಿ, ಮಾತಿನಲ್ಲಿ, ಇತರ ಶಿಷ್ಟಾಚಾರಗಳಲ್ಲಿ ಈ ಹೊಸತರ ವ್ಯಾಮೋಹ ಇದ್ದದ್ದೆ. ಮನುಷ್ಯನ ಜೀವಧಾತುವಿನಲ್ಲೇ ಈ ಹೊಸ ಹೊಸತಾದುದನ್ನು ಉನ್ಮೇಷಿಸಿಕೊಳ್ಳುವ, ಬಳಸುವ ಒಂದು ಸಹಜಾಕಾಂಕ್ಷೆ ಅಡಗಿದೆ. ಪ್ರಾಕೃತ–ರೂಕ್ಷವಾದುದನ್ನು ಸ್ವಲ್ಪಮಟ್ಟಿಗೆ ಅಲಂಕಾರಿಕವಾಗಿಯೊ ಪ್ರೌಢ ಭಾಷಾರೂಪದಲ್ಲಿಯೊ ಪರಿಷ್ಕರಿಸಿ ಹೇಳುವ ಅಥವಾ 'ಸುಸಂಸ್ಕೃತ' ರೀತಿಯಲ್ಲಿ ನಡಕೊಳ್ಳುವ ಪ್ರವೃತ್ತಿಯನ್ನು 'ಸಂಸ್ಕೃತೀಕರಣ' ಎಂದು ಸ್ಥೂಲವಾಗಿ ನಿರ್ವಚಿಸಬಹುದು. ಸಮಾಜಶಾಸ್ತ್ರದಲ್ಲಿ ಇದು ಜಾತಿ–ವರ್ಗಗಳ ಸಂಬಂಧಕ್ಕೆ ಅನ್ವಯಿಸಿ ಬಂದರೆ, ಭಾಷಾಶಾಸ್ತ್ರದಲ್ಲಿ ಶಬ್ದರೂಪ ಪ್ರಯೋಗಗಳಿಗೆ ಅನ್ವಯಿಸಿ ಬರುತ್ತದೆ.

'ಸಂಸ್ಕೃತೀಕರಣ' ಪ್ರಕ್ರಿಯೆಯು ಮಾನವ ಸಂಸ್ಕೃತಿ–ನಾಗರಿಕತೆಗಳ ವಿಕಾಸದ ಒಂದು ನಿರ್ದಿಷ್ಟ ಘಟ್ಟದಲ್ಲಿ ತಲೆದೋರುವುದಾದ್ದರಿಂದ, ಮೊದಲು 'ಸಂಸ್ಕೃತಿ' ಎಂದರೇನೆಂದು ತಿಳಿಯುವುದು ಅಗತ್ಯ.

'ಸಂಸ್ಕೃತಿ' (Culture) ಎಂಬ ಶಬ್ದವು ಕೃಷಿ (Agri-Culture) ಎಂಬ ಭೂವಾಚಕಶಬ್ದ ಸಂಬಂಧದಿಂದ ವ್ಯವಸಾಯವನ್ನೂ, ನಾಗರಿಕತೆ (Civilisation) ಎಂಬುದು ನಗರ ಜೀವನವನ್ನೂ ಸೂಚಿಸುವುವು. ಸಂಸ್ಕೃತಿಗೆ ಉಪಷ್ಟಂಭಕವಾದುದರಿಂದ ನಾಗರಿಕತೆಯು ಸಂಸ್ಕೃತಿಗಿಂತ ಮುಖ್ಯವಲ್ಲ. ನಾಗರಿಕತೆಯು ಸಾಮಾಜಿಕ ವ್ಯವಸ್ಥೆ; ಸಂಸ್ಕೃತಿಯು ಆಧ್ಯಾತ್ಮಿಕ ಪ್ರಗತಿ (ಡಾ. ಎಸ್. ಶ್ರೀಕಂಠಶಾಸ್ತ್ರಿ).

ಮೂಲತಃ ಸಂಚಾರಿ ಜೀವನ ನಡೆಸುತ್ತಿದ್ದ ಆದಿ ಮಾನವನ ಆವಶ್ಯಕತೆಗಳು ಸೀಮಿತವಾಗಿದ್ದುವು. ಮೊದಲು ಹೊಟ್ಟೆಯ ಪರಿಚಯ ಮಾತ್ರ ಇದ್ದ ಮನುಷ್ಯ ಒಂದು ಕಡೆ ನಿಂತ ಮೇಲೆ ತನ್ನ ಆಹಾರದಲ್ಲಿ ಪರಿಷ್ಕಾರ ಮಾಡಿದ. ಬೇಯಿಸುವ ಮೂಲಕ ಹೊಸ ರುಚಿ ಕಂಡನಂತರ ಅದರಲ್ಲೇ ಹತ್ತು ಹಲವು ರೀತಿಗಳನ್ನು, ಪ್ರಭೇದಗಳನ್ನು ಕಂಡುಕೊಂಡ. ಆಹಾರವು ರುಚಿ–ಶುಚಿಯಾಗಿರಬೇಕಾದ್ದು ಎಷ್ಟು ಆವಶ್ಯವೋ ಅಷ್ಟೇ ಆಹಾರಕ್ಕಾಗಿ ಬಳಸುವ ಉಪಕರಣಗಳೂ ಶುಚಿಯಾಗಿಯೂ ಸುಂದರವಾಗಿಯೂ ಇರಬೇಕಾದ ಅಗತ್ಯವನ್ನು ಮನಗಂಡ. ಈ ಪರಿಷ್ಕರಣ, ಸಂಸ್ಕರಣ, ಸೌಂದರ್ಯಪ್ರಿಯತೆ ಬಟ್ಟೆಬರೆ, ವಸತಿ, ಮತ್ತಿತರ ಜೀವನಾವಶ್ಯಕ ವಸ್ತುಗಳ ವಿಷಯದಲ್ಲೂ ಹಬ್ಬಿತು. ಈ ಪರಿಪೂರ್ಣತೆಯ ಬಯಕೆಯೆ ("love of perfection") 'ಸಂಸ್ಕೃತಿ' ಎನ್ನಿಸಿಕೊಂಡಿತು.

ದಿ. ಡಾ. ಡಿ.ವಿ. ಗುಂಡಪ್ಪನವರು 'ಸಂಸ್ಕೃತಿ'ಯನ್ನು ಹೀಗೆ ಸೊಗಸಾಗಿ ವರ್ಣಿಸಿದ್ದಾರೆ: 'ಸಂಸ್ಕಾರದಿಂದ ಸಂಸ್ಕೃತಿ'. 'ಸಂಸ್ಕಾರ' ಅಥವಾ 'ಸಂಸ್ಕರಣ' ಎಂದರೆ ಸಮ್ಯಕ್ ಕರಣ,–ಸಮ್ಯಕ್ ಕೃತಿ.–ಸಂಸ್ಕೃತಿ. ಹಾಗೆಂದರೆ ಚೆನ್ನಾಗುವಂತೆ ಮಾಡುವುದು, ಒಳ್ಳೆಯದನ್ನಾಗಿಸುವುದು, ಶುದ್ಧಿಮಾಡಿ ಉತ್ತಮಪಡಿಸುವುದು ಎಂದರ್ಥ......ಆ ಒಳ್ಳೆಯದನ್ನು ಕಂಡುಕೊಳ್ಳುವ ಪ್ರಯತ್ನವೇ –ಆ ಹಿತವನ್ನು ಹುಡುಕು

ವೃದೇ–ಸಂಸ್ಕೃತಿ, ನಮ್ಮ ಜೀವನವನ್ನು ಸಾಧುವನ್ನಾಗಿ ಮಾಡಿಕೊಳ್ಳುವ ವಿಧಾನವೇ ಸಂಸ್ಕೃತಿ. ಲೋಕದೊಡನೆ ನಮಗಾಗುವ ನಾನಾ ಸಂಪರ್ಕಗಳಲ್ಲಿ ನಾವು ಉಂಟಾಗಿಸುವ ಔಚಿತ್ಯವೇ ಸಂಸ್ಕೃತಿ."

ಸಮಾಜಶಾಸ್ತ್ರದಲ್ಲಿ Sanskritisation ಎಂಬ ಪ್ರಕ್ರಿಯೆ (process)ಯನ್ನು ಹೀಗೆ ವ್ಯಾಖ್ಯಾನಿಸಿದೆ: 'Sanskritisatton is a proccss by which a "low" Hindu caste or tribal or other group changes its customs, ritual, ideology and way of life in the direction of a high and frequently twice-born class. Generally such changes are followed by a claim to a higher position in the caste hierarchy than that traditionally conceded to the claimant caste by the locality. (M. N. Srinivas)

ಮೇಲಿನ ವಿವರಣೆಯಲ್ಲಿ ಬರುವ (caste) ಜಾತಿ ಎಂಬ ಪದದ ಸ್ಥಾನದಲ್ಲಿ 'ಸ್ಥಳನಾಮರೂಪ' ಎಂಬ ಪದವನ್ನಿಟ್ಟು ನೋಡಿದಾಗ ಮೊದಲ ವ್ಯಾಖ್ಯಾನವು ಇದಕ್ಕೂ ಅನ್ವಯವಾಗಬಲ್ಲುದು ಎಂದು ಸುಮಾರಾಗಿ ಹೇಳಬಹುದು. ಯಾವೊಂದು ಸ್ಥಳನಾಮ ರೂಪವು ಪ್ರಾಚೀನತರವಾಗಿದ್ದರೂ, ಇದ್ದಂತೆ ಇರುತ್ತಿದ್ದಲ್ಲಿ ಯಾವ ಅರ್ಥ ಕೊಡುತ್ತಿತ್ತೊ, ಕೆಲವೊಮ್ಮೆ ಅದಕ್ಕೆ ಭಿನ್ನವಾದ ಅರ್ಥವನ್ನು, ವಿಶೇಷವಾಗಿ ಪರಿಷ್ಕರಣ ಇಲ್ಲದೆ ಸಂಸ್ಕರಣ ಮೂಲವಾದ ಉದಾತ್ತಾರ್ಥವನ್ನು (–ಇದು ಈ ಪ್ರಕ್ರಿಯೆ ಪರಿಣಾಮವೂ ಹೌದು) ಕೊಡಬಲ್ಲ ರೂಪಧಾರಣೆ ಮಾಡುವುದೇ '(ಸ್ಥಳನಾಮಗಳಲ್ಲಿ) ಸಂಸ್ಕೃತೀಕರಣ' ವೆನ್ನಬಹುದು. ಇದು ಎಲ್ಲ ಕಡೆಯಲ್ಲಿಯೂ ಸಂಸ್ಕೃತ ಭಾಷಾರೂಪವನ್ನೇ ಪಡೆಯಬೇಕಾಗಿಲ್ಲ; ವಿಶಾಲಾರ್ಥದಲ್ಲಿ ತೆಗೆದುಕೊಂಡಾಗ, ಹೆಚ್ಚು ಚಲಾವಣೆಯುಳ್ಳ, ಮೂಲರೂಪಕ್ಕಿಂತ ಹೆಚ್ಚು ಆಕರ್ಷಕವಾಗಬಲ್ಲ, ಸುಸಂಸ್ಕೃತ (cultured) ಎನ್ನಿಸುವ ಭಾಷಾರೂಪವನ್ನೂ ಪಡೆಯಬಹುದು. ಈ ಹಿನ್ನೆಲೆಯಲ್ಲಿ ನೋಡಿದಾಗ ಪಾಟಲೀಪುತ್ರ—ಕುಸುಮಪುರ, ತಾಳಗುಂದ–ಸ್ಥಾನಕುಂದೂರು, ಸೊರಬ—ಸುರಭೀಪುರ, ಹಾಡುವಳ್ಳಿ—ಸಂಗೀತಪುರ ಆಗುವಂತೆ, ಪೆರ್ಗೊಟು—ಹಿರೇಬೆಟ್ಟು/ಹಿರಿಯಡ್ಕ, ಪೊಸೋಡಿ—ಹೊಸಬೆಟ್ಟು, ಪೊಸೊಟ್ಟು—ಹೊಸಬೆಟ್ಟು, ಸುರತಾಲ್—ಸುರತ್ಕಲ್, ಒಡ್ಪು—ಉಡುಪಿ, ಮಲ್ಪ—ಮಲ್ಪೆ, ಪಿರಾಲಿ—ಪರ್ಕಳ(?), ಕಲ್ಲಂಜ—ಕಲ್ಲುಮುಂಜ, ಬೊಳ್ಳೆ—ಬೆಳ್ಳೆ ಆಗಬಹುದು.

ಈ ಕೆಳಗಿನ ಸಂದರ್ಭಗಳಲ್ಲಿ ಎಡೆವೆಸರ ಮೂಲರೂಪ(?)ಗಳು ಸಂಸ್ಕೃತೀಕರಣದ ರಾಸಾಯನಿಕ ಕೊಳವೆಗಳೊಳಗೆ ಹಾದು ಈಚೆಗೆ ಬಂದಿವೆ; ಹಾಗೆ ಈಚೆಗೆ ಬಂದಾಗ ಸಂಸ್ಕೃತಪದಗಳೇ ಆಗಿ ಪರಿಣಮಿಸಿವೆ:

ಹುಬ್ಬಳ್ಳಿ—ಭ್ರೂಪುರ	ಬಿಳಿಗಿ—ಶ್ವೇತಪುರ
ಎಳಂದೂರು—ಬಾಲೇಂದುಪುರ	ಹರಿಟ—ಹಂತಪುರ
ಧಾರವಾಡ—ತಂತುಪುರ	ಸೋದಾ—ಸುಧಾನಗರೀ
ಮುಳಬಾಗಿಲು—ಕಂಟಕದ್ವಾರ	ಕಿಗ್ಗ—ಕೀಟ್ಯಾಗ್ನೇಶ್ವರ
ಗದುಗು—ಕ್ರತುಪುರ	ಕಿತ್ತೂರು—ಕೀರ್ತಿಪುರ
ಅಣ್ಣಿಗೇರಿ—ಅನ್ನಗಿರಿ	ಕೊಪ್ಪಳ—ಮಹಾಕೊಪಣನಗರ

ಮೇಲಿನ ಉದಾಹರಣೆಗಳು ಅಖಿಲ ಕರ್ನಾಟಕ ಮಟ್ಟದವಾದುವು. ತುಳುನಾಡಿನ ಕೆಲವು ಉದಾಹರಣೆಗಳು ಹೀಗಿವೆ:

ಜಾಂತಾರು—ಚ್ಯವನ(ಪುರ)	ಕೊಲ್ಲೂರು—ಕುವಲಯಪುರ/ಕೋಲಾಪುರ
ಸಾಂತೂರು—ಶಾಂತಪುರ	ವಿಟ್ಲ—ವಿಕಟಚಕ್ರಪಟ್ಟಣ/ಇಷ್ಟಕಪುರ
ಕೊಮ್ಲ—ರಾಮದಾಸನಗರ	ಕಂದಾವರ—ಸ್ಕಂದಪುರ
ಗುಂಡ್ಯಡ್ಕ—ಶ್ರೀನಿವಾಸಪುರ	ಕಾವು—ಸ್ವಾರಾಮ

ಬಾಳೆಕುದ್ರು—ರಂಭಾದ್ವೀಪ
ಕೋಟೇಶ್ವರ—ಧ್ವಜೇಶ್ವರ
ಬಾರಕೂರು—ಬಾರಪಕನ್ಯಾಪುರ/ವಾರಕೂಲ
/ದ್ವಾರಕ/'ವಾರಕೋಲ'?
ಕಾಟಪಳ್ಳಿ—ಇಂದಿರಾನಗರ
ಅತ್ರೂರು—ಅರ್ಥಪುರ
ಕುಚ್ಚೂರು—ಕುಬ್ಜಪುರ

ಕೊಡಿಪಾಡಿ—ಪ್ರಾಗ್ರ್ಯವಾಟ
ಇಡೆತುದೆ—ಸರಿದಂತರಾಜ್ಯದೇಶ
ಪೀಪಳ್ಳಿ—ಅಶ್ವತ್ಥಪುರ
ಪಳೂ(ಣೂ)ರು—ವೇಣೂರು, ವೇಣುಪುರ,
ಕಿಂಪುರ, ವ್ರತಪುರ.
ಬಸರೂರು—ವಸುಪುರ/ ವೈಶ್ಯರೂರು
ಉಡುಪಿ—ರಜತಪೀಠಪುರ/ರೌಪ್ಯಪೀಠ/ ಶಿವರೂಪ್ಯ

ಮೇಲಿನ ಬಹುತೇಕ ಉದಾಹರಣೆಗಳಲ್ಲಿ ಕನ್ನಡರೂಪಗಳೆಡೆಯಲ್ಲಿ ಸಂಸ್ಕೃತರೂಪವು ಪ್ರತಿನಿಧಾನ (substituslon) ವಾಗಿರುವುದು ಸುವ್ಯಕ್ತ. ಆದರೆ ಮೊದಲ ರೂಪಗಳಷ್ಟು ಎರಡನೆಯವು ಜನಪ್ರಿಯವಾಗಿಲ್ಲ; ಜನಪ್ರಿಯವಾಗಿಸುವ ಉದ್ದೇಶದಿಂದಲೇ ಈ ಸಂಸ್ಕೃತರೂಪಗಳು ಹುಟ್ಟಿಕೊಂಡಿವೆ ಎನ್ನಬಹುದು. ಅರ್ಥಾತ್, ಈ ಸಂಸ್ಕೃತೀಕೃತ ರೂಪಗಳು ಮೂಲಾರ್ಥವನ್ನು ಒಂದೇ ಮಸುಕು ಮಾಡಿ. ಇಲ್ಲವೆ ಅಪವ್ಯಾಖ್ಯಾನಿಸಿಯಾದರೂ, ಆ ಆ ಎಡೆಗೆ ಇಲ್ಲದ ಚರಿತ್ರೆಯನ್ನು ಸೃಷ್ಟಿಸಿವೆ ಎನ್ನಬೇಕು. ಈ ಎಲ್ಲ ಪರಿವರ್ತನೆಗಳಿಗೆ ಹಿನ್ನೆಲೆಯಾಗಿ ಕೆಲವು ಸಾಂಸ್ಕೃತಿಕ ಘಟನೆಗಳು–ಮಾರ್ಪಾಡುಗಳು ಈ ಎಡೆಗಳಲ್ಲಿ ನಡೆದುದೇ ಇದಕ್ಕೆ ಕಾರಣ ಇರಬೇಕು.

ಕೆಲವೊಂದು ಉದಾಹರಣೆಗಳಲ್ಲಿ ಇದಕ್ಕೆ ಕಾರಣ ಸುಸ್ಪಷ್ಟ. ಮೂಲರೂಪವೇ–ಅದು ಕೊಡುವ ವಾಚಕ ಇಲ್ಲವೆ ಕೆಲವೊಮ್ಮೆ ಅಸಭ್ಯವಾಚಕಗಳು. ಆ ರೂಪಗಳು ಪ್ರಾಚೀನವಾಗಿರಬಹುದು, ಸ್ವಯಂವೇದ್ಯವಾಗಿರಬಹುದು. ಆದರೆ 'ಶಿಷ್ಟ'ರೆನಿಸಿಕೊಂಡವರಿಗೆ ಕಾಲಕ್ರಮೇಣ ಇವು ಸರಿಯಾದ ಅರ್ಥವನ್ನು ಸುಲಭದಲ್ಲಿ ಕೊಡಲಾರದೆ ಹೋದಾಗ, ಅಥವಾ ಅದು ಕೊಡುವ ಅರ್ಥ 'ಅಸಭ್ಯ'ವೆನ್ನಿಸಿದಾಗ, ಅವರು ಓದಿದ ವಿಷಯ, ಹೆಣೆದ ಕಲ್ಪನೆಗಳು–ಪ್ರೌಢಭಾಷೆ ಒಟ್ಟಾಗಿ ಊರಿನ ಹೆಸರು ಸುತ್ತ ಹೊಸ ವೇಷ ತೊಡಿಸಿದುವು.

ಎರಡನೆಯದಾಗಿ, ಹೊಸತರ ಅನ್ವೇಷಣೆ ಮನುಷ್ಯನ ರಕ್ತಗುಣವಾದ್ದರಿಂದ, ಹಳೆಯ ಪದಗಳು–ನಾಮರೂಪಗಳು ಮತ್ತೆ ಮತ್ತೆ ಕಿವಿಗೆ ಬಿದ್ದಾಗ ಏಕತಾನ (monotony)ದ ಅನುಭವವಾಗಬಹುದು. ಆಗ ಹೊಸತೊಂದು ಕಲ್ಪನೆಯ, ರೂಪದ ಆರೋಪ ಅನಿವಾರ್ಯ. ಈ ಪ್ರಯೋಗಪ್ರಿಯತೆ ಸರ್ವಸಾಮಾನ್ಯ ಪ್ರವೃತ್ತಿ.

ಮೂರನೆಯದಾಗಿ, ಸಂಸ್ಕೃತದ ಮೇಲಣ ಅಂಧವ್ಯಾಮೋಹವೂ ಕಾರಣವಾಗಬಲ್ಲುದು. ನಮ್ಮ ಜನಗಳಲ್ಲಿ, ಸಂಸ್ಕೃತ 'ಮೃತಭಾಷೆ'ಯೆನ್ನಿಸಿಕೊಂಡರೂ, ಅದರ ಮೇಲಣ ಶ್ರದ್ಧೆವ್ಯಾಮೋಹಗಳು 'ಮೃತ'ವಾಗಿಲ್ಲವೆಂಬುದಕ್ಕೆ ಸಾರ್ವಕಾಲಿಕವಾಗಿ ಸಂಸ್ಕೃತೀಕರಿಸಲ್ಪಡುತ್ತಿರುವ ಊರ್ಪೆಸರುಗಳು ಜೀವಂತ ಸಾಕ್ಷಿಗಳಾಗಬಲ್ಲುವು. ಮತ್ತೆ ಇದಕ್ಕೆ ಕಾರಣ ಹುಡುಕಬೇಕಾಗಿಲ್ಲ. ಸಂಸ್ಕೃತದಲ್ಲಿ ಏನು ಹೇಳಿದರೂ ಪ್ರಾಚೀನತೆಯ ಅನುಭವ–ಕಲ್ಪನೆ ಬಂದುಬಿಡುತ್ತದೆ. ಇದಕ್ಕೆ ಸಂಸ್ಕೃತವು, ಉಳಿದ ಭಾಷೆಗಳು ಉಸಿರಾಡಲು ಕಲಿಯುವಷ್ಟರಲ್ಲಿ ಸರ್ವಾಂಗಪುಷ್ಟವಾಗಿ ಬೆಳೆದು ಸಿದ್ಧಿ ಪಡೆದ 'ಸುಸಂಸ್ಕೃತ' ಪ್ರೌಢಭಾಷೆಯಾಗಿರುವುದೇ ಕಾರಣ ಎನ್ನಬಹುದು. ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಊರು ಪ್ರಾಚೀನ ಎನ್ನಿಸಿಕೊಳ್ಳಬೇಕು; ಅಲ್ಲಿನ ದೇವರು ಉದ್ಭವ ಮೂರ್ತಿಯಾಗಬೇಕು, ಪವಾಡಗಳು ಅದ್ಭುತಗಳು ನಡೆದ ಹಾಗಿರಬೇಕು. ಪರಿಸರದ ಜನಗಳ ಮನಸೆಳೆವ ಹಾಗಿರಬೇಕು–ಎಂಬ ಬಯಕೆ ಇರುವುದು ಸಹಜವೆ. ಆದ್ದರಿಂದ ಈ ಹುಟ್ಟೂರ ಮೇಲಣ ಅಭಿಮಾನವೂ ಈ ಸ್ಥಳನಾಮಗಳ ಸಂಸ್ಕೃತೀಕರಣಕ್ಕೆ ಪ್ರಚೋದನೆ ನೀಡಿತೆಂಬುದನ್ನು ಮರೆಯುವಂತಿಲ್ಲ. ಅವರು ತಮ್ಮ ಈ ಉದ್ದೇಶಕ್ಕೆ ಸಂಸ್ಕೃತವನ್ನು ಚೆನ್ನಾಗಿ ಬಳಸಿಕೊಂಡರು; ಅದಕ್ಕೆ ತಕ್ಕಂತೆ ಸಂಸ್ಕೃತವೂ ತಾನು ಮುಟ್ಟಿದ್ದೆಲ್ಲವುಗಳಿಗೂ ಪ್ರಾಚೀನತೆಯ ಪುರಾಣದ ಮುದ್ರೆ ಒತ್ತಿತು. (ಇದು ಸ್ಥಳಪುರಾಣ–ಕ್ಷೇತ್ರಮಹಾತ್ಮೆಗಳ ಉದಯಕ್ಕೆ ದಾರಿ ಮಾಡಿಕೊಟ್ಟಿತು. ಇವು ಈ ಕ್ಷೇತ್ರದೊಂದಿಗೆ ನೇರ ಸಂಬಂಧವಿರಿಸಿಕೊಂಡ, ಜೀವನೋಪಾಯಕ್ಕಾಗಿ ಕ್ಷೇತ್ರದೇವತೆಗಳನ್ನೇ ಪೂರ್ಣ ನೆಮ್ಮಿಕೊಂಡಿದ್ದ ಸುಸಂಸ್ಕೃತರ (ಬ್ರಾಹ್ಮಣರ) ಕೈವಾಡ ಎಂಬುದನ್ನೂ ಈ ಸಂದರ್ಭದಲ್ಲಿ ಸ್ಮರಿಸಬೇಕು.)

ಆದರೆ ಹೀಗೆ ಮಾಡುವಾಗ ವಿದ್ವಾಂಸರಾದ, ಅಭಿಮಾನಿಗಳೆನ್ನಿಸಿಕೊಂಡ ಈ ಜನರು ಮೂಲ (ದೇಸೀಯ) ಪದವು ಕೊಡುತ್ತಿದ್ದ ಅರ್ಥವನ್ನು–ರೂಪವನ್ನು ವಿರೂಪಗೊಳಿಸುವುದರ ಮೂಲಕ– ಅಪಾರ್ಥವಾಗಿಸಿದ್ದುಂಟು. ಇಲ್ಲವೆ ಇನ್ನಷ್ಟು ಕಠಿಣಗೊಳಿಸಿದ್ದುಂಟು; ಕೆಲವೊಮ್ಮೆ ಕೊಂದದ್ದೂ ಉಂಟು. ಕೊಡಿಪಾಡಿ ಎಂಬರ್ಥ ಪಾಗ್ರ್ಯವಾಟದಲ್ಲಿ ಹೊರಟಿದ್ದರೂ ಇದು ಮೊದಲ ರೂಪದಷ್ಟು ಸರಳವಾಗಿಲ್ಲ; ಸಾಮಾನ್ಯರ ಬಾಯಿಗೆ ಅದರ ಅರ್ಥ ನಿಲುಕಲಾರದು. ಹಾಗೆಯೇ ಇಪೆತ್ತುದೆ ಅಥವಾ ಎಡಪೀರ್ ಎಂಬುವರ ಅರ್ಥ ಸುರಿದಂತ ರಾಷ್ಟ್ರ ದೇಶದಲ್ಲಿದೆ ಎಂಬುದು ಎಷ್ಟು ಜನಕ್ಕೆ ಗೊತ್ತಾದೀತು? ಈ ಬೀಸುವಾರಿಯೇಕೆ? (ಮಕ್ಕಳಿಗೆ ಹೆಸರಿಡುವಾಗ ಕರೆಯಲು ಅನುಕೂಲವಾಗುವಂತೆ ಆದಷ್ಟು ಸಣ್ಣ ಹೆಸರನ್ನು ಇಡುವುದಿಲ್ಲವೇ? ಕೆಲವೊಮ್ಮೆ ಹೆಸರು ಉದ್ದವಾಗಿದ್ದರೂ ಹೊಟ್ಟೆಕುಮಾರಿ ಎರಡಕ್ಷರದ ಕೊಂಚಾಟದ ಹೆಸರಿನಿಂದ ಕರೆಯುವುದಿಲ್ಲವೆ? ಅದರ ಬದಲು ಆ ಹೆಸರನ್ನು ಇನ್ನಷ್ಟು ಉದ್ದಿಸಿ ವಿವರಣಾ ರೂಪದಂತೆ ಉಚ್ಚರಿಸಲು ಯಾರು ತಯಾರಿದ್ದಾರು? ಇದೆಂಥ ಅಭಾಸ!) 'ಹೊಸಬೆಟ್ಟು' 'ನವಗಿರಿ' ಯಾಗಲಿ. 'ಮೀಪ್ಕ' 'ಅಶ್ವತ್ಥಪುರ' ಆದರೆ?–ಯಾರೆಯೇ ಊರು ಹೊಸದಾಗಿ ಉದಿಸಿದ ಅನುಭವ ವಾದೀತು. 'ಅತ್ತೂರು' 'ಅರ್ಥಪುರ'ವನ್ನ ತನ್ನ ಗರ್ಭದಲ್ಲಿ ಧರಿಸೀತೆ? ಎಥನ್ನ ಅರ್ಥ ಕೊಡುವುದಿಲ್ಲವೆ? 'ಬಿಟ್ಟ' (ತು. ಇಟ್ಟೆರ್)ದ ಮುಡಿಯನ್ನು ಜಗಜ್ಜಾಹೀರುಗೊಳಿಸುವ ಕಥೆಯಲ್ಲಿ ಅದು 'ಇಷ್ಟಕಪುರ' ವೆಂದೇಕೆ ಬದಲಾಗಬೇಕು? 'ಗುಂಡ್ಯಡ್ಕ' ಎಲ್ಲಿ? 'ಶ್ರೀಮಾಸಪುರ' ಎಲ್ಲಿ? 'ಹೇರೂರು' 'ಹಾಲಿನ ಊರು' ಎಂಬರ್ಥದಲ್ಲಾದರೆ 'ಪಯಃಪುರ' ಸರಿಹೋದೀತು. ಆದರೆ ಅದು 'ದೊಡ್ಡ ಊರು' ಎಂಬರ್ಥ ದೊಂದಿಗೆ ಹುಟ್ಟಿದ್ದಾದರೆ 'ಪಯಃಪುರ' 'overcoat' ಆಗಲಾರದೆ? 'ಬಾಳೆಕುದ್ರು' ಎಂಬರ್ಥವನ್ನ 'ರಂಭಾದ್ವೀಪ' ಕೊಟ್ಟರೂ ಎಷ್ಟು ಜನಕ್ಕೆ ಈ ಎರಡನೆ ರೂಪದ ಅರ್ಥ ಎಟುಕೀತು? ತಮ್ಮ ನಿತ್ಯಜೀವನದಲ್ಲಿ ಈ 'ರಂಭೆ'ಯೊಂದಿಗೆ ವ್ಯವಹರಿಸಿಯಾರು?

ಸಮಾಜಶಾಸ್ತ್ರದಲ್ಲಿ ಈ 'ಸಂಸ್ಕೃತೀಕರಣ' ಪ್ರಕ್ರಿಯೆ ಹೀಗೆ ಪ್ರವರ್ತಿಸುವುದಿಲ್ಲ. ಅಲ್ಲಿ ಒಂದು ನಿಕೃಷ್ಟವೆನ್ನಿಸಿಕೊಂಡ, ಅಥವಾ ಕೀಳುಜಾತಿಯು, ಕೆಲವು ನಿರ್ದಿಷ್ಟ ಕಾರಣಗಳಿಂದ, ಸಮಾಜದಲ್ಲಿ ಉನ್ನತ ಸ್ಥಿತಿಯನ್ನು ಮುಟ್ಟುವುದು 'ಸಂಸ್ಕೃತೀಕರಣ'ವಾಗುತ್ತದೆ. ಈ ಅರ್ಥದಲ್ಲಿ ಸಂಸ್ಕೃತೀಕರಣ ಪ್ರಕ್ರಿಯೆಯ ಪರಿಣಾಮ ವ್ಯಕ್ತಿಯ 'ಅಸ್ತಿತ್ವ ವಿಧಾನ' (position) ದಲ್ಲಿ ಬದಲಾವಣೆಯೇ ಹೊರತು, ಆ ವ್ಯಕ್ತಿಯ ವರ್ಗದ ರಚನೆಯಲ್ಲಿ (structural change) ಅಲ್ಲ. ಆದರೆ ಇಲ್ಲಿ, ನಾವು ಮೇಲೆ ನೋಡಿದ ಪ್ರಕಾರ, ಶಬ್ದರೂಪಗಳು ಬದಲಾಗುವಂತೆ ಹಲವು ಕಡೆ ಅರ್ಥವೇ ಪೂರ್ಣ ಬದಲಾಗಿಬಿಟ್ಟದ್ದುಂಟು.

ಹೆಚ್ಚಿನ ಈ ಸಂಸ್ಕೃತೀಕೃತ ರೂಪಗಳು ಕಾಣುವವು. ಇವು ತುಳುನಾಡಿನಲ್ಲಿ ಬ್ರಾಹ್ಮಣರ ಆಗಮನ ಮತ್ತು ಪ್ರಾಬಲ್ಯದ ನಂತರದ ಸ್ಥಿತಿಯನ್ನು ಯಾ ಚರಿತ್ರೆಯನ್ನು ಸೂಚಿಸುತ್ತವೆ. ಕ್ರಿ.ಶ. ೮ನೇ ಶತಮಾನ ದಲ್ಲಿ ಮೊದಲ ಬಾರಿಗೆ ತುಳುವಕ್ಕೆ ಬಂದವರೆನ್ನಲಾದ ಬ್ರಾಹ್ಮಣರು ಇಲ್ಲಿನ ಮಣ್ಣಿಗೆ ಒಗ್ಗಿ, ಜೀವನ ಭದ್ರತೆಯನ್ನು ಸ್ಥಾಪಿಸಿ, ಗುಡಿಗೋಪುರ ನಿರ್ಮಿಸಿ ತಮ್ಮ ಧರ್ಮಪ್ರಚಾರದ ಚಟುವಟಿಕೆಗಳಿಗೆ ತೊಡಗುವಾಗ ಕೆಲವು ಶತಮಾನಗಳೇ ಉರುಳಿರಬೇಕು. ಆಗ ಅವರು ನೆಲೆನಿಂತ ಊರು–ಪರಿಸರಗಳ ಬಗ್ಗೆ ಅವರು ವಿರಾಮ ಕಾಲದಲ್ಲಿ, ಅಕ್ಕಪಕ್ಕ ವಾತಾವರಣದಲ್ಲಿ ಯೋಚಿಸುತ್ತಿದ್ದರು. ಆ ವೇಳೆಗೆ ಈ ಎಡೆಗಳ ರೂಪಗಳು ಸೂಚಿಸುವ ಅರ್ಥ ಮಸುಕಾಗುತ್ತ ಬಂದಿದ್ದು, ಸಂಸ್ಕೃತಭಾಷಿಗಳಾಗಿದ್ದ ಈ ಬ್ರಾಹ್ಮಣರು ಹಳೆಯ ಊರುಗಳಿಗೆ ಹೊಸ ಹೆಸರನ್ನು ತೊಡಿಸಿ ಒಂದೊಂದು ಊರಿಗೂ ಒಂದೊಂದು ಸ್ಥಳಪುರಾಣ ಅಥವಾ ಮಹಾತ್ಮೆಯನ್ನು ಬರೆದರು. (ಹೆಚ್ಚಿನ ಸ್ಥಳಮಹಾತ್ಮೆಗಳು ಸು. ಮೂರ್ನಾಲ್ಕು ಶತಮಾನಗಳಷ್ಟು ಹಿಂದಿನವಾಗಿವೆ ಎಂಬುದು ವಿದ್ವಾಂಸರ ಅಭಿಪ್ರಾಯ.) ಹೀಗೆ ಮಾಡುವಾಗ ಅವರು ಎಲ್ಲ ಅಲ್ಲದಿದ್ದರೂ ಬಹುತೇಕ ಸಂದರ್ಭಗಳಲ್ಲಿ ಆ ಆ ಎಡೆಯ ಭೂವಿವರವನ್ನು (topography) ಅವಗಣಿಸಿದರೆಂಬುದು ಬೇಸರದ ಸಂಗತಿಯಾದರೂ ಒಪ್ಪದೆ ವಿಧಿಯಿಲ್ಲ.

ಜನಸಾಮಾನ್ಯರೂ ಹೆಚ್ಚು ಹೆಚ್ಚು ವಿದ್ಯಾವಂತರಾಗುತ್ತ ಬಂದಂತೆ ಈ ಹೆಸರು ಬದಲಿಸುವ ಹವ್ಯಾಸ ಒಂದು 'ಫ್ಯಾಶನ್' ಆಗ ಹತ್ತಿತು. ವಿದ್ಯಾಭ್ಯಾಸ, ನಾಗರಿಕ ಸಾಧನಗಳು, ಸಂಚಾರ ಸೌಲಭ್ಯ

ಇತ್ಯಾದಿಗಳು ಬೆಳೆಯುತ್ತ ಬಂದಂತೆ ಜೀವನದ ತುಂಬೆಲ್ಲ ವಿರಾಡ್ರೂಪಿಯಾಗಿ ಹಬ್ಬಿದ ಈ 'ಸಂಸ್ಕೃತೀಕರಣ ಪ್ರಕ್ರಿಯೆ' ಸ್ಥಳನಾಮ ರೂಪಾಂತರದಲ್ಲಿ ಪ್ರತಿಫಲಿಸಿತು. ಧರ್ಮ, ರಾಜಕೀಯ, ವಲಸೆ ಹಾಗೂ ಅನುಕರಣಗಳು ಇದರ ಹಿನ್ನೆಲೆಯಾಗಿ ನಿಂತು ಪರಿಣಾಮಕಾರಿಯಾಗಿ ಕೆಲಸ ಮಾಡಿವೆ ಎಂಬುದನ್ನು ಒಪ್ಪಬೇಕು.

ಇನ್ನೊಂದಂಶವನ್ನು ಇಲ್ಲಿ ಪ್ರಸ್ತಾಪಿಸಬೇಕಾಗಿದೆ. ಈ ಸಂಸ್ಕೃತೀಕೃತ ರೂಪಗಳು ಎಷ್ಟೊಂದು ಕೃತಕವಾಗಿವೆ ಎಂಬುದಕ್ಕೆ ನಿದರ್ಶನ, ಒಂದೇ ಊರಿಗೆ ಹಲವಾರು ಬೇರೆ ಬೇರೆ ಸಂಸ್ಕೃತೀಕೃತ ರೂಪಗಳಿರುವುದು. ಹೀಗೆ ನವೀನರೂಪಗಳನ್ನು ಆರೋಪಿಸಿದ ಜನರಿಗೆ ನಿಶ್ಚಿತ ರೂಪದ ಅರಿವಾಗಲಿಲ್ಲ, ಖಚಿತ ಕಲ್ಪನೆ ಮೂಡಲಿಲ್ಲ ಎಂಬುದಕ್ಕೆ ಸಾಕಷ್ಟು ಸಾಕ್ಷಿಗಳಿವೆ. ೧. ಬಾರಕೂರು–ಸಂಸ್ಕೃತದಲ್ಲಿ ಇದಕ್ಕೆ ವಾರಕೂಲ, ಬಾರಹಕನ್ಯಾಪುರ, ದ್ವಾರಕ(?) ಎಂಬ ಮೂರು ರೂಪಾಂತರಗಳನ್ನು ಸೂಚಿಸಲಾಗಿದೆ. ಆದರೆ ಇವ್ಯಾವುವೂ ಬಹುಶಃ ಮೂಲಾರ್ಥದ ಶೋಧ ಮಾಡಲಾರವು. ೨. ಕದ್ರಿ/ಕದರಿ–ಕದಳೀ ಕದಳೀವನ, ಕದಳೀಕ್ಷೇತ್ರ. ಕದಲಿಕಾವನ ಮುಂ. ೩. ಕುಕ್ಕೆ–ಸುಬ್ರಹ್ಮಣ್ಯ, ಕುಮಾರಾದ್ರಿ, ಪುಷ್ಪಗಿರಿ, ವಾಸುಕಿಕ್ಷೇತ್ರ, ಆದಿತ್ಯಕ್ಷೇತ್ರ. ೪. ಪೊಳಲಿ/ಪುರಾಲ–ಪುಳಿನಾಪುರ, ಪುಳಿನಕ್ಷೇತ್ರ, ಪುರಲಾ(?) ೫. ಬ್ರಹ್ಮಾವರ–ಅಜಪುರ, ಬ್ರಹ್ಮಪುರ, ಗಜಪುರ, ಧ್ವಜಪುರ, ೬. ಕೊಡವೂರು–ಕ್ರೋಢಾಶ್ರಮ, ಕಾನನದೇವತಾಸದನ, ೭. ಬಿಳೂರು–ವೇಣುಪುರ; ಅದೇ 'ಬಿಸೂರು' ಎಂದು ಉಚ್ಚಾರವಾದಾಗ ಸಂಸ್ಕೃತದಲ್ಲಿ, ಅರ್ಥಸಂದಿಗ್ಧವಾಗಿ 'ಕಿಂಪುರ'(?))

ಹೀಗೆ ಊರ ಹೆಸರುಗಳಲ್ಲಿ ಅರ್ವಾಚೀನ ಸಂಸ್ಕೃತ ಮತ್ತು ಅದನ್ನನುಸರಿಸಿ ಪ್ರಾದೇಶಿಕ ಭಾಷಾ ರೂಪಗಳ ಪ್ರತಿನಿಧಾನಕ್ಕೆ ಎರಡು ಮುಖ್ಯ ಅಂಶಗಳು ಪ್ರಭಾವ ಬೀರಿದುವು– ೧. functional factor–ಪ್ರಾಯೋಗಿಕ ಅಂಶ: (ಭಾಷಾಶಾಸ್ತ್ರೀಯ ಅಂಶ): ಮೂಲಾರ್ಥ ವಿವರಣೆಯಲ್ಲುಂಟಾದ ಕ್ಲಿಷ್ಟತೆ, ದುರೂಹತೆ. ೨. psychological factor–ಮನಶ್ಶಾಸ್ತ್ರೀಯ ಅಂಶ; ವ್ಯಕ್ತಿ ತನ್ನ ಹೆಸರಿನ ನಂತರ–ಕೆಲವೊಮ್ಮೆ ಹೆಸರಿಗಿಂತಲೂ ಹೆಚ್ಚಾಗಿ (ಏಕೆಂದರೆ, ಇತ್ತೀಚೆಗೆ ಕೆಲವು ವ್ಯಕ್ತಿಗಳು ಊರ ಉಪನಾಮದಿಂದಲೇ ಪ್ರಸಿದ್ಧರಾಗಿ ಬಿಟ್ಟಿದ್ದಾರೆ., ಕಾಳಜಿ ವಹಿಸುವ, ಅಭಿಮಾನ ಬೆಳೆಸಿಕೊಂಡಿರುವ ಅಂಶವೇ ಸ್ಥಳನಾಮ. ಇದೂ ಸ್ಥಳನಾಮದ ವೈವಿಧ್ಯ, ರೂಪಾಂತರ, ಪರಿಷ್ಕರಣಗಳ ಮೂಲ. ಇದು ಸ್ಥಳನಾಮಗಳ 'psychology'. ಹೀಗೆ ಸ್ಥಳಸಂಬಂಧವಾದ ಪುರಾಣಕ್ಕೆ, ದಂತಕತೆಗಳಿಗೆ, ಇತರ ಐತಿಹ್ಯಗಳಿಗೆ ಇಡಿಯ ಸಮಾಜವೇ ಕಾರಣವಾಗಿಬಿಡುವುದರಿಂದ, ಈ ಸ್ಥಳ ಪುರಾಣಾದಿಗಳನ್ನು ಕೆಲವರು ಜಾನಪದ ಪ್ರಕಾರವಾಗಿ ಗಣಿಸುವುದುಂಟು.

ಈಗಲೂ ಹೀಗೆ ಊರುಗಳಿಗೆ, ಊರಿನ ಒಂದು ಭಾಗಕ್ಕೆ–ಹೊಸ ಬೆಳವಣಿಗೆ ಉಂಟಾದಾಗೆಲ್ಲ–ಹೊಸ ಹೆಸರಿಡುತ್ತೇವೆ. ಉದಾ.–ಬಂನಿಂಜದ 'ನಾರಾಯಣಗುರು ದೇವಸ್ಥಾನ'ದ ಪರಿಸರಕ್ಕೆ 'ನಾರಾಯಣಗುರು ನಗರ'; ಉಚ್ಚಿಲದ 'ಮಹಾಲಕ್ಷ್ಮೀ ದೇವಾಲಯ'ದ ವಠಾರಕ್ಕೆ 'ಮಹಾಲಕ್ಷ್ಮೀ ನಗರ'; ಇವೆಲ್ಲ ಕೇವಲ ಕೆಲವು ವರ್ಷಗಳ ಹಿಂದಿನ ನಾಮಕರಣಗಳು. ಅಲ್ಲದೆ 'ಇಸ್ಮಾಯಿಲ್ ನಗರ, ಒಲವಿನ ಹಳ್ಳಿ, ಚೇತನಹಳ್ಳಿ, ಇಂದಿರಾನಗರ, ಹನುಮಂತನಗರ' ಮುಂತಾದ ಹೊಸಹೊಸ ಊರುಗಳು. ಈ ತನಕ ಒಂದು ಅವಗಣಿತ ಭಾಗವಾಗಿದ್ದುವು, ಇಲ್ಲವೆ ನಿರ್ವಸಿತ ಪ್ರದೇಶಗಳಾಗಿದ್ದುವು–ಹೊಸ ಕಾಲೊನಿ–ಕ್ವಾರ್ಟರ್ಸುಗಳ ನಿರ್ಮಾಣದೊಂದಿಗೆ, ಕೆಲ ಘಟನೆ ಅಥವಾ ವ್ಯಕ್ತಿಗಳ ಹಿನ್ನೆಲೆಯೊಂದಿಗೆ ತಲೆಯೆತ್ತುತ್ತಿರುವುದನ್ನು ನಾವು ವೃತ್ತಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ಹೀಗೆ ಒಂದು ಊರಿನ ಒಂದು ನಿರ್ದಿಷ್ಟ ಪಾರ್ಶ್ವಕ್ಕೆ ಇಟ್ಟ ಹೆಸರು ಕ್ರಮೇಣ, ನೀರಿಗೆ ಬಿದ್ದ ಎಣ್ಣೆಹನಿಯಂತೆ ಹಬ್ಬುತ್ತಾ, ಜನಪ್ರಿಯವಾಗಿ ಹಳೆಹೆಸರನ್ನು ಮೂಲೆಗುಂಪಾಗಿಸಬಹುದು; ಇಲ್ಲ, ಜತೆಜತೆಗೆ ಇದ್ದು ಬೇರೆಯೇ ಊರೆಂಬಂತೆ ಗಣಿಸಲ್ಪಡಬಹುದು. ಇದು ಹಿಂದಿನಿಂದಲೂ ನಡೆಯುತ್ತಿದ್ದ ಒಂದು ಸಾಮಾನ್ಯ ಸಂಗತಿ. ತತ್ಕಾಲೀನ ಜೀವನಕ್ರಮ, ಇತರ ಸಾಮಾಜಿಕ–ರಾಜಕೀಯ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಇದು ಕೆಲವೊಮ್ಮೆ ವಿಶೇಷವಾಗಿಯೂ, ಮತ್ತೆ ಕೆಲವೊಮ್ಮೆ ಅಪರೂಪವಾಗಿಯೂ ಕಾಣಸಬಹುದು.

ಗ್ರಂಥಋಣ: ೧ ಭಾರತೀಯ ಸಂಸ್ಕೃತಿ–ಡಾ. ಎಸ್. ಶ್ರೀಕಂಠಶಾಸ್ತ್ರೀ.
೨ ಸಂಸ್ಕೃತಿ–ಡಾ. ಡಿ. ವಿ. ಗುಂಡಪ್ಪ

ಅಲ್ಲದೆ, ನನ್ನ ಕೆಲವು ಸಮಸ್ಯಾತ್ಮಕ ಪ್ರಶ್ನೆಗಳಿಗೆ ಪರಿಹಾರವನ್ನು ಪತ್ರಮುಖೇನ ಸೂಚಿಸಿದ ತಮಿಳು ನಾಡಿನ ಸ್ಥಳನಾಮಶೋಧಕ ಡಾ. ನಾಚಿಮುತ್ತು ಅವರಿಗೆ. ನನ್ನ ಮಾರ್ಗದರ್ಶಕ ಪೂಜ್ಯ ಡಾ. ಪಿ. ಗುರುರಾಜ ಭಟ್ಟರಿಗೆ. ಆಗಾಗ್ಗೆ ನನ್ನ ಅಭ್ಯಾಸದ ಬಗ್ಗೆ ವಿಚಾರಿಸುತ್ತಿರುವ ಮತ್ತು ಕೆಲ ಊರ ಹೆಸರುಗಳ ಯಾದಿಯನ್ನು ಕಳಿಸಿದ ಶ್ರೀ ಶೇಟಿಯರ ಇಷ್ಯರಿಗೆ. ಮತ್ತಿತರರಿಗೆ ನಾನು ಕೃತಜ್ಞ.)

ಬಾಲಕೃಷ್ಣ ಸಾಮಗ ಮುಲ್ಪೆ

ವಿಜಯನಗರ ಕಾಲದ ತುಳುನಾಡಿನ ಆರ್ಥಿಕ ಪರಿಸ್ಥಿತಿ

ಕ್ರಿ.ಶ. ೧೩೩೬ರಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯದಿಂದಾಗಿ ದಕ್ಷಿಣ ಭಾರತದ ಇತಿಹಾಸ ಎಲ್ಲ ದೃಷ್ಟಿಯಿಂದಲೂ ಹೊಸ ಆಯಾಮವನ್ನು ಪಡೆಯಿತು. ಸಾಮ್ರಾಜ್ಯ ಸ್ಥಾಪನೆಯಾದ ದಶಕದೊಳಗಾಗಿಯೇ ತುಳುನಾಡು ಎಂದು ಪ್ರಖ್ಯಾತವಾಗಿರುವ ದಕ್ಷಿಣ ಕನ್ನಡ ಜಿಲ್ಲೆ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟಿತು[1] ಸುಭದ್ರ ಆಳ್ವಿಕೆಯಿಂದಾಗಿ ವಿಜಯನಗರ ವೈಭವದಿಂದ ಮೆರೆದು ಸಾಮ್ರಾಜ್ಯದಲ್ಲಿ ಸುಖಶಾಂತಿ ನೆಲಸಿತು. ತುಳುನಾಡಿನ ಇತಿಹಾಸದಲ್ಲೂ ಈ ಕಾಲ ಹೆಚ್ಚು ವೈಭವಯುತವಾಗಿದೆ. ಈ ಕಾಲದ ತುಳುನಾಡಿನ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡು ಅದು ಜೀವನದ ಇತರ ರಂಗಗಳ ಮೇಲೂ ಪ್ರಭಾವ ಬೀರಿತು. ಲಭ್ಯವಿರುವ ಶಾಸನಗಳ ಆಧಾರಗಳಿಂದಲೂ ಹಾಗೂ ಇನ್ನಿತರ ಆಧಾರಗಳಿಂದಲೂ ಈ ಕಾಲದ ಆರ್ಥಿಕ ಪರಿಸ್ಥಿತಿಯನ್ನರಿಯಬಹುದಾಗಿದೆ.

ಈ ಕಾಲದ ತುಳುವರಲ್ಲಿ ಹೆಚ್ಚಿನವರು ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ಅರಮನೆಯ ಮತ್ತು ಜನತೆಯ ಆದಾಯವು ವಿಜಯನಗರ ಪೂರ್ವ ಕಾಲದಲ್ಲಿದ್ದಂತೆಯೆ ಭೂವ್ಯವಸಾಯದ ಹುಟ್ಟುವಳಿಯನ್ನೇ ಮುಖ್ಯವಾಗಿ ಅವಲಂಬಿಸಿತ್ತು. ರಾಜ್ಯವು ಹೆಚ್ಚಿನ ಅಧಿಕಾರಿಗಳಿಗೆ ಭೂಮಿಯನ್ನು ದಾನವಾಗಿ ನೀಡುತ್ತಿತ್ತು. ಭೂಮಿಯನ್ನು ದಾನವಾಗಿ ನೀಡುವುದು ಸಾಮಾನ್ಯವಾಗಿತ್ತು. ವ್ಯವಸಾಯ ಭೂಮಿಯನ್ನು ಶಾಸನಗಳು ಗದ್ದೆ, ಬಾಳು ಅಥವಾ ಬಾಳಿಕೆ ಮೊದಲಾಗಿ ಕರೆದಿದೆ. ಭೂಸ್ವಾಮಿಗಳನ್ನು ಮತ್ತು ವ್ಯವಸಾಯಕ್ಕೆ ಸಂಬಂಧಿಸಿದ ಕೆಲಸಗಾರರನ್ನು ಕುರಿತು ಶಾಸನಗಳಲ್ಲಿ ಕೆಳಕಂಡ ರೀತಿಯಲ್ಲಿ ವಿವರ ದೊರೆಯುತ್ತದೆ.[2]

೧. ಮೂಲಕಾರ: ಮೂಲದ ಯಜಮಾನ ಅಥವಾ ಸರಕಾರದಿಂದ ಶಾಶ್ವತವಾಗಿ ಭೂಮಿಯನ್ನು ಗುತ್ತಿಗೆ ಪಡೆದವ ಇಲ್ಲವೆ ಅದನ್ನು ಪರಭಾರೆ ಮಾಡುವಾತ. ಇಂತಹವರ ಭೂಸ್ವತ್ತು ಮೂಲಗದ್ದೆ, ಮೂಲದ ಬಾಳು ಎಂದು ಅಂಕಿತವಾಗಿದೆ.

೨. ಗೇಣಿಕಾರ: ಭೂಮಿಯನ್ನು ವ್ಯವಸಾಯಕ್ಕೆ ಒಪ್ಪಂದ ಯಾ ಗುತ್ತಿಗೆಗೆ ಪಡಕೊಂಡವ.

೩. ವೃತ್ತಿಕಾರ: ದಾನವಾಗಿ ಬಂದ ಭೂಮಿಯನ್ನು ಪಡೆದಾತ.

೪. ಒಕ್ಕಲು–ಭೂಮಿಯಲ್ಲಿ ಕೃಷಿಮಾಡುವವ, ವ್ಯವಸಾಯಗಾರ.

೫. ಕೀಳೊಕ್ಕಲು–ಒಕ್ಕಲಿನ ಕೈಕೆಳಗೆ ಕೆಲಸಮಾಡುವವ.

೬. ಹೊಲೆಯಾಳು ಮತ್ತು ಹೆಣ್ಣಾಳು ಇವರು ಜೀತದಾಳುಗಳು, ಸೇವಕರು–ವ್ಯವಸಾಯಗಾರರ

---

1 Dr. K. V. Ramesh; *A History of South Kanara* (Karnatak University, Dharwar 1970) p. 285—86.

2 *South Indian Inscriptions*, Vol. VII, No. 179

ತರಗತಿಯಲ್ಲಿ ಕೊಡಿಯುವರು. ಭೂಮಿಯು ಒಡೆತನ ಒಬ್ಬರಿಂದ ಇನ್ನೊಬ್ಬರಿಗೆ ಬದಲಾದಾಗ ಬದಲಾಗುತ್ತಿದ್ದಂತಹ ಕೆಲಸಗಾರರು

ಈ ಕಾಲದ ವ್ಯವಸಾಯ ಭೂಮಿಯಲ್ಲಿ ಶಾಸನಗಳಲ್ಲಿ ಉಕ್ತವಾಗಿರುವಂತೆ ಮೂರು ವಿಧಗಳನ್ನು ಕಾಣಬಹುದು.[3]

೧. ಬಯಲು: ಇದು ಉತ್ತಮ ತರಗತಿಯ ಭೂಮಿಯಾಗಿದ್ದು, ಯೋಗ್ಯ ರೀತಿಯಲ್ಲಿ ನೀರಿನ ಸೌಕರ್ಯ ಹೊಂದಿರುತ್ತಿತ್ತು. ಬಯಲು ವ್ಯವಸಾಯ ಭೂಮಿಯಲ್ಲಿ ಮೂರು ಬೆಳೆ ಬರುತ್ತಿದ್ದಲ್ಲಿ ಅದನ್ನು ಕೊಳಕೆ ಗದ್ದೆ ಎಂಬುದಾಗಿ ಕರೆಯುತ್ತಿದ್ದರು.[4] ಕೇವಲ ಎರಡು ಬೆಳೆ ಬರುತ್ತಿದ್ದಲ್ಲಿ 'ಬಯಲು ಗದ್ದೆ ಯಾ ಸುಗ್ಗಿಗದ್ದೆ ಎಂಬುದಾಗಿಯೂ ಸಂಬೋಧಿಸುತ್ತಿದ್ದರು.

೨. ಮಜಲು: ಇದು ಎರಡನೆ ವರ್ಗಕ್ಕೆ ಸೇರಿದ ವ್ಯವಸಾಯ ಭೂಮಿಯಾಗಿದ್ದು, ಇದರಲ್ಲಿ ಎರಡು ಬೆಳೆಯನ್ನು ಬೆಳೆಯುತ್ತಿದ್ದರು.

೩. ಬೆಟ್ಟು: ಮೂರನೆ ವರ್ಗಕ್ಕೆ ಸೇರಿದ ಭೂಮಿ ಇದರಲ್ಲಿ ಮಳೆಯನ್ನು ನಂಬಿ ಒಂದೇ ಬೆಳೆಯನ್ನು ಬೆಳೆಯಲಾಗುವುದು.

ಒಂದು ವೇಳೆ 'ಬಯಲು' ಗದ್ದೆ ನೈಋತ್ಯಮಾರುತದಿಂದ ಮುಳುಗಿದ್ದರೆ ಅದನ್ನು ಪಾಟ್ಲ (ಪಟೆಲ, ಪಟ್ಟೆಲ) ಗದ್ದೆ ಎಂಬುದಾಗಿಯೂ ಕರೆಯುತ್ತಿದ್ದರು.[5] ಮತ್ತು ಅಂತಹ ಗದ್ದೆಗಳಲ್ಲಿ ಒಂದು ಬೆಳೆ ಜಾಸ್ತಿ ಬರುತಿತ್ತು.

ವಿಸ್ತಾರವಾದ ಗದ್ದೆಗಳನ್ನು 'ತಿಮಾರು' ಮತ್ತು 'ಮಾರು' ಎನ್ನುತ್ತಿದ್ದರು. ಶಾಸನಗಳು ಕೊಳಕೆ ತಿಮಾರು, ಮಜಲು ತಿಮಾರು, ಹಳೆ ತಿಮಾರು, ಬಜತು ತಿಮಾರು, ಹೊಸತು ತಿಮಾರು–ಮೊದಲಾದವುಗಳನ್ನು ಉಲ್ಲೇಖಿಸಿವೆ.[6] ಫಲವತ್ತಾದ ಭೂಮಿಗೆ ಬಳ್ಳಿ ಎನ್ನುತ್ತಿದ್ದರು. ನಾಯಕಬಳಿ, ಸಿತಿಂ ಬಳಿ, ಬುದಿವಂತ ಬಳಿ–ಮೊದಲಾದವುಗಳನ್ನು ಶಾಸನಗಳಲ್ಲಿ ಕಾಣಬಹುದು.[7] ವಿಸ್ತಾರವಾದ ಗದ್ದೆಗಳನ್ನು 'ಉಬಿ' ಎಂಬ ಸಣ್ಣ ತುಂಡುಗಳನ್ನಾಗಿ ವಿಂಗಡಿಸುತ್ತಿದ್ದರು. ಬಸರೂರಿನ ಮಲ್ಲಗದ್ದೆಯಲ್ಲಿ ಮೂಡಣ ಉಬಿ ಮತ್ತು ಪಡುಗಣ ಉಬಿಯಲ್ಲಿ ಕ್ರಮವಾಗಿ ಒಂದು ಮುಡಿ ಮತ್ತು ಎರಡು ಮುಡಿಗಳಷ್ಟು ಅಕ್ಕಿ ಬೆಳೆಯುತ್ತಿದ್ದರು.[8]

ಸ್ಥಳ, ಬೆಳೆ, ವ್ಯಕ್ತಿ, ಗಡಿ, ಬೆಳೆಯುವ ಸಾಮರ್ಥ್ಯ, ಸಂಖ್ಯೆ, ವಿಶೇಷಲಕ್ಷಣ–ಇವುಗಳಿಗೆ ಸಂಬಂಧಿಸಿದಂತೆ ವ್ಯವಸಾಯ ಭೂಮಿಯನ್ನು ಬೇರೆ ಬೇರೆ ವಿಧದಲ್ಲಿ ಕರೆಯಲಾಗಿದೆ. ಅವುಗಳಲ್ಲಿ ಕೆಲವು ಉದಾಹರಣೆಗಳನ್ನು ಕೆಳಗೆ ಕೊಡಲಾಗಿದೆ.[9]

(ಅ) ಸ್ಥಳಕ್ಕೆ ಹೊಂದಿಕೊಂಡು:

೧ ಅಡಿ ಬಾಗಿಲ ಗದ್ದೆ (ಮೊಗಸಾಲೆಯ ಹತ್ತಿರವಿರುವಂತದ್ದು)
೨ ಅರಮನೆ ಗದ್ದೆ (ಅರಮನೆ ಸಮೀಪದ್ದು)

---

3 S.I.I. Vol IX, Part 11, No. 426 etc

4 *Ibid.*, Vol VII Nos 195, 323 etc

5 *Ibid.*, Vol IX Part 11 No. 460 etc

6 *Ibid.*, Vol VII No. 195 etc

7 *Ibid.*, No. 229

8 *Ibid.*, Vol IX Part 11, No. 512

9 Dr. P. Gururaja Bhatt: *Studies in Tuluva History and Culture*, Kalianpur (1975) p–200–203

೩ ಬಳಿಯ ಕಂಡ (ಬಳ್ಳಿ ರೀತಿಯದ್ದು)
೪ ಬಾಣಗದ್ದೆ (ಮಳೆಗಾಲದಲ್ಲಿ ಮಾತ್ರ ವ್ಯವಸಾಯ ಮಾಡುವಂತಾದ್ದು)
೫ ಬೆಟ್ಟುಬಾಗಿಲುಗದ್ದೆ ('ಬೆಟ್ಟು' ರೀತಿಯದ್ದು)
೬ ಗುಡ್ಡೆಯ ಗದ್ದೆ (ಗುಡ್ಡೆ ಪ್ರದೇಶದಲ್ಲಿರುವಂತಾದ್ದು)
೭ ಪಡುವಳ ಗದ್ದೆ (ಸಮತಟ್ಟಾದ ಭೂಮಿಯಲ್ಲಿರುವಂತಾದ್ದು)
೮ ಗುಳಿ ಗದ್ದೆ (ಹೊಂಡ ಪ್ರದೇಶದಲ್ಲಿರುವಂತಾದ್ದು)
೯ ಪೊಯಿಗೆ ಗದ್ದೆ (ಮರಳು ಪ್ರದೇಶದಲ್ಲಿರುವಂತಾದ್ದು)
೧೦ ಕಲ್ಲಿ ತಿಮಾರು (ಕಲ್ಲು ಪ್ರದೇಶದಲ್ಲಿರುವಂತಾದ್ದು)
೧೧ ಕಾರ ಬಯಲು (ನೈಋತ್ಯಮಾರುತದಿಂದ ಜಾಸ್ತಿ ನೀರು ಪಡೆಯುವ ಭೂಮಿ)
೧೨ ಕೊಡಿಯ ಗದ್ದೆ (ದೂರ ಮೂಲೆಯಲ್ಲಿರುವಂತಾದ್ದು)
೧೩ ಕೊಳ ಗದ್ದೆ (ಕೆರೆಯ ಸಮೀಪದ್ದು)
೧೪ ಕುದುರಕಂಡ ಗದ್ದೆ ('ಕುದುರಿ'ನಲ್ಲಿರುವಂತಾದ್ದು)
೧೫ ಕುಲಂಬೆಯೆಂಬ ಗದ್ದೆ (ಜವುಗು ಪ್ರದೇಶದಲ್ಲಿನದ್ದು)
೧೬ ಕುಮರಿಯೆಂಬ ಬಯಲು ('ಕುಮರಿ' ರೀತಿಯದ್ದು)
೧೭ ಮಜಲಗದ್ದೆ (ಮಜಲು ರೀತಿಯದ್ದು)
೧೮ ಮಕ್ಕಿಯ ಗದ್ದೆ ('ಮಕ್ಕಿ' ರೀತಿಯದ್ದು)
೧೯ ಮೂಡಿಲ್ಲವೆಂಬ ಗದ್ದೆ (ಪೂರ್ವಮನೆಯ ಸಮೀಪದ್ದು)
೨೦ ಮುರಂತುಪಾರು ಗದ್ದೆ (ಬದಿಯಲ್ಲಿರುವಂತಾದ್ದು)
೨೧ ಪಳಿ–ತಿಮಾರು (ಮಸೀದಿಯ ಹತ್ತಿರದ್ದು)

(ಆ) ಬೆಳೆಯುವ ಬೆಳೆಗೆ ಹೊಂದಿಕೊಂಡು–

೧ ಅಡಿಯ ಗದ್ದೆ (ಬೀಜೋತ್ಪಾದನೆಗೆ ಬಳಸುವಂತಾದ್ದು)
೨ ಬುಲಂತವೆಂಬ ಗದ್ದೆ (ಬೆಳ್ತಿಗೆ ಅಕ್ಕಿ ಬೆಳೆಸುವಂತಾದ್ದು)
೩ ಹಾಲಗದ್ದೆ (ಹಾಲಕ್ಕಿ ಬೆಳೆಸುವಂತಾದ್ದು)
೪ ಕಬ್ಬಿನ ಗದ್ದೆ (ಕಬ್ಬು ಬೆಳೆಸುವಂತಾದ್ದು)
೫ ಕಡಸಲು ಗದ್ದೆ (ವಿವಿಧ ರೀತಿ ಅಕ್ಕಿ ಬೆಳೆಸುವಂತಾದ್ದು)
೬ ಕಟ್ಟಿನ ಗದ್ದೆ (ನೀರಾವರಿ ಸೌಲಭ್ಯದಿಂದ ಬೆಳೆಸುವಂತಾದ್ದು)
೭ ಕೊಳಕೆಯ ಬಯಲು (ಮೂರು ಬೆಳೆ ಬೆಳೆಸುವಂತಾದ್ದು)
೮ ಕುಡು ತಿಮಾರು (ಹುರುಳಿ ಬೆಳೆಸುವಂತಾದ್ದು)
೯ ನಳಿಯ ತಿಮಾರು (ಕಳೆ ಹೆಚ್ಚಾಗಿ ಬೆಳೆಯುವಂತಾದ್ದು)
೧೦ ಸುಗ್ಗಿ ಗದ್ದೆ (ಎರಡು ಬೆಳೆ ಬೆಳೆಸುವಂತಾದ್ದು)
೧೧ ಉದ್ದುಗಳೆಂಬ ಗದ್ದೆ (ಉದ್ದು ಬೆಳೆಯುವಂತಾದ್ದು)

(ಇ) ಸಂಬಂಧಿಸಿದವರಿಗೆ ಹೊಂದಿಕೊಂಡು:

೧ ಬಂಡಾರಿಯ ಗದ್ದೆ (ಬಂಡಾರಿಗೆ ಸಂಬಂಧಿಸಿದ್ದು)
೨ ಬುದ್ಧಿವಂತ ಬಳಿ ಗದ್ದೆ (ಬುದ್ಧಿವಂತರಿಗೆ ಸಂಬಂಧಿಸಿದ್ದು)
೩ ದೇವರ ಕಳಿಯ ಬಯಲು (ದೇವರಿಗೆ ಸಂಬಂಧಿಸಿದ್ದು)
೪ ಗೌಳಿಯ ಗದ್ದೆ (ಗೌಳಿಗನಿಗೆ ಸಂಬಂಧಿಸಿದ್ದು)
೫ ಹೆಬ್ಬಾರ ಕಟ್ಟಿನ ಬಯಲು (ಹೆಬ್ಬಾರ ಕಟ್ಟಿನವರಿಗೆ ಸಂಬಂಧಿಸಿದ್ದು)
೬ ಜೋಗಿಯ ಗದ್ದೆ (ಜೋಗಿಗೆ ಸಂಬಂಧಿಸಿದ್ದು)
೭ ಕಂಬಳಿಯ ಗದೆ (ಕಂಬಳಿಗೆ ಸಂಬಂಧಿಸಿದ್ದು)

೮ ಮಾಣಿಯ ತಾರು (ಮಾಣಿಗೆ ಸಂಬಂಧಿಸಿದ್ದು)
೯ ನಂದನ ಬಾಳು (ನಂದನಿಗೆ ಸಂಬಂಧಿಸಿದ್ದು)
೧೦ ನಾಗನ ಗದ್ದೆ (ನಾಗನಿಗೆ ಸಂಬಂಧಿಸಿದ್ದು)
೧೧ ನಾಯರ ಗದ್ದೆ (ನಾಯರಿಗೆ ಸಂಬಂಧಿಸಿದ್ದು)
೧೨ ತಂಬುಲ ಗದ್ದೆ (ತಂಬುಲಿಗನಿಗೆ ಸಂಬಂಧಿಸಿದ್ದು)

(ಈ) ಗಡಿರೇಖೆಗೆ ಹೊಂದಿಕೊಂಡು:

೧ ಕಂಗಿ ತಿಮಾರು (ಅಡಿಕೆ ತೋಟಕ್ಕೆ ಹತ್ತಿರದ್ದು)
೨ ಕೆರೆ ಗದ್ದೆ (ಕೆರೆಗೆ ಹತ್ತಿರದ್ದು)
೩ ಕೆರೆಯ ಬಾಳಿನಗದ್ದೆ (ಕೆರೆ ಪ್ರದೇಶಕ್ಕೆ ಹತ್ತಿರದ್ದು)
೪ ಮಾವಿನ ಗದ್ದೆ (ಮಾವಿನ ಮರಕ್ಕೆ ಹತ್ತಿರದ್ದು)
೫ ಪೆಜ ತಿಮರು ಗದ್ದೆ (ಹೆಬ್ಬೆಲಸು ಮರದ ಹತ್ತಿರದ್ದು)
೬ ಪೂಂಗತಿಮಾರುವೆಂಬ ಗದ್ದೆ (ಹೊಂಗಾರ ಮರದ ಹತ್ತಿರದ್ದು)
೭ ಪುಲಿಮಾರು (ಹುಣಿಸೆಮರದ ಹತ್ತಿರದ್ದು)
೮ ತಾಳಿತಡಿ ತಿಮಾರು (ತಾಳೆಮರದ ಹತ್ತಿರದ್ದು)
೯ ತೆಂಕಗದ್ದೆ (ತೆಂಕುಬದಿಯಲ್ಲಿರುವಂತಾದ್ದು)
೧೦ ತೋಟದಗದ್ದೆ (ತೋಟಕ್ಕೆ ಹತ್ತಿರದ್ದು)

(ಉ) ಬೆಳೆಯುವ ಸಾಮರ್ಥ್ಯಕ್ಕೆ ಹೊಂದಿಕೊಂಡು:

೧ ಹಾನೆಯುವಾಗಿಲ ಗದ್ದೆ ('ಹಾನೆ' (ಅಳತೆ)ಯಷ್ಟು ಬೆಳೆಯುವಂತಾದ್ದು)
೨ ಕೊಳಗ ಬಯಲು (ಕೊಳಗದಷ್ಟು ಬೆಳೆಯುವಂತಾದ್ದು)
೩ ಮೂಡೆಗದ್ದೆ (ಮೂಡೆಯಷ್ಟು ಬೆಳೆಯುವಂತಾದ್ದು)

(ಊ) ಸಂಖ್ಯೆಗೆ ಹೊಂದಿಕೊಂಡು :

೧ ಇರುವೈಲು (ಎರಡು ಬಯಲುಗಳು)
೨ ಏಳು ಬಯಲು (ಏಳು ಬಯಲುಗಳು)
೩. ಒಂಬತ್ತುಮಾರೆಂಬ ಗದ್ದೆ (ಒಂಬತ್ತು ಬಯಲುಗಳು)

(ಋ) ಕೆಲವು ವಿಶೇಷ ಲಕ್ಷಣಗಳಿಗೆ ಹೊಂದಿಕೊಂಡು:

೧ ಆದಿಕಂಕನ–ಗದ್ದೆಯೆಂಬ ಬಯಲು
೨. ಅಮಾವಾಸ್ಯೆಯ ಬಯಲು (ಅಮಾವಾಸ್ಯೆಯ ಪವಿತ್ರ ಬಯಲು)
೩ ಅಂಡೆಯೆಂಬ ಕಿರುಗದ್ದೆ (ಅಂಡೆಗದಿಯ ಚಿಕ್ಕ ಗದ್ದೆ)
೪ ಅರಸಗದ್ದೆ (ವಿಸ್ತಾರ ಮತ್ತು ದೊಡ್ಡಗದ್ದೆ)
೫ ಕೋಣೆ ಬಯಲು (ಸಂಪೂರ್ಣ ಕೋಣೆ ಹಳ್ಳಿಯ ಬಯಲು)
೬ ಮಕೆಯೆಂಬ ಬಯಲು (ಮಕೆಯೆಂಬ ಹಕ್ಕಿಯಿಂದ ತುಂಬಿದ ಬಯಲು)
೭ ಮೊರಬಿನ ಗದ್ದೆ (ಒಂದು ಜಾತಿಯ ಕಳೆಯಿಂದ ತುಂಬಿದ ಗದ್ದೆ)

ವ್ಯವಸಾಯ ಭೂಮಿಗೆ ಪಕ್ಕದ ಹಾಗೂ ಸಹಾಯಕ ವಸ್ತುಗಳನ್ನು ಬೆಟ್ಟು. ತಿಟ್ಟೆ. ಹಕ್ಕಲು. ಹೊಲ, ನೆಲ, ಜಲ, ಪಾಷಾಣ. ನಿಧಿ. ನಿಕ್ಷೇಪ. ಮನೆ. ಬಾವಿ. ಕೆರೆ. ತಾನ. ಮಕ್ಕಿ. ಮರ. ನೆಕ್ಕಿ. ಮಿಡಿಲು, ಹೊಪಲು. ಆಗಾಮಿ. ಅಂಗೋಡು, ಅಂಗಸತಿ. ನೀರುದಾರಿ. ಬನ. ಬೇರು, ಅನುಭವ, ಲೊಕ್ಕಿ, ಸರ್ವಾಂಗೋಡು ಇತ್ಯಾದಿಯಾಗಿ ಶಾಸನಗಳು ವರ್ಣಿಸಿವೆ.10

---

10 *S.I I.* Vol. IX, Part II, Nos 407, 417, 467, 470 etc

ಈ ಕಾಲದ ಭೂವ್ಯವಹಾರವು ಸುವ್ಯವಸ್ಥಿತವಾಗಿತ್ತು. ಹೆಚ್ಚಿನ ಸಂದರ್ಭಗಳಲ್ಲಿ ಸಂಪೂರ್ಣ ಹಳ್ಳಿಗಳು ಮತ್ತು. ವ್ಯವಸಾಯ ಭೂಮಿಗಳು ರಾಜ್ಯದ ಅಧೀನಕ್ಕೆ ಒಳಪಟ್ಟಿದ್ದು ಈ ಕುರಿತು ಶಾಸನದಲ್ಲಿ ಭಂಡಾರ ಸ್ಥಳ, ಅರಮನೆಯ ಭಂಡಾರಸ್ಥಳ, ಅರಮನೆಗೆ ಸಲುವ ಭಂಡಾರಸ್ಥಳ ಮುಂತಾಗಿ ತಿಳಿಸಿವೆ. ದೇವಸ್ಥಾನ ಹಾಗೂ ಜನಸಾಮಾನ್ಯರ ಅಧೀನಕ್ಕೆ ಒಳಪಟ್ಟ ಭೂಮಿಯನ್ನು ದೇವಸ್ವ, ಪುರೋಹಿತ-ಸ್ಥಳ, ಬ್ರಹ್ಮಸ್ವ ಮುಂತಾಗಿ ಕರೆಯುತ್ತಿದ್ದರು. ಇದಲ್ಲದೆ ವಿವಿಧ ಸಂಘಗಳೂ ಕೂಡಾ ಭೂಸ್ವತ್ವನ್ನು ಪಡೆದಿದ್ದವು. ಅನೇಕ ಶಾಸನಗಳಲ್ಲಿ ಹೊಲಪೊಂದರ 'ಚತುಸ್ಸೀಮೆ' ಅಥವಾ 'ನಾಲ್ಕು ಗಡಿ'ಗಳನ್ನು ಗುರುತಿಸುವಲ್ಲಿ 'ಸೆಟ್ಟಿಕಾರರ ಗಡಿಯಿಂ ಮೂಡಲು', 'ಚೌಳಿಯ ಕೇರಿಯ ಹಲರ ಗಡಿಯಿಂ ಪಡವಲು', 'ಮಹಾಜನರ ಗಡಿಯಿಂ ತೆಂಕಲು' ಮುಂತಾದ ಪ್ರಯೋಗಗಳಿವೆ.[11]

ವಿಜಯನಗರ ಕಾಲದಲ್ಲಿ ಭೂಮಿಯನ್ನು ಮಾರುವವರೂ ಕೊಳ್ಳುವವರೂ ಹಲವು ಅಧಿಕಾರ ಯುಕ್ತವಾದ ಮತ್ತು ಸಾಂಪ್ರದಾಯಿಕವಾದ ನಿಯಮಗಳನ್ನು ಅನುಸರಿಸುತ್ತಿದ್ದರು. ಕ್ರಿ.ಶ. ೧೪೨೫ರ ಕುಂದಾಪುರದ ಶಾಸನ ಇಮ್ಮಡಿ ದೇವರಾಯನ ಆಳ್ವಿಕೆಯಲ್ಲಿ ನರಸಿಂಹದೇವ ಅಧಿಕಾರಿಯಾಗಿದ್ದಾಗ ಕುಂದಾಪುರದಲ್ಲಿ ಮೇಲಿನ ವಿಚಾರಕ್ಕೆ ಸಂಬಂಧಿಸಿದ ವಿಚಾರವೊಂದನ್ನು ಪ್ರಸ್ತಾಪಿಸಿದೆ.[12] ಭೂಮಿಯ ಬೆಲೆಯು ಆಗಿಂದಾಗ್ಗೆ ಬದಲಾಗುತ್ತಿದ್ದು, ಮಾರಾಟಕ್ಕಿದ್ದ ಭೂಮಿಯ ಬೆಲೆಯನ್ನು ನಿರ್ಧರಿಸುವಲ್ಲಿ ಆಯಾ ಕಾಲದಲ್ಲಿ ಭೂಮಿಗಿದ್ದ ಕ್ರಯವೇ ಆಧಾರವಾಗಿತ್ತು. 'ತತ್ಕಾಲೋಚಿತ ಮೂಲ್ಯ' ಎಂಬುದಾಗಿ ರುವ ಶಾಸನದ ಪ್ರಯೋಗವು ಇದನ್ನೇ ಸೂಚಿಸುತ್ತದೆಂದು ವಿದ್ವಾಂಸರ ಅಭಿಪ್ರಾಯ[13]. ಭೂಸ್ವಾಮಿ ಯಲ್ಲದವನು ಭೂಮಿದಾನ ಮಾಡಲು ಬಯಸಿದರೆ ಭೂಮಿಯನ್ನು ಮಾರಿದವನಿಗೆ ಮೊತ್ತಕ್ರಯವನ್ನು ಒಂದೇ ಬಾರಿಗಿತ್ತು, ದಾನ ಪಡೆದವನಿಗೆ ಆ ಭೂಮಿಯ ಸರ್ವ ಅಧಿಕಾರಗಳನ್ನು ಬಿಟ್ಟುಕೊಟ್ಟನೇ ಆದಲ್ಲಿ ಅಂತಹ ದಾನವನ್ನು 'ಅರ್ಥಪರಿಚ್ಛೇದವಾಗಿ ಕೊಂಡು ಮೂಲಪರಿಚ್ಛೇದವಾಗಿ ಕೊಟ್ಟದ್ದು' ಎನ್ನುತ್ತಿದ್ದರು. 'ಮೂಲಕ್ರಯ' ದಾನವೆಂದು ಆ ಕೊಡುಗೆಯನ್ನು ಕರೆಯುತ್ತಿದ್ದರು.

ಈ ಕಾಲದಲ್ಲಿ ಎರಡು ರೀತಿಯಿಂದ ವ್ಯವಸಾಯ ಭೂಮಿಯನ್ನು ಅಳೆಯುತ್ತಿದ್ದರು. (೧) ಬೀಜವರಿ ಗದ್ದೆಗನುಗುಣವಾಗಿ ಅಂದರೆ ಗದ್ದೆಯ ಉತ್ಪಾದನಾ ಸಾಮರ್ಥ್ಯಕ್ಕೆ ಸಂಬಂಧಿಸಿ. (೨) ಬಾರಕೂರು ರಾಜ್ಯದಲ್ಲಿ ಹೆಚ್ಚು ರೂಢಿಯಲ್ಲಿದ್ದ 'ಕೊಯಿಲು' ಪದ್ಧತಿಗನುಗುಣವಾಗಿ (೧ ಕೊಯಿಲು = ೧ ಎಕರೆ)[14] ಈ ಕೆಳಗೆ ಕೆಲವು ಉದಾಹರಣೆಗಳನ್ನು ಗಮನಿಸಬಹುದು:[15]

ಹಿರಿಯ ಗದ್ದೆ೧ = ೧೬ ಕೊಯಿಲು (೧.೬ ಎಕರೆ)
ಗುಡ್ಡೆಯ ಗದ್ದೆ ೧ = ೮ ಕೊಯಿಲು (೦.೮ ಎಕರೆ)
ಕುದರ ಕಂಡ ೩ = ೮ ಕೊಯಿಲು (೦.೮ ಎಕರೆ)
ಬಡಗಣ ಗುಡ್ಡೆಯ ಗದ್ದೆ = ೧೦ ಕೊಯಿಲು (೧ ಎಕರೆ)
ಕೊಪೆಗದ್ದೆ = ೧ ಕೊಯಿಲು (೦. ೧ ಎಕರೆ)
ನಾಯರ ಗದ್ದೆ ೧ = ೨೦ ಕೊಯಿಲು (೨.೦ ಎಕರೆ)

ಧಾನ್ಯಗಳನ್ನು ತುಂಬಿಡುವ ಕಣಜಗಳಿಗೆ ಕುಪ್ಪೆ ಎನ್ನುತ್ತಿದ್ದರು.

---

11 ಡಾ. ಕೆ. ವಿ. ರಮೇಶ: ತುಳುನಾಡಿನ ಇತಿಹಾಸ, ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರ, ಉಡುಪಿ (೧೯೬೬), ಪು. ೧೩೫–೬.

12 *S.I.I.*, Vol IX, Part 11, No. 441

13 ಡಾ. ಕೆ.ವಿ. ರಮೇಶರವರ ಗ್ರಂಥ, ಪು. ೧೩೫.

14 P. Gururaja Bhatt, *op.cit*, p. 204

15 *S.I.I.*, Vol VII, Nos 178, 229 etc

ವಿಜಯನಗರ ಕಾಲದಲ್ಲಿ ದೇವಾಲಯಗಳೂ ಬ್ರಾಹ್ಮಣರೂ ವೃತ್ತಿಯಾಗಿ ಪಡೆದ ಭೂಮಿಯನ್ನು ಕೇಡಿಲ್ಲದೆ ಪಾಲಿಸುವಲ್ಲಿ ರಾಜರೂ, ಸಂಘಗಳೂ, ಜನಸಾಮಾನ್ಯರೂ ಏಕಚಿತ್ತರಾಗಿದ್ದರು. ದೇವಸ್ಥಾನಗಳಿಗೆ ಸಂಬಂಧಿಸಿದ ಗದ್ದೆಗಳ ಕೃಷಿಕರು 'ವರ್ಷಂಪ್ರತಿಬಾನಗೇಡು ಬರಗೇಡು ಎನ್ನದೆ' ತಾವು ದೈವಗಳಿಗೆ ಸಲ್ಲಿಸಬೇಕಾದ ಬೆಳೆಗಳನ್ನು ತಪ್ಪದೆ ಸಲ್ಲಿಸಬೇಕೆಂಬ ಕಟ್ಟಪ್ಪಣೆಯಿತ್ತು.[16]

ವಿಜಯನಗರ ಕಾಲದ ತುಳುನಾಡಿನ ಬೆಳೆಗಳು ಜನತೆಗೆ ಸಾಕಾಗಿ ಬಂದಂತೆ ಕಾಣುವುದಿಲ್ಲ. ಕ್ರಿ.ಶ. ೧೫೭೦ರ ಬಾರಕೂರಿನ ಎರಡು ಶಾಸನಗಳು ಅಕ್ಕಿ, ಗೋಧಿ, ಕಡಲೆ, ಹೆಸರು, ಎಳ್ಳು, ಕಬ್ಬು, ಮೆಂತೆ, ತುಪ್ಪ, ಬೆಲ್ಲ, ಸಕ್ಕರೆ ಮುಂತಾದ ಸರಕುಗಳನ್ನು 'ಘಟ್ಟದ ಮೇಲಿನಿಂದ' ಆಮದುಮಾಡಿಕೊಳ್ಳಲಾಗುತ್ತಿತ್ತೆಂದೂ ಅವನ್ನು ಮಾರುವ ಬಗ್ಗೆ ಬೇರೆ ಬೇರೆ ಕೇರಿಯ ವರ್ತಕರು ಕಟ್ಟುನಿಟ್ಟಾದ ನಿಯಂತ್ರಣಕ್ಕೊಳಗಾಗುತ್ತಿದ್ದರೆಂಬುದನ್ನೂ ತಿಳಿಸುತ್ತವೆ.[17]

ತೂಕಗಳು ಮತ್ತು ಅಳತೆಗಳು:

ಮುಡೆ, ಮುಡಿ, ಖಂಡಿಗೆ ಅಥವಾ ಕಂಡುಗ (ಇಕ್ಕಂಡುಗ, ಮೂಗಂಡುಗ, ನಾಗಂಡುಗ), ಕೊಳಗ, ಹಾನೆ, ಅಥವಾ ಹಾನಿ (ಇಪ್ಪಾನೆ, ಮೂವಾನೆ, ನಾಲ್ವಾನೆ, ನಾಡಹಾನೆ, ಕಂಚಿತ ಹಾನೆ) ಬಳ್ಳ, ಕುಡುತೆ, ಸಿದ್ದೆ–ಇವು ಧಾನ್ಯಗಳನ್ನು ಅಳೆಯುವ ಅಳತೆಗಳಾಗಿದ್ದುವು. ಮುಡೆಯು ದೊಡ್ಡದಾದ ಅಳತೆಯಾಗಿದ್ದು, ದೊಡ್ಡ, ಸಣ್ಣ ಮತ್ತು ನಡುಮುಡೆಗಳೆಂಬ ಮೂರು ವಿಧಗಳು ಇದರಲ್ಲಿದ್ದುವು. ಬಳ್ಳ ಅಥವಾ ಹಾನೆ–ಇವು ಸಾಮಾನ್ಯ ಹಾಗೂ ಜನಪ್ರಿಯ ಅಳತೆ ಮಾಪನಗಳಾಗಿದ್ದುವು. ಅತ್ಯಂತ ಚಿಕ್ಕ ಅಳತೆ ಕುಡುತೆ ಅಥವಾ ಸಿದ್ದೆ (೪ ಸಿದ್ದೆ=೧ ಬಳ್ಳ).

ಕುಡುತೆ ಅಥವಾ ಸಿದ್ದೆ, ಹಾನೆ ಮತ್ತು ಹಡ–ಇವು ದ್ರವರೂಪದ ಅಳತೆಮಾಪನಗಳಿಗೆ ಹೆಸರುಗಳು.

ಮೊಳವೆ ಎನ್ನುವುದು ಬಟ್ಟೆಗಳನ್ನು ಅಳೆಯುವ ಅಳತೆಯಾಗಿತ್ತು. ಭತ್ತ, ಅಕ್ಕಿ, ಉಪ್ಪು ಮೊದಲಾದವನ್ನು ಹೇರಿನಿಂದ, ಬೆಲ್ಲ, ಶುಂಠಿ ಮೊದಲಾದವನ್ನು 'ಭಾರ'ದಿಂದ ಅಳೆಯಲಾಗುತಿತ್ತು, ಎನ್ನಬಹುದು.[18]

ನಾಣ್ಯಪದ್ಧತಿ:

ವಿಜಯನಗರ ಕಾಲದಲ್ಲಿ ವಾಣಿಜ್ಯವು ಬೆಳೆದಂತೆ ನಾಣ್ಯಗಳ ಚಲಾವಣೆಯೂ ಹೆಚ್ಚುತ್ತ ಬಂದಿತು. ಚಿನ್ನ ಮತ್ತು ತಾಮ್ರಗಳು ಸೇರಿದಂತೆ ಅನೇಕ ತರದ ನಾಣ್ಯಗಳು ಚಲಾವಣೆಯಲ್ಲಿದ್ದವು. ಬೆಳ್ಳಿಯ ನಾಣ್ಯಗಳೂ ಇದ್ದುವು. ಶಿಲಾ ಮತ್ತು ತಾಮ್ರಶಾಸನಗಳ ಪ್ರಕಾರ ಈ ಕೆಳಗಿನ ನಾಣ್ಯಗಳು ಬಳಕೆಯಲ್ಲಿದ್ದವು.[19]

೧. ಚಿನ್ನ–ಗದ್ಯಾಣ, ವರಾಹ, ಪೊನ್ನು, (ಹೊನ್ನು), ಕಾಟಿಗದ್ಯಾಣ, ಕಾಟಿಪ್ರತಾಪ, ಸಣ್ಣ ಪ್ರತಾಪ, ಹಣ, ಹಾಗ.
೨. ಬೆಳ್ಳಿ–ಗದ್ಯಾಣ, ತಾರ.
೩. ತಾಮ್ರ–ಪಣ, ಜಿತ, ದುಡ್ಡು.

ಗದ್ಯಾಣದಲ್ಲಿ ನಾಲ್ಕು ವಿಧಗಳಿದ್ದುವು:

---

16 *Ibid.*, Vol IX, Part 11, No. 444
17 *Ibid.*, Vol VII, Nos 309 and 340
18 *Ibid.*, No. 247
19 P. Gururaja Bhatt, *op. cit*, p. 209
20 *S.I.I.*, Vol IX, Part 11, No. 470

೧. ವರಾಹ ಗದ್ಯಾಣ (ಶುದ್ಧ ಗದ್ಯಾಣ ಯಾ ನಿಜಗದ್ಯಾಣ)
೨. ದೊಡ್ಡವರಹ ಗದ್ಯಾಣ
೩. ಕೊಡಾಂಡ ಗದ್ಯಾಣ
೪. ಕಠಾರಿ ಅಂಕುಶ ಗದ್ಯಾಣ

ದೊಡ್ಡ ವರಹ ಗದ್ಯಾಣವು ಕೃಷ್ಣದೇವರಾಯನ ಆಳ್ವಿಕೆಗೆ ಮೊದಲೇ ತುಳುನಾಡಲ್ಲಿ ಚಲಾವಣೆಯಲ್ಲಿತ್ತು.[20] ಕಾಟಿ ಗದ್ಯಾಣವು ಹೊನ್ನು (ವರಾಹ)ಗೆ ಸಮಾನವೆಂದು ಶಾಸನವೊಂದು ತಿಳಿಸಿದೆ.[21] ಇಮ್ಮಡಿ ದೇವರಾಯನ ಕಾಲದ ಕ್ರಿ.ಶ. ೧೪೧೮ರ ಶಾಸನವೊಂದು ಐದು ಪಣಗಳು ಒಂದು ವರಹಕ್ಕೆ ಸಮಾನವೆಂದಿದೆ[22] ತಾರ ನಾಣ್ಯವು ಕೆಲವೊಂದು ಶಾಸನಗಳಲ್ಲಿ ಕಂಡುಬಂದಿದೆ. ತುಳುನಾಡಲ್ಲಿ ಅನೇಕ ವಿಜಯನಗರ ಕಾಲದ ನಾಣ್ಯಗಳು ದೊರಕಿವೆ. ಶಾಸನಗಳಲ್ಲಿ ನಾಣ್ಯಗಳ ಹೆಸರುಗಳನ್ನು ಸಂಕ್ಷಿಪ್ತ ರೀತಿಯಲ್ಲಿ ನೀಡಲಾಗಿದೆ. ಉದಾ: ಗ (ಗದ್ಯಾಣ), ಕಾ ಗ (ಕಾಟಿ ಗದ್ಯಾಣ), ವ (ವರಹ), ವ ಗ (ವರಹ ಗದ್ಯಾಣ), ಬಾ ಗ (ಬಾಹಿರ ಗದ್ಯಾಣ).

ವಿಜಯನಗರದರಸರು ತುಳುನಾಡಿನ ಮಟ್ಟಿಗೆ ತಮ್ಮ ಟಂಕಸಾಲೆಯನ್ನು ಬಾರಕೂರಿನಲ್ಲಿ ಸ್ಥಾಪಿಸಿದ್ದರು. 'ಬಾರಕೂರ ಪರಿವರ್ತನಕ್ಕೆ ಸಲ್ಲುವ ಕಾಟಿ ಗದ್ಯಾಣ', 'ಬಾರಕೂರ ಪರಿವರ್ತನಕ್ಕೆ ಸಲುವ ದೊಡ್ಡ ವರಹ ಗದ್ಯಾಣ', 'ಅರ್ಧ ಬಾರಕೂರ ಪರಿವರ್ತನಕ್ಕೆ ಸಲುವ ದೊಡ್ಡ ವರಹ ಗದ್ಯಾಣ' ಮುಂತಾದ ಮಾತುಗಳು ಶಾಸನಗಳಲ್ಲಿರುವುದರಿಂದ ತುಳುನಾಡಿನ ಹೊರಗಿನ ಟಂಕಸಾಲೆಗಳಿಂದ ಹೊರಡಿಸಲಾದ ನಾಣ್ಯಗಳ ಉಪಯೋಗವನ್ನು ತುಳುನಾಡಿನಲ್ಲಿ ಪಡೆಯಲು ಬಯಸಿದವರು ಆ ನಾಣ್ಯಗಳಿಗೆ ಬದಲಾಗಿ ಬಾರಕೂರಿನ ಟಂಕಸಾಲೆಯ ನಾಣ್ಯಗಳನ್ನು ಮೊದಲು ಪಡೆದುಕೊಳ್ಳಬೇಕಿತ್ತೆನ ಬಹುದು.

ತೆರಿಗೆ ಪದ್ಧತಿ:

ಸರಕಾರಕ್ಕೆ ಸಂಬಂಧಿಸಿದ ಭೂಮಿಯ (ಭಂಡಾರ ಸ್ಥಳ) ಕೃಷಿಕರು ಸರಕಾರಕ್ಕೆ ಸಲ್ಲಿಸಿದ ಹಣವು ಸರಕಾರಕ್ಕೆ ಪ್ರಮುಖ ಆದಾಯವಾಗಿತ್ತು. ಸಿದ್ಧಾಯ ಮತ್ತು ಸಮುದಾಯ ರಾಜ್ಯದ ಆದಾಯಕ್ಕೆ ಕ್ರಮವಾಗಿ ಸಲ್ಲುತ್ತಿತ್ತು. ಸಿದ್ಧಾಯ ತೆರಿಗೆಯಲ್ಲಿ ಕೆಲವೊಮ್ಮೆ ವ್ಯಕ್ತಿಗಳಿಗೆ ಹಾಗೂ ಧಾರ್ಮಿಕ ಸಂಸ್ಥೆಗಳಿಗೆ ದಾನ ನೀಡಲಾಗುತಿತ್ತು. ವಿಜಯನಗರ ಕಾಲದ ಸೈನಿಕ ತೆರಿಗೆಯನ್ನು 'ಕಂದಾಯ'ವೆಂದು ಕರೆದಿರಬೇಕೆಂದು ವಿದ್ವಾಂಸರೊಬ್ಬರ ಅಭಿಪ್ರಾಯ.[23] ಕ್ರಿ.ಶ. ೧೪೩೧ರ ಪೆರಡೂರಿನ ಶಾಸನದಲ್ಲಿ ಸೈನಿಕ ತೆರಿಗೆಯಿರಬಹುದಾದ 'ಕಂದಾಚಾರ'ದ ಕುರಿತು ಉಲ್ಲೇಖವಿದೆ.[24] ಜನರು ಸಲ್ಲಿಸಬೇಕಾದ ಗೌರವ ಮತ್ತು ಹಣ ಈ ಕೆಳಗಿನಂತಿವೆಯೆಂಬುದಾಗಿ ಡಾ. ಪಿ. ಗುರುರಾಜ ಭಟ್ಟರು ಶಾಸನಾಧಾರ ಮೂಲಕ ತಿಳಿಸುತ್ತಾರೆ.[25] (೧) ಕಟ್ಟುಂದೆರೆ ಗದ್ಯಾಣ (೨) ಊರವರ ಉಡುಗೊರೆ ಕಾಟಿ ಗದ್ಯಾಣ (೩) ಉಪಚಾರ ಕಾಟಿ ಗದ್ಯಾಣ. (೪) ಮರ್ಯಾದೆ ಗದ್ಯಾಣ (೫) ಅಧಿಕಾರ ಮರ್ಯಾದೆ. (೬) ಮೇಲು ಕಾಟಿ ಗದ್ಯಾಣ ೭) ಕುಲ ಉಪಚಾರ ಗದ್ಯಾಣ (೮) ಪರಿವಾರ ಗದ್ಯಾಣ (೯) ಕುಲಾಗ್ರದ ಹೊನ್ನು (೧೦) ಬಿಡಾರ ಧರ್ಮ (೧೧) ಸೋಣೆ ಮರ್ಯಾದೆ (೧೨) ಪದಿಕೆ ಹೊನ್ನು (೧೩) ಮಾಲಾಯ ಗದ್ಯಾಣ ((೧೪) ಕಂಠಿ ಕಾಣಿಕೆ (೧೫) ಬಾಳಿನ ತೆರು (೧೬) ಆಯನ ವರ್ತನೆ

---

21 *Ibid*, Vol. VII, No. 298

22 *Annual Report, Mysore Archaelogical Department*, (1932) No. 42, pp. 209-10

23 P. Gururaja Bhatt, *op. cit*, p. 214

24 *Annual Report on Indian Epigraphy* for 1936–37, No. 284

25 P. Guraraja Bhatt, *op. cit*, p. 214

ಇದೇ ರೀತಿ ಶಾಸನಗಳು ಆಕರ, ಅಸಿಯ, ಅಯಿಮಿರೀತಿ, ಅಟ್ಟಂತೋಡಿ, ಅರುಗಾಡಿ, ಅನ್ಯಾಯ, ಬಿಪಾರ, ಬೆಡೆತ್ತು, ಘಟ್ಟ, ಬೆಳ್ಕಾರಣೆ, ಬೀಡು, ಬಿಟ್ಟಿ, ಬೆಳುದಂಡ, ದಾಯ, ದೇವರಧರ್ಮ, ಇಸಿ, ಗಾಯ, ಗಾವಿ, ಗುತ್ತಗೆ, ಓರಸ್ಯ, ಜೋಡು, ಕಾಣಿಕೆ, ಕೆಳಗೋಡ, ಕುಡಗರು, ಕೆಂಗೊಡ, ಮಿಡ್ಯಾಯ, ಕಾಯ, ಮೊಗಸು, ಮೇಲೋಗರ, ಸೋಕತಿ ಒಕ್ಕಲು, ಒಪ್ಪ, ಸೇಸೆ, ತಪ್ಪು, ವರದ ಮೊದಲಾದ ತೆರಿಗೆ ಸಂಬಂಧಿಸಿದವುಗಳ ಕುರಿತು ತಿಳಿಸಿವೆ. ಇವುಗಳಲ್ಲಿ ಕೆಲವನ್ನು ಮಾತ್ರವೇ ಸ್ಪಷ್ಟವಾಗಿ ತಿಳಿಯುಬಹುದೇ ವಿನಃ ಅನೇಕ ಶಬ್ದಗಳ ಕುರಿತು ಸಂಶೋಧಿಸಬೇಕಾಗಿದೆ.

ಆದಿ, ಅರ್ಧಾದಿ, ಮೂಲಾದಿ, ಅರುವಾರ, ಅಂತರಾರುವಾರ, ಹೊಡೆಕಟ್ಟು, ಜೋಡಿ, ಕಪ್ಪಾಯ, ಕಟ್ಟುಂಬೆರು ಬಾಬಾ ಕಟ್ಟು ತೆರು, ಕುಳ, ಕುಂದು, ನಟ್ಟು, ಸೇಸೆ–ಇವೇ ಮೊದಲಾದ ತೆರಿಗೆಗಳನ್ನು ಭೂಮಿಯ ಮೇಲೆ ವಿಧಿಸಲಾಗಿತ್ತು.

ವ್ಯಾಪಾರ ಮತ್ತು ಕೈಗಾರಿಕೆಗಳು :

ವಿಜಯನಗರ ಕಾಲದಲ್ಲಿ ತುಳುನಾಡಿನಲ್ಲಿ ವ್ಯಾಪಾರ ಮತ್ತು ಕೈಗಾರಿಕೋದ್ಯಮವು ಹೆಚ್ಚು ಬೆಳವಣಿಗೆ ಹೊಂದಿತು. ಬಾರಕೂರು ಮತ್ತು ಮಂಗಳೂರು ರಾಜ್ಯಗಳು ವ್ಯಾಪಾರ ದೃಷ್ಟಿಯಿಂದ ವಿಜಯನಗರ ಸಾಮ್ರಾಜ್ಯದಲ್ಲೇ ಪ್ರಾಮುಖ್ಯತೆ ಪಡೆದಿದ್ದವು. 'ಘಟ್ಟ'ದ ಮೇಲಿನ ಪ್ರದೇಶಕ್ಕೂ ಘಟ್ಟದ ಕೆಳಗಿನ ಪ್ರದೇಶಕ್ಕೂ ವ್ಯಾಪಾರ ಸಂಬಂಧ ಸದಾ ನಡೆಯುತ್ತಿತ್ತು. ಕ್ರಿ.ಶ. ೧೩೯೦ರ ಸುತ್ತಿಗೆ ಶಾಸನವೊಂದರಲ್ಲಿ 'ಏಳು ಘಟ್ಟದಲ್ಲಿ ಇಳಿದ ಕಬಿರೆ ಕರ್ಣಾರತಿಯ... ಕೊಂಡ ದೋಷ' ಎಂಬ ಮಾತಿದೆ.[26] 'ಏಳು ಘಟ್ಟದಲ್ಲಿಳಿವ ಗೋಧ್ಯಳ ಕೊಂಡೊಯಾದಿ' ಎಂಬುದಾಗಿ ಕ್ರಿ.ಶ. ೧೪೫೫ರ ಶಾಸನವೊಂದು ತಿಳಿಸಿದೆ.[27] ಕ್ರಿ.ಶ. ೧೫೪೪ರ ಶಾಸನವೊಂದು ೧೮ ಘಟ್ಟಗಳ ಕುರಿತು ನಮೂದಿಸಿದೆ.[28] ಅದೇ ರೀತಿ 'ಎಂಟು ಘಟ್ಟದಲ್ಲಿ ಇಳಿವ ಎತ್ತುಗಳ ಕೊಂಡ ದೋಷ' ಎಂಬ ಮಾತಿದೆ.[29]

ಬಾರಕೂರಿನ ಶಾಸನಗಳು ತಿಳಿಸುವ ಆಮದು ವ್ಯಾಪಾರದ ಕುರಿತು ಈಗಾಗಲೇ ತಿಳಿಸಿದೆ. ತುಳುನಾಡು ಕರ್ನಾಟಕದ ಇತರ ಪ್ರದೇಶಗಳೊಂದಿಗೆ ಸದಾ ವ್ಯಾಪಾರ ಸಂಬಂಧವಿಟ್ಟುಕೊಂಡಿತ್ತೆಂಬುದು ನಾನಾ ಆಧಾರಗಳ ಮೂಲಕ ದೃಢಪಟ್ಟಿದೆ. ವ್ಯವಸಾಯ ಬೆಳೆಗಳಾದ, ಅಕ್ಕಿ, ತೆಂಗು, ಕಬ್ಬು, ಧಾನ್ಯಗಳು ಮತ್ತು ಉತ್ತಮ ವಾಣಿಜ್ಯ ಬೆಳೆಯಾದ ಮೆಣಸು ಇವು ರಾಜ್ಯದ ವಿದೇಶೀ ವಿನಿಮಯದ ವಸ್ತುಗಳಾಗಿದ್ದುವು. ತೇಗ ಮತ್ತು ಅಡಿಕೆಕಾಯಿ ಉತ್ತಮ ಬೆಲೆಯ ವಸ್ತುಗಳಾಗಿದ್ದುವು. ಹತ್ತಿಯ ವಸ್ತುಗಳಿಗೆ ತುಳುನಾಡು ಹೆಚ್ಚಾಗಿ ಕರ್ಣಾಟಕ ಇತರ ಪ್ರದೇಶಗಳನ್ನವಲಂಬಿಸಿತ್ತು.

ಸಮುದ್ರ ವ್ಯಾಪಾರ ಈ ಕಾಲದಲ್ಲಿ ಬಿರುಸಿನಿಂದ ಸಾಗುತ್ತಿತ್ತು. ಈ ಕಾಲದಲ್ಲಿ ಬಂದ ವಿದೇಶಿ ಪ್ರವಾಸಿಗರಾದ ಪೋರ್ಚುಗೀಸ್ ಫೆಡ್ರೊ ಅಲ್ವರೆಸ್ ಕಬ್ರಲ್ (Pedro Alvares Cabral) (ಕ್ರಿ.ಶ. ೧೫೦೦), ಇಟಲಿಯ ಲುಡೊ ವಿಕೊ ವರ್ತೆಮಾ (Ludo vico Varthema) ಕ್ರಿ.ಶ. ೧೫೦೬), ಪೋರ್ಚುಗೀಸಿನ ಅಲ್‌ಫಾನ್‌ಸೊ ಅಲ್ಬುಕರ್ಕ್ (Alfonso Albuquerque) (ಕ್ರಿ.ಶ. ೧೫೦೯–೧೫), ಪೋರ್ಚುಗೀಸಿನ ಗಾಸ್ಟರ್ ಕೊರ್‍ರೆಯ (Gaspur Correa) (ಕ್ರಿ.ಶ. ೧೫೧೨–೬೧), ಸ್ಪೇನಿನ ಡ್ಯೂಆರ್ಟೆ ಬಾರ್ಬೋಸ (Duarte Barbosa) (ಕ್ರಿ.ಶ. ೧೫೦೪–೧೪) ಇಟಲಿಯ ಸೀಸರ್ ಫ್ರೆಡರಿಕ್ (Caesar Frederic) (ಕ್ರಿ.ಶ. ೧೫೬೭) ಮುಂತಾದವರ ಬರಹಗಳು ಈ ಕಾಲದ ತುಳುನಾಡಿನ ಸಮುದ್ರ ವ್ಯಾಪಾರದ ಕುರಿತು ವರ್ಣಿಸಿವೆ. ಬಾರ್ಬೋಸನು ಘಟಕಳ ರೇವಿನಲ್ಲಿ ನಡೆಯುತ್ತಿರುವ ವ್ಯಾಪಾರವನ್ನು ವರ್ಣಿಸುತ್ತಾ ತುಳುನಾಡಿನ ಬೆಳೆಗಳ ಕುರಿತೂ

26 *S.I.I.*, Vol VII; No. 229
27 *Ibid*, No. 248
28 *Ibid*, No. 262
29 *Ibid*, No. 273

ಬರೆದಿದ್ದಾನೆ.[30] ಮಂಗಳೂರು ಈ ಕಾಲದಲ್ಲಿ ಉತ್ತಮ ಬಂದರಾಗಿತ್ತು. ಕ್ರಿ.ಶ. ೧೫೦೭ರಲ್ಲಿ ವರ್ಥೆಮ ತಿಳಿಸುವಂತೆ ಅಕ್ಕಿಗಳಿಂದ ತುಂಬಿದ ಅರವತ್ತು ಹಡಗುಗಳು ಮಂಗಳೂರು ಬಂದರಿನಲ್ಲಿ ಪ್ರಯಾಣಿಸಲು ನಿಂತಿದ್ದವು.[31] ವಿಜಯನಗರ ಸಾಮ್ರಾಜ್ಯದ ಕೊನೆಯ ದಿನಗಳಲ್ಲಿ ಮಂಗಳೂರು ಬಂದರು ತನ್ನ ಪ್ರಾಬಲ್ಯವನ್ನು ಹಿಂದಿನ ರೀತಿಯಲ್ಲಿ ಉಳಿಸಿಕೊಳ್ಳುವುದರಲ್ಲಿ ವಿಫಲವಾಯಿತೆನ್ನಬೇಕು. ಹಾಗಾಗಿ ಕ್ರಿ.ಶ. ೧೫೬೭ಕ್ಕೆ ಭಾರತಕ್ಕೆ ಬಂದ ಸೀಸರ್ ಫ್ರೆಡೆರಿಕ್‌ನ ಬರಹಗಳಲ್ಲಿ ಮಂಗಳೂರಿನ ವ್ಯಾಪಾರದ ಕುರಿತು ಕಡಿಮೆ ಆಧಾರಗಳಿವೆ.[32] ಬಸರೂರಿನಲ್ಲಿ ಅಕ್ಕಿ ವ್ಯಾಪಾರ ಚೆನ್ನಾಗಿ ನಡೆಯುತ್ತಿತ್ತು. ಅಕ್ಕಿಯನ್ನು ಗೋವಾಕ್ಕೆ ಕಳುಹಿಸಲಾಗುತ್ತಿತ್ತು.[33]

ವಿಜಯನಗರ ಕಾಲದಲ್ಲಿ ತುಳುನಾಡು ಚೀನಾದೊಂದಿಗೂ ವ್ಯಾಪಾರ ಸಂಬಂಧ ಹೊಂದಿತ್ತು. ಕ್ರಿ.ಶ. ೧೪೨೯ರ ಮೂಡಬಿದುರೆ ಶಾಸನದಲ್ಲಿ 'ಚೀನಾಂಬರ ವಿಕ್ರಯಕ್ರಯಿತರಿಂ' ಎಂಬ ಮಾತಿರುವುದರಿಂದ ಚೀನಾ ದೇಶದ ಬಟ್ಟೆ ತುಳುನಾಡಿಗೆ ಬಂದಿರುವುದನ್ನು ಗಮನಿಸಬಹುದು.[34]

ಅನೇಕ ಶಾಸನಗಳು ಪಟ್ಟಣಗಳಲ್ಲಿ ನಡೆಯುವ ವಾಣಿಜ್ಯ ವ್ಯವಹಾರಗಳ ಕುರಿತು ನಾನಾ ವಿಧದಲ್ಲಿ ವರ್ಣಿಸಿವೆ. ಮೂಡಬಿದುರೆ ನಗರದ ವಿದ್ವಾಂಸರ, ನಾರೀಮಣಿಗಳ ಮತ್ತು ವ್ಯಾಪಾರಾದಿ ವ್ಯವಹಾರಗಳ ವರ್ಣನೆಯನ್ನು ಗಮನಿಸಿ[35]

ಘನವಕ್ಷೋರುಹ ಹಾರಭಾರ ವಿಚಲನ್ಮಧ್ಯಂ ಮನಃ ಪ್ರೀತಿರೊಂ–
ದನುರಾಗಕ್ಕೆಡೆಯಾಗೆ ಸಂಚರಿಪ ನಾರೀವೃಂದದಿಂ ಸಾರಕಾ–
ವ್ಯಸವಾರ್ತಾಮೃತ ಸೇವೆಯಿಂ ತಣಿವ ಕಾವ್ಯ ಪ್ರೌಢರಿಂ ರತ್ನಕಾಂ–
ಚನ ಚೀನಾಂಬರ ವಿಕ್ರಯ ಕ್ರಯಿತರಿಂ ಚೆಲ್ವಾದುದೆತ್ತಂ ಪುರಂ॥

ವ್ಯಾಪಾರವು ಬೆಳೆದಂತೆ ಜನರ ನಡುವೆ ಸಾಲ ಕೊಡುವವರೂ ಹೆಚ್ಚಿದರು. ಸಾಲವಾಗಿ ಕೊಟ್ಟ ಹಣಕ್ಕೆ ಋಣಿಯಾದವನು ಕೊಡುತ್ತಿದ್ದ ಬಡ್ಡಿಯ ಹಣವನ್ನು ಸಾಲ ಕೊಟ್ಟವನು ದೇವಸ್ಥಾನಗಳಿಗೆ ದಾನಕೊಡುವುದು ವಾಡಿಕೆಯಲ್ಲಿತ್ತು. ಕೇವಲ ವೈಯಕ್ತಿಕ ಜಾಮೀನಿನ ಮೇಲೆ ನೀಡಲಾದ ಸಾಲವನ್ನು 'ಮೈಸಾಲ' ಎಂದು ಕರೆಯುತ್ತಿದ್ದರು. ಹಣದ ರೂಪದಲ್ಲಿ ಪಡೆದ ಸಾಲಕ್ಕೆ ಬೆಳೆಯ ರೂಪದಲ್ಲಿ ಬಡ್ಡಿ ನೀಡುವುದು ಪದ್ಧತಿಯಲ್ಲಿತ್ತು. ಮಲ್ಲಿಕಾರ್ಜುನನ ಆಳ್ವಿಕೆಯ ಕ್ರಿ.ಶ. ೧೪೫೦ರ ಬಸರೂರಿನ ಶಾಸನ ತಿಳಿಸುವಂತೆ ಕೋಟಿಯಕ್ಕ ನಾಯಕಿತಿಯೆಂಬಾಕೆಯಿಂದ ಪಡುವಕೇರಿಯ ಸೆಟ್ಟಿಕಾರರು 'ಕಡ' ಪಡೆದಿದ್ದ ೨೦೦ ಕಾಟಿ ಗದ್ಯಾಣಗಳಿಗೆ ೧೩ ಮುಡಿ ಅಕ್ಕಿಯನ್ನು ಬಡ್ಡಿಯಾಗಿ ಕೊಡಲೊಪ್ಪಿದ್ದರು.[36]

ಈ ಕಾಲದ ವ್ಯಾಪಾರದಲ್ಲಿ ವರ್ತಕ ಸಂಘಗಳು ಪ್ರಮುಖ ಪಾತ್ರವನ್ನು ವಹಿಸಿದುವು. ತುಳುನಾಡಿನ ವ್ಯಾಪಾರವು 'ಶ್ರೇಷ್ಠಿಗಳ' 'ಸೆಟ್ಟಿಕಾರ'ರ ಅಧೀನದಲ್ಲಿತ್ತು.[37] ವ್ಯಾಪಾರಕ್ಕೆ ಸಂಬಂಧಿಸಿದ ವಿಷಯದಲ್ಲಿ ೧೬ ಸೆಟ್ಟಿಕಾರರು ಪ್ರತಿನಿಧಿಸುತ್ತಿದ್ದರು. ಇವರು ವ್ಯಾಪಾರವನ್ನು ನಿಯಂತ್ರಿಸುತ್ತಿದ್ದರು. ಸೆಟ್ಟಿಕಾರರು ಬೇರೆ ಬೇರೆ ಕೇರಿಗಳ ವ್ಯಾಪಾರ ಒಪ್ಪಂದಮಾಡಿಕೊಳ್ಳುತ್ತಿದ್ದರು. ಕಾರ್ಕಳ, ಮೂಡಬಿದುರೆ, ಬಾರಕೂರು, ಮಂಗಳೂರು, ಬಸರೂರು ಮೊದಲಾದ ನಗರಗಳಲ್ಲಿ ವ್ಯಾಪಾರವನ್ನು ಸೆಟ್ಟಿಗಾರರ

---

30 Duarte Barbora : *A description of Coast of East Africa and Malabar*, Part I, pp. 192

31 R. C. Temple : *The Itinerary of Ludo vic di Ve·thema of Bologna*, p. 50

32 S. Parchas—*Harluytus Posthumus* X, p. 101

33 *Ibid* p. 221

34 *S.I.I.* Vol VII, No. 196

35 *Ibid*,

36 *Ibid* Vol IX Part *II*, No. 452

37 *Ibid* Vol VII, Nos 196, 197, 206, 221, 242, 309, 321 etc

38 *Ibid*, No. 197

ಸಂಘಗಳು ನಿರ್ವಹಿಸುತ್ತಿದ್ದುವು. ಮೂಡಬಿದುರೆ ಶಾಸನವೊಂದು ೬೦ ಸೆಟ್ಟಿಗಳು ಕುರಿತು ತಿಳಿಸುತ್ತದೆ.[38] ಈ ಸಂಘಗಳು ಧಾರ್ಮಿಕ ವಿಷಯದಲ್ಲೂ ಪ್ರಮುಖ ಪಾತ್ರವಹಿಸುತ್ತಿದ್ದುದುಂಟು.

'ಬಳಂಜ'ವೆಂಬ ವರ್ತಕರ ಸಂಘಗಳ ಕುರಿತು ಹೆಚ್ಚಿನ ವಿವರ ದೊರಕದಿದ್ದರೂ ಈ ಸಂಘಗಳು ಈ ಕಾಲದಲ್ಲಿ ತುಳುನಾಡಿನಲ್ಲಿತ್ತೆನ್ನುವುದಕ್ಕೆ ಸಾಕಷ್ಟು ಆಧಾರಗಳಿವೆ.[39] 'ನಾನಾದೇಶೀಯರು' ಎನ್ನುವ ಇನ್ನೊಂದು ಸಂಘ ಈ ಕಾಲದಲ್ಲಿತ್ತು. ಕ್ರಿ.ಶ. ೧೫೪೩ರ ಕಾರ್ಕಳ ಶಾಸನವು ಶಾಂತಿನಾಥ ಬಸದಿಯಲ್ಲಿ ರಾಜ, ಪ್ರಧಾನರು, ಕಾರ್ಕಳದ ಹಲರು ಮತ್ತು ಉಭಯ ನಾನಾ ದೇಶೀಯರು–ಇವರ ಸಮ್ಮುಖದಲ್ಲಿ ನಡೆದ ದಾನವಿವರ ನೀಡಿದೆ.[40] ಬಾರಕೂರು ಮತ್ತು ಬಸರೂರಿನಲ್ಲಿ ಗೊರವರೆಂಬ ಇನ್ನೊಂದು ರೀತಿ ವ್ಯಾಪಾರಿ ಗುಂಪು ಇದ್ದಿತ್ತು. ಬಾರಕೂರಿನಲ್ಲಿ ಇವರು ಗೊರವೇಶ್ವರ ದೇವಾಲಯವೆಂಬ ದೇವಸ್ಥಾನ ಕಟ್ಟಿದ್ದರು.[41]. ಇವರ ಸ್ಥಿತಿಗತಿಗಳ ಕುರಿತು ಹೆಚ್ಚಿಗೆ ತಿಳಿದುಬರುವುದಿಲ್ಲ. ನಖರ ಎಂಬ ಸಂಘವು ಕೂಡಾ ಪ್ರಮುಖವಾಗಿತ್ತು. 'ನಖರಾದಿ ನಾಲ್ವರು', 'ಬಾರಕೂರ ಪಟ್ಟುಕೇರಿಯ ನಖರ ಹಂಜಮಾನ'– ಮೊದಲಾದ ಮಾತುಗಳು ಶಾಸನಗಳಲ್ಲಿ ಕಂಡುಬರುವುದರಿಂದ ಈ ವರ್ತಕ ಸಂಘದ ಮಹತ್ವ ಅರಿವಾಗುತ್ತದೆ. ಸುಮಾರು ಕ್ರಿ.ಶ. ೧೨ನೆಯ ಶತಮಾನದ ಸುಮಾರಿಗೆ, ವರ್ತಕ ವೃತ್ತಿಯನ್ನು ಹಿಡಿದು ಭಾರತದ ಕರಾವಳಿಗೆ ಬಂದ ಪರ್ಷಿಯಾ ದೇಶದ ಮುಸ್ಲಿಂ ವರ್ತಕ ಸಂಘವಾದ 'ಹಂಜಮಾನ'ವು ಬಾರಕೂರು ಮೊದಲಾದೆಡೆ ಪ್ರಾಬಲ್ಯದಲ್ಲಿದ್ದು. ಇತರ ವರ್ತಕ ಸಂಘಗಳಂತೆಯೇ ಆಡಳಿತದಲ್ಲಿ ಪ್ರಾತಿನಿಧ್ಯ ಪಡೆದಿತ್ತೆನ್ನುವುದು ಎರಡನೆ ಬುಕ್ಕರಾಯನ ಕಾಲದ ಬಾರಕೂರಿನ ಶಾಸನವೊಂದರಿಂದ ತಿಳಿಯುತ್ತದೆ.[42]

ಒಟ್ಟಿನಲ್ಲಿ ಹೇಳುವುದಾದರೆ ವಿಜಯನಗರ ಕಾಲದ ತುಳುನಾಡಿನ ಆರ್ಥಿಕ ಪರಿಸ್ಥಿತಿ ಉತ್ತಮವಾಗಿತ್ತು. ಮೂಡಬಿದುರೆಯ ಜನಸಾಮಾನ್ಯರ ವರ್ಣನೆಯನ್ನು ಗಮನಿಸಿ:

'ಅಂತಾ ಪುರವಾಸ್ತವ್ಯ–
ರ್ಕಂತುಗೆ ರೂಪಿಂದೆ ಧನದಗಂ ಸಿರಿಯಿಂದ–
ತ್ಯಂತ ವಿತರಣದಿ ನಾಡಿನ
ಕಾಂತ ತನೂಜಂಗೆ ಮಾಡುವರ್ಕೌತುಕಮಂ॥"[43]

ಈ ಕಾಲದ ತುಳುನಾಡಿನ ನಗರಗಳ ವೈಭವಗಳನ್ನು ವರ್ಣಿಸುವ ಅನೇಕ ಮನೋಹರ ಪದ್ಯಗಳು ಶಾಸನಗಳಲ್ಲಿವೆ. ಎರಡನೆಯ ದೇವರಾಯನ ಕಾಲದ ಮಂಗಳೂರು ಪಟ್ಟಣವು ಈ ರೀತಿ ಶೋಭಿಸುತ್ತಿತ್ತು.

ಚಲದೂರ್ಮಿವ್ರಾತಜಾತಪ್ರಹರಣಕರಣಕೃದ್ವಾರ್ಧಿಯಿಂ ಮುಂದೆ ಸಾಲಂ
ಬಳಸಲ್ಕಾನಾಮಣಿಸ್ಫುರಿತಪರಿವೃಢಾಗಾರದಿಂ ವಾರನಾರೀ–
ಕುಲದಿಂ ಸ್ವರ್ಣಾದಿಪೂರ್ಣಾಪಣಗಣದಿನಾಂ ಶೋಭಿಕುಂ ಮಂಗಲೂರಾ–
ಸ್ಥಲದೊಳ್ ಪ್ರೀತ್ಯಾದಿ ಸಸ್ಯೋತ್ಕರುಷ ಹರುಷಿತಾತ್ಮೀಯ ಪೌರಪ್ರತಾನಂ'॥[44]

ಇದೇ ಶಾಸನದ ಅನಾಮಿಕ ಕವಿಯು ವಂಶಪುರ (ಮೂಡಬಿದುರೆ)ವನ್ನು ವರ್ಣಿಸಿದ ಬಗೆ ಇದು:

ಪುರಪ್ರೋಲ್ಲಿಪ್ಪುದು ವಂಶವೆಂಬ ಪೆಸರಿಂ ಬಾಹ್ಯ ಪ್ರದೇಶಂಗಳೊಳ್
ವರಶಾಲೇಯದಿನಿಕ್ಷು ಶಾಕಟದಿನಾರಾಮಂಗಳಿಂ ಸುತ್ತಿದಾ–
ಪರಿಕಾಂತಃಪರಿಧಿಪ್ರತೋಳಿಗಳಿನುದ್ಯತ್ಕೇತನವ್ರಾತದಿಂ–
ಮರು ಜೈನಾಲಯರಮ್ಯಹರ್ಮ್ಯಚಯದಿಂ ಪುಣ್ಯಾಂಗನಾಸಂಗದಿಂ॥"

---

39 *Ibid*, Nos 185, 213
40 *Ibid*, No. 247
41 *Ibid*, No. 338
42 *Ibid*, No. 173
43 *Ibid*, No. 196

ಹಿರಿಯಣ್ಣ ಅಂಬಳಿಕೆ

ಮಲೆನಾಡಿನ ಜನಪದ ಸಂಪ್ರದಾಯ-ವಿವಾಹ

ಮಾನವ ಇತರ ಪ್ರಾಣಿಗಳಂತೆ ಲೈಂಗಿಕ ಪ್ರಚೋದನೆಯನ್ನು ಪೊಂದಿರುವನಾದರೂ ಯುಕ್ತಾಯುಕ್ತ ವಿವೇಚನೆಯಲ್ಲಿ ಪ್ರಾಣಿಗಳಿಗಿಂತ ಭಿನ್ನನಾಗುತ್ತಾನೆ. ಆದುದರಿಂದಲೇ ಮಾನವಸಮಾಜಗಳು ಲೈಂಗಿಕ ಸಂಯೋಗವನ್ನು ವೈಯಕ್ತಿಕ ಅಥವಾ ಜೈವಿಕವೆಂದು ಮಾತ್ರ ಭಾವಿಸದೆ ಸಾಮಾಜಿಕ ಮತ್ತು ನೈತಿಕ ವಿಷಯವೆಂದು ಪರಿಗಣಿಸುತ್ತವೆ. ಅಲ್ಲದೆ ಪ್ರತಿ ಮಾನವಸಮುದಾಯವೂ ಅಂಗೀಕಾರಾರ್ಹ ಸಂಗಾತಿಗಳ ನಡುವೆ ಉನ್ನತಸ್ತರದ ಹಾಗೂ ಸ್ಥಿರವಾದ ಬಂಧನವೊಂದನ್ನು ಅಪೇಕ್ಷಿಸುತ್ತದೆ. ಅದನ್ನೇ ಮದುವೆ ಎಂದು ಕರೆದು ಗಂಡುಹೆಣ್ಣುಗಳನ್ನು ಒಂದು ವ್ಯವಸ್ಥಿತ ಕುಟುಂಬಜೀವನಕ್ಕೆ ಒಳಪಡಿಸುತ್ತವೆ.

ಸಂಘಜೀವಿ ಎನ್ನಿಸಿಕೊಂಡ ಮಾನವ ತನ್ನ ಜೀವಿತದ ಅವಧಿಯನ್ನು ಒಂಟಿಯಾಗಿಯೇ ಕಳೆಯಲಾರ. ಅದಕ್ಕಾಗಿಯೇ ಅವನು ಒಂದು ನಿರ್ದಿಷ್ಟ ಗುಂಪಿನಲ್ಲಿ ಸೇರಿ ಜೀವನ ನಡೆಸಬಯಸುತ್ತಾನೆ. ಅಂತಹ ಹಲವಾರು ಗುಂಪುಗಳು ಸೇರಿ ಒಂದು ಸಮಾಜದ ನಿರ್ಮಾಣವಾಗುತ್ತದೆ. ಆ ಸಮಾಜದ ಇತಿಮಿತಿಯ ಚೌಕಟ್ಟಿನಲ್ಲಿಯೆ ಗಂಡುಹೆಣ್ಣುಗಳು ತಮ್ಮ ಜೀವನಸಂಗಾತಿಗಳನ್ನು ಆಯ್ಕೆಮಾಡಿಕೊಂಡು ಬದುಕು ನಡೆಸಬೇಕಾಗುತ್ತದೆ.

ಅನಾದಿಕಾಲದಿಂದಲೂ ಮಾನವಸಮಾಜ ತನಗೇ ವಿಶಿಷ್ಟವಾದ ಒಂದು ವ್ಯವಸ್ಥೆಯನ್ನು ರೂಪಿಸಿಕೊಳ್ಳುತ್ತಾ ಬಂದಿದೆ. ಆ ವ್ಯವಸ್ಥೆ ನಾನಾ ವಿಧದಲ್ಲಿ ಆಗಿದೆ. ವಿಶ್ವದಾದ್ಯಂತ ಹಲವಾರು ವಿಧದ ಸಾಮಾಜಿಕ ವ್ಯವಸ್ಥೆಗಳು ಅಸ್ತಿತ್ವ ತಾಳಿವೆ. ಅಂತೆಯೇ ಪ್ರತಿಯೊಂದು ಸಮಾಜವೂ ಭಿನ್ನಭಿನ್ನ ಸಂಸ್ಕೃತಿ, ಭಿನ್ನಭಿನ್ನ ಸಾಮಾಜಿಕ ವ್ಯವಸ್ಥೆಗಳನ್ನು ರೂಪಿಸಿಕೊಂಡಿವೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಭಾರತೀಯ ಸಾಮಾಜಿಕ ವ್ಯವಸ್ಥೆ ಅತ್ಯಂತ ಸಂಕೀರ್ಣವಾದುದು. ಇಲ್ಲಿ ಹಲವಾರು ಜನಾಂಗಗಳು ಒಂದುಗೂಡಿ ಒಂದು ವಿಶಿಷ್ಟ ಸಮಾಜವನ್ನು ಕಟ್ಟಿಕೊಂಡಿರುವುದು ಮಾತ್ರವಲ್ಲದೆ ವಿವಿಧ ಜಾನಾಂಗಿಕ, ಸಾಮಾಜಿಕ ಕಾರಣಗಳಿಗಾಗಿ ಜಾತಿಪದ್ಧತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹುಟ್ಟಿಕೊಂಡಿವೆ. ಈ ಜಾತಿ ಪದ್ಧತಿಗಳಿಗೆ ಸಾಕಷ್ಟು ಧಾರ್ಮಿಕ ಹಿನ್ನೆಲೆಯೂ ಇದ್ದಂತೆ ಕಂಡುಬರುತ್ತದೆ.

ಹಿಂದೂ ಸಮಾಜದ ಒಂದು ಮುಖ್ಯ ಜಾತಿ ಅಥವಾ ವರ್ಗವಾದ ಒಕ್ಕಲಿಗ ಜನಾಂಗ ಮುಖ್ಯವಾಗಿ ವ್ಯವಸಾಯ ಕಸುಬಿಗೆ ಸಂಬಂಧಿಸಿದುದು. ಈ ಜನಾಂಗ ಇತರ ಜನಾಂಗಗಳಿಗೆ ಭಿನ್ನವಾದ, ವಿಶಿಷ್ಟವಾದ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಂಡಿದೆ. ಮುಖ್ಯವಾಗಿ, ಎಲ್ಲ ಜನಾಂಗಗಳಲ್ಲೂ ಇರುವಂತೆ ಈ ಜನಾಂಗದಲ್ಲೂ ಕುಟುಂಬ ವ್ಯವಸ್ಥೆ ಇದೆ. ಆದರೆ ಈ ಕುಟುಂಬ ವ್ಯವಸ್ಥೆ ಸಹಬಾಳ್ವೆಯ ಸಾಮಾಜಿಕ ಘಟಕವಾಗಿ ಕಂಡುಬರುತ್ತದೆ. ಮಲೆನಾಡಿನ ಈ ಜನಾಂಗ ಪ್ರಾಪ್ತವಯಸ್ಸಿಗೆ ಬಂದ ಗಂಡು ಹೆಣ್ಣು ಗಳನ್ನು ಕುಟುಂಬಜೀವನಕ್ಕೆ ಪ್ರವೇಶಮಾಡಿಸುವಾಗ ಅನುಸರಿಸುವ ಮಾರ್ಗಗಳು ಒಂದು ಅರ್ಥದಲ್ಲಿ ಸಾಂಪ್ರದಾಯಿಕವೆನ್ನಬಹುದಾದರೂ ಬಯಲುಸೀಮೆಯ ಒಕ್ಕಲಿಗರಿಗಿಂತ ಭಿನ್ನ ಹಾಗೂ ವಿಶಿಷ್ಟ ವಾದಂತಹವು.

ಶ್ರೀವೈಷ್ಣವ ಸಂಪ್ರದಾಯಕ್ಕೆ ಸೇರಿದ ಮಲೆನಾಡಿನ (ಶಿವಮೊಗ್ಗ ಜಿಲ್ಲೆ) ನಾಮಧಾರಿ ಒಕ್ಕಲಿಗರು ತಮ್ಮ ಬದುಕಿನ ಪ್ರಮುಖ ಘಟ್ಟಗಳಲ್ಲಿ ಆಚರಿಸುವ ಸಂಪ್ರದಾಯಗಳು ಅವರ ಜೀವನಕ್ಕೆ ಅಂಟಿಕೊಂಡಂತಿವೆ. ಜೀವನದಲ್ಲಿ ಒಮ್ಮೆ ಮಾತ್ರ ಘಟಿಸಬಹುದಾದಂತಹ ವಿವಾಹಕ್ಕೆ ಅತ್ಯಂತ ಪ್ರಮುಖ ಸ್ಥಾನ ನೀಡುತ್ತಾರೆ. ಎಲ್ಲ ಜನಾಂಗಗಳಲ್ಲೂ ಇದ್ದಂತೆ ಇವರಲ್ಲೂ ಬಾಲ್ಯವಿವಾಹ ಪದ್ಧತಿ ಜಾರಿಯಲ್ಲಿತ್ತು; ವಿಧವಾ ವಿವಾಹಪದ್ಧತಿ ರೂಢಿಯಲ್ಲಿತ್ತು; ಬಾಲವಿಧವೆಯರಿಗೆ 'ಕೂಡಾವಳಿ' ಮಾಡಿಸುವ ಪದ್ಧತಿ ಇತ್ತು. ಮೊನ್ನೆಮೊನ್ನೆಯವರೆಗೂ ಬಹುಪತ್ನಿತ್ವ ಚಾಲ್ತಿಯಲ್ಲಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಮದುವೆ ವಾರಗಟ್ಟಲೆ ಅದ್ದೂರಿಯಿಂದ ನಡೆಯುತ್ತಿತ್ತು. ನಾಗರಿಕತೆಯ ಪ್ರಭಾವಕ್ಕೊಳಗಾಗದ ಎಷ್ಟೋ ಕುಟುಂಬಗಳು ತಮ್ಮ ಹಿಂದಿನ ತಲೆಮಾರಿನ ಈ ಪ್ರಾಚೀನ ಸಂಪ್ರದಾಯಗಳನ್ನು ಇಂದಿಗೂ ಉಳಿಸಿಕೊಂಡು ಬರುತ್ತಿವೆ.

ಪ್ರಾಪ್ತವಯಸ್ಸಿಗೆ ಬಂದ ಹರೆಯದ ಮಕ್ಕಳಿಗೆ ಪೋಷಕವರ್ಗ ಮದುವೆ ಸಮಾರಂಭವನ್ನು ಏರ್ಪಡಿಸುವುದರ ಮೂಲಕ ಗೃಹಸ್ಥಾಶ್ರಮವನ್ನು ತೆರೆಸುತ್ತದೆ. ಮೊಟ್ಟಮೊದಲು ಮಧ್ಯವರ್ತಿಯೊಬ್ಬರ ಸಹಾಯದಿಂದ ತಮಗೆ ಇಷ್ಟವಾಗುವ ಸಂಬಂಧದ ಹೆಣ್ಣಿನ ಕುಲ, ಬಳಿ ಮುಂತಾದ ವಿವರಗಳನ್ನು ಔಪಚಾರಿಕವಾಗಿ ತಿಳಿದುಕೊಳ್ಳಲಾಗುತ್ತದೆ (ಕುಲ, ಬಳಿ–ಗಂಡುಹೆಣ್ಣುಗಳಿಬ್ಬರದೂ ಒಂದೇ ಆಗಿರಕೂಡದು.) 'ವರಸಾಮ್ಯ' ಕೂಡಿಬಂದರೆ ಹತ್ತಿರ ಸಂಬಂಧಿಕರೊಬ್ಬರೊಡನೆ 'ಹಾದಿನಿಮಿತ್ತ' (ಶಕುನ) ನೋಡಿಕೊಂಡು ಹೆಣ್ಣಿನ ಮನೆಗೆ ಹೋಗುತ್ತಾರೆ.

ಇತರ ಎಲ್ಲ ಜನಾಂಗಗಳಂತೆ ಈ ಜನಾಂಗವೂ ಶಕುನಗಳನ್ನು ನಂಬುತ್ತದೆ. ಕತ್ತಿ, ಸೌದೆ, ಬೂದಿ, ಖಾಲಿಗಡಿಗೆ, ಹಂದಿ, ಕೋತಿ, ವಿಧವೆ, ಬಲದಲಿಯು ಹಾರುವ, ಮುಟ್ಟಾದ ಹೆಂಗಸು–ಮುಂತಾದ ವ್ಯಕ್ತಿಗಳು ಮತ್ತು ಘಟನೆಗಳು ಪ್ರಯಾಣಕ್ಕೆ ಹೊರಟಾಗ ಎದುರಾದರೆ ಅಶುಭವೆಂದೂ, ಬೆಕ್ಕು ಅಥವಾ ಹಾವು ಬಲಗಡೆ ಹಾಯ್ದರೆ ಶುಭವೆಂದೂ ತಿಳಿದುಕೊಂಡು ಪ್ರಯಾಣವನ್ನು ಮುಂದುವರಿಸಲಾಗುತ್ತದೆ.

ಹೆಣ್ಣು ನೋಡಲು ಬಂದ ವರನ ಕಡೆಯವರನ್ನು ವಿಶೇಷವಾದ ರೀತಿಯಲ್ಲೇನೂ ಸತ್ಕರಿಸದೆ ಬತ್ತ ಕುಟ್ಟುತ್ತಲೊ, ಗೊಬ್ಬರ ಹೊರುತ್ತಲೊ, ನೀರು ತರುತ್ತಲೊ ಅಥವಾ ಬೇರೆ ಯಾವುದಾದರೂ ಕೆಲಸದಲ್ಲಿ ತೊಡಗಿದ್ದ ಹೆಣ್ಣನ್ನು ಆಕೆಗೆ ಗೊತ್ತಾಗದಂತೆ ದೂರದಿಂದಲೇ ಹೊಸ ನೆಂಟರಿಗೆ ತೋರಿಸಲಾಗುವುದು (ಕೆಲವೊಮ್ಮೆ ಬೇರೆ ಏನೇನೊ ಕಾರಣಗಳಿಗಾಗಿ ಒಬ್ಬರಿಗೆ ಬದಲಾಗಿ ಇನ್ನೊಬ್ಬರನ್ನು ತೋರಿಸಿ, ಅನಾಹುತಗಳು ಸಂಭವಿಸುವುದುಂಟು. ಮತ್ತೆ ಕೆಲವು ಸಂದರ್ಭಗಳಲ್ಲಿ ಹಬ್ಬ–ಹುಣ್ಣಿಮೆ, ಮದುವೆ ಮುಂಜಿಗೆ ಬಂದ ಹೆಣ್ಣನ್ನು ಇಷ್ಟವಾಗುವುದಾದರೆ ತಂದುಕೊಳ್ಳಲು ಆಲೋಚಿಸಿರಲಾಗಿರುತ್ತದೆ.) ನೋಡಲು ಬಂದವರು ದೂರದಿಂದಲೇ ಹುಡುಗಿಯ ಎತ್ತರ, ರೂಪ, ಬಣ್ಣ, ಮೈಕಟ್ಟುಗಳನ್ನು ಸೂಕ್ಷ್ಮವಾಗಿ ಗಮನಿಸಿ ಜೋಡಿ ಹೊಂದಿಕೊಳ್ಳುತ್ತದೆಂದೆನಿಸಿದರೆ ತಮ್ಮ ವರನಿಗೆ ತಕ್ಕುನಾದ ಹೆಣ್ಣೆಂದು 'ಒಪ್ಪುವೀಳ್ಯ'ಕ್ಕೆ ಬರುವುದಾಗಿ ಮಾತುಕೊಡುತ್ತಾರೆ. ಸಂಬಂಧ ಕುದುರುವುದು ಅನುಮಾನವಿದ್ದಲ್ಲಿ ಗಂಡುಹೆಣ್ಣುಗಳಿಬ್ಬರ ಹೆಸರುಗಳ ಮೊದಲಕ್ಷರಗಳನ್ನು ತಿಳಿದುಕೊಂಡು ಜೋಯಿಸರಿಂದ ಆ ಹೆಸರುಗಳು ಸಂಕೇತಿಸುವ ನಕ್ಷತ್ರಗಳು ಒಂದುಗೂಡುತ್ತವೆಯೊ ಇಲ್ಲವೊ ಎಂಬುದಾಗಿ 'ಸಾಲಾವಳಿ' ನೋಡಿಸಲಾಗುವುದು.

ಸಾಲಾವಳಿ ಕೂಡಿಬಂದರೆ ಒಪ್ಪುವೀಳ್ಯಕ್ಕೆ ಹೋಗುವ ದಿನವನ್ನು ನಿಶ್ಚಯಿಸಿಕೊಳ್ಳಲಾಗುತ್ತದೆ. ಗಂಡಿನ ಕಡೆಯಿಂದ ಒಂಬತ್ತು ಅಥವಾ ಹನ್ನೊಂದು ಮಂದಿ ಅಡಿಕೆ, ವೀಳ್ಯದೆಲೆಗಳನು ಹಿಡಿದುಕೊಂಡು ಮೊದಲಿನಂತೆ ಹಾದಿನಿಮಿತ್ತ ನೋಡಿಕೊಂಡು ಹೆಣ್ಣಿನ ಮನೆಗೆ ಹೋಗುತ್ತಾರೆ. ಹೆಣ್ಣಿನ ಮನೆಯವರು ಬಂದ ಹೊಸ ಅತಿಥಿಗಳಿಗೆ ನೀರಿನ ತಂಬಿಗೆಗೆ ತುಂಬೆ ಹೂ ಹಾಕಿ ಕಾಲು ತೊಳೆದುಕೊಳ್ಳಲು ನೀರು ಕೊಡುತ್ತಾರೆ. ಬಂದ ನೆಂಟರಿಗೆ ಕುಳಿತುಕೊಳ್ಳಲೆಂದು ಮೊದಲೇ ಏರ್ಪಡಿಸಿದ್ದ 'ಸಭಾ'ದಲ್ಲಿ ನೆಂಟರನ್ನು ಕುಳ್ಳಿರಿಸಿ ಹೆಣ್ಣಿನ ಕೈಯಿಂದ ಗಂಗೋದಕವನ್ನು ಕೊಡಿಸಲಾಗುವುದು. ಗಂಡಿನ ಕಡೆಯವರಿಗೆ ಹೆಣ್ಣು ಇಷ್ಟವಾಗುವುದಾದರೆ ಒಮ್ಮೆಲೇ ಹೆಣ್ಣಿನ ಪೋಷಕರೊಂದಿಗೆ ಮಾತುಕತೆ ಆರಂಭಗೊಳ್ಳು

ತ್ತವೆ. ಎರಡೂ ಗುಂಪಿನ ಮಾತುಕತೆಗಳು ಒಂದು ನಿರ್ಣಯಕ್ಕೆ ಬರುವ ಘಟ್ಟವನ್ನು ಮುಟ್ಟಿದಾಗ ಇಬ್ಬರೂ ಪರಸ್ಪರವಾಗಿ ಒಪ್ಪುವೀಳ್ಯವನ್ನು ಸ್ವೀಕರಿಸುತ್ತಾರೆ. ಸಾಮಾನ್ಯವಾಗಿ ಈ ಒಪ್ಪುವೀಳ್ಯ ಸ್ವೀಕಾರ ಗಂಡಿನ ತಂದೆಯ ಸಮ್ಮತಸೂಚಕವಾಗಿರುತ್ತದೆ.

ಅದೇ ದಿನವಂದು 'ಸೀಮೆ ಜೋಯಿಸ'ರನ್ನು ಸಮಿಾಪಿಸಿ ಗಂಡುಹೆಣ್ಣುಗಳ 'ತಾರಾನುಕೂಲ' (ಜಾತಕ) ನೋಡಿಸುತ್ತಾರೆ. ಗಣಕೂಟ, ಕುಲ, ಬಳಿಗಳು ಗಂಡುಹೆಣ್ಣುಗಳಿಬ್ಬರದೂ ತಾಳಿಯಾಗುವ್ವಾದರೆ ಮಾತ್ರ ಜಾತಕದ ವಿವರಗಳನ್ನು ಪಟ್ಟಿಮಾಡಿ ಕೊಡುತ್ತಾರೆ. ಒಂದು ವೇಳೆ ಜಾತಕ ಸರಿಯಾಗಿ ತಾಳಿಯಾಗದೆ, ಸಂಬಂಧ ಕುದುರಿಸುವುದು ಎರಡು ಕಡೆಯವರಿಗೂ ಇಷ್ಟವಿದ್ದಲ್ಲಿ ತಮ್ಮ ಸುತ್ತಿನ ಪ್ರಸಿದ್ಧ ದೇವಾಲಯವೊಂದರಲ್ಲಿ 'ಪ್ರಸಾದ' ತೆಗೆಸಿ ನೋಡಲಾಗುತ್ತದೆ. ಇಷ್ಟದೇವರು ಇಷ್ಟಾರ್ಥವನ್ನು ಕರುಣಿಸಿದರೆ ಪುನಃ ಜೋಯಿಸರನ್ನು ಕಂಡು ಎರಡು ಕಡೆಯುವರಿಗೂ ಅನುಕೂಲವೆನಿಸುವ ಒಂದು ದಿನವನ್ನು ಗೊತ್ತುಮಾಡಿಕೊಂಡು ಮುಹೂರ್ತ ಇಟ್ಟುಕೊಡಲು ಕೇಳಿಕೊಳ್ಳಲಾಗುವುದು. ಜೋಯಿಸರು ದಿನ, ಮುಹೂರ್ತಗಳನ್ನು ಸೂಚಿಸಿದ ನಂತರ ಹೊಸನೆಂಟರು ಮರಳಿ ಹೆಣ್ಣಿನ ಮನೆಗೆ ಬಂದು ಅವರ ಆತಿಥ್ಯವನ್ನು ಸ್ವೀಕರಿಸಿ ಅಂದೇ 'ನಿಶ್ಚಯದ ಮನೆ' ಕಾರ್ಯಕ್ರಮವನ್ನೂ ನೆರವೇರಿಸಲಾಗುತ್ತದೆ. ಹೆಣ್ಣಿನ ಕಡೆಯ ಬಳಗಸ್ಥರು ಬಂದಿರುತ್ತಾರೆ. ಹೆಣ್ಣಿಗೆ ಚಿನ್ನ, ಬೆಳ್ಳಿ, ಸೀರೆ, ರವಿಕೆ ತೆರಕೊಡುವುದು–ಎಲ್ಲ ಬಾಬುಗಳ ಪ್ರಸ್ತಾಪ ಬಳಗಸ್ಥರ ಸಮ್ಮುಖದಲ್ಲಿ ನಡೆಯುತ್ತದೆ. ಕೆಲವೊಮ್ಮೆ ಚರ್ಚೆ ಬಿರುಸಾಗಿಯೂ ಉಗ್ರವಾಗಿಯೂ ನಡೆದು, ಕೊನೆಗೂ ಸಮಜಾಯಿಷಿ ಮಾಡಿಕೊಂಡು ಮದುವೆ ನಿಶ್ಚಯವಾಗುವ ಸಂದರ್ಭಗಳು ಉದ್ಭವವಾಗುತ್ತವೆ. (ಇತ್ತೀಚಿನವರೆಗೂ ಹೆಣ್ಣಿನ ತಂದೆ ಕೇಳಿದಷ್ಟು ತೆರಕೊಡುವ ಪದ್ಧತಿ ಜಾಲ್ತಿಯಲ್ಲಿತ್ತು. ಈಗ ಗಂಡಿಗೆ ತೆರಕೊಡಬೇಕಾದ ಪ್ರಸಂಗ ಒದಗಿಬಂದು ಹೆಣ್ಣು ಹೆತ್ತವರು ಆಕ್ರೋಶಕ್ಕೊಳಗಾಗಿದ್ದಾರೆ.) ಲಗ್ನನಿಷ್ಕರ್ಷೆಯಾದ ಮರುದಿನದಿಂದಲೇ ಸೀಮೆಸಮಸ್ತರಿಗೂ ಬಾಯಿಮಾತಿನಲ್ಲಿ ಮದುವೆಯ ಮಮತೆಯ ಕರೆಯನ್ನು ಕರೆದು ಬರಲಾಗುತ್ತದೆ.

ಮದುವೆಗೆ ಮೂರು ದಿವಸ ಮುಂಚೆ 'ಹೂ ಮುಡಿಸುವ ಮನೆಶಾಸ್ತ್ರ' ಎಂಬ ಒಂದು ಸಮಾರಂಭ ಜರುಗುತ್ತದೆ. ಹುಡುಗಿಗೆ ಆ ದಿನ ನೀಡಬೇಕಾದ ಸೀರೆ, ರವಿಕೆ, ಉಂಗುರ, ಹೂ, ಹಣ್ಣುಗಳನ್ನು ಒಂದು ಕುಕ್ಕೆಯಲ್ಲಿ ತುಂಬಿಕೊಂಡು ವಾದ್ಯಸಮೇತವಾಗಿ ಮೆರವಣಿಗೆಯಲ್ಲಿ (ಚಿಕ್ಕ ಪ್ರಮಾಣದಲ್ಲಿ) ದಿಬ್ಬಣವೆ, ಹೊರಟುಬರುತ್ತದೆ. ನಿಶ್ಚಯದ ಮನೆಶಾಸ್ತ್ರದ ದಿವಸಕ್ಕಿಂತಲೂ ಹೆಚ್ಚು ಆತ್ಮೀಯತೆಯಿಂದ ಆದರದಿಂದ ಸ್ವಾಗತಿಸಿ ಉಪಚರಿಸಲಾಗುವುದು. ಗಂಡಿನಕಡೆಯಿಂದ ಬಂದ ಮುತ್ತೈದೆಯರು ಹೆಣ್ಣಿಗೆ ಗಂಡಿನ ಮನೆಯಿಂದ ತಂದ ಸೀರೆ ರವಿಕೆಗಳನ್ನು ತೊಡಿಸಿ ಅವಳ ಉಡಿಗೆ ಮಂಗಳದ್ರವ್ಯಗಳನ್ನು ಹಾಕಿ, ಕಟ್ಟಿ ತಲೆತುಂಬ ಹೂ ಮುಡಿಸುತ್ತಾ

ಕನ್ನೀಗೋಡಾಡ್ತ ಹನ್ನೆಲ್ಡುವರ್ಸಾತು
ಹನ್ನೆಲ್ಡಾ ಜೋಡೇ ಪರಿದಾವು। ಅಪ್ಪಯ್ಯ
ಕನ್ನೇ ನಮ್ಮನೆಗೆ ನಿಜುವಾಗಿ

ಬಂದೀ ಇಟ್ಟಾರು ನಾವು ಅಕ್ಕದೀರು ಹೋಗಿದ್ದಾಂವು
ನೋಡ್ಬಂದಾಂವು ಹರುನಾ ಮದುದೀಯ। ಮದುವಳ್ಗೀಯ
ಕನ್ನೇ ನಮ್ಮನೆಗೆ ನಿಜ್ಜುವಾಗಿ
....

—ಎಂದು (ಈ ಸಂದರ್ಭದಲ್ಲಿ ಮಾತ್ರ ಹೇಳುವ ಹಾಡನ್ನು) ಹಾಡುತ್ತಾರೆ. ಗಂಡು ಹೆಣ್ಣಿನ ಕೈಗೆ ಒಂದು ಉಂಗುರವನ್ನು ತೊಡಿಸುತ್ತಾನೆ. ಹಾಡುಹಸೆ ಮುಗಿದ ಮೇಲೆ ಊಟೋಪಚಾರ ನಡೆದು ಸ್ವಲ್ಪ ಹೊತ್ತು ವಿಶ್ರಮಿಸಿದ ಬಳಿಕ ಗಂಡಿನ ದಿಬ್ಬಣ ಹಿಂತಿರುಗಿ ಬರುತ್ತದೆ.

ಮದುವೆಯ ಹಿಂದಿನ ದಿನ ಸೀಮೆಯ ಮಾದಾರ(ಮಾದಿಗರು)ರಿಂದ ಹನ್ನೆರಡು ಕಂಬಗಳ ಚಪ್ಪರ ಹಾಕಿಸಿ, ತೋರಣ ಕಟ್ಟಿಸಲಾಗುವುದು. ಮನೆಯ ಹೆಬ್ಬಾಗಿಲು, ಅಡಿಗೆ ಕೋಣೆ. ಊರ ಹೆಬ್ಬಾಗಿಲಿಗೂ

ಹಸಿರುತೋರಣ ಹಾಕಿಸಲಾಗುತ್ತದೆ. ಮದುವಣಿಗ ಮನೆಯ ತುಳಸಿಯ ಮುಂದೆ ಹಾಲುಗಂಬಗಳೆರಡನ್ನು ನೆಟ್ಟು ಹಾಲುಹಣ್ಣುಗಳನ್ನಿಟ್ಟು ಪೂಜೆಮಾಡುತ್ತಾನೆ. ಆ ಎರಡು ಹಾಲುಗಂಬಗಳಿಗೂ ಮಾವಿನತೋರಣ ಕಟ್ಟಿ ಅಲಂಕಾರಮಾಡಿ ಎರಡು ಜ್ಯೋತಿಗಳನ್ನು ಹತ್ತಿಸಿಡಲಾಗುವುದು. ಗ್ರಾಮದ ಮಡಿವಾಳಿ ಆ ಹನ್ನೆರಡು ಕಂಬಗಳಿಗೂ ಮಧ್ಯೆ ಮದಿಪಂಜಿಯ 'ಮೇಲ್ಕಟ್ಟು' ಕಟ್ಟುತ್ತಾನೆ. ಅಂದಿನ ಸಮಾರಂಭದ ಗೌರವಾರ್ಥವಾಗಿ ಆ ದಿನ ಮಧ್ಯಾಹ್ನಕ್ಕೆ ಊರಿನ ಪಾಕಶಾಸ್ತ್ರಪರಿಣತರಿಂದ ವಿಶೇಷವಾಗಿ 'ಚಪ್ಪರದೂಟ' ಅಣಿಯಾಗಿರುತ್ತದೆ.

ಆ ದಿನ ಸಂಜೆ ಮದುವೆಗೆಂದೇ ಹೊಲಿಸಿ ತಂದ ಬಟ್ಟೆಗಳನ್ನು (ಜವಳಿ) ಪಿತೃಸಂಕೇತವಾಗಿ ಸ್ಥಾಪಿಸಿಡುವ ಕಳಶಗಳ ಮುಂದಿಟ್ಟು ಪಿತೃಪೂಜೆಯನ್ನು ಕ್ರಮವಾಗಿ ನಡೆಸಿ ಪಿತೃಗಳನ್ನು ನೆನೆದು ಕೊಳ್ಳುತ್ತಾರೆ. ಅದೇ ದಿನ ರಾತ್ರಿ ಅನುಭವಸ್ಥ ಸ್ತ್ರೀಯರು ಪಾತಿನಕುಕ್ಕೆ, ಸಾಲಾವಳಿಕುಕ್ಕೆ ಎಂದು ದಿಬ್ಬಣದೊಂದಿಗೆ ಒಯ್ಯುವ ಕುಕ್ಕೆಗಳನ್ನು ತುಂಬುವ ಕಾರ್ಯದಲ್ಲಿ ಮಗ್ನರಾಗುತ್ತಾರೆ. ಪಾತಿನಕುಕ್ಕೆಗೆ ೧೧ ಸಿದ್ದೆ ಅಕ್ಕಿ, ೧೧ ವೀಳೆಯದ ಪಟ್ಟಿ, ನಾಲ್ಕು ಕುಡಿಕೆ (ಹಾಲು, ಎಣ್ಣೆ, ತುಪ್ಪಗಳನ್ನು ತುಂಬಿಸಿಡುವಂತಹವು), ೨ ಸಕಣು ಗಂಟು (ತರಕಾರಿ ಬೀಜ), ಕಂಕಣಹಾರ, ಬಂಗಾರ, ತುಂಬೆ ಹೂವಿನಹಾರ, ಪುಷ್ಪಮಾಲೆಗಳು, ಐದು ಜಾತಿಯ ಹೂ, ನಿಂಬೆಹಣ್ಣು, ತೆಂಗಿನಕಾಯಿ, ಸೌತೆಕಾಯಿ, ತೊಂಡೆಕಾಯಿ, ಬಾಚಣಿಗೆ, ಎಲೆ ಅಡಿಕೆ, ಅರಿಶಿನ ಕುಂಕುಮ, ೧ ಸೀರೆ ೩ ರವಿಕೆಗಳನ್ನು ತುಂಬಿಸಿ, ಎರಡು ಕುಡಿ ಬಾಳೆಎಲೆಗಳಿಂದ ಕುಕ್ಕೆಯನ್ನು ಮುಚ್ಚಿ, ಜೇಕನ್ನೊಂದನ್ನು ಮೇಲಕ್ಕೆ ಹೊದಿಸಿ, ಮಾವಿನ ಎಲೆಯ ತೋರಣ ಕಟ್ಟಿ ಸಿಂಗರಿಸುತ್ತಾರೆ. ಇದೇ ರೀತಿಯಲ್ಲಿ ಸಾಲಾವಳಿಕುಕ್ಕೆಗೆ ೯ ವೀಳೆಯದ ಪಟ್ಟಿ, ೫ ಕುಡಿಕೆ, ೯ ಸಿದ್ದೆ ಅಕ್ಕಿ, ೩ ಸಕಣುಗಂಟು, ಉತ್ತುತ್ತೆ, ದ್ರಾಕ್ಷಿ, ಕಲ್ಲುಸಕ್ಕರೆ, ಒಂದು ಮುಸುಕಿನ ಸೀರೆ, ಒಂದು ಧಾರೆ ಸೀರೆ, ೨ ರವಿಕೆಗಳನ್ನು ತುಂಬಿಸಿ ಕಟ್ಟುತ್ತಾರೆ. ಈ ಎರಡು ಕುಕ್ಕೆಗಳಲ್ಲದೆ ಸಾಲಾವಳಿ ಹರಿವಾಣದಲ್ಲಿ ೫ ವೀಳೆಯದ ಪಟ್ಟಿ, ೫ ಸಿದ್ದೆ ಅಕ್ಕಿ, ೨ ಕುಡಿಕೆಗಳನ್ನು ಇರಿಸಲಾಗುತ್ತದೆ.

ಮದುವೆಯ ಹಿಂದಿನ ದಿನ ರಾತ್ರಿಯೇ ಗಂಡುಹೆಣ್ಣುಗಳಿಬ್ಬರ ಮನೆಯ ಗೋಡೆಗಳ ಮೇಲೆ 'ಹಸೆಗೋಡೆ' ಬರೆಸಲಾಗುತ್ತದೆ. ನಡುಮನೆಯ ನಡುಅಂಕಣದ ಗೋಡೆಯ ಮೇಲೆ ಒಂದು ಗಂಡು ಇನ್ನೊಂದು ಹೆಣ್ಣನ್ನು ಸಂಕೇತಿಸುವ ಎರಡು ಚಿತ್ರಗಳನ್ನು ಬಣ್ಣದಿಂದ ಚಿತ್ರಿಸಲಾಗುತ್ತದೆ—ಈ ಹಸೆ ಗೋಡೆ ಕಲ್ಪನೆ ವಿಶಿಷ್ಟವಾಗಿ ಕಾಣುತ್ತದೆ. ಹೆಣ್ಣಿನ ಮನೆಯಲ್ಲೇ ವಿವಾಹ ನಡೆಯುವುದಾದ್ದರಿಂದ ವೈಭವಪೂರ್ಣವಾದ ಒಂದು ವಿವಾಹಮಂಟಪವನ್ನು ಹೆಣ್ಣಿನ ಮನೆಯವರು ನಿರ್ಮಿಸಿಕೊಳ್ಳುತ್ತಾರೆ.

ಗಂಡುಹೆಣ್ಣುಗಳಿಬ್ಬರ ಮನೆಗೂ ನಾಗವಾದ್ಯ ಕೊಂಬು, ಕಹಳೆ—ಮುಂತಾದ ವಾದ್ಯವೃಂದದವರು ಬಂದಿರುತ್ತಾರೆ. ವಾದ್ಯ, ಕೊಂಬು, ಜನಜಂಗುಳಿಯ ಸಡಗರದ ಗದ್ದಲದಲ್ಲಿ ಮದುವಣಿಗನಿಗೆ ಮುಖ ಕ್ಷೌರ ಮಾಡಿಸಲಾಗುತ್ತದೆ (ಕ್ಷೌರಿಕ ೧ ಸೇರು ಅಕ್ಕಿ, ೧ ರೂಪಾಯಿ ವೀಳೆಯದೆಲೆ ಅಡಿಕೆ ಮುಂತಾದುವನ್ನೂ ಗೌರವ ಕಾಣಿಕೆಯಾಗಿ ಸ್ವೀಕರಿಸುತ್ತಾನೆ). ನೆರೆದ ಮುತ್ತೈದೆಯರು ಮದುವಣಿಗನಿಗೆ ಎಣ್ಣೆ ಅರಿಶಿನ ಹಾಕಿ ಸ್ನಾನಮಾಡಿಸುತ್ತಾರೆ. ಸ್ನಾನ ಮುಗಿದ ನಂತರ ಗೌರಿಯಪೂಜೆ ನೆರವೇರುತ್ತದೆ ಮದುವಣಿಗನಿಂದ. ಆ ಹೊತ್ತಿಗೆಲ್ಲಾ ಕತ್ತಲೆ ಸೆರೆ ಸರಿಯುತ್ತಿರುತ್ತದೆ.

ತುಳಸಿಕಟ್ಟೆಯ ಮುಂದೆ ಒಂದು ಹೊಸ ಜಮಖಾನವನ್ನು ಹಾಸಿ ಅದರ ಮೇಲೊಂದು ಹಸೆಮಣೆಯನ್ನಿಟ್ಟು ಮದುವಣಿಗನನ್ನು ಕೂರಿಸಿ ಹೊಸ ಉಡುಪುಗಳನ್ನು ತೊಡಿಸಲಾಗುವುದು. ಕಚ್ಚೆಪಂಚೆ, ಅಂಗಿಯ ಮೇಲೆ ಕೋಟು, ಬಚಗಾನಿ (ಕೊಂಬಿ ಇರುವ ಬಟ್ಟೆ), ತಲೆಗೆ ಜರಿಪೇಟ ಸುತ್ತಿ ಬಾಸಿಂಗ ಸೂಡುತ್ತಾರೆ. ಕಾಲಿಗೆ ಕಾಲ್ಮೆಂಚು, ಕೈಗೆ ಉಂಗುರ, ಕೊರಳಿಗೆ ತಾಳ್ಬಂದಿ ಸರ, ಗುಂಡಿನಸರ, ಪವನ್‌ಸರಗಳನ್ನು ಹಾಕಿ ಅಲಂಕಾರಮಾಡುತ್ತಾರೆ.

ಮೊದಲಬಾರಿಗೆ ಮದುವಣಿಗನನ್ನು ಹಸೆಗೆ ಕೂರಿಸಲು ಸಿದ್ಧತೆ ನಡೆಸಿಕೊಳ್ಳಲಾಗುವುದು. ಹಸೆಗೋಡೆ ಅಂಕಣದಲ್ಲಿ ಜೋಡುಕಟ್ಟಿನ ಚಾಪೆಯ ಮೇಲೆ ಜಮಖಾನಗಳನ್ನು ಹಾಸಿ ರತ್ನಗಂಬಳಿಯನ್ನು ಹರವಿರುತ್ತಾರೆ. ಮದುವಣಿಗ ಹಸೆಗೆ ನಮಸ್ಕರಿಸಿ ಬಲಗಾಲು ಮುಂದಿಟ್ಟು ಹಸೆಯ ಮೇಲೆ ಕುಳಿತುಕೊಳ್ಳುತ್ತಾನೆ. ಆತನ ಎದುರಿನಲ್ಲಿ 'ಕಡೇವ ಬಟ್ಟಲು' ಎಂದು ಒಂದು ಹರಿವಾಣವನ್ನು

ಇಟ್ಟಿರುತ್ತಾರೆ. ಮುತ್ತೈದೆಯರು ಮದುವಣಿಗನ ಮೊಣಕಾಲು, ಭುಜ ಮುಟ್ಟಿ ತಲೆಗೆ ಸೋಬಲಕ್ಕಿಯನ್ನು ಎರೆದು ಆಶೀರ್ವದಿಸುತ್ತಾರೆ. ಹಸೆಶಾಸ್ತ್ರದನಂತರ 'ಮೈಮುಟ್ಟಿ'ಗೆ (ಉಡುಗೊರೆ) ಕೂರಿಸಲಾಗುತ್ತದೆ. ಸೀಮೆಸಮಸ್ತರು ತಲಾ ಒಂದು, ಎರಡು ರೂಪಾಯಿ, ಬಟ್ಟೆಬರೆ, ಪಾತ್ರೆ ಪರಟಿಗಳನ್ನು ಮುಯ್ಯಿ ನೀಡುತ್ತಾರೆ. ಉಡುಗೊರೆ ನೀಡಿದವರ ಹೆಸರು, ಊರು ಮುಂತಾದ ವಿವರಗಳನ್ನು ಒಂದು ಪಟ್ಟಿಯಲ್ಲಿ ಬರೆದಿಟ್ಟುಕೊಳ್ಳಲಾಗುವುದು.

ಮದುವೆ ಸಾಮಾನ್ಯವಾಗಿ ರಾತ್ರಿ ಹೊತ್ತಿನಲ್ಲಿ ನಡೆಯುವುದು ಸಂಪ್ರದಾಯ. (ಈಗೀಗ ಹಗಲೇ ಅನುಕೂಲವೆಂದು ಹಗಲು ಹೊತ್ತಿನಲ್ಲೇ ನಡೆಸಲಾಗುತ್ತಿದೆ.) ಧಾರೆ ಮುಹೂರ್ತದ ವೇಳೆಗೆ ಸರಿಯಾಗಿ ಹೆಣ್ಣಿನ ಮನೆ ತಲುಪುವ ಹಾಗೆ ವರನ ಮನೆಯಿಂದ ದಿಬ್ಬಣ ಹೊರಡಿಸಲಾಗುವುದು. ಮುತ್ತೈದೆಯರು ಕುಕ್ಕೆ, ಕಡೇದಬಟ್ಟಲು, ಜಮಖಾನ, ಸಂದೂಕಗಳನ್ನು ಹೊತ್ತುಕೊಂಡು ವರನ ಮನೆಯ ತುಳಸಿಗೆ ಮೂರು ಸುತ್ತು ಪ್ರದಕ್ಷಿಣೆ ಬಂದು, ಎತ್ತಿನ ಗಾಡಿಗಳನ್ನೇರಿ ಕುಳಿತುಕೊಳ್ಳುತ್ತಾರೆ. ಮದುವಣಿಗ ಊರಿನ ಗ್ರಾಮದೇವತೆ, ಮನೆದೇವರುಗಳನ್ನು ಭಕ್ತಿಯಿಂದ ನೆನೆಯುತ್ತಾ 'ದಂಡಿಗೆ' (ಅಥವಾ ಎತ್ತಿನ ಗಾಡಿ)ಯನ್ನು ಪೂಜಾಸಾಮಗ್ರಿಗಳಿಂದ ಪೂಜಿಸಿ ಬಂಧುಬಾಂಧವರಿಗೆಲ್ಲ ನಮಸ್ಕರಿಸಿ, ದಂಡಿಗೆಗೆ ಕೈಮುಗಿದುಕೊಂಡು ಬಲಗಾಲು ಮುಂದಿಟ್ಟು ದಂಡಿಗೆಯನ್ನೇರುತ್ತಾನೆ. ನಾಲ್ಕು ಮಂದಿ ದಂಡಿಗೆಯ ಬೋವೀರು ದಂಡಿಗೆಯನ್ನು ಹೊತ್ತುಕೊಂಡು ಮುಂದೆ ಸಾಗುತ್ತಾರೆ. ಕೊಂಬು ವಾದ್ಯಗಳೊಂದಿಗೆ ದಿಬ್ಬಣ ಮೆರವಣಿಗೆಯಲ್ಲಿ ದಂಡಿಗೆಯನ್ನು ಹಿಂಬಾಲಿಸುತ್ತದೆ. ಊರ ಗಡಿಯಾಚೆ ದಂಡಿಗೆಯನ್ನು ಕೆಳಗಿಳಿಸಿ ಮದುವಣಿಗನಿಗೆ ಅನಿಷ್ಟ ಸಂಭವಿಸದಿರಲೆಂದು ಸುಳಿಗಾಯಿ ಒಡೆಯಲಾಗುತ್ತದೆ. ಸಂಭ್ರಮೋತ್ಸಾಹಗಳಿಂದ ದಿಬ್ಬಣ ಮುಂದೆ ಸಾಗಿ ವಧುಗೃಹವನ್ನು ಸಮೀಪಿಸುತ್ತದೆ. ದಿಬ್ಬಣ ಬಂದ ಸೂಕ್ಷ್ಮವನ್ನರಿತ ಹೆಣ್ಣಿನ ಗೆಳತಿಯರು

ದಿಬ್ಬಣ ಬಂದೈತೆ ದೊಡ್ಡ ಮಕ್ಕೀಲಿ ನಿಂದೈತೆ
ರೈತಾಪಿ ರೈಮಣಿ ಮಾತ್ನಾಡ್ಸ ಬರಾದೇನೆ
ವಾದ್ಯವು ಬಂದೈತೆ ಅಲ್ಲಲ್ಲಿ ನಿಂದೈತೆ
ರೈತಾಪಿ ರೈಮಣಿ ಮಾತ್ನಾಡ್ಸ ಬರಾದೇನೆ
ಕುಕ್ಕೇಯು ಬಂದೈತೆ ಅಂಗಳದಲ್ಲಿ ನಿಂದೈತೆ
ರೈತಾಪಿ ರೈಮಣಿ ಮಾತ್ನಾಡ್ಸ ಬರಾದೇನೆ

ಎಂದು ದಿಬ್ಬಣ ಬಂದ ಹಾಡನ್ನು ಹಾಡಿ ವಧುವಿನ ಎದೆತುಡಿತವನ್ನು ಹೆಚ್ಚಿಸುತ್ತಾರೆ. ಊರ ಬಾಗಿಲಲ್ಲೇ ನಿಂತು ದಿಬ್ಬಣವನ್ನು ಹೆಣ್ಣಿನ ಕಡೆಯವರು ಶಾಸ್ತ್ರೀಯವಾಗಿ ಎದುರುಗೊಂಡು, ಮದುವಣಿಗನನ್ನು ದಂಡಿಗೆಯಿಂದ ಕೆಳಗಿಳಿಸಿ ಆರತಿ ಬೆಳಗುತ್ತಾರೆ.

ಆರತಿ ಬೆಳಗೋಣ ಬಾರೇ ಸಖಿಯೇ
ವರಪಿತಾಮನಿಗೆ ।ಸೊಲ್ಲು।
ಬೆಳದಿಂಗಳಿನಲಿ ಕೊಳಲನೂದುತ ಬಂದು
ಮರನನೇರಿದ ಬಂಗಾರದ ಮಣಿಗೆ
ಸಿರಿನಾರಿಯರೆಲ್ಲಾ ಕೂಡಿ
ಚೆಲ್ಲೀರೆ ಮಲ್ಲಿಗೆಯ ಶ್ರೀಮಂಗಳಂ
ಆರ್ತಿ ಬೆಳಗೋಣ ಬಾರೆ ಸಖಿಯೇ
ವರಪಿತಾಮನಿಗೆ॥

ಮದುವಣಿಗ ಆರತಿ ಬೆಳಗಿದುದರ ಗೌರವಾರ್ಥವಾಗಿ ಯಥಾನುಶಕ್ತಿ ಕಾಣಿಕೆ ನೀಡುತ್ತಾನೆ. ದಿಬ್ಬಣ ಊರೊಳಗೆ ಪ್ರವೇಶಿಸುತ್ತದೆ. ಕುಕ್ಕೆಗಳನ್ನು ಹೊತ್ತುಕೊಂಡ ಮುತ್ತೈದೆಯರು ವಧುಗೃಹದ ತುಳಸಿಗೆ ಮೂರು ಸುತ್ತು ಪ್ರದಕ್ಷಿಣೆ ಬಂದು ತುಳಸಿಯ ಮುಂದೆ ಮಣೆಯ ಮೇಲೆ ಇಳಿಸಿಡುತ್ತಾರೆ.

ಹೆಣ್ಣಿನ ಕಡೆಯ ಮುಂದಾಳುಗಳು ದಿಬ್ಬಣದವರನ್ನು 'ಸಭಾ'ದಲ್ಲಿ ಕುಳ್ಳಿರಿಸಿ ಪನ್ನೀರು ಚಿಮುಕಿಸಿ ತಂಪಾದ ಪಾನೀಯಗಳನ್ನು (ಬೆಲ್ಲ-ಗಂಗೋದಕ) ನೀಡುತ್ತಾರೆ.

ಧಾರೆ ಎರೆಯುವ ಸಲುವಾಗಿಯೇ ಬಂದ ಜೋಯಿಸರು ಸಾಲಾವಳಿ ಕುಕ್ಕೆಯನ್ನು ಒಡೆದು ಓದಿ 'ಗಳಿಗೆ ಬಟ್ಟಲು' ಎಂದು ಎಷ್ಟು ಗಳಿಗೆಯೊಳಗೆ ಧಾರೆನಡೆಯಬೇಕೆಂಬುದನ್ನು ಗೋಡೆಯ ಮೇಲೆ ಬರೆಯುತ್ತಾರೆ. ಹೆಣ್ಣನ್ನು ಅಲಂಕರಿಸಿ ಧಾರೆಗೆ ಸಿದ್ಧಗೊಳಿಸುವವರು 'ಮಾತಿನಕುಕ್ಕೆ'ಯನ್ನು ಒಡೆದು ಹೆಣ್ಣಿನ ಉಡಿಗೆತೊಡಿಗೆಗೆ ಸಂಬಂಧಪಟ್ಟ ವಸ್ತುಗಳನ್ನು ಹರಿವಾಣದಲ್ಲಿ ತುಂಬಿಸಿಕೊಂಡು ಬರುತ್ತಾರೆ. ಹಸೆಗೋಡೆ ಅಂಕಣದಲ್ಲಿ ಹೊಸ ಜಮಖಾನ ಹಾಸಿ ಹೆಣ್ಣನ್ನು ಅದರ ಮೇಲೆ ನಿಲ್ಲಿಸಿ ಧಾರೆಸೀರೆ, ರವಿಕೆಗಳನ್ನು ತೊಡಿಸಿ, ಜಡೆ ಬಂಗಾರ ಹಾಕಿ, ಕಾಲಿಗೆ ಗೆಜ್ಜೆ, ಕೊರಳ ತುಂಬ ಚಿನ್ನದ ಸರಗಳನ್ನು ಹಾಕಿ ಅಲಂಕರಿಸುತ್ತಾರೆ. ಒಂದು ಚೌಕದೊಳಗೆ ಅಕ್ಕಿ, ವೀಳೆಯದೆಲೆ, ಅಡಿಕೆ, ತೆಂಗಿನಫಲ, ಹೂವನ್ನು, ಮುತ್ತುರತ್ನಗಳನ್ನು ಉತ್ತುತ್ತೆ ದ್ರಾಕ್ಷಿಗಳನ್ನು ಹಾಕಿ ಮಡಿಲಿಗೆ ಕಟ್ಟುತ್ತಾ

ಉತ್ತುತ್ತೆ ಫಲಾsಗಳುs ಉತ್ತುತ್ತೆ ಗೊನೆಗಾಳು
ಉಡೀಲs ದುಂಬೀರೆ ಉಡೀಜಾಂಬೆ ಮೂಕಿಗೆ
ದ್ರಾಕ್ಷಿ ಫಲಾಗಳು ದ್ರಾಕ್ಷಿಗೊನೆಗಾಳು
ಉಡೀಲs ದುಂಬೀರೆ ಉಡೀಜಾಂಬೆ ಮೂಕಿಗೆ
....

ಎಂದು ಮಡಿಲುತುಂಬುವ ಹಾಡನ್ನು ಹಾಡುತ್ತಾ ಬಾಸಿಂಗ ಸೂಡಲಾಗುತ್ತದೆ.

ಧಾರೆ ಎರೆಯಕೊಂಡಿರುವ ಹೆಣ್ಣಿನ ತಂದೆಗೆ ಓರಿಯರು ಧಾರೆಪಟ್ಟೆಡ ಹೊದಿಸಿ ಧಾರೆ ಮುಂಡಾಸು ಕಟ್ಟುತ್ತಾರೆ. ಹೆಣ್ಣಿನ ತಾಯಿ ಹೊಸಸೀರೆ ರವಿಕೆಗಳನ್ನು ಧರಿಸಿಕೊಂಡು ಕೈಯಲ್ಲಿ 'ಕಡೇದ ಬಟ್ಟಲ'ನ್ನು ಹಿಡಿದುಕೊಳ್ಳುತ್ತಾಳೆ. ಜೋಯಿಸರು ಹೆಣ್ಣಿನ ತಂದೆತಾಯಿಗಳಿಬ್ಬರಿಗೂ ಸೆರಗುಗಂಟು ಹಾಕಿ ಧಾರೆಮಂಟಪದ ಬಳಿಗೆ ಕರೆದುಕೊಂಡು ಹೋಗುತ್ತಾರೆ.

ಧಾರೆ ಮುಹೂರ್ತ ಇನ್ನೇನು ಸನ್ನಿಹಿತವಾಯಿತು ಎನ್ನುವಾಗ ಮದುವಣಿಗನ ಬಲಗೊಡೆಯ (ಸಹಾಯಕ) ಮದುವಣಿಗನನ್ನು ಸಭೆಯಿಂದ ಎಬ್ಬಿಸಿ ಹೆಣ್ಣಿನ ಮನೆಯ ತುಳಸಿಗೆ ಒಂದು ಸುತ್ತು ಪ್ರದಕ್ಷಿಣೆ ಹಾಕಿಸಿ ಧಾರೆಮಂಟಪಕ್ಕೆ ಕರೆತರುತ್ತಾನೆ.

ಕರಿವೀರಿ ಚಿನ್ನಯ್ಯನs ಬರಿವೀರಿ ವುಂದೋಲೆಯ
ಬರದೂ ಕಲ್ಯಾಣಕೆ ಕಳುಗುರಿಸಿ। ಅಲ್ಲಿಂದ
ಬಲ್ಲಂತ ದೋಯ್ಸುರ್ನ ಬರಾಹೇಳಿ
....

ಎಂದು ಸ್ತ್ರೀಯರು ಧಾರೆಮಂಟಪಕ್ಕೆ ಗಂಡನ್ನು ಕರೆತರುವಾಗಿನ ಹಾಡನ್ನು ಹಾಡುತ್ತಿರುತ್ತಾರೆ ಮಂಟಪದೊಳಗೆ ಮಣೆಯ ಮೇಲೆ ಒಂದು 'ಸಿಬ್ಬಲ'ದಲ್ಲಿ 'ಮೆಟ್ಟಕ್ಕಿ'ಯನ್ನು ಇಟ್ಟಿರುತ್ತಾರೆ. ಮದುವಣಿಗ ಮೆಟ್ಟಕ್ಕಿ ಮೇಲೆ ನಿಂತುಕೊಳ್ಳುತ್ತಾನೆ. ವರನ ಆತ್ಮೀಯರು ಅರ್ಧ ತಾಸು ಹೆಣ್ಣಿನ ಮುಖ ನೋಡದಂತೆ ಆತನ ಮುಖಕ್ಕೆ ಎದುರಾಗಿ ತೆರೆಹಿಡಿದು ನಿಲ್ಲುತ್ತಾರೆ. ಹೆಣ್ಣಿನ ಸೋದರಮಾವ ಹೆಣ್ಣನ್ನು ಮನೆಯ ಒಳಗಿಂದ ಹೊತ್ತುತಂದು, ಆಕೆಯನ್ನು ಪ್ರೀತಿಯಿಂದ ಕೈಹಿಡಿದು ತುಳಸಿಗೆ ಮೂರು ಸುತ್ತು ಪ್ರದಕ್ಷಿಣೆ ಬರಿಸಿ ಧಾರೆಮಂಟಪದ ಬಳಿಗೆ ಕರೆತರುತ್ತಾನೆ. ಹೆಣ್ಣು ಧಾರೆಮಂಟಪಕ್ಕೂ ಮೂರು ಸುತ್ತು ಪ್ರದಕ್ಷಿಣೆ ಬಂದು 'ಮೆಟ್ಟಕ್ಕಿ'ಯ ಮೇಲೆ ನಿಲ್ಲುತ್ತಾಳೆ. ಆಕೆಯ ಸಹಾಯಕ್ಕೆ ಪಕ್ಕದಲ್ಲಿ ಬಲಗೊಡತಿ ನಿಂತಿರುತ್ತಾಳೆ. ಧಾರೆಶಾಸ್ತ್ರ ಆರಂಭವಾಗುತ್ತದೆ. ಜೋಯಿಸರು ವಧೂವರರ ಕೈಗೆ ಅಕ್ಷತೆ ಕೊಟ್ಟು ಮಂತ್ರೋಚ್ಚಾರಣೆಗೈಯುತ್ತಾರೆ. ತೆರೆಸರಿಸಿ ವಧೂವರರಿಗೆ ಪರಸ್ಪರರ ತಲೆಯ ಮೇಲೆ ಅಕ್ಷತೆಕಾಳುಗಳನ್ನು ಹಾಕಿಕೊಳ್ಳಲು ಸೂಚನೆ ನೀಡುತ್ತಾರೆ. ಕಂಕಣದಾರ ಕಟ್ಟಿಸಿ ತುಂಬೆಹಾರ

ಪುಷ್ಪಮಾಲೆಗಳನ್ನು ಕೊರಳಿಗೆ ಹಾಕಿಸಲಾಗುತ್ತದೆ. ಗಂಡುಹೆಣ್ಣುಗಳ ಅಂಗೈಮೇಲೆ ತೆಂಗಿನ ಫಲವನ್ನಿಟ್ಟು ಅವರ ಮೇಲೆ ಹೆಣ್ಣಿನ ತಂದೆತಾಯಿಗಳಿಂದ ಹಾಲುತುಪ್ಪವನ್ನು ಬಿಡಿಸುತ್ತಾ ಮುನ್ನೂರು ಮೂವತ್ತು ದೇವತೆಗಳ ಸಾಕ್ಷಿ ಹೇಳಿ ಧಾರೆ ಎರೆಸುತ್ತಾರೆ ಜೋಯಿಸರು.

ಧಾರೆ ಎರೆದು ದಾನ ಗಂಗೇ ಬಲವು ಒಲವು
ಮುರುಗಾ ಮಲ್ಲೀಗಿ ಸುರುಗೀ ಸೇವಂತಿಗಿ
ಇವ ಏಳಾ ಜಾತಿ ಹೂವಾ ಧರಿಸೀದ ಮಗಳೀಗೆ
ಧಾರೆ ಎರೆದು ದಾನ ಗಂಗೇ ಬಲವು ಒಲವು
ಕಡಗ ಕಂಕಣ ವಂಕಿ ಭಾಪುರಿ ಧರಿಸೀದ ಮಗಾಳೀಗೆ
ಧಾರೆ ಎರೆದು ದಾನ ಗಂಗೇ ಬಲವು ಒಲವು
....

ಸ್ತ್ರೀಯರು ಧಾರೆ ಎರೆಯುವ ಸಂದರ್ಭದಲ್ಲಿ ಹೇಳುವ ಹಾಡನ್ನು ಹಾಡುತ್ತಿರುತ್ತಾರೆ. ಜೋಯಿಸರು ಮಾಂಗಲ್ಯ ('ಮಂಗಳಸೂತ್ರ', 'ತಾಳಿ' ಎನ್ನುತ್ತಾರೆ)ವನ್ನು ಪಂಚಮುತ್ತೈದೆಯರ ಕೈಯಲ್ಲಿ ಮುಟ್ಟಿಸಿ ಸೀಮೆಸಮಸ್ತರ ಅಪ್ಪಣೆ ಪಡೆದು ಗಂಡಿನ ಕೈಯಿಂದ ಹೆಣ್ಣಿಗೆ ಮಾಂಗಲ್ಯಧಾರಣೆ ಮಾಡಿಸುತ್ತಾರೆ. ಬಂಧುಗಳು ಅಕ್ಷತೆ ಎರಚಿ ಶುಭಕೋರುತ್ತಾರೆ. ವಾದ್ಯ, ಕೊಂಬುಗಳ ಸದ್ದುಗದ್ದಲ ತೀವ್ರವಾಗುತ್ತವೆ. ನವದಂಪತಿಗಳ ಸೆರಗಿಗೆ ಗಂಟುಹಾಕಿ ಧಾರೆಮಂಟಪದಿಂದ ಹೊರಗೆ ಕರೆತಂದು ಅರುಂಧತಿ ನಕ್ಷತ್ರ ತೋರಿಸಿ ಕೈಮುಗಿದುಕೊಳ್ಳಲು ಹೇಳುತ್ತಾರೆ ಜೋಯಿಸರು. ಗಂಡು ಹೆಣ್ಣಿನ ಎಡಕಿರುಬೆರಳನ್ನು ಹಿಡಿದು ತೊಳಸಿಗೆ ಪ್ರದಕ್ಷಿಣೆ ಬರುತ್ತಾನೆ. ಹೆಣ್ಣಿನ ತಂಗಿ ಎರಡು ಮಣೆಗಳನ್ನು ಮನೆಯ ಹೆಬ್ಬಾಗಿಲಲ್ಲಿಟ್ಟು ನವದಂಪತಿಗಳಿಗೆ ಮಣೆಗಳ ಮೇಲೆ ನಿಂತುಕೊಳ್ಳಲು ಸೂಚನೆ ನೀಡಿ ಪಾದಪೂಜೆ ಮಾಡುತ್ತಾಳೆ. ಮನೆಯ ಹೊಸ್ತಿಲಲ್ಲಿಟ್ಟ ಕಂಚು ಅಥವಾ ತಾಮ್ರದ ಪಾತ್ರೆಯನ್ನು ಬಲಗಾಲಲ್ಲಿ ಎಡವಿ ಕೆಳಕ್ಕೆ ಬೀಳಿಸಿ ಒಳಗೆ ದಾಟುತ್ತಾರೆ ಹೊಸ ದಂಪತಿಗಳು. ಹಸೆಗೋಡೆಗೆ ಕೈಮುಗಿದುಕೊಂಡು ಬಲಗಾಲು ಮುಂದಿಟ್ಟು ಹಸೆಯ ಮೇಲೆ ಕುಳಿತುಕೊಳ್ಳುತ್ತಾರೆ. ಮುತ್ತೈದೆಯರು ವೀಳೆಯದ ಪಟ್ಟಿಯಲ್ಲಿ ಹಾಲುತುಪ್ಪವನ್ನು ಬಲಭಾಗಕ್ಕೆ ಸಿವಿದು ಅಕ್ಷತೆ ಇರಿಸಿ ಎಬ್ಬಿಸುತ್ತಾರೆ. ಬಲಗೊಡೆಯ, ಬಲಗೊಡತಿಯರ ನಿರ್ದೇಶನದಲ್ಲಿ ಮದುಮಕ್ಕಳು ಅಡಿಕೆಯಿಂದ 'ಸರಿಬೆಸವನಾಟ' (ಒಂದು ರೀತಿಯ ಜೂಜಾಟ)ವನ್ನಾಡುತ್ತಾರೆ. ಈ ಆಟದಲ್ಲಿ ಗೆದ್ದವರು ಸೋತವರ ಮೇಲೆ ಹತೋಟಿ ಇಟ್ಟುಕೊಳ್ಳುತ್ತಾರೆಂದು ಹೇಳುತ್ತಾರೆ. ಊಟೋಪಚಾರಗಳು ನಡೆದು ಸ್ವಲ್ಪಕಾಲ ವಿಶ್ರಮಿಸಿಕೊಂಡ ಬಳಿಕ ಪುನಃ ಹಸೆಮಣೆಯ ಮೇಲೆ ಕೂರಿಸಿ ಬೆಳಗಾಗುವವರೆಗೂ ಹಾಡುಹಸೆ ನಡೆಸಲಾಗುತ್ತದೆ.

ಮುಂಜಾನೆ ನವದಂಪತಿಗಳಿಗೆ ಮುಖಮಜ್ಜನಶಾಸ್ತ್ರ ಮಾಡಿಸಲಾಗುವುದು. ಗಂಡು ಹೆಣ್ಣನ್ನು ಬಾವಿಕಟ್ಟೆಗೆ ಕರೆದುಕೊಂಡು ಹೋಗಿ ಬಾವಿಗೆ ಹಣ್ಣುಕಾಯಿಗಳನ್ನಿಟ್ಟು ಪೂಜಿಸಿ ಹೆಣ್ಣಿನ ಕೈಯಿಂದ ನೀರು ಸೇದಿಸಿ ಮುಖ ತೊಳೆಸಿಕೊಳ್ಳುತ್ತಾನೆ. ಹೆಣ್ಣಿನ ಮುಖಕ್ಕೂ ಅತ ನೀರು ಹಾಕಬೇಕು. ಆಗ ಸ್ತ್ರೀಯರು,

ಕನ್ನೇ ನಿನ್ನೂರೆಲ್ಲೆ ಕನ್ನೆ ನಿನ್ನ ತಾವೆಲ್ಲೆ
ಕನ್ನೇ ನೀ ಅದಾ ಬರ್‍ಯs ಲೆಲ್ಲೆ। ದಿಬ್ಬಣ ಬಂದು
ಹಾರದೋರು ಮೊಖತೊಳಿಯಾ ಹೊಳಿಯಿಲ್ಲೆ
ಮುತ್ತೂರ ಹೊಳಿಯುಂಟು ಮುತ್ತಿನಂತಾ ಕಲ್ಲುಂಟು
ಈಗ್ಹೋಗಿ ಕಾಯಾ ಬಿಸಲುಂಟು। ದಿಬ್ಬಣು ಬಂದು
ಹಾರದೋರು ಮೊಖ ತೊಳಿಯಾ ಹೊಳಿಯುಂಟು
....

ಎಂದು ಮುಖ ತೊಳೆಸುವ ಹಾಡನ್ನು ಹಾಡುತ್ತಾರೆ.

ದಿಬ್ಬಣಿಗರೆಲ್ಲರೂ ಬೆಳಗಿನ ಹೊತ್ತಿನ ತಿಂಡಿತೀರ್ಥ ಮುಗಿಸಿ ರಾತ್ರಿಯೆಲ್ಲಾ ನಿದ್ದೆಗೆಟ್ಟು ಬಳಲಿದ್ದಕ್ಕಾಗಿ ಊಟದ ಸಮಯದವರೆಗೂ ಮಲಗಿ ವಿಶ್ರಾಂತಿ ತೆಗೆದುಕೊಳ್ಳುವರು. ಮಧ್ಯಾಹ್ನ ಊಟ ಮುಗಿದ ಬಳಿಕ ಮದುಮಕ್ಕಳಿಗೆ ಉಡುಗೆತೊಡುಗೆಗಳನ್ನು ತೊಡಿಸಿ ಬಾಸಿಂಗ ಸೂಡಿ ಧಾರೆಮಂಟಪದ ಒಳಗೆ 'ಅಕ್ಷಮಿ' (ಉಡುಗೊರೆ)ಗೆ ಕೂರಿಸಲಾಗುತ್ತದೆ. ಬಳಗಸ್ಥರು ಮುಯ್ಯಿ ನೀಡುತ್ತಾರೆ. ನೀಡಿದವರ ಹೆಸರು ವಿವರಗಳನ್ನು ಪಟ್ಟಿಯಲ್ಲಿ ಬರೆದಿಟ್ಟುಕೊಳ್ಳುತ್ತಾರೆ. ಅರತಕ್ಷತೆ ಮುಗಿದನಂತರ ಗಂಡು ಹೆಣ್ಣುಗಳ ಕಸೆಗಂಟು ಬಿಚ್ಚಲಾಗುವುದು. ಹೆಣ್ಣನ್ನು ಒಳಗೆ ಕರೆತಂದು ಹಾಲು ಅನ್ನದೂಟವನ್ನು ಉಣ್ಣಿಸುತ್ತಾರೆ.

ದಿಬ್ಬಣ ವರನ ಗೃಹಕ್ಕೆ ಹೊರಡುವ ಮುನ್ನ 'ವೀಳ್ಯತಿದ್ದುವಶಾಸ್ತ್ರ' ನಡೆಯುತ್ತದೆ. ಗಂಡಿನ ಮನೆಯಿಂದ ತಂದ ಎಲೆ ಅಡಿಕೆಗಳನ್ನು ಹಂಚುವ ಕಾರ್ಯ. ಇಲ್ಲಿ ಕುಲದೇವರ ಹೆಸರ ಮೇಲೂ ಒಂದೊಂದು 'ಸಿಬ್ಬಲ' ಅಡಿಕೆ ಹಾಕಿ ಮದುವೆಯಲ್ಲಿ ನೆರೆದಿದ್ದವರಿಗೆಲ್ಲಾ ಎಲೆ ಅಡಿಕೆ ನೀಡಿ ವೀಳ್ಯ ತಿದ್ದಲಾಗುವುದು. ಹೀಗೆ ವೀಳ್ಯತಿದ್ದುವಾಗ ಗಂಡಿನ ಮನೆಯಿಂದ ತಂದ 'ಹೇರಿಸಕ್ಕಿ'ಯನ್ನು ಎರಡೂ ಕಡೆಯ ಮುತ್ತೈದೆಯರು ನಾ ಮುಂದು ತಾ ಮುಂದು ಎಂದು ಸೇರುಪಾಡಿ ಅಕ್ಕಿಯನ್ನು ಅಳೆದುಕೊಳ್ಳುತ್ತಾರೆ. ಇಲ್ಲಿ ಸ್ಪರ್ಧಾ ಮನೋಭಾವ ಇಬ್ಬರಲ್ಲೂ ಇದ್ದಂತೆ ಕಂಡರೂ ಮುಕ್ಕಾಲು ಪಾಲು ಅಕ್ಕಿಯನ್ನು ಹೆಣ್ಣಿನಮನೆಯವರೇ ಅಳೆದುಕೊಳ್ಳುವುದು ಪದ್ಧತಿ.

ಈ ಮಧ್ಯೆ ಮೊದಲೇ ತೀರ್ಮಾನವಾಗಿದ್ದಂತೆ ಹೆಣ್ಣಿಗೆ ಕೊಡಬೇಕಾದ ತೆರ. ಬಟ್ಟೆ. ಬಂಗಾರ ಮುಂತಾದ ಬಾಬುಗಳಲ್ಲಿ ಲೋಪವೇನಾದರೂ ಕಂಡುಬಂದರೆ ಹೆಣ್ಣಿನ ಕಡೆಯವರು ತಟಸ್ಥರಾಗಿರುವುದಿಲ್ಲ. ಇಬ್ಬರ ನಡುವೆಯೂ ಮಾತಿಗೆಮಾತು ಬೆಳೆದು ಘರ್ಷಣೆಯುಂಟಾಗಿ ಕೈಕೈ ಮಿಲಾಯಿಸುವವರೆಗೂ ಜಗಳ ಮುಂದುವರೆಯುತ್ತದೆ. ಬೆಳ್ಳಿಕಡಗ. ಉಪ್ಪುನೀರುವಲ್ಲಿ. ಬೆಲೆಬಾಳುವ ಸೀರೆಗಳನ್ನು ತರದೆ ಇದ್ದ ಪಕ್ಷದಲ್ಲಿ ಗಂಡಿನ ಕಡೆಯವರಿಂದ ದಂಡ ಕಟ್ಟಿಸಿಕೊಳ್ಳಲಾಗುವುದು.

ಇನ್ನು 'ಮಾತು ಮಾಡಿಸುವ' ಕಾರ್ಯಕ್ರಮ. ಹೆಣ್ಣನ್ನು ಗಂಡಿಗೆ ಒಪ್ಪಿಸುವ ಪದ್ಧತಿ. ಎರಡೂ ಕಡೆಯವರು ಹೀಗೆ ಬಿನ್ನವಿಸಿಕೊಳ್ಳುತ್ತಾರೆ:

ಗಂಡಿನವರು: ಅಯ್ಯಾ ನಮ್ಮ ಗಂಡು ಅಂದ್ರೆ ಒಂದರಿತ್ರೂ ಒಂದರೀದು

ಹಾಳಿ ಕಡಿದರಿಯ ಮೇಳಿ ಹಿಡಿದರಿಯ
ಒಂದರಿತ್ರೂ ಒಂದರಿಯ
ಅಣೇನಲ್ಲೆ ಬತ್ತಾನೆ ದಣೇನಲ್ಲೆ ಬತ್ತಾನೆ
ಸಿಟ್ಟಿನಲ್ಲೆ ಬತ್ತಾನೆ ಕೋಪದಲ್ಲೆ ಬತ್ತಾನೆ
ಬೆಳಗಾಗಿ ಮೊಸರನ್ನ ಇಕ್ಕಿ ಮೊದ್ವಾನ ತುಪ್ಪಾನ್ನ ಇಕ್ಕಿ
ಸಾಂಯ್ಕಾಲ ಹಾಲನ್ನ ಇಕ್ಕಿ ಸಂರಕ್ಷಣೆ ಮಾಡ್ಕಿ ಬಕ್ಬಕು

ಅದಕ್ಕೆ ಉತ್ತರವಾಗಿ ಹೆಣ್ಣಿನವರು:

ಅಯ್ಯಾ ನಮ್ಮ ಹೆಣ್ಣು ಅಂದ್ರೆ ಒಂದರಿತ್ರೂ ಒಂದರೀದು
ಒಲೆ ಹೊಚ್ಚರೀದು ಬೂದಿ ಮೊಗ್ದು ಅರೀದು
ಕಲ್ಲು ಬಂದ್ರೆ ಕಷ್ಲೆ ಅನ್ಬಕು ನಲ್ಲು ಬಂದ್ರೆ ಅನ್ನ ಅನ್ಬಕು
ಅನ್ನ ಕೊಳುತ್ರೆ ಹುಗ್ಗಿ ಅನ್ಬಕು ಒಂದರಿತ್ರೂ ಒಂದರೀದು
ಬೆಳಗಾ ಮುಂಚೆ ಮೊಸರನ್ನ ಇಕ್ಕಿ ಮೊದ್ವಾನ ತುಪ್ಪಾನ್ನ ಇಕ್ಕಿ
ಸಾಂಯ್ಕಾಲ ಹಾಲನ್ನ ಇಕ್ಕಿ ಸಸಿನಟ್ಟು ಫಲ ತಗುದ್ಕುಂಡಂಗೆ
ಫಲತಗುದ್ಕುಳ್ಬಕು

ಎಂದು ಬಿನ್ನವಿಸಿಕೊಂಡು ಹೆಣ್ಣನ್ನು ಗಂಡಿಗೆ ಒಪ್ಪಿಸಿಕೊಡಲಾಗುತ್ತದೆ. ಅನುಕೂಲವಿರುವಂಥ ತಂದೆತಾಯಿಗಳು ಮಗಳಿಗೆ ಕರೆಯುವ ಎಮ್ಮೆ. ಒರಗುವ ಮಂಚ. ಕಂಚು, ತಾಮ್ರ, ಮಿಳ್ಳೆ, ಒಪ್ಪುವಂತಹ

ಬಾಲಬಳುವಳಿಗಳನ್ನೇ ಕೊಡುತ್ತಾರೆ. ಗಂಡಿನವರು ಆ ಬಳುವಳಿಗಳನ್ನು ಎತ್ತಿನಗಾಡಿಯಲ್ಲಿ ಸಾಗಿಸಿಕೊಂಡು ಹೋಗುತ್ತಾರೆ.

ದಿಬ್ಬಣ ಹೊರಟು ನಿಲ್ಲುತ್ತದೆ. ಗಂಡು ಹೆಣ್ಣಿನ ಕೈಹಿಡಿದು ದಂಡಿಗೆಯ ಬಳಿಗೆ ಕರೆತರುತ್ತಾನೆ. ದಂಡಿಗೆಗೆ ಹೂಹಣ್ಣುಗಳನ್ನಿಟ್ಟು ಕಾಯಿ ಒಡೆದು ಪೂಜೆಮಾಡಿ ಬಲಗಾಲು ಮುಂದಿಟ್ಟು ದಂಡಿಗೆಯನ್ನೇರುವನು. ಹೆಣ್ಣೂ ಗಂಡಿನಂತೆಯೇ ದಂಡಿಗೆಯನ್ನೇರಿ ಆತನಿಗೆ ಎದುರಾಗಿ ಕುಳಿತುಕೊಳ್ಳುತ್ತಾಳೆ. ದಂಡಿಗೆಬೋವೇರು ದಂಡಿಗೆಯನ್ನು ಹೊತ್ತುಕೊಂಡು ನಡೆಯುತ್ತಾರೆ. ದಿಬ್ಬಣ ಕಣ್ಮರೆಯಾಗುವವರೆಗೂ ನೋಡುತ್ತಾ ನಿಂತ ಹೆಣ್ಣಿನ ಮನೆಯವರು 'ಹೆಣ್ಣು ಹುಟ್ಟಿದ ಮನೆ ತಣ್ಣಗಾತಲ್ಲ। ಸಾಕಿ ಸಲಗಿ ಕಳುಸ್ತೀವಲ್ಲ।' ಎಂದು ದುಃಖಿಸಿ 'ತಪ್ಪಳ್ಗೆ' ಕುಳಿತು ಸಂಕಟಪಡುತ್ತಾರೆ.

ದಿಬ್ಬಣ ಗಂಡಿನ ಊರ ಹೆಬ್ಬಾಗಿಲಲ್ಲಿ ಬಂದುನಿಂತಾಗ ಮುತ್ತೈದೆಯರು 'ಹಿಡಿದಿಬ್ಬಣ'ವನ್ನು ಇದಿರುಗೊಂಡು ನವದಂಪತಿಗಳನ್ನು ದಂಡಿಗೆಯಿಂದ ಕೆಳಗಿಳಿಸಿ ಆರತಿ ಬೆಳಗುತ್ತಾರೆ. ಆ ಮೊದಲೇ ಜೋಯಿಸರಿಂದ ಕೇಳಿ ತಿಳಿದುಕೊಂಡಂತೆ ಮುಹೂರ್ತಕ್ಕೆ ಸರಿಯಾಗಿ ದಂಪತಿಗಳನ್ನು ಮನೆದುಂಬಿಸಿಕೊಳ್ಳಲಾಗುವುದು. ಇಲ್ಲಿಯೂ ಮದುವಣಿಗನ ತಂಗಿಯಿಂದ ಪಾದಪೂಜೆ ನಡೆಯುತ್ತದೆ. ಹೆಣ್ಣು ಗಂಡನ ಮನೆಯನ್ನು ಪ್ರವೇಶಿಸುವಾಗ ಹಸುಗೂಸೊಂದನ್ನು ಎತ್ತಿಕೊಂಡು ದಾಟಲು ಸೂಚನೆ ಕೊಡಲಾಗುತ್ತದೆ. ಮನೆಯ ನಡು ಅಂಕಣದಲ್ಲಿ ಕುಳ್ಳಿರಿಸಿ ಹಸೆಗೋಡೆಶಾಸ್ತ್ರ ಮುಗಿಸಿ ಉಂಗುರ ಗೆಲ್ಲುವ ವಿನೋದಶಾಸ್ತ್ರ ಮಾಡಿಸಲಾಗುತ್ತದೆ. 'ಪುಟ್ಟಕ್ಕಿ ಗೂಡೆ'ಯಲ್ಲಿ ಅಕ್ಕಿನುಚ್ಚನ್ನು ಹಾಕಿ ಅದರೊಳಗೆ ಚಿನ್ನದುಂಗುರವನ್ನು ಹುದುಗಿಸಿಟ್ಟು ಇಬ್ಬರಿಗೂ ಒಂದೇ ಬಾರಿಗೆ ಅಕ್ಕಿಗೂಡೆಗೆ ಕೈಹಾಕುವಂತೆ ನಿರ್ದೇಶನ ನೀಡಲಾಗುತ್ತದೆ. ಗಂಡುಹೆಣ್ಣುಗಳಿಬ್ಬರೂ ಚಿನ್ನದುಂಗುರಕ್ಕಾಗಿ ತಡಕಾಡಿ ಇಬ್ಬರಲ್ಲಿ ಒಬ್ಬರು ಗೆಲ್ಲುತ್ತಾರೆ. ಗೆದ್ದವರು ಸೋತವರ ಮೇಲೆ ಸಂಪೂರ್ಣ ಹತೋಟಿಯನ್ನು ಇಟ್ಟುಕೊಳ್ಳುತ್ತಾರೆಂದು ನಂಬಲಾಗುವುದು.

ಮದುವಣಿಗನ ತಾಯಿ ಮಗನನ್ನುದ್ದೇಶಿಸಿ

ಹತ್ತುವರ ಕೊಟ್ಟು ಮುತ್ತೂರಿಗೆ ಕಳ್ಸಿದ್ದೆ
ಏನು ತಂದೆಯೋ ಮಗನೆ?

ಎಂದು ಕೇಳಿದಾಗ

ಕರಿಯಾಕೆ ಎಮ್ಮೆ ತಂದೆ ಕಟ್ಟಾಕೆ ಜಾಬು ತಂದೆ
ಕಡಿಯಾ ಬಂಗಾರ ತಂದೆ ಇರುಕ್ಲು ಕುಚ್ಚುತಂದೆ
ನಿನಗೊಪ್ಪಾ ಸೊಸಿ ತಂದೆ ನಂಗೊಪ್ಪಾ ಮಡದೀ ತಂದೆ

ಎಂದು ದಿಟ್ಟತನದಿಂದ ಉತ್ತರಿಸುತ್ತಾನೆ. ಮಗನ ಹೆಮ್ಮೆಯ ಉತ್ತರಕ್ಕೆ ಮೆಚ್ಚಿ ಮಗನಿಗೆ ತಾನು ಗೆದ್ದ ಉಂಗುರವನ್ನು ಮಡದಿಯ ಬೆರಳಿಗೆ ತೊಡಿಸಲು ಅನುಮತಿ ನೀಡುತ್ತಾಳೆ.

ಮುಂದಿನದು 'ಹಿಟ್ಟಕ್ಕಿಸುವಶಾಸ್ತ್ರ'. ಹೊಸ ದಂಪತಿಗಳನ್ನು ಹಸೆಮೇಲೆ ಕೂರಿಸಿ ವೀಳೆಯದ ಪಟ್ಟಿಯಿಂದ ಹಾಲು ತುಪ್ಪ ಚಿಮುಕಿಸಿ ಅಕ್ಷತೆ ಇಡಿಸುತ್ತಾರೆ ಮುತ್ತೈದೆಯರು. ಅಕ್ಷತೆ ಇಡಿಸಿ ಮುಗಿಸಿ ದಂಪತಿಗಳ ಎದುರಿನಲ್ಲಿ ಎರಡು ಮಣೆಯ ಮೇಲೆ ಚೆನ್ನಾಗಿ ತೊಳೆದ ಎರಡು ಊಟದ ಗಂಗಳಗಳನ್ನು ತಂದಿಡಲಾಗುತ್ತದೆ. ಹೆಣ್ಣಿನ ಮನೆಯಿಂದ ವಿಶೇಷವಾಗಿ ಎಣ್ಣೆತಿಂಡಿ ಪದಾರ್ಥಗಳನ್ನು ಹಾಲು ತುಪ್ಪ ಹಣ್ಣುಹಂಪಲುಗಳನ್ನು ತಂದಿರುತ್ತಾರೆ. ಹೆಣ್ಣು ಆ ಎಲ್ಲ ಪದಾರ್ಥಗಳನ್ನು ಕೈಬಟ್ಟಲೊಳಗೆ ಹಾಕಿಕೊಂಡು ಎರಡು ಗಂಗಳಗಳಿಗೂ ಬಡಿಸಿ ಗಂಡನಿಗೆ ಊಟಮಾಡಲು ಹೇಳುತ್ತಾಳೆ. ಆಗ ಸ್ತ್ರೀಯರು ಹಿಟ್ಟಕ್ಕಿಸುವ ಹಾಡನ್ನು ಹಾಡುತ್ತಾರೆ.

ಮುತ್ತೂರು ಹೊಳಿಯಾಗೆ ಹಾಲುಂದು ಹಾರರುಮಾಣಿ
ದೊಡ್ಡs ನೂಲು ತೆಗೆದು ಜಪಮಾಡಿ। ಹಾರ್ರೂಮಾಣಿ
ಕನ್ನೇ ಸಟ್ಗ ಹಿಡಿಯಾ ಗಳಿಗೀ ಹೇಳು

ಮೂಳೂರು ಹೊಳಿಯಾಗೆ ಹಾಲುಂದು ಹಾರರುಮಾಣಿ
ಸಣ್ಣs ನೂಲs ತೆಗೆದು ಜಪಮಾಡಿ। ಹಾರ್ರೂಮಾಣಿ
ಕನ್ನೇ ಸಟ್ಗ ಹಿಡಿಯಾ ಗಳಿಗೀ ಹೇಳು
....

ದಿನವು ಊಟಮಾಡದೆ ಮೌನವಾಗಿ ಕುಳಿತಿರುತ್ತಾನೆ. ಮುತ್ತೈದೆಯೊಬ್ಬಳು ಆ ಎರಡು ಗಂಗಳಗಳನ್ನು ದಂಪತಿಗಳಿಗೆ ಸುಳಿದು ದಂಡಿಗೆ ಹೊತ್ತ ಬೋವೇರಿಗೆ ತಂದುಕೊಡುತ್ತಾಳೆ.

ಗಂಡುಹೆಣ್ಣುಗಳು ಮದುವೆ ಉಡುಗೆಗಳನ್ನು ಕಳೆದಿಟ್ಟು ಸರಳ ಉಡುಗೆಯನ್ನು ಧರಿಸಿ ಮುಂದಿನ ಶಾಸ್ತ್ರಕ್ಕೆ ಸಿದ್ಧರಾಗುತ್ತಾರೆ. ಗಂಡು ತನ್ನ ತಂದೆಯ ಬಾರಾಪುರದ ಪಂಚೆಯನ್ನು ಉಡುತ್ತಾನೆ. ಹೆಣ್ಣು ತನ್ನ ಅತ್ತೆಯ ಮುಸುಕಿನ ಸೀರೆಯನ್ನು ತೊಡುತ್ತಾಳೆ. ತುಳಸಿಯ ಮುಂದೆ ಎರಡು ಮಣೆಗಳ ಮೇಲೆ ಎದುರುಬದಿರಾಗಿ ಕುಳಿತು ಪರಸ್ಪರರ ಕಂಕಣ ದಾರವನ್ನು ಕಿತ್ತೆಸೆದು ಓಕಳಿಯಾಡುತ್ತಾರೆ. ಇಬ್ಬರಲ್ಲಿ ಒಬ್ಬರು ಸೋತು ಎದ್ದೋಡುತ್ತಾರೆ. ನಂತರ ಕೆಲವು ಸ್ತ್ರೀಯರು 'ಕದೇದಬಟ್ಟಲು' ಹಿಡಿದು ಕೊಂಡು ಇಬ್ಬರನ್ನೂ ನೀರಿನ ಮನೆಗೆ ಕರೆದುಕೊಂಡು ಹೋಗುತ್ತಾರೆ. ಹೆಣ್ಣು ಗಂಡಿನ ಮೈಯುಜ್ಜಿ ಸ್ನಾನಮಾಡಿಸುತ್ತಾಳೆ. ಗಂಡು ಹೆಣ್ಣಿಗೆ ನೀರೆರೆಯುವ ಶಾಸ್ತ್ರ ಮಾಡುತ್ತಾನೆ. ಸ್ನಾನ ಮುಗಿದನಂತರ ಮೊದಲಿನ ಉಡುಪುಗಳನ್ನೇ ತೊಡಿಸಿ ಮತ್ತೊಮ್ಮೆ ಹಸೆಗೋಡೆಯಲ್ಲಿ ಕೂರಿಸಿ ಸೋಬಲಕ್ಕಿ ಎರೆದು ಅಲ್ಲಿಗೆ ಅಂದಿನ ಶಾಸ್ತ್ರಗಳನ್ನು ಮುಕ್ತಾಯಗೊಳಿಸಲಾಗುವುದು. ದಿಬ್ಬಣಿಗರಿಗೆ 'ಬಿಡಿಬ್ಬಳೂಟ' ಗಡದ್ದಾಗಿ ನಡೆಯುತ್ತದೆ. ಹೆಣ್ಣಿಗೆ ಮಾತ್ರ ಹಾಲು ಅನ್ನ ಬಡಿಸುತ್ತಾರೆ.

ಮಾರುದಿನ ಬೆಳಗ್ಗೆ ಹೆಣ್ಣು ಗಂಡನ ಮನೆಯ ನಾಲ್ಕಾರು ಪಾತ್ರೆಗಳನ್ನು ಉಜ್ಜಿ ತೊಳೆದು ಹಸೆಗೋಡೆ ಅಂಗಳವನ್ನು ಸಗಣಿಯಿಂದ ಸಾರಿಸುತ್ತಾಳೆ. ಮಜ್ಜಿಗೆ ಕಡೆದು ಬೆಣ್ಣೆ ತೆಗೆಯುತ್ತಾಳೆ ಶಾಸ್ತ್ರಕ್ಕಾಗಿ. ತಿಂಡಿತೀರ್ಥಗಳು ಮುಗಿದನಂತರ 'ಕುಂಬನೀರು ಹೊರಿಸುವ' ಕಾರ್ಯಕ್ರಮ ವಿರುತ್ತದೆ. ಮುತ್ತೈದೆಯರು ಕಳಸದ ಬಟ್ಟಲಿನಲ್ಲಿ ಇರಿಕೆ, ಕೋಲುಮಣೆ, ಕುಡಿಕೆಗಳನ್ನು ಇರಿಸಿಕೊಂಡು ದಂಪತಿಗಳನ್ನು ಬಾವಿಕಟ್ಟೆಗೆ ಕರೆದುಕೊಂಡು ಹೋಗುತ್ತಾರೆ. ಗಂಡು ಗಂಗಾಪೂಜೆ ಮಾಡುತ್ತಾನೆ. ಹೆಣ್ಣು ನೀರು ಸೇದುತ್ತಾಳೆ. ಅಲ್ಲಿಂದ ತರಕಾರಿ ಹಿತ್ತಲಿಗೆ ಕರೆದುಕೊಂಡು ಹೋಗಿ 'ಸಸಾಗಂಟ'ನ್ನು ಬಿಟ್ಟ ತರಕಾರಿ ಬೀಜಗಳನ್ನು ನೆಡಿಸಲಾಗುವುದು. ಇಬ್ಬರೂ ಪ್ರತ್ಯೇಕವಾಗಿ ಬಿದಿಮಾಡಿ ಬೀಜ ನೆಟ್ಟು ಮುಂದೆ ಇಬ್ಬರೂ ನೀರುಹಾಕಿ ಬೆಳೆಸುತ್ತಾರೆ. ಹಿರಿಯರು ಯಾರು ನೆಟ್ಟದ್ದು ಮೊದಲು ಫಲ ಬಿಡುತ್ತದೆಯೆಂಬುದನ್ನು ಪರಿಶೋಧಿಸುತ್ತಾರೆ. ಇದು ಒಂದು ರೀತಿಯಲ್ಲಿ ಸಾಂಕೇತಿಕವಾಗಿರುತ್ತದೆ.

ಗಂಡು ಹೆಣ್ಣನ್ನು ಬಾವಿಕಟ್ಟೆಗೆ ಕರೆತಂದು ಆಕೆಯ ತಲೆಯ ಮೇಲೆ ಇರಿಕೆ ಇಟ್ಟು ಇರಿಕೆಯ ಮೇಲೆ ನೀರುತುಂಬಿದ ಮೂರು ಸಣ್ಣಮಡಿಕೆಗಳನ್ನು ಒಂದರಮೇಲೊಂದು ಇಡುತ್ತಾನೆ. ಹೆಣ್ಣು ಅದನ್ನು ತೊಳಕಿಸದಂತೆ ನಡೆದುಬಂದು ತುಳಸಿಯ ಮುಂದೆ ನಿಲ್ಲುತ್ತಾಳೆ. ಗಂಡು ಕುಂಬನೀರನ್ನು ಕೆಳಗಿಳಿಸಿ ತುಳಸಿಗೆ ಪೂಜಾಸಾಮಗ್ರಿಗಳಿಂದ ಪೂಜಿಸುತ್ತಾನೆ. ಇನ್ನು ಗಂಡನ ಪಾದ ತೊಳೆದು ಹಾಲು ಕುಡಿಯುವುದು. ಮನೆಯ ಹೊಸ್ತಿಲ ಮುಂದೆ ಮಣೆ ಹಾಕಿ ಗಂಡನ್ನು ನಿಲ್ಲಿಸಿ ಹೆಣ್ಣಿಗೆ ಹಾಲಿನಿಂದ ಆತನ ಪಾದ ತೊಳೆಯಲು ಹೇಳುತ್ತಾರೆ. ಪಾದ ತೊಳೆದ ಹಾಲನ್ನು ಆಕೆ ಎರಡೂ ಕೈಯೊಡ್ಡಿ ಕುಡಿಯ ಬೇಕು. ಹಾಗೆ ಕುಡಿದರೆ ಮಾತ್ರ ಗಂಡು ಒಂದೊ ಎರಡೊ ರೂಪಾಯಿ ಕೊಡುತ್ತಾನೆ. ಕೊನೆಯದಾಗಿ ಬಾಸಿಂಗ ಕಟ್ಟಿಸುವ ಶಾಸ್ತ್ರ. ಅಟ್ಟದ ಮೇಲೆ ಹತ್ತಿನಿಂತ ಗಂಡನ ಕೈಗೆ ಹೆಂಡತಿ ಒಂದೊಂದೇ ಸಾಮಾನು ಗಳನ್ನು ಮೇಲಕ್ಕೆತ್ತಿ ಕೊಡುತ್ತಾಳೆ. ಸಾಮಾನುಗಳನ್ನು ಮೇಲಕ್ಕೆತ್ತಿಡುವಾಗ ಗಂಡು ಮೇಲಿನಿಂದ ಹೆಂಡತಿಯ ತಲೆಮೇಲೆ ನೀರು ಚೆಲ್ಲಿ ಕೊಳೆತ ಬಾಳೆಹಣ್ಣುಗಳನ್ನು ಉದುರಿಸಿ ವಿನೋದಕ್ಕಾಗಿ ಲಕ್ಕಿಕೋಲಿನಿಂದ ಹೊಡೆಯುತ್ತಾನೆ. ಇಲ್ಲಿಗೆ ಮದುವೆಶಾಸ್ತ್ರಗಳು ಮುಗಿದಂತೆ.

ಮದುವೆಯಾದ ಮೂರು ದಿವಸಕ್ಕೆ ಗಂಡು ಹೆಣ್ಣನ್ನು ಕರೆದುಕೊಂಡು 'ಮರುಜಪ್ಪರ'ಕ್ಕೆ ಹೋಗಿಬರುತ್ತಾನೆ. ಪುನಃ ಏಳು ದಿನ ಕಳೆದು ಎಂಟನೆಯ ದಿನದಂದು 'ಎಣ್ಣೆನ ಮನೆಶಾಸ್ತ್ರ' (ಎಂಟು

ದಿನದ ಶಾಸ್ತ್ರ, 'ಧಾರೆದೀಪ')ಕ್ಕೆಂದು ನೆಂಟರಿಷ್ಟರೊಡಗೂಡಿ ಹೆಣ್ಣಿನ ಮನೆಗೆ ಹೋಗುತ್ತಾನೆ. ಧಾರೆ ದೀಪದ ದಿವಸ ಹೆಣ್ಣು ಗಂಡನಿಗೆ ಸ್ನಾನಮಾಡಿಸುತ್ತಾಳೆ. ಮದುವೆಯ ಉಡುಗೆತೊಡುಗೆಗಳನ್ನು ತೊಟ್ಟುಕೊಂಡು ಧಾರೆಮಂಟಪದೊಳಗೆ ಒಂದು ಮಣೆಯ ಮೇಲೆ ನಿಂತುಕೊಳ್ಳುತ್ತಾನೆ ಗಂಡು. ಹೆಣ್ಣು ತನ್ನ ಗೆಳತಿಯರೊಡಗೂಡಿ ಗಂಡನಿಗೆ ಆರತಿ ಬೆಳಗುತ್ತಾಳೆ. ಗಂಡು ಆರತಿ ಬೆಳಗಿದುದರ ಗೌರವಾರ್ಥ ಐದು ರೂಪಾಯಿಗಳನ್ನು ಆರತಿ ತಟ್ಟೆಯಲ್ಲಿರಿಸುತ್ತಾನೆ. ಆ ದಿನವೂ ಸಾಕಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಬಂಧುಗಳು ಬಂದಿರುತ್ತಾರೆ. ಧಾರೆದೀಪದ ಊಟ ಮುಗಿಸಿ ತಂತಮ್ಮ ಮನೆಗಳಿಗೆ ಮರಳಿಹೋಗುತ್ತಾರೆ.

ಮುಂದೆ ಗೌರಿಹಬ್ಬ ಮತ್ತು ದೀಪಾವಳಿ ಹಬ್ಬಗಳಿಗೆ ಅಳಿಯ ಮಗಳಿಗೆ ವಿಶೇಷ ಆಹ್ವಾನ ವಿರುತ್ತದೆ. ಹೆಣ್ಣು ದೀಪಾವಳಿ ಹಬ್ಬ ಮುಗಿಸಿಕೊಂಡು ಹೋಗುವಾಗ ತವರಿನವರು ಮಡಿಲುದುಂಬಿ ಕಳಿಸುತ್ತಾರೆ. ಕಾರ್ತಿಕ ಮಾಸದಲ್ಲಿ ಒಂದು ಒಳ್ಳೆಯ ದಿನ ಗೊತ್ತುಮಾಡಿಕೊಂಡು ಪ್ರಸ್ತದಮನೆಶಾಸ್ತ್ರ ವನ್ನು ಆಚರಿಸಲಾಗುತ್ತದೆ. ಹೆಣ್ಣು ಋತುಮತಿಯಾಗಿರದಿದ್ದರೆ ಆಕೆ ದೊಡ್ಡವಳಾಗುವವರೆಗೆ ತವರಿನಲ್ಲೇ ಇರಿಸಿಕೊಳ್ಳಲಾಗುವುದು.

ಹೀಗೆ ಮದುವೆ ಉಳಿದ ಜನಾಂಗಗಳಲ್ಲಿ ನಡೆಯುವಂತೆ ಸಾಂಪ್ರದಾಯಿಕವಾಗಿ ನಡೆಯುವುದಾದರೂ ಈ ಜನಾಂಗದ ಮದುವೆ ಮುಂಜಿಗಳಲ್ಲಿ ಪುರೋಹಿತರು ಅಧಿಕೃತ ಪ್ರವೇಶ ಪಡೆದಿರುವುದು ಒಂದು ಕುತೂಹಲಕಾರಿಯಾದ ಅಂಶ. ಮೂಲತಃ ದ್ರಾವಿಡ ವರ್ಗಕ್ಕೆ ಸೇರಿದ ಈ ಜನಾಂಗಕ್ಕೆ ಆರ್ಯವರ್ಗದ ವೈದಿಕಸಂಪ್ರದಾಯದ ಪ್ರಭಾವ ಗಾಢವಾಗಿ ಪರಿಣಾಮ ಬೀರಿದುದರ ಫಲವೇ ಪುರೋಹಿತರು ಇವರ ವಿಧ್ಯುಕ್ತ ಸಂಪ್ರದಾಯಗಳ ಆಚರಣೆಗಳಲ್ಲಿ ಭಾಗವಹಿಸಲು ಕಾರಣವಾಗಿರಬೇಕು. ಈ ಜನಾಂಗದ ಧಾರ್ಮಿಕ ವಿಧಿಗಳಲ್ಲಿ ಪುರೋಹಿತರು ಪ್ರವೇಶಪಡೆಯುವುದಕ್ಕೆ ಮುನ್ನ ಮದುವೆ ಸಂದರ್ಭದಲ್ಲಿ ಕೈಧಾರೆ ನಡೆಯುತ್ತಿದ್ದುದಾಗಿಯೂ, ಇದೇ ಜನಾಂಗದ ಗುರುಗಳೊಬ್ಬರು ಮದುವೆ ಸಮಾರಂಭದಲ್ಲಿ ಭಾಗವಹಿಸಿ ಧಾರೆ ಎರೆಯುವ ಶಾಸ್ತ್ರವನ್ನು ನಿರ್ವಹಿಸುತ್ತಿದ್ದುದಾಗಿಯೂ ತಿಳಿದುಬರುತ್ತದೆ.

ಸುಮಾರು ಎರಡು ಸಾವಿರ ವರ್ಷಗಳಿಗೂ ಹೆಚ್ಚಿನ ಇತಿಹಾಸ ಹೊಂದಿರುವ ಮಲೆನಾಡು ಪ್ರದೇಶ ಪ್ರಾಕೃತಿಕವಾಗಿಯೂ ಸಾಂಸ್ಕೃತಿಕವಾಗಿಯೂ ಅಖಂಡವಾದುದು. ಇಲ್ಲಿನ ಒಕ್ಕಲಿಗ ಜನಾಂಗದಲ್ಲಿ ಪ್ರಚಲಿತವಿರುವ ಈ ವಿವಾಹಪದ್ಧತಿಯಲ್ಲಿ ಭಾವುಕತೆಗೆ ಹೆಚ್ಚು ಪ್ರಾಮುಖ್ಯತೆ ನೀಡಿರುವಂತೆ ಕಂಡು ಬಂದರೂ ಆ ಎಲ್ಲ ಧಾರ್ಮಿಕ ಸಂಬಂಧವಾದ ಆಚರಣೆಗಳು ಒಂದು ವಿಧದಲ್ಲಿ ಸಾಂಕೇತಿಕವಾಗಿರು ವಂತೆಯೂ ಕಂಡುಬರುತ್ತವೆ. ವೈವಿಧ್ಯಪೂರ್ಣವಾದ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಂಡ ಈ ಜನಾಂಗ ಸಮಾಜದ ಉಳಿದ ವರ್ಗಗಳಿಗಿಂತ ಭಿನ್ನವಾದ ಸಂಪ್ರದಾಯ ಪರಂಪರೆಗಳನ್ನು ಇಂದಿಗೂ ಉಳಿಸಿಕೊಂಡು ಬರುತ್ತಿರುವುದು ಗಮನಾರ್ಹ.

Concerning the origin of the Badagas the following legend is current. Seven brothers and their sisters were living on the Talamalai hills. A Mahammadan ruler attempted to ravish the girl, whom the brother saved from him by flight. They settled down near the present village of Bethalhada. After a short stay there, the brothers separated and settled in different parts of the Nilgiris, which they peopled. Concerning the second brother Hethappa, who had two daughters, the story goes that, during his absence on one occasion, two Todas forced their way into his house, ravished his wife, and possessed themselves of his worldly effects. Hearing of what had occurred, Hethappa sought the assistance of two Balayaru in revenging himself on the Todas. They readily consented to help him, in return for a promise that they should marry his daughters. The Todas were killed and the present inhabitants of the village Hulikallu are supposed to be the descendants of the Balayaru and Badaga girls. The seven brothers are now worshipped under the name Hethappa or Hetha.

E. Thurston
in *Castes and Tribes of Southern India*

ಮೂಲ: ಕೆ. ಸಿ. ರಾಜು

ಅನು: ಎಚ್. ಎಂ. ನಾಗರಾಜರಾವ್

ಬಡಗಗೌಡರ ಉಗಮ ಮತ್ತು ಇತಿಹಾಸ

'ಬಡಗ' ಎಂಬ ಶಬ್ದದ ನೈಜಾರ್ಥ ಯಾವುದೇ ನಿರ್ದಿಷ್ಟ ಜಾತಿ ಅಥವಾ ಜನಾಂಗವನ್ನು ಸೂಚಿಸುವುದಿಲ್ಲ. ಇದೊಂದು ಕನ್ನಡ ಶಬ್ದ: ಇದರ ಅರ್ಥ ಉತ್ತರದವನೆಂಬುದಷ್ಟೇ. ಬಡಗು ಅಥವಾ ಬಡಗಲು ಎಂದರೆ ಉತ್ತರವೆಂದರ್ಥ. ಆದ್ದರಿಂದ 'ಬಡಗರು' ಎಂಬ ಹೆಸರಿನ ಅರ್ಥ 'ಉತ್ತರದವರು' ಎಂಬುದಾಗಿದ್ದು. ಅದನ್ನು ಉತ್ತರದಿಂದ ದಕ್ಷಿಣಕ್ಕೆ ಬಂದವರೆಂಬುದನ್ನು ಗುರುತಿಸುವುದಕ್ಕಾಗಿ ಇತರ ಜನರು ಬಳಸಿರಬೇಕು. ಹಲವು ಕಾಲ ತಮಿಳರು ಅವರನ್ನು ವಡುಗರ್–ಉತ್ತರದವರು–ಎಂದು ಕರೆದರು. ಸಂಗಂ ಕಾಲದ ತಮಿಳು ಸಾಹಿತ್ಯದಲ್ಲಿ (ಕ್ರಿ.ಶ. ೧೦೦ ರಿಂದ ೨೫೦) ವಡುಗರ್‌ರ[1] ಉಲ್ಲೇಖಗಳಿರುವುದನ್ನು ಕಾಣುತ್ತೇವೆ. ಪ್ರೊ. ನೀಲಕಂಠಶಾಸ್ತ್ರಿಗಳ ಪ್ರಕಾರ "ವಡುಗರ್ ಎಂಬುದರ ಶಬ್ದಾರ್ಥ ಉತ್ತರದವರೆಂಬುದು ಮತ್ತು ಇದು ಸಂಗಂ ಸಾಹಿತ್ಯದಲ್ಲಿ ತಮಿಳು ದೇಶಕ್ಕೆ ಉತ್ತರದಲ್ಲಿರುವ ದಕ್ಕನ್ ಪ್ರದೇಶದಲ್ಲಿ ವಾಸಿಸುತ್ತಿದ್ದ ತೆಲುಗು–ಕನ್ನಡ ಜನರ ಪೂರ್ವಿಕರ ಬಗ್ಗೆ ಬಳಸಿದ ಹೆಸರು."[2] ವಿಂಧ್ಯ ಪರ್ವತಶ್ರೇಣಿಗೆ ದಕ್ಷಿಣ ಮತ್ತು ತುಂಗಭದ್ರಾನದಿಗೆ ಉತ್ತರಕ್ಕೆ ಹಬ್ಬಿರುವ ಪ್ರದೇಶವನ್ನು ಸೂಚಿಸಲು ಡೆಕ್ಕನ್ ಎಂಬ ಹೆಸರನ್ನು ಇತಿಹಾಸದಲ್ಲಿ ಸಾಮಾನ್ಯವಾಗಿ ಬಳಸಲಾಗಿದೆ.

ಹೀಗೆ ಬಡಗ ಎಂಬ ಶಬ್ದದ ಪ್ರಯೋಗ ಶತಮಾನಗಳಿಂದ ಅದಕ್ಕೆ ಜಾತಿ ಅಥವಾ ಜನಾಂಗ ಎಂಬರ್ಥವನ್ನು ತಂದಿತ್ತಿದೆ. ಈಗಾಗಲೇ ನಾವು ಗಮನಿಸಿರುವಂತೆ ಇದೊಂದು ಅಪಪ್ರಯೋಗ. ಬಡಗರೆಂದು ಕರೆಯಲಾದ ಜನರು ಒಂದು ವಿಶಿಷ್ಟ ಜನಾಂಗಕ್ಕೆ ಸೇರಿದವರಾಗಿದ್ದು ಅವರಿಗೆ ಗೌಡ ಎಂಬ ಬಿರುದಿತ್ತು. ಆದ್ದರಿಂದ ಅವರನ್ನು 'ಬಡಗರು' ಎಂದು ನಿರ್ದೇಶಿಸುವ ಆಧಾರಗಳನ್ನು ಉಲ್ಲೇಖಿಸುವಾಗ ವಿನಾ ಉಳಿದೆಡೆಯಲ್ಲಿ ಈ ಬಿರುದನ್ನು ಬಳಸಿ ಅವರನ್ನು ಬಡಗಗೌಡರೆಂದು ಕರೆಯೋಣ.

ಈಗಾಗಲೇ ನಾವು ಗಮನಿಸಿರುವಂತೆ 'ಬಡಗ' ಎಂಬುದು ಈ ಜನಾಂಗದ ಪೂರ್ವಿಕರು ಬಂದ ಉತ್ತರ ದಿಕ್ಕನ್ನು ಸೂಚಿಸುತ್ತದೆ. ಬಡಗರ ಬಗ್ಗೆ ದಾಖಲಾದ ಆಧಾರಗಳು ಕೇವಲ ಕೆಲವೇ ಮತ್ತು ಅವು ಅವರ ಇತಿಹಾಸದ ಬಗ್ಗೆ ನೀಡುವ ಮಾಹಿತಿಯೂ ಕಡಿಮೆ; ಅವರ ಉಗಮದ ವಿಚಾರದಲ್ಲಿ ಮತ್ತೂ ಕಡಿಮೆ.

'ದಿ ಗೆಜೆಟಿಯರ್ ಆಫ್ ದಿ ನೀಲಗಿರೀಸ್' ಬಡಗರ ಉಗಮದ ಬಗ್ಗೆ ಹೀಗೆ ನಿರೂಪಿಸುತ್ತದೆ:

"ಬಡಗ ಎಂಬ ಹೆಸರು (ಇಲ್ಲಿನ ಬೆಟ್ಟಗಳಿಗೆ ಭೇಟಿ ನೀಡಿದ ಮೊದಮೊದಲ ಐರೋಪ್ಯ ಪ್ರವಾಸಿಗರ ಬಾಯಲ್ಲಿ ಬರ್ಘರ್ (Burgher) ಎಂಬ ಅಶುದ್ಧ ರೂಪ) 'ವಡಗ' ಎಂಬ ಶಬ್ದವೇ ಆಗಿದ್ದು

---

1. Nakkirar : *Agananuru* Verse 250
2. K. A. Nilakanta Sastry : *A History of South India* p. 86

ಅವರ ಅರ್ಥ 'ಉತ್ತರದವ'ನೆಂದು. ಪ್ರಸ್ತುಭೂಮಿಯು ಬಡಗರು ಉತ್ತರಕ್ಕಿರುವ ಮೈಸೂರು ದೇಶದಿಂದ ಕ್ಷಾಮ ಅಥವಾ ರಾಜಕೀಯ ಸಂಕ್ಷೋಭೆ ಅಥವಾ ಸ್ಥಳೀಯ ದಬ್ಬಾಳಿಕೆಗೆ ತುತ್ತಾಗಿ ಶತಮಾನಗಳ ಹಿಂದೆ ಇಲ್ಲಿಗೆ ವಲಸೆ ಬಂದ ಕನ್ನಡಿಗರ ಅನುವಂಶಿಕರು.[1]

ಬಡಗರ ಉಗಮದ ಬಗ್ಗೆ 'ದಿ ಮೈಸೂರ್ ಗೆಜೆಟಿಯರ್' ಹೀಗೆ ಉಲ್ಲೇಖಿಸುತ್ತದೆ: ಭೌತಿಕವಾಗಿ ಮತ್ತು ಭಾಷಾ ಸಂಬಂಧದಿಂದಲೂ ಬಡಗರು ಮೈಸೂರಿನಿಂದ ಬಂದು ನೆಲಸಿದ ಒಂದು ಜನಾಂಗ; ಅವರು ಪಡೆದಿದ್ದ ತಮ್ಮ ಈಗಿನ ನೆಲೆವೀಡುಗಳಿಗೆ ವಲಸೆ ಬಂದರೋ ಆ ಉತ್ತರ ದಿಕ್ಕನ್ನು ಅವರ ಹೆಸರು (ಬಡಗ) ಸೂಚಿಸುತ್ತದೆ. ಅವರು ಮಾತನಾಡುವ ಭಾಷೆಯು, ಡಾ. ಕಾಲ್ಡ್‌ವೆಲ್ (Caldwell) ತಿಳಿಸುವಂತೆ, "ಕನ್ನಡದ ಪ್ರಾಚೀನ ಅಥವಾ ಹೆಚ್ಚಾಗಿ ಮಧ್ಯಕಾಲೀನ ರೂಪವಾಗಿರುವುದು; ಅದರ ವ್ಯವಸ್ಥಿತ ಉಪಭಾಷೆ"ಯಾಗಿಲ್ಲ.[2]

ನೀಲಗಿರಿಯ ಬಡಗಗೌಡರು ಮಾತನಾಡುತ್ತಿದ್ದ ಭಾಷೆಯು ಕನ್ನಡದ ಒಂದು ಉಪಭಾಷೆ. ಅವರ ಪೂರ್ವಜರು ನೀಲಗಿರಿಗೆ ವಲಸೆ ಬರುವುದಕ್ಕೆ ಮೊದಲು ಕರ್ನಾಟಕದಲ್ಲಿ ಶತಮಾನಗಳ ಕಾಲ ವಾಸಿಸಿದರೆಂಬ ವಿಚಾರದಲ್ಲಿ ಸಂದೇಹವಿಲ್ಲ. ತಮ್ಮನ್ನು 'ಗೌಡ' ಎಂದು ಕರೆದುಕೊಳ್ಳುವ ಮತ್ತು ವಿವಿಧ ಜಾತಿಪಂಥಗಳಿಗೆ ಸೇರಿದ ಜನರ ಅನೇಕ ಸಮುದಾಯ ಅಥವಾ ಪಂಗಡಗಳಿದ್ದರೂ ಇವೆಯಾದರೂ ನೀಲಗಿರಿಯ ಗೌಡರಿಗೂ ಕರ್ನಾಟಕದ ಇತರ ಪಂಗಡ ಅಥವಾ ಸಮುದಾಯಗಳಿಗೂ ಯಾವುದೇ ಬಗೆಯ ಕುಲಸಂಬಂಧವಾದ ಅನನ್ಯತೆ ಅಥವಾ ಸಾದೃಶ್ಯಗಳಿವೆಯೆ ಎಂಬುದು ಇನ್ನೂ ನಿರ್ಧರವಾಗಬೇಕಾದ ವಿಚಾರ. ಈ ಸಂಬಂಧದಲ್ಲಿ ನೀಲಗಿರಿಯ ಗೌಡರ ಬಗ್ಗೆ ಎಡ್ಗರ್ ಥರ್ಸ್ಟನ್ ಎಂಬುವರು ನಡೆಸಿದ ಮಾನವಶಾಸ್ತ್ರೀಯ ಅಧ್ಯಯನದಲ್ಲಿ ದೊರೆತ ಕುರುಹುಗಳು ಮಹತ್ವಪೂರ್ಣವೂ ಸಂಗತವೂ ಆದುವಾಗಿವೆ. ಕುಲಸಂಬಂಧವಾಗಿ ನೀಲಗಿರಿಯ ಗೌಡರು ಜನರ ಭಿನ್ನ ಸಮುದಾಯವೆಂಬುದನ್ನು ಥರ್ಸ್ಟನ್‌ರ ಅಧ್ಯಯನಗಳಿಂದ ಸೂಚಿತವಾಗುತ್ತದೆ. ಥರ್ಸ್ಟನ್ ಗಮನಿಸಿರುವುದು ಹೀಗಿದೆ:

"ಬಡಗರ ತಲೆಯು ತೋಡ ಹಾಗೂ ಕೋಟರ ತಲೆಗಳಂತೆ ಡಾಲಿಕೋಸಿಫ್ಯಾಲಿಕ್ ವರ್ಗದ್ದಾಗಿದ್ದು ಇತರ ಕನ್ನಡ ಪ್ರದೇಶಗಳಂತೆ ಮೈಸೂರು ಪ್ರದೇಶದಲ್ಲಿಲ್ಲ ಹೆಚ್ಚು ಪ್ರಧಾನವಾಗಿರುವ ಮೆಸಟಿಸಿಫ್ಯಾಲಿಕ್ ಅಥವಾ ಸಬ್–ಬ್ರ್ಯಾಕಿಸಿಫ್ಯಾಲಿಕ್ ವರ್ಗದ್ದಲ್ಲ ಎಂಬುದು ಈ ಸಂಬಂಧದಲ್ಲಿ ಗಮನಾರ್ಹವಾದ ಅಂಶ"[3]

	ಶಿರದ ಉದ್ದ ಸೆ.ಮಿ.	ಶಿರದ ಅಗಲ ಸೆ.ಮಿ.	ಶಿರಸೂಚಿ
ಬಡಗ	೧೮.೯	೧೩.೬	೭೧.೭
ತೋಡ	೧೯.೪	೧೪.೨	೭೩.೩
ಕೋಟ	೧೯.೨	೧೪.೨	೭೪.೧

ಮೈಸೂರಿನ ಜನರಲ್ಲಿ ಈ ಕೆಳಗಿನವು ಕೆಲವು ಮಾದರಿ ಉದಾಹರಣೆಗಳು:

	ಶಿರದ ಉದ್ದ ಸೆ.ಮಿ.	ಸರಾಸರಿ ಶಿರದ ಅಗಲ (ಸೆ.ಮಿ.)	ಶಿರಸೂಚಿ
ಗಾಣಿಗ	೧೮.೫	೧೪.೩	೭೭.೬
ಬೇಡರು	೧೮.೩	೧೪.೩	೭೭.೭

1. W. Francis—(ed) *The Gazetteer of the Nilagiris* (1908) p. 128
2. *The Mysore Gazetteer*, Vol I (1927), p. 141
3. Edgar Thurston—*Castes and Tribes of Southern India* (1909), Vol I, p. 67

ಹೊಲೆಯ	೧೭.೯	೧೪.೧	೬೯.೧
ಮಧ್ಯ ಬ್ರಾಹ್ಮಣ	೧೮.೫	೧೪.೮	೮೦.೨
ಒಕ್ಕಲಿಗ	೧೭.೭	೧೪.೫	೮೧.೭

ಮೊದಲನೇಯ ಪಟ್ಟಿಯಲ್ಲಿ (Table) ತೋಡರು ಮತ್ತು ಕೋಟರಿಗೂ ಬಡಗರಿಗೂ ಇರುವ ಸ್ಪಷ್ಟ ವ್ಯತ್ಯಾಸ ಯಾರಿಗಾದರೂ ಸುಲಭವಾಗಿ ಗೋಚರವಾಗುತ್ತದೆ. ಬಡಗರ ಶಿರಸೂಚಿ ೮೧.೭ ಆಗಿದ್ದರೆ ತೋಡ ಹಾಗೂ ಕೋಟರದು ಕ್ರಮವಾಗಿ ೭೩.೩ ಮತ್ತು ೭೪.೧ ಇರುವುದರಿಂದ ಅವರ ನಡುವಣ ಅಂತರವೇನೆಂಬುದು ಸ್ಪಷ್ಟಪಡುತ್ತದೆ.

ವಿಜಯನಗರ ಸಾಮ್ರಾಜ್ಯದ ಸ್ಥಾಪಕರೊಡನೆ ಸಂಬಂಧ

ನೀಲಗಿರಿಯ ಬಡಗಗೌಡರಿಗೆ 'ಹಿರಿಯೊಡೆಯ' ಎಂಬ ಹೆಸರಿನ ಕುಲದೇವತೆ ಇದೆ, ಈ ದೇವತೆಗೆ ಅರ್ಪಿತವಾಗಿರುವ ದೇವಾಲಯಗಳ ಮುಂದೆ ಅವರ ಪೂರ್ವಜರು ನಿಲ್ಲಿಸಿರುವ ಸ್ಮಾರಕಗಳು (ಕಲ್ಲಿನ ಕಮಾನುಗಳು) ಹಾಗೂ 'ದೆವ್ವ ಹಬ್ಬ'[1] ಎಂದು ಕರೆಯಲಾಗುವ ಅವರ ಪ್ರಮುಖ ಹಬ್ಬದ ಸಮಯದಲ್ಲಿ ಅವರು ಪಠಿಸುವ ಪ್ರಾರ್ಥನಾಸ್ತುತಿಗಳು ಇವೆಲ್ಲವು ಅವರು ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹಕ್ಕ (ಹರಿಹರ) ಮತ್ತು ಬುಕ್ಕರೊಂದಿಗೆ ಹೊಂದಿದ್ದ ಸಂಪರ್ಕ ಸಂಬಂಧಗಳನ್ನು ಸೂಚಿಸುತ್ತವೆ.

ಭಕ್ತರು ದೇವತೆಯ ಮುಂದೆ ಸಾಷ್ಟಾಂಗ ಪ್ರಣಾಮ ಮಾಡಿದಾಗ ಪೂಜಾರಿಗಳು ಮತ್ತು ಈ ಜನಾಂಗದ ಹಿರಿಯರು ಹೀಗೆ ಆರಂಭವಾಗುವ ಪ್ರಾರ್ಥನಾ ಸ್ತುತಿಯನ್ನು ಪಠಿಸುತ್ತಾರೆ:

ಒಡೆಯರ ಮಕ್ಕ ಮೊರೆ ಬುದ್ದಿದಾರೆ
ಒಂದುಗ ಸಾವಿರವಾಗಲಿ, ಎಲ್ಲಾ ಒಳ್ಳಿತಾಗಲಿ ಇತ್ಯಾದಿ

ಇದರ ಅರ್ಥ: "(ದೇವರ) ಅನುಗ್ರಹಕ್ಕಾಗಿ ಒಡೆಯರ ಮಕ್ಕಳು ಶರಣು ಬಂದಿದ್ದಾರೆ; ಒಂದು ಸಾವಿರವಾಗಿ ಪರಿಣಮಿಸಲಿ: ಎಲ್ಲವೂ ಒಳ್ಳೆಯದಾಗಲಿ" ಇತ್ಯಾದಿ. 'ಒಡೆಯ' ಎಂಬ ಪದಕ್ಕೆ 'ಅರಸ', 'ಯಜಮಾನ' ಅಥವಾ 'ಪ್ರಭು' ಎಂಬ ಅರ್ಥಗಳಿವೆ. ಹರಿಯಪ್ಪವೊಡೆಯ, ಬುಕ್ಕವೊಡೆಯ ಮುಂತಾದ ಸಂಗಮವಂಶದ ಅರಸರ ಹೆಸರುಗಳಲ್ಲಿ ಬಳಕೆಯಾಗಿರುವಂತೆ ಇಲ್ಲಿ 'ಅರಸ' ಎಂಬರ್ಥದಲ್ಲೆ ಬಳಕೆಯಾಗಿದೆ. ಹಿರಿಯೊಡೆಯ ದೇವಾಲಯಗಳ ಮುಂದೆ ಇವರ (ಬಡಗರ) ಪೂರ್ವಜರು ನಿಲ್ಲಿಸಿದ ಕಲ್ಲಿನ ಕಮಾನುಗಳನ್ನು ಜನರು 'ಅಕ್ಕ–ಬಕ್ಕ' ಎಂದು ಕರೆಯುತ್ತಾರೆ. 'ಹಿರಿಯೊಡೆಯ' ಎಂಬುದು ಹರಿಯಪ್ಪವೊಡೆಯನನ್ನು ಸೂಚಿಸುತ್ತದೆ ಎಂಬುದರಲ್ಲಿ ಮತ್ತು 'ಅಕ್ಕ–ಬಕ್ಕ' ಎಂಬುದು ಅವರ ವಂಶದವರಿಂದ ಹಾಗೆ ಕರೆಯಲ್ಪಟ್ಟ ಪ್ರಸಿದ್ಧ ಸೋದರರಾದ ಹಕ್ಕ ಮತ್ತು ಬುಕ್ಕರನ್ನು ಉಲ್ಲೇಖಿಸುತ್ತದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. 'ಹಿರಿಯೊಡೆಯ' ಎಂದರೆ 'ಹಿರಿಯ ಅರಸ' ಎಂಬರ್ಥ ಮತ್ತು ಈ ಸೋದರರಲ್ಲಿ ಹರಿಯಪ್ಪವೊಡೆಯನು ಹಿರಿಯವನಾದುದರಿಂದ ಬಡಗಗೌಡರ ಪೂರ್ವಜರು ಅವನನ್ನು 'ಹಿರಿಯೊಡೆಯ' ಎಂದು ಉಲ್ಲೇಖಿಸಿದರು.

ಹಕ್ಕಬುಕ್ಕರು ಬಡಗಗೌಡ ವಂಶದವರೆ ಆಗಿರದಿದ್ದರೆ ಅವರು 'ಹಿರಿಯೊಡೆಯ'ನಿಗೆ (ಹರಿಯಪ್ಪ-ವೊಡೆಯ) ಅರ್ಪಿತವಾದ ದೇವಾಲಯಗಳನ್ನು ಕಟ್ಟುತ್ತಿರಲಿಲ್ಲ ಮತ್ತು ಹಕ್ಕಬುಕ್ಕ ಸೋದರರ ನೆನಪಿಗಾಗಿ 'ಅಕ್ಕ–ಬಕ್ಕ' ಸ್ಮಾರಕಗಳನ್ನು ನಿಲ್ಲಿಸುತ್ತಿರಲಿಲ್ಲ. ಅನೇಕರು 'ಹಿರಿಯ', 'ಹರಿಯ', 'ಬೊಕ್ಕ', 'ಮಾದ', 'ಮುದ್ದ' ಮುಂತಾದ ಹೆಸರುಗಳನ್ನಿಟ್ಟುಕೊಂಡಿರುವುದು ಮಹತ್ವದ್ದು. ಇದು ಹರಿಯಪ್ಪವೊಡೆಯ ಮತ್ತು ಅವನ ಸೋದರರ ನೆನಪಿನಲ್ಲಿ ಎಂಬುದು ಸ್ಪಷ್ಟ. ಈ ಜನಾಂಗದ ಹೆಂಗಸರಲ್ಲಿ 'ಮಲ್ಲಮ್ಮ', 'ಗೌರಿ' ಮುಂತಾದ ಹೆಸರುಗಳಿರುವುದೂ ಸಂಗಮ ವಂಶದ ಅರಸರ ಪತ್ನಿಯರ ನೆನಪಿನಲ್ಲಿಯೆ. ಆ ಕಾಲದ ಪ್ರಖ್ಯಾತ ಸೇನಾನಿಗಳ ಹಾಗೂ ಸ್ಮರಣಾರ್ಥವಾಗಿ 'ಸಂಗಮ' ಎಂಬ ಹೆಸರುಳ್ಳ ಜನರೂ ಹಲವರಿದ್ದಾರೆ.

1. ದೆವ್ವ ಎಂದರೆ ದೇವರಭಕ್ತ, ಅಸಾಮಾನ್ಯಶಕ್ತಿಯುಳ್ಳವನೆಂದರ್ಥ.

ನೆನಪಿಗಾಗಿ 'ಗುಂಡ' ಮತ್ತು 'ಮುದ್ದ' ಎಂಬ ಹೆಸರುಗಳು ಈ ಜನಾಂಗದಲ್ಲಿ ಸಾಮಾನ್ಯವಾಗಿ ಕಂಡು ಬರುತ್ತವೆ. (ಮುದ್ದ ಇಮ್ಮಡಿ ಹರಿಹರನ ಸೇನಾನಿ; ಅವನ ಉಲ್ಲೇಖ ೧೩೭೯ ಮತ್ತು ೧೩೮೦ರ ಶಾಸನಗಳಲ್ಲಿ ದೊರೆಯುತ್ತದೆ. ಗುಂಡ ಎಂಬ ಸೇನಾನಿಯೂ ಇದ್ದ: ಆದರೆ ಇವನ ಕಾಲ ನಿರ್ದಿಷ್ಟವಾಗಿ ತಿಳಿದಿಲ್ಲ).[1]

ಈಗಲೂ ಜಾರಿಯಲ್ಲಿರುವ ಯಾಗದ ಅಂಗವಾಗಿ 'ದೇವ್ರಹಬ್ಬ'ದ ವಾರ್ಷಿಕ ಸಮಾರಂಭದಲ್ಲಿ ಹೋರಿಗರು ಮತ್ತು ಕೆಲವು ಟಗರುಗಳನ್ನು ಬಲಿಗೊಡುವ ಪದ್ಧತಿಯಿಂದ ಬಡಗಗೌಡರು ವಿಜಯ ನಗರದ ಸ್ಥಾಪಕರೊಂದಿಗೆ ನಿಕಟ ಸಂಬಂಧ ಹೊಂದಿದ್ದರೆಂಬುದು ದೃಢಪಡುತ್ತದೆ. ವಿಜಯನಗರದರಸರು ಮಾಡಿದ ಎಮ್ಮೆ ಮತ್ತು ಕುರಿಗಳ ಹತ್ಯೆಯ ಬಗ್ಗೆ ಪೇಸ್ ತನ್ನ ವೃತ್ತಾಂತದಲ್ಲಿ (Chronicle) ನೀಡಿರುವ ಹೇಳಿಕೆಗೆ ಇದು ಸರಿಹೊಂದುತ್ತದೆ. ವಿಜಯನಗರದರಸರು ನೂರಾರು ಎಮ್ಮೆಗಳನ್ನು ಮತ್ತು ಸಾವಿರಾರು ಕುರಿಗಳನ್ನು ಬಲಿಗೊಟ್ಟಿದ್ದರೆ, ಅಷ್ಟೊಂದು ಸಂಖ್ಯೆಯಲ್ಲಿ ಬಲಿಗೊಡಲು ಸಾಧ್ಯವಾಗದಿದ್ದುದರಿಂದ ನೀಲಗಿರಿಯ ಬಡಗಗೌಡರು ಒಂದು ಹೋರಿಗರು ಮತ್ತು ಕೆಲವೇ ಟಗರು ಗಳನ್ನು ಸಾಂಕೇತಿಕವಾಗಿ ಬಲಿಗೊಡುತ್ತಿದ್ದರೆಂಬುದೇ ಚಮಾತ್ರ ವ್ಯತ್ಯಾಸ. ವಿಜಯನಗರದರಸರು ಕುರಿ ಗಳನ್ನು ಬಲಿಗೊಟ್ಟರೆ, ಇವರು ಅವುಗಳ ಅಭಾವದಿಂದಾಗಿ ಟಗರುಗಳನ್ನು ಬಲಿಗೊಡುತ್ತಿದ್ದರು.

ಅವರ ಮೂಲಸ್ಥಾನ

ಧಾರವಾಡ, ಬೆಳಗಾವಿ, ಬಿಜಾಪುರ ಮತ್ತು ರಾಯಚೂರು ಜಿಲ್ಲೆಗಳಲ್ಲಿನ ಕೆಲವು ಸ್ಥಳಗಳು ಹಾಗೂ ನೀಲಗಿರಿ ಜಿಲ್ಲೆಯ ಬಡಗಗೌಡರ ಮೊದಮೊದಲ ವಸಾಹತುಗಳ ನಡುವಣ ಹೆಸರುಗಳ ತುಲನೆ ಮತ್ತು ಸೂಕ್ಷ್ಮ ಅಧ್ಯಯನದಿಂದ ಅನೇಕ ಸ್ಥಳಗಳು ಗಮನಾರ್ಹ ಸಾದೃಶ್ಯ ಹಾಗೂ ಸಾಮ್ಯತೆಗಳನ್ನು ಹೊಂದಿರು ವುದು ನಮಗೆ ಕಂಡುಬರುತ್ತದೆ.

ದೃಷ್ಟಾಂತಕ್ಕಾಗಿ ಕೆಲವು ಸ್ಥಳಗಳನ್ನು ಇಲ್ಲಿ ನೀಡಲಾಗಿದೆ:

ನೀಲಗಿರಿ ಜಿಲ್ಲೆಯ ಸ್ಥಳಗಳು		ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿರುವ ಸ್ಥಳಗಳು
ದೊಡ್ಡೂರು–ಉದಕಮಂಡಲ ತಾಲ್ಲೂಕಿನಲ್ಲಿರುವ ಗ್ರಾಮ		ದೊಡ್ಡೂರು–ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನಲ್ಲಿದೆ.
ಹನ್ನಿಕೊರೆ	ಅದೇ	ಅಣ್ಣಿಗೇರಿ–ತಾಲ್ಲೂಕು ಕೇಂದ್ರ, ಧಾರವಾಡ ಜಿಲ್ಲೆ.
ಹುಲ್ಲತ್ತಿ	ಅದೇ	ಹುಲ್ಲತ್ತಿ–ಧಾರವಾಡ ಜಿಲ್ಲೆಯ ರಾಣೆಬೆನ್ನೂರು, ಹಿರೇಕೆರೂರು ಮತ್ತು ಹಾನಗಲ್ ತಾಲ್ಲೂಕುಗಳಲ್ಲಿವೆ.
ಕುನ್ನೂರು	ಅದೇ	ಕುನ್ನೂರು–ಧಾರವಾಡ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನಲ್ಲಿದೆ
ಕುಂದಾ	ಅದೇ	ಕುಂದಗೋಳ್–ತಾಲ್ಲೂಕು ಕೇಂದ್ರ, ಧಾರವಾಡ ಜಿಲ್ಲೆ
ಬನಹಟ್ಟಿ	ಅದೇ	ಬನಹಟ್ಟಿ–ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನಲ್ಲಿದೆ.
ಸುಂಡಟ್ಟಿ	ಅದೇ	ಸೌಂದತ್ತಿ ಅದೇ
ಬೆಂಗಾಲ್	ಕೂನೂರು ತಾಲ್ಲೂಕು	ಬೆಂಕಾಲ್–ರಾಯಚೂರು ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿದೆ.
ಹೊಸಹಟ್ಟಿ	ಅದೇ	ಹೊಸಹಟ್ಟಿ–ಬಿಜಾಪುರ ಜಿಲ್ಲೆಯ ಬಿಜಾಪುರ ತಾಲ್ಲೂಕಿನಲ್ಲಿದೆ.

---

1. Robert Sewell : *A Forgotten Empire*, pp. 47-48

ಅರೆಹಟ್ಟಿ	ಅದೇ	ಅರಹಟ್ಟಿ–ಧಾರವಾಡ ಜಿಲ್ಲೆಯ ನವಿಲುಗುಂದ ತಾಲ್ಲೂಕಿನಲ್ಲಿದೆ.

ಮೇಲೆ ಕೊಟ್ಟಿರುವ ದೃಷ್ಟಾಂತದ ಪಟ್ಟಿ ಸಂಪೂರ್ಣವಾದುದಲ್ಲ. ಉತ್ತರ ಕರ್ನಾಟಕದ ಪ್ರದೇಶದಲ್ಲಿನ ಸ್ಥಳಗಳ ಹೆಸರಿಗೆ ಸರಿಹೊಂದುವ ಅಥವಾ ಅವನ್ನು ಹೋಲುವ ಸುಮಾರು ಐವತ್ತು ಸ್ಥಳಗಳನ್ನು ಈವರೆಗೆ ಗುರುತಿಸಲಾಗಿದೆ. ಬಡಗ ಗೌಡರ ಮೂಲಸ್ಥಾನ ಧಾರವಾಡ, ಬೆಳಗಾವಿ, ಬಿಜಾಪುರ ಮತ್ತು ರಾಯಚೂರು ಜಿಲ್ಲೆಗಳೆಂಬುದು ಮತ್ತು ಅವರು ಆ ನಂತರದ ಕಾಲದಲ್ಲಿ ಈ ಪ್ರದೇಶದಿಂದ ದಕ್ಷಿಣಕ್ಕೆ ಮುಖ್ಯವಾಗಿ ಶಿವಮೊಗ್ಗ, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳ ಪ್ರದೇಶಕ್ಕೆ ಹರಡಿರಬೇಕೆಂಬುದು ಈ ಅಧ್ಯಯನದಿಂದ ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಬಡಗನಾಡಿನ ಅಸ್ತಿತ್ವ

ಶಿವಮೊಗ್ಗ ಜಿಲ್ಲೆ ಮತ್ತು ಅದಕ್ಕೆ ಹೊಂದಿಕೊಂಡಿರುವ ಇತರ ಪ್ರದೇಶಗಳನ್ನೊಳಗೊಂಡ 'ಬಡಗನಾಡು' ಎಂಬ ಪ್ರತ್ಯೇಕ ನಾಡೊಂದು ಅಸ್ತಿತ್ವದಲ್ಲಿತ್ತೆಂಬುದು ಅದೇ ಜಿಲ್ಲೆಯಲ್ಲಿ ದೊರೆತಿರುವ ಮೂರು ಶಾಸನಗಳಿಂದ ಸ್ಥಿರಪಡುತ್ತದೆ.[1] ಶಿವಮೊಗ್ಗ ಜಿಲ್ಲೆಯ ಕಳೂರುಕಟ್ಟೆ ಹೋಬಳಿಯ ಪುಣಜೆಗ್ರಾಮದ ಶಾಸನದಲ್ಲಿ ಬಡಗನಾಡು ಸಾಂತಳಿಗೆ ಸಾಸಿರ ಪ್ರದೇಶದ ಒಂದು ಉಪವಿಭಾಗ (ಕಂಪಣ)ವಾಗಿತ್ತೆಂದು ಹೇಳಿದೆ ಮತ್ತು ಸಾಗರದ ೧೦೩ ಮತ್ತು ೧೦೫ನೆಯ ಶಾಸನಗಳು ಬಡಗನಾಡು–ಮೂವತ್ತು ಎಂಬ ಇನ್ನೊಂದು ವಿಭಾಗವನ್ನು ಉಲ್ಲೇಖಿಸುತ್ತವೆ. ಬಡಗನಾಡು ರಾಜ್ಯವು ಧಾರವಾಡ, ಶಿವಮೊಗ್ಗ, ಬಳ್ಳಾರಿ ಮತ್ತು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾದನಂತರ "ಅರಗ" ಪ್ರದೇಶವೆಂದು ಪರಿಚಿತವಾದ ಚಿತ್ರದುರ್ಗ ಜಿಲ್ಲೆಯ ಉತ್ತರ ಭಾಗಗಳನ್ನೊಳಗೊಂಡಿತ್ತೆಂದು ತೋರುತ್ತದೆ.

ಅರಸರು ಮತ್ತು ವೀರರು

ಅದೇ ಕಳೂರುಕಟ್ಟೆ ಹೋಬಳಿಯ ವರಕೋಡಿನ ಉಪಗ್ರಾಮ ಕೋಟೆಯ ಬಳಿ ಇರುವ ವೀರಗಲ್ಲಿನ ಮೇಲಿನ ಶಾಸನವೊಂದು (ಸಂಖ್ಯೆ ೭೧) ಕ್ರಿ.ಶ. ೧೨೯೬ರಲ್ಲಿ ಮುತ್ತೂರಿನ ಕದನದಲ್ಲಿ ಹೊಯ್ಸಳ ಅರಸ ಮುಮ್ಮಡಿ ಬಲ್ಲಾಳನ ಸೇನಾನಿ ಮಾಯಿದೇವನ ವಿರುದ್ಧ ಬೇಲನೆಂಬ ವೀರನು ದೇವರಸನ ಪರವಾಗಿ ಹೋರಾಡಿದುದನ್ನು ತಿಳಿಸುತ್ತದೆ. ಬಡಗನಾಡು ಹೊಯ್ಸಳ ಅರಸನಿಗೆ ಸೇರದೆ ಸ್ವತಂತ್ರವಾಗಿದ್ದಿರಬೇಕು ಮತ್ತು ದೇವರಸ ಅದರ ಅರಸನಿರಬೇಕು. ದೇವರಸನನ್ನು ಹತ್ತಿಕ್ಕಲು ಹೊಯ್ಸಳ ಬಲ್ಲಾಳ ಮಾಡಿದ ಪ್ರಯತ್ನಗಳ ಪರಿಣಾಮವಾಗಿ ಯುದ್ಧ ಸಂಭವಿಸಿ, ಅದರಲ್ಲಿ ಬೇಲ ದೇವರಸನ ಮುಖ್ಯ ಸೇನಾನಿಯಾಗಿ ಹೋರಾಡಿರಬೇಕು. ಈ ಶಾಸನವು ಬೇಲ ಮತ್ತು ಅವನ 'ಐವತ್ತೊಂದು' ವೀರ ಅನುಚರರ ಶೌರ್ಯ ಸಾಹಸಗಳನ್ನು ವಿವರವಾಗಿ ವರ್ಣಿಸುತ್ತದೆ. ಅಂತಿಮವಾಗಿ ಬೇಲ ಹೋರಾಡುತ್ತಲೇ ಮರಣಹೊಂದಿದ.

ಹೊಯ್ಸಳ ಇಮ್ಮಡಿ ಬಲ್ಲಾಳನ ಸೇನಾನಿಗಳಲ್ಲೊಬ್ಬನಾದ ಬೆಟ್ಟರಸನ ವಿರುದ್ಧದ ಹೋರಾಟದಲ್ಲಿ ಕೊಡಗಿನ ಚೆಂಗಾಳ್ವ ಪೆರ್ಮಾಡಿರಸನಿಗೆ[2] ಕ್ರಿ.ಶ. ೧೧೭೪ರಲ್ಲಿ "ಬಡಗನಾಡ ನಂದಿದೇವ ಉದಯಾದಿತ್ಯ ದೇವ"ನು (ಇಲ್ಲಿ ಪೂರ್ವಪದದಿಂದ ಈತ ಬಡಗನಾಡಿನಿಂದ ಬಂದವನೆಂಬುದು ಧ್ವನಿತವಾಗಿದೆ) ಸಹಾಯ ಮಾಡಿದನೆಂಬ ವಿಚಾರ ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಬಡಗನಾಡಿನ ಅಸ್ತಿತ್ವವನ್ನು ಸಮರ್ಥಿಸುತ್ತದೆ. ಅಲ್ಲದೆ ಪೋರ್ಚುಗೀಸ್ ಪ್ರವಾಸಿ ಹಾಗೂ ಇತಿಹಾಸಕಾರ ಕೌಟೋ ತನ್ನ ಡೆಕಡಾ VI ರಲ್ಲಿ ಬಿಜಾಪುರ 'ಬಡಗ'ರು ಒಬ್ಬರೆಂದು ತಿಳಿಸುವ ಉಲ್ಲೇಖದಿಂದ–ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾಗುವವರೆಗೆ, ಹದಿನಾಲ್ಕನೆಯ ಶತಮಾನದವರೆಗೂ, ಬಡಗನಾಡು ಸ್ವತಂತ್ರರಾಜ್ಯವಾಗಿತ್ತೆಂಬುದು ಸ್ಥಿರಪಡುತ್ತದೆ.

---

1. *MAR.*, 1931, No. 64 ; *EC.*, VIII Sa 103 and 105
2. *The Gazetteer of Coorg*, p. 51

ಕ್ರಿ.ಶ. ೧೫೫೬ರಲ್ಲಿ ಭಾರತಕ್ಕೆ ಬಂದ ಮತ್ತು "ಹೆಚ್ಚುಕಡಿಮೆ ತನ್ನದೇ ಜೀವಮಾನವನ್ನು ಭಾರತದಲ್ಲಿ" ಕಳೆದ ಕೌಟೋ ವಿಜಯನಗರ ಸಾಮ್ರಾಜ್ಯದ ಹುಟ್ಟು ಮತ್ತು ಬೆಳವಣಿಗೆಗಳ ಬಗ್ಗೆ ಆ ಕಾಲದ ಜನರಲ್ಲಿ ಪ್ರಚಲಿತವಿದ್ದ ಅನೇಕ ಸಂಪ್ರದಾಯಗಳನ್ನು ದಾಖಲಿಸಿ ಹೀಗೆ ಬರೆದಿದ್ದಾನೆ:[1]

"ಬೆಟ್ಟಗುಡ್ಡಗಳಲ್ಲಿ ತಪಸ್ವೀ ಜೀವನವನ್ನು ಮಾಧವ ನಡೆಸುತ್ತಿರುವಾಗಲೇ ಬುಕ್ಕನೆಂಬ ಬಡ ಕುರುಬನೊಬ್ಬ ಅವನಿಗೆ ಆಹಾರವನ್ನು ತಂದಿತ್ತು ಸತ್ಕರಿಸುತ್ತಿದ್ದ; ಒಂದು ದಿನ ಆ ಬ್ರಾಹ್ಮಣನು ಅವನಿಗೆ ಹೇಳಿದ: "ನೀನು ಅರಸನಾಗುವೆ ಹಾಗೂ ಅಖಿಲ ಇಂದುಸ್ತಾನದ ಸಾರ್ವಭೌಮನಾಗುವೆ" ಈ ಸಂಗತಿ ಇತರ ಕುರುಬರಿಗೆ ತಿಳಿದು ಅವರು ಈ ಕುರುಬನನ್ನು ಪೂಜ್ಯಭಾವದಿಂದ ಕಂಡರು ಮತ್ತು ತಮ್ಮ ನಾಯಕನನ್ನಾಗಿ ಮಾಡಿಕೊಂಡರು: ಆತ 'ಅರಸ'ನೆಂಬ ಹೆಸರನ್ನು ಗಳಿಸಿ ತನ್ನ ಐವರು ನೆರೆಯವರನ್ನು–ಕೆನರ, ತಲಿಗ, ಕಂಗಿವರಾವ್, ನೆಗಪತಾವ್ ಹಾಗೂ ಬಡಗ–ಗೆಲ್ಲಲಾರಂಭಿಸಿದ ಮತ್ತು ಕೊನೆಗೆ ಇವರೆಲ್ಲರ ಪ್ರಭುವಾಗಿ ತನ್ನನ್ನು 'ಬೋಕರಾವ್' ಎಂದು ಕರೆದುಕೊಂಡ. ಇವನ ಮೇಲೆ ದೆಹಲಿಯ ಅರಸನು ಆಕ್ರಮಣ ನಡೆಸಿದ: ಆದರೆ ಆತ ಸೋತು ಹಿಂದಿರುಗಬೇಕಾಯಿತು; ಅಲ್ಲಿಂದ ಮುಂದೆ ಬುಕ್ಕ ನಗರವೊಂದನ್ನು ಸ್ಥಾಪಿಸಿ ಅದನ್ನು ಬಿಸಜನಗರ್ ಎಂದು ಕರೆದ."[2]

ಹೊಯ್ಸಳ ಮುಮ್ಮಡಿ ಬಲ್ಲಾಳನ ಕಾಲದಲ್ಲಿ ದೇವರಸ ಬಡಗನಾಡಿನ ಅರಸನಾಗಿದ್ದಿರಬೇಕು. ದೇವರಸನಿಗಿಂತ ಹಿಂದೆ ಅನೇಕ ಅರಸರು ಬಡಗನಾಡನ್ನಾಳಿರಬೇಕು. ಕ್ರಿ.ಶ. ೧೩೪೬ರ ಶಾಸನವೊಂದು ಬುಕ್ಕ ಒಡೆಯನು ರಾಜ್ಯವಾಳಿದ ವಿಚಾರವನ್ನು ಮತ್ತು ನಾಗಣ್ಣನೆಂಬ ಮಂತ್ರಿ ಹಾಗೂ ದೇವರಾಜನೆಂಬ ಪ್ರಭು ಅರಗದ ಹದಿನೆಂಟು ಕಂಪಣ (ಉಪವಿಭಾಗ) ಮತ್ತು ಮೂರು ನಗರಗಳಲ್ಲಿನ ಮುಂದಾಳುಗಳ ಸಭೆಯೊಂದನ್ನು ಕರೆದ ವಿಚಾರವನ್ನು ತಿಳಿಸುತ್ತದೆ.[3] ವಿರುಪಣ್ಣ ಒಡೆಯನೆಂಬ ಇನ್ನೊಬ್ಬ ಅರಸನನ್ನು ಇದೇ ಶಾಸನ ಉಲ್ಲೇಖಿಸುತ್ತದೆ. ಬಹುಶಃ ಕ್ರಿ.ಶ. ೧೩೪೬ಕ್ಕೆ ಸ್ವಲ್ಪ ಮೊದಲು ಬುಕ್ಕಒಡೆಯನ ಆಳ್ವಿಕೆ ಕೊನೆಗೊಂಡು ಅದೇ ವರ್ಷ ವಿರುಪಣ್ಣ ಒಡೆಯನು ಬಡಗನಾಡಿನ ಅರಸನಾಗಿರಬಹುದು. ಬೆಂಗಳೂರಿನಿಂದ ೩೩ ಮೈಲು ದೂರ ರಾಮನಗರದ ಹೊರವಲಯದಲ್ಲಿರುವ ಈಸೂರಿನ ಕಲಿ ದೇವಾಲಯದ ಬಳಿ ಇರುವ ಕ್ರಿ.ಶ. ೧೩೨೭ರ ಶಿಲಾಶಾಸನವೊಂದು ಆ ಕಾಲದಲ್ಲಿ ವೀರ ಬುಕ್ಕಣ್ಣವೊಡೆಯ ರಾಜ್ಯವಾಳುತ್ತಿದ್ದುದನ್ನು ತಿಳಿಸುತ್ತದೆ.[4] ದೇವರಸನ ಮರಣಾನಂತರ ಕ್ರಿ.ಶ. ೧೩೪೩ರವರೆಗೂ ಮುಮ್ಮಡಿ ಬಲ್ಲಾಳನ ಸಾರ್ವಭೌಮತ್ವದಲ್ಲಿ ಸಂಗಮನ ಮಕ್ಕಳಾದ ಹಕ್ಕ–ಬುಕ್ಕರು ಆಳಿದರೆಂದು ಊಹಿಸುವುದು ಸಮಂಜಸವಾದುದು. ಮುಸ್ಲಿಮರ ಎಡೆಬಿಡದ ದಾಳಿಗಳ ಪರಿಣಾಮವಾಗಿ ತಮ್ಮವರಿಗೆ ಉಂಟಾದ ದಾರುಣ ಪರಿಸ್ಥಿತಿಯಿಂದ ಮನನೊಂದ ಮತ್ತು ತಮ್ಮ ಜನ ಹಾಗೂ ರಾಜ್ಯವನ್ನು ರಕ್ಷಿಸಿಕೊಳ್ಳುವಲ್ಲಿ ಹೊಯ್ಸಳ ಅರಸನ ಅಸಾಮರ್ಥ್ಯವನ್ನು ಚೆನ್ನಾಗಿ ಮನಗಂಡ ಈ ಸೋದರರಿಬ್ಬರು ಕಾರ್ಯಪ್ರವೃತ್ತರಾಗಲು ನಿರ್ಧರಿಸಿದರು ಮತ್ತು ಸ್ವಾತಂತ್ರ್ಯ ಘೋಷಿಸಿ ವೈಭವಯುತ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸುವಲ್ಲಿ ಬಹುಬೇಗನೆ ಕಾರ್ಯಪ್ರವೃತ್ತರಾದರು.

ಮಹಮದ್–ಬಿನ್–ತುಘಲಕ್‌ನಂಥ ಅಸಮಾನಕ್ರೌರ್ಯ ಹಾಗೂ ಧರ್ಮಾಂಧತೆಯುಳ್ಳ ಸುಲ್ತಾನನ ಅಧಿಕಾರವನ್ನು ವಿರೋಧಿಸಿ, ಮುಸ್ಲಿಂ ರಾಜಪ್ರತಿನಿಧಿಗಳನ್ನು ಹೊರದೂಡಿ ತಮ್ಮ

---

1. *A Forgotten Empire*, p. 21

2. *Ibid.* ಕೌಟೋನ ಹೇಳಿಕೆಯನ್ನು ಸಿವೆಲ್ ಉದ್ಧರಿಸಿದ್ದಾನೆ. ಕಂಗಿವರಾವ್ ಕಾಂಚೀಪುರವನ್ನು, ನೆಗಪತಾವ್ ನಾಗಪಟ್ಟಣವನ್ನು ಮತ್ತು ಕೆನರ ಮತ್ತು ತಲಿಗರು ಕ್ರಮವಾಗಿ ಕನ್ನಡಿಗ ಮತ್ತು ತೆಲುಗರನ್ನೂ ಸೂಚಿಸುತ್ತವೆ.

3. *EC.*, VIII Tl 197

4. ಈ ಶಾಸನವನ್ನು ರಾಮನಗರದ ಜೂನಿಯರ್ ಕಾಲೇಜಿನ ಅಧ್ಯಾಪಕರ ತಂಡವೊಂದು ಕಂಡುಹಿಡಿಯಿತೆಂದು 1976 ಏಪ್ರಿಲ್ 21ರ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಸ್ವಾತಂತ್ರ್ಯವನ್ನು ಘೋಷಿಸಿದ ಈ ಇಬ್ಬರು ಸೋದರರು ನಿಜವಾಗಿಯೂ 'ಅಸಾಧಾರಣ' ಸಾಮರ್ಥ್ಯವುಳ್ಳವರಾಗಿರಲೇಬೇಕು. ರಾಬರ್ಟ್ ಸಿವೆಲ್ಲರ ಮಾತುಗಳಲ್ಲಿ ಹೇಳುವುದಾದರೆ "ಅಖಿಲ ಭಾರತವನ್ನು ಜಯಿಸಬೇಕೆಂದು ಮಹಮ್ಮದೀಯರು ನಡೆಸಿದ ಪಟ್ಟುಬಿಡದ ಪ್ರಯತ್ನಗಳ ಪರಿಣಾಮವದು. ಈ ಘೋರ ದಾಳಿಕಾರರು ಕೃಷ್ಣಾನದಿಯನ್ನು ತಲುಪಿದಾಗ, ದಕ್ಷಿಣಕ್ಕಿದ್ದ ಹಿಂದೂಗಳು ಭೀತಿಯುಕ್ತರಾಗಿ ರಕ್ಷಣೆಯ ಕೊಂಚ ಭರವಸೆಯನ್ನು ಮೂಡಿಸಿದಂತೆ ತೋರುವ ಇದೊಂದೆ ಹೊಸ ಸಂಸ್ಥಾನಕ್ಕೆ ತ್ವರೆಯಿಂದ ಬಂದು ಸೇರಿದರು. ಕ್ಷೀಣಿಸುತ್ತಿದ್ದ ಹಳೆಯ ರಾಜ್ಯಗಳು ಹೆಸರಿಲ್ಲದಂತೆ ನಾಶವಾದುವು ಮತ್ತು ವಿಜಯನಗರದ ಹೋರಾಟದ ಅರಸರು ಎರಡೂವರೆ ಶತಮಾನಗಳತನಕ ದಕ್ಷಿಣ ದೇಶದ ಸಂರಕ್ಷಕರಾದರು."[1]

ಮೊದಲ ವಲಸೆ

ಮುಸ್ಲಿಂ ದಾಳಿಗಳ ಪರಿಣಾಮವಾಗಿ ಪೂರ್ವಜರು ಮೈಸೂರು ದೇಶದಿಂದ–ನಿರ್ದಿಷ್ಟ ಸ್ಥಳಗಳೆಂದರೆ ತಾಯೂರು, ತಗಡೂರು, ಉಮ್ಮತ್ತೂರು, ಸರಗೂರು, ಉರಿಗದ್ದಿಗೆ, ತಲೆಮಲೈ ಬೆಟ್ಟಗಳು ಮತ್ತು ಈಸೂರು–ಓಡಿಹೋದವರೆಂದು ಜನರಲ್ಲಿ ಪ್ರತೀತಿ ಇದೆ. ಇವುಗಳಲ್ಲಿ ಮೊದಲ ಐದು ಸ್ಥಳಗಳು ಮೈಸೂರು ಜಿಲ್ಲೆಯಲ್ಲಿವೆ. (ತಾಯೂರು, ತಗಡೂರು ಹಾಗೂ ಸರಗೂರು ನಂಜನಗೂಡು ತಾಲ್ಲೂಕಿನಲ್ಲಿ ಉಮ್ಮತ್ತೂರು ಚಾಮರಾಜನಗರ ತಾಲ್ಲೂಕಿನಲ್ಲಿ ಮತ್ತು ಉರಿಗದ್ದಿಗೆ ಕೊಳ್ಳೇಗಾಲ ತಾಲ್ಲೂಕಿನಲ್ಲಿವೆ.) ಈಸೂರು ಬೆಂಗಳೂರು ಜಿಲ್ಲೆಯಲ್ಲಿದ್ದು ಬೆಂಗಳೂರಿನಿಂದ ೨೩ ಮೈಲು ದೂರದಲ್ಲಿದೆ. ಹಾಗೂ ತಲೆಮಲೈ ಬೆಟ್ಟಗಳು ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೂಕಿನ ಗಡಿ ಪ್ರದೇಶದಲ್ಲಿ ಕೊಯಮುತ್ತೂರು ಜಿಲ್ಲೆಯ ತಾಳವಾಡಿ ಫಿರ್ಕಾಕ್ಕೆ ಸೇರಿವೆ. ಆದರೆ, ಈಗಾಗಲೇ ಗಮನಿಸಿರುವಂತೆ ಬಡಗಗೌಡರ ಮೂಲಸ್ಥಾನ ಧಾರವಾಡ, ಬೆಳಗಾವಿ, ವಿಜಾಪುರ ಜಿಲ್ಲೆ, ಇತ್ಯಾದಿ–ಎಲ್ಲ ಉತ್ತರ ಕರ್ನಾಟಕದಲ್ಲಿವೆ–ಎನ್ನುವುದು ಸ್ವಲ್ಪವೂ ಸಂದೇಹವಿಲ್ಲದಂತೆ ಸ್ಥಾಪಿತವಾಗಿದೆ. ಆದ್ದರಿಂದ ಪರಂಪರೆ ತಿಳಿಸುವ ತಾಯೂರು, ತಗಡೂರು, ಉಮ್ಮತ್ತೂರು, ಉರಿಗದ್ದಿಗೆ ಮುಂತಾದವು ಪೂರ್ವಜರು ಉತ್ತರ ಕರ್ನಾಟಕದ ಮೂಲಸ್ಥಾನಗಳಿಂದ ವಲಸೆ ಬಂದ ಸ್ಥಳಗಳಾಗಿವೆ ಮತ್ತು ಮುಂದೆ ಚರ್ಚಿಸಲಾಗುವ, ಅನಂತರದ ದುರ್ದೈವಕ್ಕೀಡಾದ ಪರಿಣಾಮವಾಗಿ ಅವರು ಅಂತಿಮವಾಗಿ ನೀಲಗಿರಿಗೆ ಓಡಿಹೋಗುವುದಕ್ಕೆ ಮೊದಲು ಗಮನಾರ್ಹ ಕಾಲದವರೆಗೆ ಈ ಸ್ಥಳಗಳಲ್ಲಿ ನೆಲಸಿದರು.

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿನ ತಮ್ಮ ಮೂಲಸ್ಥಾನಗಳಿಂದ ಈ ಪೂರ್ವಜರ ಮೊದಲ ವಲಸೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಮುನ್ನವೇ ಆಗಿತ್ತೆಂಬುದು ಸ್ಪಷ್ಟ. ಕ್ರಿ.ಶ. ೧೩೦೭ರಲ್ಲಿ ಮಲ್ಲಿಕಾಫರ್ ದೇವಗಿರಿಯನ್ನಾಕ್ರಮಿಸಿ "ಇಡೀ ದೇಶವನ್ನು ಹಾಳುಗೆಡವಿ, ಬಹಳಷ್ಟು ಸಂಪತ್ತನ್ನು ಸೂರೆಗೊಂಡ"[2] ಹಾಗೂ "ತನ್ನ ಪ್ರಭುವಿನ ಹೆಸರಿನಲ್ಲಿ ರಾಜ್ಯವನ್ನು ಕೈವಶಮಾಡಿಕೊಂಡು ರಾಮದೇವ ಮತ್ತು ಅವನ ಕುಟುಂಬದವರನ್ನು ಸೆರೆಹಿಡಿದು ದೆಹಲಿಗೆ ಒಯ್ದ"[3] ಕಾಲದಲ್ಲಿ ಅಥವಾ ಕ್ರಿ.ಶ. ೧೩೨೭ರಲ್ಲಿ "೬೦೦೦೦ ಅಶ್ವಾರೋಹಿಗಳು ಮತ್ತು ಅಸಂಖ್ಯಾತ ಪದಾತಿಗಳನ್ನೊಳಗೊಂಡ ಭಾರೀ ಸೈನ್ಯದೊಂದಿಗೆ"[4] ಮಹಮದ್–ಬಿನ್–ತುಘಲಕ್ ಕಂಪಿಲಿ ರಾಜ್ಯದ ಮೇಲೆ ದಾಳಿಮಾಡಿ ಅರಸ, ಅವನ ವೀರಪುತ್ರ ರಾಮನಾಥ ಹಾಗೂ ಅವರ ಪತ್ನಿ ಪುತ್ರರೆಲ್ಲರೂ ಸೇರಿದಂತೆ ೫೦೦೦ ಜನರನ್ನು ಹತ್ಯೆಗೈದ ಪರಿಣಾಮವಾಗಿ

1. *A Forgotten Empire*
2. R. C. Majumdar, H. C. Raychaudhuri and K. Datta : *An Advanced History of India*, p. 304
3. *A History of South India*
4. Chronicle of Nuniz (Vide : *A Forgotten Empire*, p. 282)

ಈ ವಲಸೆ ಉಂಟಾಗಿರಬೇಕು. (ನೋಡಿ ಅಡಿ ಟಿಪ್ಪಣಿ)[1]. ಈ ದಾಳಿಗಳ ಪರಿಣಾಮವಾಗಿ ಸಹಸ್ರಾರು ಹಾಗೂ ಲಕ್ಷಾಂತರ ಮಂದಿ ತಮ್ಮ ಮನೆಮಠಗಳನ್ನು ತೊರೆದು ಲೆಕ್ಕವಿಲ್ಲದ ಕಷ್ಟನೋವುಗಳನ್ನೆದುರಿಸಬೇಕಾದ ಇಂಥ ಪರಿಸ್ಥಿತಿಯಲ್ಲಿ ನೀಲಗಿರಿಯ ಬಡಗಗೌಡರ ಪೂರ್ವಿಕರು ತಮ್ಮ ಮನೆಮಠಗಳನ್ನು ಶಾಶ್ವತವಾಗಿ ತ್ಯಜಿಸಿ ಆಶ್ರಯವನ್ನರಸಿ ಹೊರಟದ್ದು.

ತಮ್ಮ ಮನೆಮಠಗಳನ್ನು ತೊರೆದು ಓಡಿಬರುವಾಗ ಇವರು ಎರಡು ಗುಂಪುಗಳಾಗಿ ಬೇರೆಯಾದಂತೆ ತೋರುತ್ತದೆ–ಒಂದು ಗುಂಪು ತಾಯೂರು. ತಗಡೂರು. ಉಮ್ಮತ್ತೂರು. ಉರಿಗದ್ದಿಗೆ ಇತ್ಯಾದಿ ಪರಂಪರೆ ತಿಳಿಸುವ ಸ್ಥಳಗಳಿಗೆ ಹೋಗಿ ನೆಲಸಿತು; ಮತ್ತೊಂದು ಗುಂಪು ನೀಲಗಿರಿ ಬೆಟ್ಟಗಳತ್ತ ಸಾಗಿ ಬೆಟ್ಟದ ಬುಡ ಹಾಗೂ ಮೋಯಾರ್ ನದಿಯ ನಡುವಣ ಉತ್ತರ ಬಯಲು ಪ್ರದೇಶಗಳಲ್ಲಿ ನೆಲಸಿ. ಅಲ್ಲಿ ಬೊಕ್ಕಾಪುರ. ಮಸಿನಗುಡಿ. ಹೊಸೂರು. ಕಿತ್ತೂರು. ಹಲಸಿನ ಮರಹಟ್ಟಿ. ಸಿರಿಯೂರು ಹಾಗೂ ಹುಲ್ಲಿಂಗೂರು ಎಂದು ಪರಿಚಿತವಾದ ಬೀಡುಗಳನ್ನು ಸ್ಥಾಪಿಸಿತು: ಈ ಬೀಡುಗಳಿಗೆ ಅವರು ತಮ್ಮ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿನ ಸ್ಥಳಗಳ ಹೆಸರುಗಳನ್ನೇ ಇಟ್ಟರೆಂಬುದು ಸ್ಪಷ್ಟ. ಮುಸ್ಲಿಂ ದಾಳಿಗಳಿಂದಾಗಿ ಬಲವಂತವಾಗಿ ಓಡಿಬರಬೇಕಾದ ಬಡಗಗೌಡರ ಪೂರ್ವಜರು ಸಹಜವಾಗಿಯೆ ತಮ್ಮ ಮನೆಮಠಗಳ ನೆನಪುಗಳನ್ನು ಬಯಸಿದವರಾದ್ದರಿಂದ ತಮ್ಮ ಹೊಸ ನೆಲೆವೀಡುಗಳಿಗೆ ತಮ್ಮ ಮೂಲಸ್ಥಳಗಳ ಹೆಸರುಗಳನ್ನೇ ಇಟ್ಟರು. ಬಂಕಾಪುರ (ನೀಲಗಿರಿಯಲ್ಲಿ ಬೊಕ್ಕಾಪುರ ಎಂದು ಕರೆಯುತ್ತಾರೆ). ಹೊಸೂರು. ಕಿತ್ತೂರು ಹಾಗೂ ಹುಲ್ಲಿಂಗೂರು (ನೀಲಗಿರಿಯಲ್ಲಿ ಹುಲ್ಲಿಂಗೂರು ಎಂದು ಕರೆಯುತ್ತಾರೆ)–ಈ ಸ್ಥಳಗಳೆಲ್ಲ ಧಾರವಾಡ ಜಿಲ್ಲೆಯಲ್ಲಿ ಕಂಡುಬರುವವೆ. ಸಿರೂರು (ನೀಲಗಿರಿಯಲ್ಲಿ ಸಿರಿಯೂರು ಎಂದು ಕರೆಯುತ್ತಾರೆ) ಬಿಜಾಪುರ ಜಿಲ್ಲೆಯಲ್ಲಿ ಕಾಣಸಿಗುತ್ತದೆ.

ದೂರವನ್ನು ಕ್ರಮಿಸಿದುದು

ಈ ಜನ ವಲಸೆ ಬಂದ ಮೂಲಸ್ಥಳಗಳಲ್ಲಿ ಅತ್ಯಂತ ಉತ್ತರಕ್ಕಿರುವ ಸ್ಥಳವೆಂದರೆ ಬೆಳಗಾವಿ ಜಿಲ್ಲೆಯ ಉತ್ತರ ತುದಿಯಲ್ಲಿ ಮಹಾರಾಷ್ಟ್ರ ರಾಜ್ಯದ ಗಡಿಪ್ರದೇಶಕ್ಕೆ ಹೊಂದಿಕೊಂಡಂತಿರುವ ಅಥಣಿ. ಇಲ್ಲಿಂದ ನೀಲಗಿರಿ ಬೆಟ್ಟಗಳ ಬುಡದಲ್ಲಿರುವ ಬೊಕ್ಕಾಪುರ ಮತ್ತು ಮೈಸೂರು ಜಿಲ್ಲೆಯ ಚಾಮರಾಜನಗರಕ್ಕೆ ನೇರ ನೇರಗೆರೆಯೊಂದನ್ನು ಎಳೆದರೆ ಈ ಸ್ಥಳಗಳ ನಡುವಣ ದೂರ ೫೦೦ ಕಿಲೋಮೀಟರುಗಳಾಗುತ್ತದೆ. ಇದೇ ರೀತಿಯಲ್ಲಿ ಬೆಳಗಾವಿ ಮತ್ತು ಬಿಜಾಪುರದ ಮಧ್ಯದಿಂದ ಎಳೆದರೆ ಆಗುವ ದೂರ ೫೫೦ ಕಿಲೋಮೀಟರುಗಳು ಮತ್ತು ಧಾರವಾಡದ ಮಧ್ಯದಿಂದ ಎಳೆದರೆ ೪೦೦ ಕಿಲೋಮೀಟರುಗಳು. ಹೀಗೆ ಈ ಜನರು ತಮ್ಮ ವಲಸೆಯಲ್ಲಿ ಕ್ರಮಿಸಿದ ಕನಿಷ್ಠ ದೂರ ಹಾಗೂ ನೇರವಾದ ಗೆರೆಯಂತೆ ಬರಲು ಸಾಧ್ಯವೇ ಇಲ್ಲವಾದ್ದರಿಂದ ಗರಿಷ್ಠದೂರ ೫೦೦ ಕಿಲೋಮೀಟರುಗಳಿಗೂ ಹೆಚ್ಚು.

ಬೊಕ್ಕಾಪುರ. ಹೊಸೂರು. ಕಿತ್ತೂರು. ಹುಲ್ಲಿಂಗೂರು ಮತ್ತು ಸಿರಿಯೂರು ಮುಂತಾದ ಸ್ಥಳಗಳು ನಿರಾಶ್ರಿತ ಬಡಗಗೌಡರು ಸ್ಥಾಪಿಸಿದುವಾದರೆ ಮೈಸೂರು ಜಿಲ್ಲೆಯ ನಂಜನಗೂಡು. ಚಾಮರಾಜನಗರ ಹಾಗೂ ಕೊಳ್ಳೇಗಾಲದ ಸ್ಥಳಗಳು–ತಾಯೂರು. ತಗಡೂರು. ಉಮ್ಮತ್ತೂರು. ಉರಿಗದ್ದಿಗೆ. ಇತ್ಯಾದಿ–ಮತ್ತು ಈಸೂರು ಹಾಗೂ ತಲಮಲೈ ಬೆಟ್ಟಗಳು ನಿರಾಶ್ರಿತರಾಗಿ ಬಂದ ಈ ಜನ ನಿರ್ಮಿಸಿದಂತೆ ತೋರುವುದಿಲ್ಲ. ಏಕೆಂದರೆ ಶತಮಾನಗಳ ಹಿಂದೆಯೆ ನೀಲಗಿರಿಯೂ ಸೇರಿದಂತೆ ಕರ್ನಾಟಕದ ಇತರ ಜಿಲ್ಲೆಗಳಲ್ಲೂ ಹರಡಿದ್ದ ಜನರಂತೆ ಇದೇ ಜನಾಂಗದ ಗೌಡರು ಈ ಸ್ಥಳಗಳನ್ನು ಮೊದಲೇ ಕಟ್ಟಿದ್ದರು. ನಿರಾಶ್ರಿತ ಬಡಗಗೌಡರು ಈ ಪ್ರದೇಶಕ್ಕೆ ಬರುವುದಕ್ಕೆ ಮುನ್ನವೇ ಬಡಗಗೌಡರ

---

1. ಕ್ರಿ. ಶ. ೧೩೧೮ರಲ್ಲಿ ಮಲ್ಲಿಕಾಫರ್ ದೇವಗಿರಿರಾಜ್ಯಕ್ಕೆ ಮುತ್ತಿಗೆ ಹಾಕಿ ಅದನ್ನು ದೆಹಲಿ ಸಾಮ್ರಾಜ್ಯಕ್ಕೆ ಸೇರಿಸಿದಾಗ "ಯಾದವ ರಾಜ್ಯದ ಹಲವಾರು ಪ್ರದೇಶಗಳು ಹೊಸ ಅಧಿಕಾರಕ್ಕೆ ತಲೆ ಬಾಗಲಿಲ್ಲ ಮತ್ತು ಕಂಪಿಲಿರಾಜ್ಯ ಸಿಂಗೆಯನಾಯಕನ ನೇತೃತ್ವದಲ್ಲಿ ತನ್ನ ಸ್ವಾತಂತ್ರ್ಯ ಘೋಷಿಸಿತು ......ಈ ಹೊಸರಾಜ್ಯಕ್ಕೆ ಈಗಿನ ಬಳ್ಳಾರಿ ರಾಯಚೂರು ಮತ್ತು ಧಾರವಾಡ ಜಿಲೆಗಳು ಸೇರಿದವು."

ಅನೇಕ ಬೀಡುಗಳು ಅಸ್ತಿತ್ವದಲ್ಲಿದ್ದವೆಂಬುದು ಹಲವಾರು ಶಾಸನಗಳಿಂದ ಸ್ಥಿರಪಟ್ಟಿದೆ.

ದಣ್ಣಾಯಕರು

ದೆಹಲಿಯ ಮುಸಲ್ಮಾನರು ಹೊಯ್ಸಳ ವಂಶದಾಳ್ವಿಕೆಯನ್ನು ಕೊನೆಗಾಣಿಸಿದಾಗ ಮತ್ತು ಕ್ರಿ.ಶ. ೧೩೧೦ರಲ್ಲಿ ಅರಸ ಓಡಿಹೋದಾಗ "ನೀಲಗಿರಿಯ ಮೇಲಿನ ಅಧಿಕಾರವು ಹೊಯ್ಸಳರ ಪ್ರಧಾನನಾಗಿದ್ದ ಪೆರುಮಾಳದೇವ ದಣ್ಣಾಯಕನ ಮಗ ಮತ್ತು 'ನೀಲಗಿರಿಸಾಧಾರ' ಎಂಬ ಬಿರುದನ್ನು ಧರಿಸಿದ ಈ ಪ್ರಸ್ಥಭೂಮಿಯಿಂದ ಸರಿಯಾಗಿ ಉತ್ತರಕ್ಕಿರುವ ಈಗಿನ ಗುಂಡ್ಲುಪೇಟೆ ತಾಲ್ಲೂಕಿನ ತೆರಕಣಾಂಬಿಯಿಂದ ಕ್ರಿ.ಶ. ೧೩೪೦ರವರೆಗೂ ಆಳಿದ ಮಾಧವ ದಣ್ಣಾಯಕನಿಗೆ ಸಂದಿರಬೇಕೆಂದು ತೋರುತ್ತದೆ" ಎಂದು 'ದಿ ಗೆಜೆಟಿಯರ್ ಆಫ್ ದಿ ನೀಲಗಿರಿಸ್' ತಿಳಿಸುತ್ತದೆ. ಮಾಧವನ ನಂತರ ಅವನ ಮಗ ಅಧಿಕಾರಕ್ಕೆ ಬಂದ. ಮೋಯಾರ್ ಮತ್ತು ಭವಾನಿ ನದಿಗಳ ಸಂಗಮದ ಬಳಿ ದಣ್ಣಾಯಕನ್ ಕೊಟ್ಟೈ ಎಂಬ ಬೇಚಿರಾಕ್ ಗ್ರಾಮದ ವಿಷ್ಣು ದೇವಾಲಯದಲ್ಲಿರುವ ಇವನ ಕಾಲದ ಶಾಸನವೊಂದು ಈ ಸ್ಥಳವನ್ನು 'ನೀಲಗಿರಿ ಸಾದರನ್ ಕೊಟ್ಟೈ' ಅಥವಾ 'ನೀಲಗಿರಿಯನ್ನು ಸ್ವಾಧೀನ ಪಡಿಸಿಕೊಂಡವನ ಕೋಟೆ' ಎಂದು ಕರೆಯುತ್ತದೆ. ದಣ್ಣಾಯಕನ್ ಕೊಟ್ಟೈ ಎಂಬ ಈಗಿನ ಹೆಸರು ಈ ದಣ್ಣಾಯಕ ವಂಶದ ಗೌರವಾರ್ಥವಾಗಿ ಬಂದಿರಬೇಕೆಂಬುದು ನಿಸ್ಸಂಶಯ.[1]

ಮಾಧವ ದಣ್ಣಾಯಕನ ಮಗ ಮತ್ತು ಹೊಯ್ಸಳ ಸೇನಾನಿಯಾದ ಕೇತಯ್ಯ ದಣ್ಣಾಯಕ ತೆರಕಣಾಂಬಿಯಿಂದ ಆಳುತ್ತಿದ್ದ, ಪೂರ್ವದಲ್ಲಿ ಸತ್ಯಮಂಗಲದಿಂದ ಹಿಡಿದು ದಕ್ಷಿಣ ಕನ್ನಡ ಜಿಲ್ಲೆಯ ಬಿಸಲೆ ಘಾಟಿಯವರೆಗೆ ಜೈತ್ರಯಾತ್ರೆ ಕೈಗೊಂಡ ವಿಷಯವನ್ನು 'ದಿ ಗೆಜೆಟಿಯರ್ ಆಫ್ ದಿ ಕೂರ್ಗ್' ತಿಳಿಸುತ್ತದೆ.[2]

'ದಿ ಗೆಜೆಟಿಯರ್ ಆಫ್ ದಿ ಕೂರ್ಗ್' ಉಲ್ಲೇಖಿಸುವ ಈ ಕೇತಯ್ಯ ದಣ್ಣಾಯಕನು[3] 'ದಿ ಗೆಜೆಟಿಯರ್ ಆಫ್ ದಿ ನೀಲಗಿರಿಸ್'ನಲ್ಲಿ ಉಲ್ಲೇಖಿಸಿರುವ (ನೀಲಗಿರಿ ಸಾಧಾರ) ಮಾಧವ ದಣ್ಣಾಯಕನ ಮಗನೆಂಬುದು ಮತ್ತು ಬಡಗಗೌಡರ ಈ ವಂಶವು ಮೈಸೂರು ಜಿಲ್ಲೆಯ ದಕ್ಷಿಣಭಾಗ, ನೀಲಗಿರಿ ಹಾಗೂ ಸತ್ಯಮಂಗಲದವರೆಗಿನ ಪೂರ್ವದ ಬಯಲು ಪ್ರದೇಶವನ್ನೊಳಗೊಂಡ ಸಂಸ್ಥಾನವೊಂದನ್ನು ಸ್ಥಾಪಿಸಿ ತೆರಕಣಾಂಬಿಯಿಂದ ಆಳುವಷ್ಟು ಪ್ರಬಲವಾಯಿತೆಂಬುದು ಮೇಲಿನ ಅಂಶಗಳಿಂದ ಸ್ಪಷ್ಟಪಡುತ್ತದೆ. ೧೩೪೩ರಲ್ಲಿ ಮುಮ್ಮಡಿ ಬಲ್ಲಾಳ ಮರಣ ಹೊಂದುವವರೆಗೂ ಪ್ರಾಯಃ ಇವರು ಹೊಯ್ಸಳ ಅರಸರ ಸಾಮಂತರಾಗಿದ್ದರು ಮತ್ತು ಅನಂತರ ವಿಜಯನಗರದ ಸಾಮ್ರಾಜ್ಯದ ರಾಜಪ್ರತಿನಿಧಿಗಳಾಗಿ ಕಾರ್ಯ ನಿರ್ವಹಿಸಿದರು. ಈಗ ಭವಾನಿಸಾಗರ ಅಣೆಕಟ್ಟಿನಿಂದಾಗಿ ಮುಳುಗಿಹೋಗಿರುವ ದಣ್ಣಾಯಕ ಕೋಟೆಯ ದುರ್ಗದಲ್ಲಿ ಇವರು ತಮ್ಮ ಸೈನ್ಯದ ಭಾಗವೊಂದನ್ನು ಇಟ್ಟಿದ್ದರು.

ನೀಲಗಿರಿಯ ಅಧಿಪತಿಗಳು

ಕ್ರಿ.ಶ. ೧೧೧೭ಕ್ಕೆ ಸೇರುವ ಬಾಗಳಿ ಶಾಸನ (ಸಂಖ್ಯೆ ೧೧೭) ಬಡಗಗೌಡರು ನೀಲಗಿರಿಗೆ ಸ್ಥಾಪಿಸಿದ್ದರೆಂದು ಮತ್ತು ಅವರು ಎರಡು ಪಾಳೆಯಪಟ್ಟುಗಳನ್ನು ಸ್ಥಾಪಿಸಿದ್ದರೆಂದು ಈ ಪಾಳೆಯ ಪಟ್ಟುಗಳಲ್ಲೊಂದು ಕಾಲ ಎಂಬುವನಾಳುತ್ತಿದ್ದ 'ಕೊಳ್ಳಲ್ಲಿ' (ಈಗ ಕೊಕಲ್ಲು ಎನ್ನುತ್ತಾರೆ) ಎಂಬಲ್ಲಿ ಮತ್ತೊಂದು ನಿರ್ಗುಂದ ನಾಡಿನಲ್ಲಿದ್ದವು (ಕೋತಗಿರಿಯ ಬಳಿ ನಿರ್ಗುಂದಿ ಎಂದು ಈಗ ಪರಿಚಿತವಾಗಿರುವ ಸ್ಥಳವೆಂದು ಗುರುತಿಸಿದೆ): ಇಲ್ಲಿಯ ಅರಸನ ಹೆಸರನ್ನು ಉಲ್ಲೇಖಿಸಿಲ್ಲ–ಸಾರುತ್ತದೆ.[4] ಎಡೆನಾಡು ಮತ್ತು ಓರಿಯ

---

1. *The Gazetteer of the Nilagiris*, p. 91
2. *The Gazetteer of Coorg*, p. 51
3. ದಣ್ಣಾಯಕ ಅಥವಾ ದಂಡನಾಯಕನೆಂದರೆ ಸೇನಾನಿ ಎಂದರ್ಥ. ಈ ವಂಶದವರು ಹೊಯ್ಸಳ ಅರಸರ ಕೈಕೆಳಗೆ ಸಮರ್ಥಸೇನಾನಿಗಳೆಂದು ಹೆಸರು ಗಳಿಸಿದ್ದರು.
4. *EC.*, IV (1975) Ch. 117.

ನಾಡಿನ ಅರಸನ ಅಪ್ಪಣೆಯ ಮೇರೆಗೆ ನಿರ್ಗುಂದನಾದ ಅಧಿಪ ನೀಲಗಿರಿಕೋಟೆ ಅಂಚಿನಲ್ಲಿದ್ದ (ಇದು ದಣ್ಣಾಯಕನ್ ಕೋಟ್ಟೈಯನ್ನು ಸೂಚಿಸುತ್ತದೆ) ಕೊಳ್ಳಲು ಕೋಟೆಗೆ ಮುತ್ತಿಗೆ ಹಾಕಿ, ಕೋಟೆಯ ನಾಯಕನ ಮಗನನ್ನು ಕೊಂದು, (ಅರಸ ಕಾಲನ ಮಗ) ತನ್ನನ್ನೆದುರಿಸಿದ ಶತ್ರು ಸೈನ್ಯದೊಡನೆ ಹೋರಾಡಿ ತನ್ನ ಶೌರ್ಯ ಸಾಹಸಗಳಿಂದ ಅವರನ್ನು ನಾಶಮಾಡಿ ವೀರಸ್ವರ್ಗವನ್ನೇರಿದ. ಈ ಹೋರಾಟದಲ್ಲಿ ಕಾಲನು ತನ್ನ ಮಗನನ್ನು ಕಳೆದುಕೊಂಡರೂ ನಿರುಗುಂದನಾದ ಅಧಿಪನನ್ನು ಕೊಂದು ಹಾಕಿದನೆಂಬುದು ಇದರಿಂದ ಸ್ಪಷ್ಟಪಡುತ್ತದೆ. ಆದರೆ ಕ್ರಿ.ಶ. ೧೧೪೧ರಲ್ಲಿ ಹೊಯ್ಸಳ ಅರಸ ನರಸಿಂಹನ ಸೇನಾನಿಯೊಬ್ಬ ಕಾಲನನ್ನು ಕೊಂದ ಸಂಗತಿ ಕ್ರಿ.ಶ. ೧೧೪೧ರ ಇನ್ನೊಂದು ಶಾಸನದಲ್ಲಿ ಹೇಳಿದೆ.

ನೀಲಗಿರಿ ಬೆಟ್ಟಗಳ ಬುಡದ ಉತ್ತರ ಬಯಲು ಪ್ರದೇಶವನ್ನು ಕಾಮರಾಯ ಮಸಣಗುಡಿಯಿಂದ ಐದು ಕಿಲೋಮೀಟರು ದೂರದಲ್ಲಿರುವ ಹೊಸೂರನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದನೆಂದು ಪರಂಪರೆಯು ತಿಳಿಸುತ್ತದೆ. ಅಲ್ಲಿ 'ಸಿಮ್ಮನಾಥ ಗುಡಿ' (ಇದು ಸೋಮನಾಥ ಎಂಬುದರ ವಿಕೃತ ರೂಪವೆಂಬುದು ಸ್ಪಷ್ಟ) ಎಂದು ಅಲ್ಲಿಯ ಜನ ಕರೆಯುವ ಹಾಳು ದೇವಾಲಯವನ್ನು ಈ ಅಧಿಪ ಕಾಮರಾಯನೇ ಕಟ್ಟಿಸಿರಬಹುದು. ಹಾಗೆಯೇ ಅಲ್ಲಿತ್ತೆಂದು 'ದಿ ಗೆಜೆಟಿಯರ್ ಆಫ್ ದಿ ನೀಲಗಿರಿಸ್'ನಲ್ಲಿ ಹೇಳಲಾದ ಆದರೆ ಈಗ ಕಾಣಬರುವ ಮಣ್ಣಿನ ಕೋಟೆಯನ್ನೂ ಈ ಕಾಮರಾಯನೇ ಕಟ್ಟಿಸಿರಬಹುದು.

ಹೊಸೂರಿನಿಂದ ಆರು ಮೈಲು ಪೂರ್ವಕ್ಕಿರುವ ಹುಲ್ಲಂಗೂರಿನ ಬೇಡನಾಯಕ ಗುರುನಾಯ್ಕನ ಪೂರ್ವಜರು ಸಹ (ಧಾರವಾಡ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಗ್ರಾಮ) ಹುಲಗೂರಿನಿಂದ ಓಡಿ ಬಂದವರೇ: ಈತ ಕಾಮರಾಯನ ಸುಂದರ ಮಗಳಾದ ಕಾವೇರಿಯನ್ನು ಅಪಹರಿಸಿಕೊಂಡು ಹೋದ ಪರಿಣಾಮವಾಗಿ ಇವರಿಬ್ಬರ ನಡುವೆ ಹೋರಾಟ ಸಂಭವಿಸಿತು. ಬೇಡನಾಯಕನು ಕಾಮರಾಯ ಹಾಗೂ ಅವನ ಮಗ ಭೀಮರಾಯರಿಬ್ಬರನ್ನೂ ಕೊಂದನೆಂದು ಹೇಳಲಾಗಿದೆ. ಆದರೆ ಅಂತಿಮವಾಗಿ ಭೀಮರಾಯನ ಮಗ ಬೇಡರಾಯ ಪ್ರತೀಕಾರವಾಗಿ ಬೇಡ ಪಾಳೆಯ ಪಟ್ಟನ್ನು ನಾಶಮಾಡುವುದರಲ್ಲಿ ಯಶಸ್ವಿಯಾದ.

ಪರಂಪರೆಯ ಪ್ರಕಾರ ಈಗಿನ ಸಿಂಗರ ಪವರ್‌ಹೌಸಿನಿಂದ ಮಸಣಗುಡಿಯವರೆಗೂ ವ್ಯಾಪಿಸಿದ್ದ 'ದೇವರಾಯ ಪಟ್ಟಣ' ಎಂಬ ಬೃಹತ್ ನಗರವಿದ್ದಿತು. ಈ ನಗರವನ್ನು ಮತ್ತು 'ದೇವರಾಯ ಕೋಟೆ' ಎಂದು ಕರೆಯಲಾಗುವ ಮತ್ತು ಪವರ್‌ಹೌಸಿನಿಂದ ಸುಮಾರು ಎರಡು ಮೈಲು ಪಶ್ಚಿಮಕ್ಕಿರುವ ಪಾಳುಕೋಟೆಯನ್ನು ಸಹ ವಿಜಯನಗರದ ಒಂದನೆಯ ದೇವರಾಯನು (ಕ್ರಿ.ಶ. ೧೪೦೬–೧೨) ಕಟ್ಟಿಸಿರಬಹುದೆಂದು ಅವುಗಳ ಹೆಸರಿನ ಆಧಾರದ ಮೇಲೆ ಊಹಿಸಲವಕಾಶವಿದೆ.

ವಿಜಯನಗರದ ಬುಕ್ಕರಾಯನ ಮಗ ಚಿಕ್ಕಕಂಪಣ್ಣ ಒಡೆಯನು ರಾಜಪ್ರತಿನಿಧಿಯಾಗಿ. ತಗಡೂರಿನ ಬಿರಿಯ ನಾಡನ್ನು ತನ್ನ ಕೇಂದ್ರವನ್ನಾಗಿ ಮಾಡಿಕೊಂಡು ತಾಯೂರು. ತಗಡೂರು. ಉಮ್ಮತ್ತೂರು. ಉರಿಗದ್ದಿಗೆ. ಇತ್ಯಾದಿ ಸ್ಥಳಗಳನ್ನೊಳಗೊಂಡ ಹದಿನಾಡು ಎಂದು ಪರಿಚಿತವಾದ ಪ್ರದೇಶವನ್ನು ಮತ್ತು ತೊದನಾಡು ಎಂಬ ಹೆಸರಿನ ನೀಲಗಿರಿ ಜಿಲ್ಲೆಯನ್ನೂ ಪಾಲಿಸುತ್ತಿದ್ದಂತೆ ತೋರು ತೋರುತ್ತದೆ. ಕ್ರಿ.ಶ. ೧೩೬೮ರ ತೇದಿ ಇರುವ ತಗಡೂರಿನ ೨೫೮ನೆಯ ಶಾಸನದಿಂದ ಈ ಅಂಶ ಸ್ಥಿರ ಪಡುತ್ತದೆ[1]

ಮಹಾದುರಂತ

ಈ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನರಿಗೆ ಸಂಭವಿಸಿದ ಮಹಾದುರಂತವೆಂದರೆ ಬಹಮನಿಯ ಸುಲ್ತಾನರು ನಡೆಸಿದ ಸಾಮೂಹಿಕ ನರಮೇಧ: ಇದರಿಂದ ಕೇವಲ ಕೆಲವೇ ಕೆಲವು ಕುಟುಂಬಗಳು ಹೇಗೋ ಪಾರಾದವು. ೧೪ನೆಯ ಶತಮಾನದ ಆರಂಭದಲ್ಲಿ ಉತ್ತರ ಕರ್ನಾಟಕದಿಂದ ಈ ಪ್ರದೇಶಕ್ಕೆ ವಲಸೆ ಬಂದ ಬಡಗಗೌಡರ ಒಟ್ಟು ಜನಸಂಖ್ಯೆಯಲ್ಲಿ ಕೇವಲ ಮೂವತ್ತಕ್ಕೂ ಕಡಿಮೆ ಮುಖ್ಯಸ್ಥರು ಬದುಕುಳಿದರು ಮತ್ತು ನೀಲಗಿರಿ ಬೆಟ್ಟಗಳತ್ತ ಅವರಿಗೆ ಓಡಿಹೋಗಲು ಸಾಧ್ಯವಾಯಿತು–ಇವರಲ್ಲಿ ಕೆಲವರು ತಮ್ಮ

1. *EC., III* (1974) Nj. 258

ಮಂದಿರನ್ನುಳಿಸಿಕೊಳ್ಳುವಷ್ಟು ಅದೃಷ್ಟ ಹೊಂದಿದ್ದರೆ. ಉಳಿದವರು ತಮ್ಮ ಮಕ್ಕಳೂ ಸೇರಿದಂತೆ ಎಲ್ಲ ಬಂಧುಬಳಗ ಸಾವಿಗೀಡಾಗಿರಲು ಏಕಾಂಗಿಗಳಾಗಿಯೇ ಪ್ರಾಣವುಳಿಸಿಕೊಳ್ಳಲು ಪಲಾಯನಗೈಯಬೇಕಾಯಿತು. ಈ ಅಂಶವನ್ನು ಗಮನಿಸಿದರೆ ಬಲಿಯ ಪ್ರಮಾಣವೆಷ್ಟೆಂಬುದು ಚೆನ್ನಾಗಿ ಅರಿವಾಗುತ್ತದೆ. ತೊಟ್ಟಿಲಲ್ಲಿದ್ದ ಶಿಶುಗಳನ್ನು ಕೊಂಡೊಯ್ಯಲು ಸಾಧ್ಯವಾಗದೆ ಅವನ್ನು ಲೂಟಿಕಾರ ಸೈನಿಕರ ದಯೆ ದಾಕ್ಷಿಣ್ಯಗಳಿಗೇ ಬಿಟ್ಟುಬಿಟ್ಟರೆಂದು ಪರಂಪರೆ ತಿಳಿಸುತ್ತದೆ. ಆದ್ದರಿಂದಲೇ ಇತ್ತೀಚಿನವರೆಗೂ ಇಲ್ಲಿನ ಜನ ತೊಟ್ಟಿಲ ಬಳಕೆಯನ್ನು ನಿಷಿದ್ಧವೆಂದು ಪರಿಗಣಿಸಿದ್ದರು.

ಬಹಮನಿಯ ಸುಲ್ತಾನರು ವಿಜಯನಗರದ ಮೇಲೆ ಮಾಡಿದ ಈ ಕೆಳಗಿನ ಮೂರು ರಕ್ತಪಾತದ ದಾಳಿಗಳಲ್ಲೊಂದರಲ್ಲಿ ಈ ಘೋರ ಹತ್ಯಾಕಾಂಡವು ಸಂಭವಿಸಿದೆ:

ಬುಕ್ಕರಾಯನ ಆಳ್ವಿಕೆಯ ಕಾಲದಲ್ಲಿ ಬಹಮನಿಯ ಮಹಮದ್ ಷಾ ಕ್ರಿ.ಶ. ೧೩೬೬ರಲ್ಲಿ ವಿಜಯನಗರದ ಮೇಲೆ ಮಾಡಿದ ದಾಳಿಯು "ಹಿಂದೂಗಳೊಂದು ಕಡೆಯೇ ಅರ್ಧ ದಶಲಕ್ಷಕ್ಕೆ ಕಡಿಮೆ ಇಲ್ಲದಷ್ಟು ಜನ ಬಲಿಯಾದರೆಂದು ಫಿರಿಷ್ತ ಲೆಕ್ಕ ಹಾಕಿದಂಥ ಹತ್ಯಾಕಾಂಡದಲ್ಲಿ[1] ಅಂತ್ಯಗೊಂಡಿತು. ಷಾ ವಿಜಯನಗರದ ಆಧಿಪತ್ಯದ ಪ್ರದೇಶಗಳಿಗೆ ನುಗ್ಗಿ ಜನರ ಹತ್ಯೆಗೆ ಅಪ್ಪಣೆ ಮಾಡಿದ. "ಈ ಅಪ್ಪಣೆಯನ್ನು ಎಷ್ಟು ಕಟ್ಟುನಿಟ್ಟಿನಿಂದ ಕಾರ್ಯಾಚರಣೆಗೆ ತರಲಾಯಿತೆಂದರೆ ಗರ್ಭಿಣಿಯರೂ, ಹಾಲುಹಸುಳೆಗಳೂ ಖಡ್ಗದಿಂದ ಪಾರಾಗಲಿಲ್ಲ."[2] ಈ ಹತ್ಯಾಕಾಂಡದ ಪ್ರತಿಜ್ಞೆ ಪೂರೈಕೆಯಲ್ಲಿ ನಿರತನಾಗಿ ಒಂದು ವಾರ ಕಾಲ ಇಲ್ಲಿನ ರಂಗದಲ್ಲಿದ್ದ "ಈತ ಅನಂತರ ತನ್ನೆಲ್ಲ ಬಲಗಳಿಂದಲೂ ಈ ಸೈನ್ಯವನ್ನು ಎದುರಿಸಲು ತಾನು ಅಸಮರ್ಥನೆಂದು ಭಾವಿಸಿ ಆಶ್ರಯಕ್ಕಾಗಿ ಕಾಡುಮೇಡುಗಳಿಗೆ ಓಡಿದ್ದ ಬುಕ್ಕರಾಯನ ಬೀಡಿನತ್ತ ಮುನ್ನಡೆದ. ಸುಲ್ತಾನನು ಮೂರು ತಿಂಗಳ ಕಾಲ ಅವನನ್ನು ಸ್ಥಳದಿಂದ ಸ್ಥಳಕ್ಕೆ ಹಿಂಬಾಲಿಸುತ್ತ ತನ್ನ ಮಾರ್ಗಕ್ಕೆ ಬಂದವರನ್ನೆಲ್ಲ ಭೇದವಿಲ್ಲದೆ ಕೊಂದುಹಾಕಿದ."[3] ಬುಕ್ಕನ ಶಾಂತಿಯೊಪ್ಪಂದದ ಕೋರಿಕೆಯನ್ನು ಸುಲ್ತಾನ ತಿರಸ್ಕರಿಸಿದನಂತರ ಮುಂದುವರಿದ ಹೋರಾಟದಲ್ಲಿ "ಕಗ್ಗೊಲೆ ಘೋರವಾಯಿತು ಹಾಗೂ ತನ್ನ ಸೈನ್ಯದ ಹತ್ತು ಸಾವಿರ ಮಂದಿ ಹತರಾಗಿ ರಾಯನು ವಿಜಯನಗರಕ್ಕೆ ಓಡಿದ. ಆದರೆ ಇದರಿಂದ ಸುಲ್ತಾನನ ಕ್ರೋಧ ಶಮನವಾಗಲಿಲ್ಲ. ವಿಜಯನಗರದ ಸುತ್ತಮುತ್ತಿನ ಪ್ರತಿಯೊಂದು ಸ್ಥಳದ ನಿವಾಸಿಗಳನ್ನೂ ನಿರ್ದಯೆಯಿಂದ ವಧಿಸಬೇಕೆಂದು ಆಜ್ಞೆ ಇತ್ತ."[4]

ಮಹಮದ್ ಷಾ "೫,೦೦,೦೦೦ ಹಿಂದೂಗಳನ್ನು ವಧಿಸಿದ್ದ ಮತ್ತು ಹಲವು ದಶಕಗಳವರೆಗೆ ತಮ್ಮ ಸ್ವಾಭಾವಿಕ ಜನಸಂಖ್ಯೆಯನ್ನು ಮರಳಿ ಪಡೆಯಲಾರದಷ್ಟು ಕರ್ನಾಟಕದ ಜಿಲ್ಲೆಗಳನ್ನು ಪಾಳುಗೆಡವಿದ್ದ" ಎಂದು ಫಿರಿಷ್ತ ಹೇಳುತ್ತಾನೆ. ಮಹಮದ್ ಷಾನ ದಾಳಿಯ ಪ್ರಮುಖ ಗುರಿ ಇದೇ ಪ್ರದೇಶವಾಗಿತ್ತೆಂದು ತೋರುತ್ತದೆ; ಏಕೆಂದರೆ ಈ ಮೊದಲೇ ಗಮನಿಸಿರುವಂತೆ ಇದು ಬುಕ್ಕರಾಯನ ಮಗ ಚಿಕ್ಕಣ್ಣ ಕಂಪಣ ಒಡೆಯನು ಪಾಲಿಸುತ್ತಿದ್ದ ಪ್ರದೇಶ. ಅಲ್ಲದೆ ಬುಕ್ಕರಾಯನ ಸೈನ್ಯದ ಗಮನವನ್ನು ತಮ್ಮ ಸುಭದ್ರ ರಾಜಧಾನಿಯನ್ನು ರಕ್ಷಿಸಿಕೊಳ್ಳುವುದರಿಂದ ಬೇರೆಡೆಗೆ ತಿರುಗಿಸುವ ಸೇನಾತಂತ್ರದ ಒಂದು ಅಂಶ ಇದಾಗಿರಬೇಕೆಂದು ತೋರುತ್ತದೆ. ಆದರೆ ಷಾನ ಈ ಉಪಾಯ ಸಫಲವಾಗಲಿಲ್ಲ.; ಬುಕ್ಕರಾಯ ತನ್ನ ರಾಜಧಾನಿಯ ಸುತ್ತಮುತ್ತ ಶತ್ರುವಿನೊಂದಿಗೆ ಛಲದಿಂದ ಹೋರಾಡುತ್ತ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತಿದ್ದ ಮತ್ತು ಅವರ ವ್ಯೂಹಗಳನ್ನು ನಿಶ್ಶೇಷಗೊಳಿಸುತ್ತಿದ್ದ.

ಒಂದನೆಯ ದೇವರಾಯನ ಆಳ್ವಿಕೆಯ ಕಾಲದಲ್ಲಿ ಬಹಮನಿಯ ಸುಲ್ತಾನ ಫಿರೋಜ್ ಷಾ ವಿಜಯನಗರವನ್ನು ಆಕ್ರಮಿಸಿ, ಅಲ್ಲಿ ನಾಲ್ಕು ತಿಂಗಳ ಕಾಲ ನಿಂತು "ರಾಯನನ್ನು ಅವನ ರಾಜಧಾನಿಯಲ್ಲೆ

---

1. *A forgotten Empire*, pp. 34–36
2. *Ibid*, p. 36
3. *Ibid*
4. *Ibid*, p. 37

ಸೆರೆಯಾಳನ್ನಾಗಿ ಮಾಡಿದ್ದರೆ. ಅವನ ಸೈನಿಕರು ವಿಜಯನಗರದ ದಕ್ಷಿಣ ದೇಶದಲ್ಲಿ ಹಿಂಸೆಯನ್ನುಂಟು ಮಾಡುತ್ತ ಅದನ್ನು ಹಾಳುಗೆಡವಿದ್ದರು ಹಾಗೂ ಬಂಕಾಪುರ ಕೋಟೆಯನ್ನಾಕ್ರಮಿಸಿದ್ದರು. ಬಂಕಾಪುರ ಅವರ ಕೈವಶವಾಯಿತು. ಬೇರೊಂದು ಸೇನಾದಳವು ೬೦.೦೦೦ ಹಿಂದೂ ಸೆರೆಯಾಳುಗಳೊಂದಿಗೆ ಹಿಂದಿರುಗಿತು."[1]

ಹದಿನೇಳು ವರ್ಷಗಳ ಅನಂತರ ಇಮ್ಮಡಿ ದೇವರಾಯನ (ಕ್ರಿ.ಶ. ೧೪೦೬–೧೪೪೬) ಆಳ್ವಿಕೆಯ ಕಾಲದಲ್ಲಿ ಬಹಮನಿಯ ಒಂದನೆಯ ಅಹ್ಮದ್ ಷಾ (ಫಿರೋಜ್ ಷಾನ ಸೋದರ) ಕ್ರಿ.ಶ. ೧೪೨೩ರಲ್ಲಿ ವಿಜಯನಗರದ ಮೇಲೆ ದಾಳಿಮಾಡಿದ. "ನಗರಕ್ಕೆ ಮುತ್ತಿಗೆ ಹಾಕುವಷ್ಟರಲ್ಲೇ ನಿಲ್ಲದೆ ಇಡೀ ದೇಶದಲ್ಲೆಲ್ಲ ದಂಡಯಾತ್ರೆ ನಡೆಸಿದ ಮತ್ತು ವಿಜಯನಗರದ ದೊರೆಯೊಡನೆ ಅವನ ಪೂರ್ವಜ ಮಹಮದ್ ಷಾ ಮಾಡಿಕೊಂಡ ಒಪ್ಪಂದಕ್ಕೆ ವಿರುದ್ಧವಾಗಿ ಅವನು ಹೋದಲ್ಲೆಲ್ಲ ಗಂಡಸರು. ಹೆಂಗಸರು ಹಾಗೂ ಮಕ್ಕಳನ್ನು ನಿರ್ದಯೆಯಿಂದ ಕಗ್ಗೊಲೆಮಾಡಿದ: ಮಾನವತೆಯನ್ನೆಲ್ಲ ಬದಿಗೊತ್ತಿ. ಸತ್ತವರ ಸಂಖ್ಯೆ ಇಪ್ಪತ್ತು ಸಾವಿರವನ್ನು ಮುಟ್ಟಿದಾಗಲೆಲ್ಲ ಅವನು ಮೂರು ದಿನಗಳ ಕಾಲ ನಿಂತು ತನ್ನ ರಕ್ತಪಾತ ಕಾರ್ಯದ ಉತ್ಸವ ಸಮಾರಂಭವನ್ನು ನಡೆಸುತ್ತಿದ್ದ. ಆತ ಮೂರ್ತಿ ಇದ್ದ ದೇವಾಲಯಗಳನ್ನು ಭಗ್ನಗೊಳಿಸಿದ ಹಾಗೂ ಬ್ರಾಹ್ಮಣರ ವಿದ್ಯಾಶಾಲೆಗಳನ್ನು ನಾಶಮಾಡಿದ."

"ಅಹ್ಮದ್ ಷಾ ಇಡೀ ದೇಶವನ್ನು ಹಾಳುಗೆಡವಿ ವಿಜಯನಗರದತ್ತ ಮುನ್ನಡೆದ; ಅಲ್ಲಿಯ ನಿವಾಸಿಗಳು ತುಂಬ ಯಾತನೆಗೊಳಗಾಗುವಷ್ಟು ಅದನ್ನು ಗಾಢವಾಗಿ ತಡೆಗಟ್ಟಿದ್ದ: ದೇವರಾಯನು ತನ್ನ ಪ್ರಜೆಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಶಾಂತಿಗಾಗಿ ಮೊರೆಯಿಟ್ಟು ಸುಲ್ತಾನನಲ್ಲಿಗೆ ರಾಯಭಾರಿಗಳನ್ನು ಕಳಿಸಿ. ತಾನು ಉದಾಸೀನ ಮಾಡಿದ ಹಿಂದಿನ ವರ್ಷಗಳೆಲ್ಲ ಕಪ್ಪಕಾಣಿಕೆಗಳನ್ನು ತನ್ನ ಮಗನ ನೇತೃತ್ವದಲ್ಲಿ ಹೊರಿಸಿಕೊಂಡು ದುಂದುಭಿ ಕಹಳೆ ಮತ್ತಿತರ ಎಲ್ಲ ರಾಜಲಾಂಛನಗಳೊಡನೆ ಅವನ ಬೀಡಿಗೆ ಕಳಿಸಿಕೊಡುವ ನಿಬಂಧನೆಗೆ ಒಪ್ಪಿಕೊಂಡ."[2]

ತಾಯೂರು. ತಗಡೂರು, ಉಮ್ಮತ್ತೂರು, ಉರಿಗದ್ದಿಗೆ ಇತ್ಯಾದಿ ಸ್ಥಳಗಳಿಂದ ನೀಲಗಿರಿಗೆ ಬಡಗಗೌಡರ ಪೂರ್ವಜರ ಸ್ಥಳಾಂತರ ಯಾವಾಗ ನಡೆಯಿತೆಂಬುದರ ನಿಶ್ಚಿತಕಾಲವನ್ನು ಸ್ಪಷ್ಟವಾಗಿ ನಿರ್ಧರಿಸುವುದು ಬಹಳ ಕಷ್ಟ. ಮೇಲಿನ ಈ ಮೂರು ದಾಳಿಗಳ ಬೆಳಕಿನಲ್ಲಿ ಈ ಅಂಶವನ್ನು ಇನ್ನಷ್ಟು ಅಧ್ಯಯನ ಮಾಡಬೇಕಾಗುತ್ತದೆ. ಉಮ್ಮತ್ತೂರಿನಲ್ಲಿ ದೊರೆತ ಕ್ರಿ.ಶ. ೧೪೧೭ರ ಶಾಸನವೊಂದು ತಾಯೂರು ಮತ್ತಿತರ ಊರುಗಳ ಹಲವು ಗೌಡರು ಅಗ್ರಹಾರವೊಂದರ ಸ್ಥಾಪನೆಗಾಗಿ ಭೂದಾನ ನೀಡಿರುವಕ್ಕೆ ಉಮ್ಮತ್ತೂರಿನ ಗೌಡರ ಪರವಾಗಿ ಶ್ರೀ ಭುಜಂಗನಾಥ ದೇವರು ಎಂಬ ಒಪ್ಪವೂ ತಾಯೂರಿನಾದ ಪ್ರಭುಗಳ ಪರವಾಗಿ ಶ್ರೀವಾಸುದೇವರು ಎಂಬ ಒಪ್ಪವೂ ಇವೆ.[3] ಉಮ್ಮತ್ತೂರಿನ ಈ ಭುಜಂಗನಾಥದೇವ ಬಡಗಗೌಡರ ಪರಂಪರೆ ತಿಳಿಸುವ ಮಲ್ಲಿಕೋಟೆ ದುರ್ಗಕ್ಕೆ ಸಂಬಂಧಿಸಿದ ಭುಜಂಗರಾಜ ಅರಸನೇ ಆಗಿರುವ ಸಾಧ್ಯತೆ ಇದೆ. ಇದು ಸರಿಯೆಂದು ಸ್ಥಿರಪಟ್ಟಲ್ಲಿ ಆಗ ಬಡಗಗೌಡರ ಸ್ಥಳಾಂತರದ ಕಾಲ ಕ್ರಿ.ಶ. ೧೪೨೩ ಆಗುತ್ತದೆ: ಏಕೆಂದರೆ ಭುಜಂಗರಾಜ ಅರಸು ಉಮ್ಮತ್ತೂರಿನಲ್ಲಿ ಕೊನೆಯ ಪಕ್ಷ ೧೪೧೭ರಲ್ಲಾದರೂ ಇದ್ದ ಮತ್ತು ಅವನು ಬಿಡಲು ಪ್ರೇರಿಸಿದಂಥ ಯಾವುದೇ ಮಹತ್ವದ ಘಟನೆ ಈ ಕಾಲದಿಂದ ಕ್ರಿ.ಶ. ೧೪೨೩ರವರೆಗೂ ಸಂಭವಿಸಲಿಲ್ಲ.

ಕಲ್ಲುಗುಪ್ಪೆ ಮತ್ತು ಮಣ್ಣುಗುಪ್ಪೆ ಸಮಾಧಿಗಳು ತಿಳಿಸುವ ಕಥೆ

ನೀಲಗಿರಿ ಪ್ರಸ್ಥಭೂಮಿಯಲ್ಲಿ ಕಂಡುಬರುವ ಕಲ್ಲುಗುಪ್ಪೆ ಹಾಗೂ ಮಣ್ಣುಗುಪ್ಪೆ ಸಮಾಧಿಗಳಲ್ಲಿ ಕೆಲವನ್ನು ೧೮೭೩ರಲ್ಲಿ ಬ್ರೀಕ್ಸ್ ಎಂಬಾತ ತೆರೆದು ಪರಿಶೋಧಿಸಿದ್ದ: ಇವುಗಳಲ್ಲಿ ಕಂಡುಬಂದ ಚಿಕ್ಕ ಹಿಡಿಯ ಕೊಡಲಿಗಳು, ಭರ್ಜಿಯ ಮೊನೆಗಳು. ಬಾಣ. ಖಡ್ಗ, ಕಠಾರಿ. ಚೀಳುಬೂದಿ ಹಾಗೂ ಮೂಳೆ

---

1. *A Forgotten Empire*, p. 58
2. *Ibid*, p. 78 quoting Firishta
3. *MAR.*, 1931, pp. 161–162

ಗಳು[1] ಬಡಗಗೌಡರ ಸ್ಥಳಾಂತರದಲ್ಲಿ ಅವರಿಗೆ ಬೆಂಗಾವಲಾದ ಅವರ ಕಡೆಯವರೆ ಆದ ಯೋಧರಲ್ಲಿ ಮಾರ್ಗಮಧ್ಯದಲ್ಲಿ ಸತ್ತು, ಬದುಕುಳಿದವರು ಆ ಸತ್ತ ವೀರರ ಶವಗಳನ್ನು ಸೇರಿಸಿ, ಸಂಸ್ಕಾರ ಮಾಡಿ, ದೇಹಾವಶೇಷಗಳನ್ನು ಹಾಗೂ ಅವರು ಬಳಸಿದ್ದ ಆಯುಧಗಳನ್ನು ತಮ್ಮೊಡನೆ ನೀಲಗಿರಿಗೆ ಕೊಂಡೊಯ್ದು ಅನೇಕ ಕಲ್ಲುಗುಪ್ಪೆ ಮತ್ತು ಮಣ್ಣುಗುಪ್ಪೆಗಳಲ್ಲಿ ಸಮಾಧಿ ಮಾಡಿದರೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಮಸಣಗುಡಿ ಮತ್ತು ಮೊಯಾರ್ ಕಣಿವೆಯ ಸುತ್ತಮುತ್ತ ಕಂಡುಬರುವ ಕಿಸ್ತವಾನ್‌ಗಳು (Kistavaene) ಹಾಗೂ ಕ್ರಾಮ್ಲೆಕ್‌ಗಳು (Cromlechs) (ವೀರಗಲ್ಲು ಹಾಗೂ ಮಹಾಸತಿ ಕಲ್ಲುಗಳು) ಮೊಯಾರ್ ನದಿಯ ದಕ್ಷಿಣಕ್ಕೆ ಬೆಟ್ಟಗಳ ಬುಡದವರೆಗೂ ಶತ್ರುವು ಹೋರಾಟ ನಡೆಸಿರಬೇಕೆಂಬುದನ್ನು ಮತ್ತು ಹಿಂದೆ ಹೇಳಿದ ದೇವರಾಯ ಪಟ್ಟಣದ ಸೈನ್ಯವೂ ಸೇರಿದಂತೆ ನಿವಾಸಿಗಳೆಲ್ಲ ಸಾವಿಗೀಡಾಗಿ, ಹಲವು ಸ್ತ್ರೀಯರು 'ಸತಿ'ಯಾದರೆಂಬುದನ್ನೂ ಸೂಚಿಸುತ್ತವೆ. ಬಡಗಗೌಡರು ಸ್ಥಾಪಿಸಿದ ಎಲ್ಲ ಸ್ಥಳಗಳೂ—ಬೊಕ್ಕಾಪುರ, ಮಸಣಗುಡಿ, ಹೊಸೂರು, ಹಲಸುಮಾಮರಹಟ್ಟಿ, ಸಿರಿಯೂರು ಹಾಗೂ ಒಂದನೆಯ ದೇವರಾಯ ಕಟ್ಟಿಸಿದ ನಗರ ಹಾಗೂ ಕೋಟೆ ವಾಸ್ತವವಾಗಿ ನೆಲಸಮವಾಗುವಷ್ಟು ಈ ವಿನಾಶ ಸಂಪೂರ್ಣವಾದುದಾಗಿತ್ತು. ಮೇಲಿನ ಸ್ಮಾರಕಗಳಿಂದ ತಿಳಿದು ಬರುವ ವ್ಯಥೆಯ ಕಥೆ ಇದೇ.

ಜನರಲ್ಲಿ ಆಚರಣೆಯಲ್ಲಿರುವ ಸತ್ತವರನ್ನು ಸುಡುವ ಪದ್ಧತಿ ಹಾಗೂ ಶವಸಂಸ್ಕಾರ ಪದ್ಧತಿಗಳು ಬಹು ಮಹತ್ವದ್ದಾಗಿವೆ. ಧ್ವಜ ಹಾಗೂ ಛತ್ರಿಗಳಿಂದ ಕೂಡಿದ ತುಂಬ ಅಲಂಕೃತವಾದ ಮಂಚದ ಮೇಲೆ ಶವವನ್ನಿಟ್ಟು, ಅದನ್ನು ದುಂದುಭಿ ಕಹಳೆಗಳ ನಿನಾದದೊಂದಿಗೆ ಸ್ಮಶಾನಕ್ಕೆ ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಾರೆ; ಸತ್ತ ಮನುಷ್ಯನಿಗೆ ಸೈನಿಕ ಗೌರವ ಹಾಗೂ ರಾಜೋಚಿತ ಮರ್ಯಾದೆ ಸಲ್ಲಿಸುವುದಕ್ಕಾಗಿ ಮಂಚಸಹಿತವಾಗಿ ಶವವನ್ನು ಸುಡಲಾಗುತ್ತದೆ. ಇದರಿಂದ ಇವರ ಪೂರ್ವಜರು ಆಳುತ್ತಿದ್ದ ರಾಜವಂಶದಿಂದ ಬಂದವರೆಂಬುದು ಧ್ವನಿತವಾಗುತ್ತದೆ. ಸತ್ತವನು ಗಂಡಸಾಗಿದ್ದ ಪಕ್ಷದಲ್ಲಿ ಶವದ ಕಾಲಿನ ಬಳಿ ಮಂಚದ ಮೇಲೆ ಕಠಾರಿ ಹಾಗೂ ಕೊಡಲಿಯನ್ನು ಇಡುವುದು ಮತ್ತು ಶವಸಂಸ್ಕಾರ ದಹನಕ್ಕೂ ಕಠಾರಿಯನ್ನು ಉಪಯೋಗಿಸುವುದು ಸತ್ತವನು ಅರಸನೊಬ್ಬನ ಅಥವಾ ಯೋಧನೊಬ್ಬನ ವಂಶಜ ಎನ್ನುವುದನ್ನು ಸೂಚಿಸುತ್ತದೆ.

1. *The Gazetteer of the Nilagiris* ; ಇದರ ಪ್ರಕಾರ ಈ ಕಲ್ಲುಗುಪ್ಪೆ ಮತ್ತು ಮಣ್ಣುಗುಪ್ಪೆ ಸಮಾಧಿಗಳ ಉತ್ಖನನದಲ್ಲಿ ದೊರೆತ ಅವಶೇಷಗಳನ್ನು ಮದ್ರಾಸ್ ಮ್ಯೂಸಿಯಂನಲ್ಲಿಟ್ಟಿದೆ.

ಪುಸ್ತಕ ಲೋಕ

ಮಾನಸಿಕ ರೋಗಗಳು: ಡಾ. ಎಂ. ಬಿ. ರೇಣುಕಾರ್ಯ. ಪ್ರ: ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ (೧೯೭೬) ಪುಟ ೪೪+೬. ಬೆಲೆ: ೨೫ ಪೈಸೆ.

ಇದು ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ಶಾಖೆಯ ಉಪನ್ಯಾಸ ಗ್ರಂಥಮಾಲೆಯ ೨೨ನೆ ಪ್ರಕಟಣೆ ಆಗಿದೆ. ಆ ವಿಶ್ವವಿದ್ಯಾಲಯದ ರಜತ ಮಹೋತ್ಸವದ ಪ್ರಕಟಣೆಯಲ್ಲಿ ಈ ಪುಸ್ತಕವೂ ಒಂದಾಗಿದೆ. ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರಿದ ೮ ಜಿಲ್ಲೆಗಳಲ್ಲೂ ಏರ್ಪಡಿಸಿದ ಉಪನ್ಯಾಸ ಶಿಬಿರಗಳಲ್ಲಿ ಸಾಹಿತ್ಯ. ವಿಜ್ಞಾನ. ಸಾಮಾಜಿಕ ಶಾಸ್ತ್ರ ಮೊದಲಾದವುಗಳ ಬಗ್ಗೆ ಆಯಾ ವಿಷಯಕ್ಕೆ ಸೇರಿದ ಕಾಲೇಜು ಪ್ರಾಧ್ಯಾಪಕರುಗಳಿಂದ ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ನಡೆಸಿದ ಉಪನ್ಯಾಸಗಳಲ್ಲಿ ಮಾನಸಿಕ ರೋಗಗಳಿಗೆ ಸಂಬಂಧಿಸಿದಂತೆ ಮಾತನಾಡಿದವರು ಬೆಳಗಾಂವಿನ ಜವಹರಲಾಲ್ ಮೆಡಿಕಲ್ ಕಾಲೇಜಿನ ಡಾ. ಎಂ. ಬಿ. ರೇಣುಕಾರ್ಯ. ಆ ಉಪನ್ಯಾಸದ ಪ್ರಕಟನೆ ಈ ಕಿರುಹೊತ್ತಿಗೆ.

ಈ ಪುಟ್ಟ ಪುಸ್ತಕದಲ್ಲಿ ಮಾನಸಿಕ ರೋಗವೆಂದರೇನು. ಅದರ ಲಕ್ಷಣಗಳಾವುವು. ಅವು ಎಷ್ಟು ಬಗೆ. ಅವುಗಳಿಗೆ ಕಾರಣಗಳೇನು. ಅವುಗಳ ಚಿಕಿತ್ಸಾಕ್ರಮಗಳು ಮತ್ತು ಅವು ಬರದಂತೆ ವಹಿಸಬಹುದಾದ ಮುನ್ನೆಚ್ಚರಿಕೆಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಅತಿ ಸರಳವಾದ ಶೈಲಿಯಲ್ಲಿ. ಎಲ್ಲ ಜನ ಸಾಮಾನ್ಯರಿಗೂ ತಿಳಿಯುವಂತೆ ನೇರವಾಗಿ. ಸುಲಭ ಉದಾಹರಣೆಗಳೊಂದಿಗೆ ಕೆಲವೆ ಮಾತಿನಲ್ಲಿ ನಿರೂಪಿಸಿರುವುದು ಈ ಪುಸ್ತಕದ ಗಮನಾರ್ಹ ಸಾಧನೆ; ಅಷ್ಟರಮಟ್ಟಿಗೆ ಪ್ರಕಟನಮಾಲೆಯ ಉದ್ದೇಶವನ್ನು ಸಾರ್ಥಕವಾಗಿ ನೆರವೇರಿಸಲಾಗಿದೆ

ಮಾನಸಿಕ ತೊಂದರೆಗಳನ್ನು 'ರೋಗ'ವೆಂದು ಪರಿಗಣಿಸುವುದು ಸರಿಯೆ ಎಂಬುದರ ಬಗ್ಗೆ ಬಹಳಷ್ಟು ಗಹನವಾದ ಹಾಗೂ ದೀರ್ಘವಾದ ಚರ್ಚೆ ನಡೆಯುತ್ತಿದೆ. ಜನಸಾಮಾನ್ಯರಿಗೆ ತಿಳಿಸುವಾಗ ಆ ಬಗ್ಗೆ ಪ್ರಸ್ತಾಪವೇ ಮಾಡದಿರುವುದು ಸರಿಯಲ್ಲ. ಎಲ್ಲ ದೈಹಿಕ ಕಾಯಿಲೆಗಳಂತೇ ಮಾನಸಿಕ ತೊಂದರೆಗಳೂ ಒಂದು ರೋಗವೇ ಎಂದು ಭಾವಿಸಿ. ವೈದ್ಯರಿಗೆ ಒಪ್ಪಿಸಿ ಬಿಟ್ಟರೆ ತಮ್ಮ ಜವಾಬ್ದಾರಿ ಕಳೆದಂತೆ ಎಂದು ಮನೆಯವರು. ಸಮಾಜ ತಿಳಿದರೆ. ಆ ತೊಂದರೆ 'ಗುಣ'ವಾಗುವುದೂ ತಾತ್ಕಾಲಿಕ. ನಿವಾರಣೆಯಾಗುವುದಂತೂ ಅತಿ ದೂರವೇ. ಮಾನಸಿಕ ತೊಂದರೆಗಳ ಪ್ರಕಾರಗಳಲ್ಲಿ ಇತ್ತೀಚೆಗೆ ಬಹಳವಾಗಿ ಕಂಡುಬರುತ್ತಿರುವ 'ಮನೋದೈಹಿಕ ಅಸ್ವಸ್ಥತೆ' (psycho–analytic disorders) ಬಗ್ಗೆಯೂ ಯಾವ ಪ್ರಸ್ತಾಪವೂ ಇಲ್ಲ. ಮತ್ತೊಂದು ಉಪಯುಕ್ತ ಅಂಶ ತಿಳಿಸದೆ ಬಿಟ್ಟಂತೆಯೇ ಆಗಿದೆ. ತಾಂತ್ರಿಕ ಪದಗಳನ್ನು ಕನ್ನಡಿಸುವ ತೊಂದರೆ ಎಲ್ಲೆಲ್ಲೂ ಇದ್ದದ್ದೇ. ಆದರೆ Obserssve Compulsive Neurosis ಗೆ 'ಭ್ರಾಂತ ಮನಸ್ಸಿನ ವ್ಯಾಕುಲತೆ. Hysteria ಗೆ ಘರ್ಷಿತ ಮನಸ್ಸಿನ ವ್ಯಾಕುಲತೆ ಮುಂತಾದ ಪದಗಳು ಆಯಾ ತೊಂದರೆಗಳ ಅತಿಮುಖ್ಯವಾದ ಮೇಲ್ಮೈ ಲಕ್ಷಣಗಳನ್ನೇ ಬಿಂಬಿಸದೇ ಹೋಗಬಹುದು.

ಒಟ್ಟಿನಲ್ಲಿ "ಮಾನಸಿಕ ರೋಗ"ಗಳಿಗೆ ಸಂಬಂಧಿಸಿದ ಸಾಮಾನ್ಯವಾಗಿ ಎಲ್ಲ ಬಗೆಯ ಸಂಗತಿಗಳನ್ನೂ ತಿಳಿಯಾಗಿ ರೂಪಿಸಿ. ಅವುಗಳ ಬಗ್ಗೆ ನಿರ್ದಿಷ್ಟ ಹಾಗೂ ಸ್ಪಷ್ಟ ಕಲ್ಪನೆ ಮೂಡಿಸಲು ಸಹಾಯ ಮಾಡುವ ಈ ಪುಸ್ತಕ ಅಭಿನಂದನಾರ್ಹ. ಇದು ಜನಸಾಮಾನ್ಯರಿಗೆ. ಈ ಬಗ್ಗೆ ಸರಿಯಾಗಿ ತಿಳಿಯದ ನಮ್ಮ ಬಹಳಷ್ಟು ಜನರಿಗೆ, ಒಂದು ಉಪಯುಕ್ತ ಗ್ರಂಥವಾಗಿದೆ.

ಡಾ. ಎಂ. ಎಸ್. ತಿಮ್ಮಪ್ಪ

ಭಾರತ ಸಂವಿಧಾನ ಮತ್ತು ಸರಕಾರ, ಲೇ: ಪ್ರೊ . ಎಂ. ಎಸ್. ಪಾಟೀಲ್ ಮತ್ತು ಪ್ರೊ . ಆರ್. ವ್ಹಿ. ಹೊರಡಿ ಪ್ರ: ಕನ್ನಡ ಅಧ್ಯಯನ ಪೀಠ, ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಪುಟಗಳು: ೧೯೮, ಬೆಲೆ: ಸಾಮಾನ್ಯ ಪ್ರತಿ ೮.೦೦ರೂ. ಅರ್ಧ ಕ್ಯಾಲಿಕೋ ಪ್ರತಿ ೧೨.೦೦ರೂ

'ಭಾರತ ಸಂವಿಧಾನ ಮತ್ತು ಸರಕಾರ' ಕರ್ನಾಟಕ ವಿಶ್ವವಿದ್ಯಾಲಯದ ಬೆಳ್ಳಿಹಬ್ಬದ ನಲವತ್ತೆರಡನೆಯ ಪ್ರಕಟನೆಯಾಗಿ ಹೊರಬಂದಿದೆ. ಈ ಗ್ರಂಥದಲ್ಲಿ ಭಾರತದ ಸಂವಿಧಾನ ರಚನಾ ಸಭೆ ಯಾವ ರೀತಿ ಭಾರತದ ಸಂವಿಧಾನವನ್ನು ರೂಪಿಸಿತೆಂಬುದನ್ನು ತಿಳಿಸಿ, ನಂತರ ಭಾರತದ ಸಂವಿಧಾನದ ಸಾಮಾನ್ಯ ಲಕ್ಷಣಗಳ ಬಗ್ಗೆ ವಿವರಣೆ ಇದೆ. ನಂತರದ ಅಧ್ಯಾಯಗಳಲ್ಲಿ ಒಕ್ಕೂಟ ಸರ್ಕಾರ, ರಾಜ್ಯ ಸರ್ಕಾರಗಳು, ಸಂಯುಕ್ತ ರಾಜ್ಯ ಪದ್ಧತಿ ಇತ್ಯಾದಿಗಳ ಬಗ್ಗೆ ಸ್ಥೂಲವಾಗಿ ತಿಳಿಸಲಾಗಿದೆ. ಕೊನೆಯದಾಗಿ 'ಭಾರತೀಯ ಪ್ರಜಾಪ್ರಭುತ್ವದ' ಬಗ್ಗೆ ಸ್ಥೂಲ ವಿವರಣೆ ಇದೆ. ಈ ಗಂಥ ಬಿ. ಎ. ಮೊದಲನೆಯ ಭಾಗಕ್ಕೆ ಪಠ್ಯಪುಸ್ತಕವಾಗಲಿರುವುದು ಸ್ತುತ್ಯಾರ್ಹ. ಇಂತಹ ಉತ್ತಮ ಗ್ರಂಥವನ್ನು ರಚಿಸಿರುವ ಪ್ರೊ. ಎಂ. ಎಸ್. ಪಾಟೀಲ್ ಮತ್ತು ಪ್ರೊ. ಆರ್. ವ್ಹಿ. ಹೊರಡಿಯವರು ಅಭಿನಂದನಾರ್ಹರು.

ಗ್ರಂಥದಲ್ಲಿ ಕಂಡು ಬರುವ ಕೆಲವು ದೋಷಗಳು ಹಾಗೂ ಕೊರತೆಗಳನ್ನು ಇಲ್ಲಿ ತಿಳಿಸುವುದು ಸೂಕ್ತ. ಈಗ ಇಂಗ್ಲಿಷಿನ 'ಗವರ್ನರ್' ಪದಕ್ಕೆ ಕನ್ನಡದಲ್ಲಿ 'ರಾಜ್ಯಪಾಲ' ಎಂಬ ಪದ ರೂಢಿಯಲ್ಲಿ ಬಂದಿದೆ. ಇಂಗ್ಲಿಷಿನ 'ಗವರ್ನರ್' ಪದದ ಪ್ರಯೋಗ ಅಪೇಕ್ಷಣೀಯವಲ್ಲ. ಪುಟ ೫೭ರಲ್ಲಿ Directive principles of state policy ಎಂಬುದಕ್ಕೆ 'ರಾಜ್ಯ ನಿರ್ದೇಶಕ ತತ್ವಗಳು'. ಎಂದು ಭಾಷಾಂತರಿಸಲಾಗಿದೆ. ಈ ಭಾಷಾಂತರ ಸರಿಯಲ್ಲ. 'ರಾಜ್ಯನೀತಿ ನಿರ್ದೇಶಕತತ್ವಗಳು' ಎಂದರೆ ಸಮಂಜಸವಾಗುತ್ತದೆ. ಪುಟ ೭೩ರಲ್ಲಿ 'ವೀಟೋ' ಪದಕ್ಕೆ 'ವಿಶೇಷಾಧಿಕಾರ' ಎಂದು ಹೇಳಲಾಗಿದೆ. ಇದೂ ಸಹ ಸೂಕ್ತವಲ್ಲ. 'ವಿಶೇಷಾಧಿಕಾರ' ಎಂದರೆ Special power ಎಂಬ ಅರ್ಥ ಬರುತ್ತದೆ. ಕನ್ನಡದಲ್ಲಿ ಸರಿಯಾದ ಪದವಿಲ್ಲದಿರುವುದರಿಂದ 'ವೀಟೋ' ಎಂಬ ಪದವನ್ನೇ ಕನ್ನಡಕ್ಕೆ ಅಳವಡಿಸಿ ಕೊಳ್ಳುವುದು ಅಪೇಕ್ಷಣೀಯ. ವರಿಷ್ಠ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ (Jurisdiction) ಬಗೆಗೆ ಬರೆಯುತ್ತಾ 'Original Jurisdiction' ಎಂಬ ಪದಕ್ಕೆ 'ಪ್ರಾರಂಭಿಕ ನ್ಯಾಯಾಧಿಕಾರ' ಎಂದು ಭಾಷಾಂತರ ಮಾಡಲಾಗಿದೆ. ಕನ್ನಡದ ಈ ಭಾಷಾಂತರ ಇಂಗ್ಲಿಷ್ ಪದದ ಅರ್ಥವನ್ನು ಸರಿಯಾಗಿ ತರುವುದಿಲ್ಲ. Jurisdiction ' ಎಂದರೆ 'ಅಧಿಕಾರ'ವಲ್ಲ. 'ಅಧಿಕಾರವ್ಯಾಪ್ತಿ' ಎಂಬುದು ಆ ಪದದ ಸರಿಯಾದ ಅರ್ಥ. ಪ್ರಾಯಶಃ 'ಮೂಲ ಅಧಿಕಾರವ್ಯಾಪ್ತಿ' ಎಂಬುದು ಸರಿಯಾದ ಅರ್ಥನೀಡುವ ಭಾಷಾಂತರವಾಗಬಹುದು.

ಈ ಗ್ರಂಥದ ಮೂಲ ಕೊರತೆಯೆಂದರೆ ಈ ಪಠ್ಯಪುಸ್ತಕಕ್ಕೆ ಗ್ರಂಥಕರ್ತರು ಸಮಾನಾರ್ಥ ಪದಸೂಚಿಯನ್ನಾಗಲೀ, ವಿಷಯ ಸೂಚಿಯನ್ನಾಗಲೀ, ಗ್ರಂಥಋಣವನ್ನಾಗಲೀ ಕೊಟ್ಟಿಲ್ಲ. ಪಠ್ಯ ಪುಸ್ತಕ ನಿರ್ದೇಶನಾಲಯ ಇನ್ನು ಮುಂದೆ ಇವುಗಳನ್ನು ಕಡ್ಡಾಯವಾಗಿ ಕೊಡುವಂತೆ ಎಲ್ಲಾ ಗ್ರಂಥ ಕರ್ತರಿಗೂ ತಿಳಿಸುವುದು ಕನ್ನಡದ ಬರವಣಿಗೆ ಆಧಾರಯುಕ್ತವಾಗಿ ಬೆಳೆಯುವುದಕ್ಕೆ ಸಹಾಯಕ. ಪ್ರಸ್ತುತದ ಪ್ರಕಟನೆಯ ನಂತರ ನಮ್ಮ ಸಂವಿಧಾನಕ್ಕೆ ತಂದಿರುವ ನಲವತ್ತೆರಡನೆಯ ತಿದ್ದುಪಡಿ ಯಿಂದ ಈ ಗ್ರಂಥದಲ್ಲಿ ತಿಳಿಸಿರುವ ಅನೇಕ ವಿಷಯಗಳಲ್ಲಿ ಬದಲಾವಣೆ ಮಾಡಬೇಕಾದ್ದು ಅಗತ್ಯ ವಾಗಿದೆ. ಇದು ಪಠ್ಯಪುಸ್ತಕವಾದುದರಿಂದ ಅಂಥ ಬದಲಾವಣೆ ಶೀಘ್ರವಾಗಿ ಆಗತಕ್ಕದ್ದು.

ಡಾ. ಸಿ. ಕೆ. ಎನ್. ರಾಜ

WO 16933—MUPM—1025 copies—10-5-77

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸ ಗಂಗೋತ್ರಿ, ಮೈಸೂರು–೫೭೦೦೧೬